ಭಾನುವಾರ, ಫೆಬ್ರುವರಿ 22, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೃತ್ಯ ವೈಭವ

ಹಿಮಾಚಲ ಪ್ರದೇಶದ ಮಂಡಿಯಲ್ಲಿ ನಡೆದ ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವದ ಮೆರವಣಿಗೆಯಲ್ಲಿ ನೃತ್ಯ ಪ್ರದರ್ಶಿಸಿದ ಕಲಾವಿದೆಯರು

ಮಟಪಕ್ಷಿ

ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಹೂ ತುಂಬಿದ ಬೂರುಗದ ಮರದ ಕೊಂಬೆಯ ಮೇಲೆ ಕುಳಿತಿದ್ದ ಮಟಪಕ್ಷಿ

ಸಂಭ್ರಮದಿಂದ ಪರೀಕ್ಷೆ ಬರೆಯಿರಿ

ಪ್ರಜಾವಾಣಿ ಫೋನ್‌-ಇನ್

‘ಎಸ್‌ಎಸ್‌ಎಲ್‌ಸಿ, ಪಿಯುಸಿ: ನಿರ್ಲಕ್ಷ್ಯ ಮಾಡದೆ, ಅಂದಿನ ಪಾಠ ಅಂದೇ ಓದಿದರೆ ಯಶಸ್ಸು ನಿಶ್ಚಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರದ್ಧೆಯಿಂದ ಓದಿ ಸಮಚಿತ್ತದಿಂದ ಮನನ ಮಾಡಿಕೊಂಡು, ಒತ್ತಡಕ್ಕೆ ಒಳಗಾಗದೆ ಆತ್ಮಸ್ಥೈರ್ಯದಿಂದ ಪರೀಕ್ಷೆ ಬರೆಯುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ, ನಿರ್ದೇಶಕ ಎಚ್‌.ಎನ್. ಗೋಪಾಲಕೃಷ್ಣ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

‘ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ ನಿರ್ಭೀತಿಯಿಂದ ಎದುರಿಸುವುದು ಹೇಗೆ’ ಎಂಬ ವಿಷಯ ಕುರಿತು ‘ಪ್ರಜಾವಾಣಿ’ ಶನಿವಾರ ಹಮ್ಮಿಕೊಂಡಿದ್ದ ಫೋನ್‌ಇನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದ ಇಬ್ಬರೂ ‘ಪೂರ್ವಭಾವಿ ಪರೀಕ್ಷೆಯಲ್ಲಿನ ಲೋಪಗಳನ್ನು ಸರಿಪಡಿಸಿಕೊಳ್ಳಬೇಕು. ಅಧಿಕ ಅಂಕಗಳಿಕೆಯ ಗೀಳಿಗೆ ಬೀಳಬಾರದು, ಭೀತಿಗೆ ಆಸ್ಪದ ಕೊಡಬಾರದು’ ಎಂದು ಕಿವಿಮಾತು ಹೇಳಿದರು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶ ವೃದ್ಧಿಗೆ ಶಾಲಾ ಶಿಕ್ಷಣ ಇಲಾಖೆ ಕಳೆದ ಜೂನ್‌ನಿಂದಲೇ ಸಿದ್ಧತೆಗಳನ್ನು ಆರಂಭಿಸಿತ್ತು. 25 ಅಂಶಗಳ ಪಟ್ಟಿ ಸಿದ್ಧಪಡಿಸಿ ಪ್ರತಿ ಶಾಲೆ-ಕಾಲೇಜಿನಲ್ಲೂ ಅನುಷ್ಠಾನಗೊಳಿಸಲು ಸೂಚಿಸಿತ್ತು. ಮಾರ್ಗಸೂಚಿಗಳನ್ನು ಪಾಲಿಸಿದ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುವುದು ನಿಶ್ಚಿತ. ಅಂತಹ ಶಾಲೆಗಳಲ್ಲಿ ಮಕ್ಕಳು ಶೈಕ್ಷಣಿಕ ವರ್ಷದ ಆರಂಭದಿಂದಲೇ ಪಾಠಗಳನ್ನು ಮನನ ಮಾಡಿಕೊಂಡಿದ್ದಾರೆ. ಆರಂಭದಲ್ಲಿ ಓದನ್ನು ನಿರ್ಲಕ್ಷಿಸಿರುವವರು ಪರೀಕ್ಷೆ ಹತ್ತಿರ ಬಂದಂತೆ ಒತ್ತಡಕ್ಕೆ ಒಳಗಾಗುತ್ತಾರೆ. ಪ್ರತಿ ದಿನವೂ ಮಿತವಾಗಿ ಓದಿದರೆ ಒತ್ತಡಕ್ಕೆ ಒಳಗಾಗುವ ಅವಕಾಶವೇ ಬರುವುದಿಲ್ಲ ಎಂದರು.

ಮಾರ್ಚ್ 5ರಿಂದ ಫೋನ್‌ಇನ್

ಮಕ್ಕಳ ಆರೋಗ್ಯದತ್ತ ಪೋಷಕರು ನಿಗಾವಹಿಸಬೇಕು. ದ್ರವ ಮತ್ತು ಪೌಷ್ಟಿಕ ಆಹಾರ ನೀಡಬೇಕು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾರ್ಚ್ 5ರಿಂದ 15ರವರೆಗೆ ಪರೀಕ್ಷಾ ಮಂಡಳಿಯೇ ಫೋನ್ ಇನ್ ಕಾರ್ಯಕ್ರಮ ಆಯೋಜಿಸುತ್ತಿದೆ ಎಂದು ನಿರ್ದೇಶಕ ಎಚ್‌.ಎನ್.ಗೋಪಾಲಕೃಷ್ಣ ಹೇಳಿದರು.

ಆರು ವಿಷಯಗಳ ವಿಷಯ ತಜ್ಞರು ಹಾಗೂ ನಿಮ್ಹಾನ್ಸ್ ವೈದರು ಫೋನ್‌ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಮಕ್ಕಳು ಮತ್ತು ಪೋಷಕರು ಆತಂಕ ಹಾಗೂ ಗೊಂದಲ ನಿವಾರಿಸಿಕೊಳ್ಳಬಹುದು. ಇಲಾಖೆ ಸಹಾಯವಾಣಿ 080-23310075, 080-23310076 ಸಂಪರ್ಕಿಸಬಹುದು ಎಂದರು.

ಮಂಡಳಿ ನೀಡಿದ ಸೌಲಭ್ಯ

- ಮಾದರಿ ಪ್ರಶ್ನೆಪತ್ರಿಕೆಗಳು
- ಪಠ್ಯ ಆಧಾರಿತ ಪ್ರಶ್ನೆಗಳು
- ಪ್ರಶ್ನೆಪತ್ರಿಕೆಯ ನೀಲನಕ್ಷೆ

- **ಒತ್ತಡ ಹೆಚ್ಚಾಗಿ, ಓದಿಗೆ ಗಮನ ಹರಿಸಲು ಆಗುತ್ತಿಲ್ಲವಲ್ಲ?**

ಜಯಲಕ್ಷ್ಮೀ, ಬಿಜಿಎಸ್‌ಎಸ್ ಶಾಲೆ, ಹೊಸಕೋಟೆ

ತಯಾರಿ ಇಲ್ಲದಿದ್ದಾಗ ಪರೀಕ್ಷೆಯ ಆತಂಕ ಸಹಜ. ಜೂನ್ ತಿಂಗಳಿನಿಂದಲೇ ನಾಲ್ಕು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗಿದೆ. ಎರಡು ಪೂರ್ವಭಾವಿ ಪರೀಕ್ಷೆ ನಡೆಸಲಾಗಿದ್ದು, ಸೋಮವಾರದಿಂದ ಮೂರನೇ ಪರೀಕ್ಷೆ ನಡೆಯಲಿದೆ. ಮೂರು ಪರೀಕ್ಷೆ ಬರೆದ ಮೇಲೆ ಮುಖ್ಯಪರೀಕ್ಷೆ ಬರೆಯುವುದು ಸುಲಭ.

- **ಪರೀಕ್ಷೆ–1 ಬರೆಯಲು ಆಗದಿದ್ದರೆ, ಪರೀಕ್ಷೆ–2 ಬರೆಯಬಹುದೇ?**

ಧನುಷ್, ಮೈಸೂರು, ಕುವೆಂಪು ಶಾಲೆ

ಪರೀಕ್ಷೆ–1ಕ್ಕೆ ನೋಂದಣಿ ಮಾಡಿಕೊಂಡು ಬರೆಯಲು ಆಗದಿದ್ದರೆ ಪರೀಕ್ಷೆ–2 ಬರೆದು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಬಹುದು. ಆದರೆ, ಪರೀಕ್ಷೆ–1ಕ್ಕೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ.

- **ಅಪಘಾತದಲ್ಲಿ ಕಾಲು ಮುರಿದಿದ್ದು, ಪರೀಕ್ಷೆ ಬರೆಯಲು ಸೌಲಭ್ಯ ಇದೆಯಾ?**

ಮಂಜುಮಣಿ, ವಿವೇಕಾನಂದ ಗ್ರಾಮಾಂತರ ಪ್ರೌಢಶಾಲೆ, ದಕ್ಷಿಣಕನ್ನಡ

ದೈಹಿಕ ನ್ಯೂನತೆಯ ವಿದ್ಯಾರ್ಥಿಗಳಿಗಾಗಿಯೇ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಗಾಲಿ ಕುರ್ಚಿ ಸಹ ಇದೆ. ಮುಖ್ಯ ಶಿಕ್ಷಕರ ಮೂಲಕ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಪತ್ರ ಬರೆಯಿಸಿದರೆ, ಸೂಕ್ತ ವ್ಯವಸ್ಥೆ ಮಾಡುತ್ತಾರೆ.

- **ನೀಲನಕ್ಷೆ ಪ್ರಕಾರವೇ ಪ್ರಶ್ನೆ ಪತ್ರಿಕೆ ಬರಲಿದೆಯೇ?**

ಮಂಜುನಾಥ್, ಸರ್ಕಾರಿ ಪ್ರೌಢಶಾಲೆ, ಬಾಗೇಪಲ್ಲಿ

ನೀಲನಕ್ಷೆ ಪ್ರಕಾರವೇ ಪ್ರಶ್ನೆ ಪತ್ರಿಕೆ ಬರುತ್ತದೆ. ಈಗಾಗಲೇ ಪೂರ್ವಭಾವಿ ಪರೀಕ್ಷೆಯಲ್ಲಿ ಪ್ರಶ್ನೆ ಬಂದಿರುವುದು ಮನವರಿಕೆ ಆಗಿದೆ. ಅದೇ ರೀತಿ ಅಂತಿಮ ಪರೀಕ್ಷೆಯಲ್ಲೂ ಪ್ರಶ್ನೆ ಪತ್ರಿಕೆ ಇರುತ್ತದೆ.

- **ಪಠ್ಯಗಳ ಬೋಧನೆ ಪೂರ್ಣಗೊಂಡಿರುವುದಿಲ್ಲ., ಹಲವರಿಗೆ ಪರೀಕ್ಷೆ ಕಷ್ಟವಾಗುತ್ತಿದೆ?**

ರಾಮಚಂದ್ರ, ಪೋಷಕ, ಶಿವಮೊಗ್ಗ

ಆಯಾ ಶಾಲಾ ವ್ಯಾಪ್ತಿಯಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಅಂತಹ ಶಾಲೆಗಳ ವಿರುದ್ಧ ದೂರು ನೀಡಿದರೆ ಕ್ರಮ ಕೈಗೊಳ್ಳುತ್ತಾರೆ. ಈ ವಿಚಾರವನ್ನು ಗಮನದಲ್ಲಿರಿಸಿಕೊಂಡಿದ್ದು ಮಂಡಳಿಯಿಂದಲೂ ಸೂಚನೆ ನೀಡಲಾಗುವುದು.

- **ಮಗಳು ದ್ವಿತೀಯ ಪರೀಕ್ಷೆ ಓದುತ್ತಿದ್ದಾಳೆ. ಓದಿರುವುದು ಮರೆತು ಹೋಗುತ್ತಿದ್ದು, ಜ್ಞಾಪಕ ಶಕ್ತಿ ಕಡಿಮೆ ಆಗುತ್ತಿದೆಯಲ್ಲ?**

ಮೇಘಾನಂದ, ಪೋಷಕ, ನ್ಯಾಮತಿ ತಾಲ್ಲೂಕು

ಮೊದಲ ಬಾರಿಗೆ ಮಂಡಳಿ ಪರೀಕ್ಷೆ ಬರೆಯುತ್ತಿರುವ ಕಾರಣಕ್ಕೆ ಕೆಲವರು ಆತಂಕಕ್ಕೆ ಒಳಗಾಗುತ್ತಾರೆ. ಉಪನ್ಯಾಸಕರನ್ನು ಭೇಟಿ ಮಾಡಿ, ಮಗಳು ಪೂರ್ವಭಾವಿ ಪರೀಕ್ಷೆಯಲ್ಲಿ ಬರೆದ ಉತ್ತರದ ಮಾಹಿತಿ ಪಡೆಯಬಹುದು. ಪೋಷಕರು ಒತ್ತಡ ಹಾಕದೆ ಪ್ರೋತ್ಸಾಹಿಸಬೇಕು.

- **ವಿಜ್ಞಾನ ವಿಷಯ ಓದಿದರೂ ನೆನಪಾಗುತ್ತಿಲ್ಲ?**

ಶ್ವೇತಾ, ಜಿಎಸ್‌ಎಸ್ ಶಾಲೆ, ಧಾರವಾಡ

ಪ್ರಯತ್ನ ಮಾಡಬೇಕು. ಪರೀಕ್ಷೆ–1ರಲ್ಲಿ ವಿಫಲರಾದರೆ ಮತ್ತೊಮ್ಮೆ ಪರೀಕ್ಷೆ ಬರೆದು, ಹೆಚ್ಚಿನ ಅಂಕ ಗಳಿಸಲು ಅವಕಾಶ ಇದೆ. ಮಾದರಿ ಪ್ರಶ್ನೆ ಪತ್ರಿಕೆ ಕಡೆಗೂ ಗಮನಹರಿಸಬೇಕು. ಶಿಕ್ಷಕರ ಜತೆ ಸಂಪರ್ಕದಲ್ಲಿದ್ದು, ಗೊಂದಲ ನಿವಾರಿಸಿಕೊಳ್ಳಬಹುದು.

- **ನಾಲ್ಕು ದಿನ ಹಾಜರಾತಿ ಕಡಿಮೆ ಇದೆ ಎಂಬ ಕಾರಣಕ್ಕೆ ಪ್ರವೇಶ ಪತ್ರ ನೀಡುತ್ತಿಲ್ಲ?**

ಮೊಹಮದ್ ಫಯಾಜ್, ವಿದ್ಯಾರ್ಥಿ ಸಹೋದರ, ಚಿತ್ತಾಪುರ

ಪ್ರತಿ ವಿದ್ಯಾರ್ಥಿಗೆ ಶೇ 75 ಹಾಜರಾತಿ ಕಡ್ಡಾಯ. 75ಕ್ಕಿಂತ ಹಾಜರಾತಿ ಕಡಿಮೆ ಇದ್ದರೆ ಸುಮಾರು 15 ದಿನ ಹೊಂದಾಣಿಕೆ ಮಾಡಲು ಮುಖ್ಯ ಶಿಕ್ಷಕರಿಗೆ ಅಧಿಕಾರ ಇದೆ. ಅವರನ್ನು ಭೇಟಿ ಮಾಡಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಮಂಡಳಿಯಿಂದಲೂ ಸೂಚನೆ ನೀಡಲಾಗುವುದು

ಪ್ರಜಾವಾಣಿ ಫೋನ್‌ಇನ್ ಕಾರ್ಯಕ್ರಮದಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ದೇಶಕ ಎಚ್‌.ಎನ್‌. ಗೋಪಾಲಕೃಷ್ಣ, ಅಧ್ಯಕ್ಷ ಪ್ರಕಾಶ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಎಡ್ಯುವರ್ಸ್™
ವಿದ್ಯಾರ್ಥಿಗಳ ದಾರಿದೀಪ

ಪ್ರಮುಖ ಸಲಹೆ

- ಮಕ್ಕಳಲ್ಲಿ ಭಯ ತುಂಬಬಾರದು
- ಇತರೆ ಮಕ್ಕಳ ಜ್ಞಾನದ ಜತೆಗೆ ಹೋಲಿಕೆ ಬೇಡ
- ಸತತ ಅಭ್ಯಾಸವೇ ತೇರ್ಗಡೆಗೆ ಮೆಟ್ಟಿಲು
- ಶಾಲಾ ಪರೀಕ್ಷೆಗಳು ಯಶಸ್ಸಿಗೆ ಸಹಕಾರಿ
- ಪರೀಕ್ಷಾ ಸಮಯದಲ್ಲಿ ವಿಶ್ರಾಂತಿ ಅಗತ್ಯ

ಸುದ್ದಿ 2 ನಿಮಿಷ

‘ಬಸ್ ಟಿಕೆಟ್ ದರ ನಿಗದಿಗೆ ಸಮಿತಿ’

ಬೆಂಗಳೂರು: ‘ಬಸ್ ಪ್ರಯಾಣ ದರ ಹೆಚ್ಚಳ ವಿಷಯದಲ್ಲಿ ಇನ್ನು ಮುಂದೆ ಸರ್ಕಾರ ಮಧ್ಯಪ್ರವೇಶ ಮಾಡುವುದಿಲ್ಲ. ಸದ್ಯ ದರ ಹೆಚ್ಚಳದ ಪ್ರಸ್ತಾವ ಕೂಡ ಇಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

‘ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ನಿಗದಿಗಾಗಿ ಸಮಿತಿ ರಚನೆ ಮಾಡಲಾಗುವುದು. ಸಮಿತಿಯು ಕಾಲಕಾಲಕ್ಕೆ ಸಂಸ್ಥೆಗಳ ಖರ್ಚು ವೆಚ್ಚಗಳನ್ನು ಆಧರಿಸಿ ಟಿಕೆಟ್ ದರ ಪರಿಷ್ಕರಣೆ ಮಾಡಲಿದೆ. ಅದಕ್ಕೆ ಅಗತ್ಯ ಮಾನದಂಡಗಳನ್ನು ಅನುಸರಿಸಲಿದೆ’ ಎಂದು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಬಸ್ ಟಿಕೆಟ್ ದರ ಹೆಚ್ಚಳವಾಗುತ್ತದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿರುವ ಸುದ್ದಿ ನಿಜವಲ್ಲ. ಟಿಕೆಟ್ ದರವನ್ನು ಇತ್ತೀಚೆಗಷ್ಟೇ ಹೆಚ್ಚಳ ಮಾಡಲಾಗಿತ್ತು. ಮತ್ತೆ ದರ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಊಹಾಪೋಹಗಳಿಗೆ ಜನ ಕಿವಿಗೊಡುವ ಅಗತ್ಯವಿಲ್ಲ’ ಎಂದು ಹೇಳಿದರು.

ಮಧುಗಿರಿ ಬೆಟ್ಟಕ್ಕೆ ರೋಪ್‌ವೇ: ಕೇಂದ್ರಕ್ಕೆ ರಾಜಣ್ಣ ಮನವಿ

ನವದೆಹಲಿ: ತುಮಕೂರು ಜಿಲ್ಲೆಯ ಮಧುಗಿರಿ ಬೆಟ್ಟಕ್ಕೆ ರೋಪ್‌ವೇ (ಕೇಬಲ್ ಕಾರು) ಅಳವಡಿಸಲು ಅಗತ್ಯ ಅನುಮೋದನೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಶಾಸಕ ಕೆ.ಎನ್. ರಾಜಣ್ಣ ತಿಳಿಸಿದರು.

ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಶನಿವಾರ ಇಲ್ಲಿ ಭೇಟಿ ಮಾಡಿದ ಅವರು ತುಮಕೂರು-ರಾಯದುರ್ಗ ರೈಲ್ವೆ ಕಾಮಗಾರಿ ಬಗ್ಗೆ ಚರ್ಚಿಸಿದರು. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮಧುಗಿರಿ ಏಕಶಿಲಾ ಬೆಟ್ಟಕ್ಕೆ ರೋಪ್ ವೇ ನಿರ್ಮಿಸಬೇಕು. ಈ ಬಗ್ಗೆ ಸಂಬಂಧಪಟ್ಟ ಸಚಿವರಿಗೆ ಒತ್ತಡ ಹೇರಬೇಕು ಎಂದು ಮನವಿ ಮಾಡಿದರು.

ಸಚಿವ ಸತೀಶ ಜಾರಕಿಹೊಳಿ ನಿಯೋಗಕ್ಕೆ ಮಲ್ಲಿಕಾರ್ಜುನ ಖರ್ಗೆ ಭರವಸೆ

‘ನಾಯಕತ್ವ ಗೊಂದಲ ಶೀಘ್ರ ಇತ್ಯರ್ಥ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ನಾಯಕತ್ವದಲ್ಲಿನ ಗೊಂದಲ ಶೀಘ್ರ ಬಗೆಹರಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನೇತೃತ್ವದ ನಿಯೋಗಕ್ಕೆ ಭರವಸೆ ನೀಡಿದರು.

ಎಐಸಿಸಿ ಅಧ್ಯಕ್ಷರ ನಿವಾಸದಲ್ಲಿ ಖರ್ಗೆ ಅವರನ್ನು ಜಾರಕಿಹೊಳಿ, ಶಾಸಕರಾದ ಕೆ.ಎನ್. ರಾಜಣ್ಣ, ಎನ್. ಎಚ್.ಕೋನರಡ್ಡಿ ಮತ್ತಿತರರು ಶನಿವಾರ ಭೇಟಿ ಮಾಡಿ ಚರ್ಚಿಸಿದರು. ಬಳಿಕ ಜಾರಕಿಹೊಳಿ ಹಾಗೂ ಖರ್ಗೆ ಪ್ರತ್ಯೇಕವಾಗಿ 20 ನಿಮಿಷ ಸಮಾಲೋಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ, ‘ರಾಜ್ಯದ ನಾಯಕತ್ವ ಗೊಂದಲಗಳು ಹಾಗೂ ಕೆಲವು ವಿಚಾರಗಳನ್ನು ಖರ್ಗೆ ಅವರ ಗಮನಕ್ಕೆ ತರಲಾಯಿತು. ಗೊಂದಲವನ್ನು ಶೀಘ್ರ ಬಗೆಹರಿಸುವಂತೆ ಮನವಿ ಮಾಡಿದ್ದೇನೆ. ಅಧ್ಯಕ್ಷರು ಕೆಲವೊಂದು ಸಲಹೆಗಳನ್ನು ನೀಡಿದ್ದಾರೆ. ನಾಯಕತ್ವ ಗೊಂದಲ ಬಗೆಹರಿಸಲು ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ ಎಂದು ಖರ್ಗೆಯವರು ಮೊದಲ ಬಾರಿಗೆ ಹೇಳಿದ್ದಾರೆ. ಅವರ ತೀರ್ಮಾನಕ್ಕಾಗಿ ಇಡೀ ಪಕ್ಷ ಹಾಗೂ ಕಾರ್ಯಕರ್ತರು ಎದುರು ನೋಡುತ್ತಿದ್ದಾರೆ’ ಎಂದರು.

‘ಹೈಕಮಾಂಡ್ ನಾಯಕರು ಈಗಾಗಲೇ ಒಂದು ತಾರ್ಕಿಕ ನಿರ್ಧಾರಕ್ಕೆ ಬಂದಿದ್ದಾರೆ. ಆದಷ್ಟು ಬೇಗ ಎಲ್ಲವೂ ಸರಿಯಾಗಬಹುದು’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ‘ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಗೊತ್ತಿಲ್ಲ. ಗೊಂದಲವಷ್ಟೇ ಬಗೆಹರಿಸಲು ಮನವಿ ಮಾಡಿದ್ದೇನೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಚರ್ಚೆ ಮಾಡಿಲ್ಲ. ಮೊದಲು ಈಗಿರುವ ಗೊಂದಲಗಳು ಬಗೆಹರಿಯಲಿ’ ಎಂದರು.

ರಾಜಣ್ಣ ಮಾತನಾಡಿ, ‘ಸತೀಶ್ ಅವರ ಅಭಿಪ್ರಾಯಕ್ಕೆ ನಾವೆಲ್ಲ ಸಹಮತ ವ್ಯಕ್ತಪಡಿಸಿದ್ದೇವೆ. ಗೊಂದಲ ಇರುವುದು ಸರ್ಕಾರಕ್ಕೂ ಮತ್ತು ಪಕ್ಷಕ್ಕೂ ಒಳಿತಲ್ಲ’ ಎಂದರು. ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೆ.ಎನ್‌.ರಾಜಣ್ಣ ಹೂಗುಚ್ಛ ನೀಡಿದರು. ಕೆ.ಎಸ್. ಬಸವಂತಪ್ಪ, ಎನ್‌.ಎಚ್‌.ಕೋನರಡ್ಡಿ, ಸತೀಶ ಜಾರಕಿಹೊಳಿ ಅವರು ಜೊತೆಗೆ ಇದ್ದರು

> **ನಾಯಕತ್ವ ಬದಲಾವಣೆಯ ಗೊಂದಲ ಬಗೆಹರಿಸುವುದಾಗಿ ಸಚಿವ ಸತೀಶ ಜಾರಕಿಹೊಳಿಗೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಭರವಸೆ ನೀಡಿದ್ದರೆ ಬಹಳ ಸಂತೋಷ**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

ವಿ.ವಿ: ಸಗಣಿ, ಗಂಜಲ ಸಂಶೋಧನೆ

ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲಿ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಲ್ಲಿ ವೈಚಾರಿಕ ಮನೋಭಾವ ಬೆಳೆಸುವ ಬದಲು ಸಗಣಿ, ಗಂಜಲ ಕುರಿತು ಭೂತಕಾಲದ ಊಹಾತ್ಮಕ ಸಂಗತಿಗಳ ಕುರಿತು ಮೌಢ್ಯ ಬೆಳೆಸುತ್ತಿವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಜ್ಯದ 32 ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

ಊಹಾತ್ಮಕ ಸಂಗತಿಗಳ ಕುರಿತು ಸಂಶೋಧನೆಗೆ ಮುಂದಾಗುವ ವಿದ್ಯಾರ್ಥಿಗಳು ಮುಂದೆ ನಿರುಪಯುಕ್ತ ಪದವೀಧರರಾಗುತ್ತಾರೆ. ಸಂವಿಧಾನದ ಆಶಯಗಳನ್ನು ಒಳಗೊಂಡ ಶಿಕ್ಷಣದಿಂದ ಮಾತ್ರ ನಿಜವಾದ ಉನ್ನತ ಶಿಕ್ಷಣದ ಪ್ರಗತಿ ಸಾಧ್ಯ ಎಂದರು.

ಇತ್ತೀಚೆಗೆ ನಡೆದ ಎಐ ಶೃಂಗಸಭೆಯಲ್ಲಿ ಚೀನಾ ತಯಾರಿಸಿದ ಎಐ ರೋಬೋಟ್ ನಾಯಿಯನ್ನು ತಾನೇ ಸಿದ್ಧಪಡಿಸಿದ್ದಾಗಿ ಹೇಳಿಕೊಂಡ ಉತ್ತರ ಪ್ರದೇಶದ ಗೋಲ್ಗೋಟಿಯಾ ವಿಶ್ವವಿದ್ಯಾಲಯವು ಭಾರತದ ಮರ್ಯಾದೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಣ್ಣು ಪಾಲು ಮಾಡಿತು ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಸಂಖ್ಯೆ ಹೆಚ್ಚಿಸಲು ‘ಅವಶ್ಯಕತೆಗಳಿಗೆ ಅನುಗುಣವಾಗಿ ಸೂಕ್ತ ಕಾರ್ಯತಂತ್ರ ರೂಪಿಸಬೇಕು. ವಿದ್ಯಾರ್ಥಿಗಳ ಪ್ರವೇಶ ಮತ್ತು ಪರೀಕ್ಷೆಗಳನ್ನು ನಿಗದಿತ ಸಮಯದ ಒಳಗೆ ನಡೆಸಬೇಕು. ಪರೀಕ್ಷಾ ಫಲಿತಾಂಶಗಳನ್ನು ಕಾಲಮಿತಿಯ ಒಳಗೆ ಪ್ರಕಟಿಸಬೇಕು’ ಎಂದು ನಿರ್ದೇಶನ ನೀಡಿದರು. ಉದ್ಯೋಗ ಆಧಾರಿತ ಕೋರ್ಸ್‌ಗಳು, ಪಠ್ಯಕ್ರಮವನ್ನು ನವೀಕರಿಸಬೇಕು. ಶಿಕ್ಷಣದ ಗುಣಮಟ್ಟ ಹೆಚ್ಚಿಸಬೇಕು’ ಎಂದು ಸೂಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದ 32 ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲಿ ಸಿದ್ದರಾಮಯ್ಯ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಸ್ತಲಾಘವ ಮಾಡಿದರು

> **ಪಿಂಚಣಿ ಸಮಸ್ಯೆ ಸೇರಿದಂತೆ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಸಮಿತಿ ರಚಿಸಲು ಉನ್ನತ ಶಿಕ್ಷಣ ಇಲಾಖೆಗೆ ಸೂಚಿಸಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಭಾರತೀಯ ಸಂಪ್ರದಾಯದ ಸಮವಸ್ತ್ರ ಧರಿಸಲು ಆದ್ಯತೆ ನೀಡಬೇಕು**
> **ಥಾವರಚಂದ್ ಗೆಹಲೋತ್,** ರಾಜ್ಯಪಾಲ

ಬಜೆಟ್‌ನಲ್ಲಿ ಹೆಚ್ಚು ಅನುದಾನ ಕೊಡಿ: ಗೆಹಲೋತ್

‘ವಿಶ್ವವಿದ್ಯಾಲಯಗಳು ಯಾವುದೇ ಸ್ವಂತ ಆದಾಯ ಹೊಂದಿಲ್ಲ. ಹಾಗಾಗಿ, ಸಾರ್ವಜನಿಕ ವಿಶ್ವವಿದ್ಯಾಲಯಗಳ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಕಾಳಜಿ ತೋರಬೇಕು. ಉನ್ನತ ಶಿಕ್ಷಣ ಕ್ಷೇತ್ರಕ್ಕೆ 2026–27ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಬೇಕು. ಖಾಲಿ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಬೇಕು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಲಹೆ ನೀಡಿದರು.

‘ಕೇಂದ್ರ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾರ್ಗಸೂಚಿಗಳನ್ನು ಪಾಲಿಸಬೇಕು. ವಿಶ್ವವಿದ್ಯಾನಿಲಯದ ನೌಕರರ ನಡುವಿನ ವಿವಾದಗಳು, ಕುಲಪತಿ ಮತ್ತು ಸಿಂಡಿಕೇಟ್ ಸದಸ್ಯರ ನಡುವಿನ ಸಂಘರ್ಷ ತಡೆಯಬೇಕು. ಸಿಎಸ್‌ಆರ್ ನಿಧಿ ಬಳಸಿಕೊಂಡು ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು’ ಎಂದರು.

ಸಿಇಟಿ: ಅರ್ಜಿ ಸಲ್ಲಿಸಲು ಫೆ.27 ಕೊನೆ ದಿನ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸುವ ದಿನಾಂಕವನ್ನು ಫೆ.27ರವರೆಗೆ ವಿಸ್ತರಿಸಲಾಗಿದೆ.

ಇದು ಕೊನೆಯ ಅವಕಾಶವಾಗಿದ್ದು, ಈ ಅವಧಿ ನಂತರ ವಿಸ್ತರಣೆ ಇರುವುದಿಲ್ಲ. ಅಭ್ಯರ್ಥಿಗಳು ನಿಗದಿತ ಅವಧಿಯ ಒಳಗೆ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಹೇಳಿದ್ದಾರೆ.

ಅರ್ಜಿ ಸಲ್ಲಿಸಲು ಫೆ. 27 ಹಾಗೂ ಶುಲ್ಕ ಪಾವತಿಗೆ ಮಾರ್ಚ್ 3ರವರೆಗೆ ಅವಕಾಶ ನೀಡಲಾಗಿದೆ. ಇದುವರೆಗೂ 3.18 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. 2.18 ಲಕ್ಷ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಸ್ಯಾಟ್ಸ್ ಮೂಲಕ, 1.08 ಲಕ್ಷ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಕಾಲೇಜು ಹಂತದಲ್ಲಿ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

ದತ್ತು ಅರ್ಜಿ: ಪರಿಗಣನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಇಬ್ಬರು ಮಕ್ಕಳನ್ನು ಕಳೆದುಕೊಂಡು ದುಃಖದಲ್ಲಿದ್ದ ಶಿವಮೊಗ್ಗದ ದಂಪತಿ, ಮಠದಲ್ಲಿ ಸಿಕ್ಕ ಹಸುಗೂಸನ್ನು ಹತ್ತು ವರ್ಷ ಸಾಕಿ ಸಲಹಿದ ನಂತರ ಇದೀಗ ಅದೇ ಮಗುವನ್ನು ದತ್ತು ಪಡೆಯಲು ನಡೆಸಿರುವ ಕಾನೂನು ಹೋರಾಟಕ್ಕೆ ಹೈಕೋರ್ಟ್ ನೆರವು ನೀಡಿದೆ.

‘ಮಾನವೀಯ ನೆಲೆಯಲ್ಲಿ ಮಗುವನ್ನು ನಮಗೇ ದತ್ತು ನೀಡಬೇಕು ಎಂಬ ದಂಪತಿಯ ಮನವಿಯನ್ನು ಪರಿಗಣಿಸಿ’ ಎಂದು ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಾದ ಪ್ರಕರಣವೊಂದರಲ್ಲಿ, ‘ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ’ಕ್ಕೆ (ಸಿಎಆರ್‌ಎ) ಆದೇಶಿಸಿದೆ.

‘ಅರ್ಜಿದಾರರು ಮಗುವನ್ನು ತಮ್ಮ ಸ್ವಂತ ಮಗುವಿನಂತೆ ಸಾಕಿದ್ದಾರೆ. ಹಾಗಾಗಿ, ಮಗು ಅವರ ಕೈಯಲ್ಲಿ ಸುರಕ್ಷಿತವಾಗಿರುತ್ತದೆ ಎಂಬ ನಂಬಿಕೆ ಇದೆ. ಆದ್ದರಿಂದ, ಮಗುವನ್ನು ಮಾರ್ಚ್ 10ಕ್ಕೆ ಬೆಂಗಳೂರಿನ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಬೇಕು. ಸಮಿತಿ ವಿಚಾರಣೆ ಪೂರ್ಣಗೊಳಿಸಿದ ಬಳಿಕ ಮಗುವನ್ನು ದತ್ತು ಪಡೆಯಲು ಅರ್ಜಿದಾರರ ಅರ್ಹತೆಯನ್ನು ಗುರುತಿಸಬೇಕು. ಅರ್ಜಿದಾರರು ಮಗುವನ್ನು ದತ್ತು ಪಡೆಯಲು ಅರ್ಹರೆಂದು ಕಂಡುಬಂದರೆ, ಬೆಂಗ ಳೂರಿನ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿ ಕಾರಕ್ಕೆ ಅರ್ಜಿದಾರರ ಮನವಿಯನ್ನು ತ್ವರಿತವಾಗಿ ರವಾನಿಸಿ ಈ ಕುರಿತಾದ ಪ್ರಕ್ರಿಯೆಗಳನ್ನು ಪೂರೈಸಲು ಸೂಚಿಸಬೇಕು’ ಎಂದು ಆದೇಶದಲ್ಲಿ ವಿವರಿಸಿದೆ.

ಮೈಕ್ ಶಬ್ದಕ್ಕೆ ತಕರಾರು: ಘರ್ಷಣೆ

ವಾಡಿ (ಕಲಬುರಗಿ ಜಿಲ್ಲೆ): ಶಿವಾಜಿ ಜಯಂತಿಯಂದು ಧ್ವನಿವರ್ಧಕ ಶಬ್ದಕ್ಕೆ ಸಂಬಂಧಿಸಿ ಗುರುವಾರ ರಾತ್ರಿ ರಾವೂರು ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಗುಂಪುಗಳ ನಡುವೆ ಚಕಮಕಿ ಉಂಟಾಗಿ, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಕಲ್ಲುತೂರಾಟ ನಡೆದು 5ಕ್ಕೂ ಅಧಿಕ ಜನ ಗಾಯಗೊಂಡಿದ್ದಾರೆ. ಶನಿವಾರ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ರಾವೂರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗ್ರಾಮದ ಗೋಕುಲ ನಗರದ ಗಣೇಶ ಕಟ್ಟೆಯ ಬಳಿ ಗುರುವಾರ ರಾತ್ರಿ ಶಿವಾಜಿ ಜಯಂತಿಯಂದು ನಡೆಯುತ್ತಿದ್ದ ಮೆರವಣಿಗೆಯಲ್ಲಿ ಧ್ವನಿವರ್ಧಕ ಶಬ್ದ ಕಡಿಮೆ ಮಾಡುವ ವಿಷಯಕ್ಕೆ ಕೆಲ ಮುಸ್ಲಿಂ ಹಾಗೂ ಹಿಂದೂ ಯುವಕರ ಮಧ್ಯೆ ಮಾತಿನ ಚಕಮಕಿ ನಡೆದು ಪರಸ್ಪರ ಹೊಡೆದಾಡಿಕೊಂಡಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ವಾಡಿ ಪಿಎಸ್‌ಐ ತಿರುಮಲೇಶ ಕೆ. ಪರಿಸ್ಥಿತಿ ತಿಳಿಗೊಳಿಸಿದರು. ಈ ಕುರಿತು ವಾಡಿ ಠಾಣೆಯಲ್ಲಿ ಮುಂಜಾಗ್ರತೆಯಾಗಿ ಎರಡು ಕೋಮಿನ 8 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಗ್ರಾಮದಲ್ಲಿ ಹೆಚ್ಚಿನ ಪೊಲೀಸರು ಬೀಡು ಬಿಟ್ಟಿದ್ದಾರೆ.

2.5 ಲಕ್ಷಕ್ಕೂ ಅಧಿಕ ಹುದ್ದೆ ಖಾಲಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಇಲಾಖೆಗಳಲ್ಲಿ 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿಯಿದ್ದು, ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆರೋಗ್ಯ ಇಲಾಖೆ ಶನಿವಾರ ಆಯೋಜಿಸಿದ್ದ ‘ಅಭಯ ಹಸ್ತ’ ಆರೋಗ್ಯ ಮತ್ತು ವಿವಿಧ ಅರೆ ವೈದ್ಯಕೀಯ ಹುದ್ದೆಗಳಿಗೆ ಆಯ್ಕೆಯಾದವರಿಗೆ ನೇಮಕಾತಿ ಆದೇಶ ಹಸ್ತಾಂತರಿಸಿ ಮಾತನಾಡಿ, ನೇಮಕಾತಿಯಲ್ಲಿದ್ದ ಹಲವು ಸಮಸ್ಯೆಗಳನ್ನು ಬಗೆಹರಿಸಿ, ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ‘ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೇಮಕಾತಿಗೆ ಪ್ರತ್ಯೇಕ ‘ನೇಮಕಾತಿ ಮಂಡಳಿ’ ರಚಿಸಲು ಯೋಜಿಸಿದ್ದು, ಈ ಸಂಬಂಧ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗಿದೆ’ ಎಂದರು.

‘ಪುನೀತ್ ರಾಜಕುಮಾರ್ ಹೃದಯ ಯೋಜನೆ ಅಡಿ 13,000 ಜನರಿಗೆ ಚಿಕಿತ್ಸೆ ನೀಡಿ, ಪ್ರಾಣ ಉಳಿಸಲಾಗಿದೆ. ₹ 20 ಸಾವಿರ ಮೌಲ್ಯದ ಹೃದಯ ಸಂಬಂಧಿ ಇಂಜೆಕ್ಷನ್ ಉಚಿತವಾಗಿ ನೀಡಲಾಗುವುದು’ ಎಂದರು.

ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ, ಮುಖ್ಯಮಂತ್ರಿ ರಾಜಕೀಯ ಸಲಹೆಗಾರ ನಸೀರ್ ಅಹಮದ್, ಶಾಸಕ ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು.

ಸಿಆರ್‌ಪಿಸಿ ಕಲಂ 231(2)ರ ವ್ಯಾಖ್ಯಾನಕ್ಕೆ ವಿಶೇಷ ಸ್ಪರ್ಶ

‘ಪಾಟಿ ಸವಾಲಿನ ತರಾತುರಿ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುತರ ಕ್ರಿಮಿನಲ್ ಪ್ರಕರಣಗಳಲ್ಲಿ, ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಕಲಂ 231ರ ಉಪ ಕಲಂ 2ರ ವ್ಯಾಖ್ಯಾನವನ್ನು ಹಿಗ್ಗಿಸಿ ಹೇಳಲು ಬೇಕಾದಷ್ಟು ಅವಕಾಶ ನೀಡುವ ವಿಶೇಷ ತೀರ್ಪೊಂದನ್ನು ಹೈಕೋರ್ಟ್ ನೀಡಿದೆ.

ಎಂಟು ಜನ ಪ್ರತ್ಯಕ್ಷ ಸಾಕ್ಷಿಗಳಿರುವ ಕೊಲೆ ಯತ್ನದ ಪ್ರಕರಣದಲ್ಲಿ, ‘ಪ್ರಾಸಿಕ್ಯೂಟರ್, ಅಷ್ಟೂ ಸಾಕ್ಷಿಗಳ ಮುಖ್ಯ ವಿಚಾರಣೆಯನ್ನು ದಾಖಲು ಮಾಡಿಸಿದ ನಂತರವೇ ಎಲ್ಲರ ಪಾಟಿ ಸವಾಲಿಗೆ ಅವಕಾಶ ಮಾಡಿಕೊಡಬೇಕು’ ಎಂಬ ಆರೋಪಿಗಳ ಕೋರಿಕೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಇಂತಹ ತೀರ್ಪು ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಕೊಲೆ ಯತ್ನ ಪ್ರಕರಣದ ಆರೋಪಿಗಳಾದ ಬಿಹಾರದ ಸಮಷ್ಟಿಪುರ ಜಿಲ್ಲೆಯ ಮಂಗಳಾಪುರದ ರವೀಂದ್ರ ಕುಮಾರ್ ಮತ್ತು ಮನೋಜ್ ಕುಮಾರ್ ಸಹಾನಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಮನ್ನಿಸಿರುವ ನ್ಯಾಯಪೀಠ, ‘ದೋಷಾರೋಪ ಪಟ್ಟಿಯಲ್ಲಿರುವ ಎಂಟೂ ಸಾಕ್ಷಿಗಳ ಮುಖ್ಯ ವಿಚಾರಣೆ ಪೂರ್ಣ ಪ್ರಮಾಣದಲ್ಲಿ ದಾಖಲಾಗುವತನಕ ಪಾಟಿ ಸವಾಲನ್ನು ನಿರ್ಬಂಧಿಸಬೇಕು ಮತ್ತು ಪಾಟಿ ಸವಾಲಿಗೆ ಒತ್ತಾಯ ಮಾಡಬಾರದು’ ಎಂದು ಸೆಷನ್ಸ್ ಕೋರ್ಟ್‌ಗೆ ನಿರ್ದೇಶಿಸಿದೆ.

ಮುಖ್ಯಾಂಶಗಳು

- ಕ್ರಿಮಿನಲ್ ಅರ್ಜಿ ಸಂಖ್ಯೆ 16658/2025
- ಕೊಲೆ ಯತ್ನ ಆರೋಪದ ಪ್ರಕರಣ
- ಬಿಹಾರ ರಾಜ್ಯದ ಆರೋಪಿಗಳು

ಒರೆಗೆ ಹಚ್ಚಿದ ಆರೋಪಿಗಳ ಅಹವಾಲು

‘ಪ್ರಕರಣದಲ್ಲಿನ ದೋಷಾರೋಪ ಪಟ್ಟಿಯಲ್ಲಿರುವ 1ರಿಂದ 8ರವರೆಗಿನ ಸಾಕ್ಷಿಗಳು ಪ್ರತ್ಯಕ್ಷ ಸಾಕ್ಷಿಗಳಾಗಿದ್ದಾರೆ. ಒಬ್ಬೊಬ್ಬರ ಮುಖ್ಯ ವಿಚಾರಣೆ ಮುಗಿಯುತ್ತಿದ್ದಂತೆಯೇ ತಡಮಾಡದೆ ಪಾಟಿ ಸವಾಲು ನಡೆಸಲು ನಿರ್ದೇಶಿಸಿದರೆ, ಪ್ರತಿವಾದ ಏನೆಂಬುದನ್ನು ಅಕಾಲಿಕವಾಗಿ ಬಹಿರಂಗಪಡಿಸಿದಂತಾಗುತ್ತದೆ. ಆದ್ದರಿಂದ, ಪಾಟಿ ಸವಾಲನ್ನು ಮುಂದೂಡಬೇಕು’ ಎಂದು ಕೋರಿ ಅರ್ಜಿದಾರ ಆರೋಪಿಗಳು, ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 231 (2)ರ ಅಡಿಯಲ್ಲಿ ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಇದನ್ನು ತಿರಸ್ಕರಿಸಲಾಗಿತ್ತು.



ಅರ್ಜಿದಾರರ ವಿರುದ್ಧ ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 34ರ ಜತೆಗೆ 302, 307, 323, 324, 326 ಮತ್ತು 504ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

‘ಹಾಲಿ ಪ್ರಕರಣದಲ್ಲಿ, ಒಂದೇ ಘಟನೆಗೆ ಹಲವಾರು ಸಾಕ್ಷಿಗಳನ್ನು ಪ್ರತ್ಯಕ್ಷದರ್ಶಿಗಳು ಎಂದು ಉಲ್ಲೇಖಿಸಲಾಗಿದೆ ಮತ್ತು ಇವರೆಲ್ಲಾ ನಿಕಟ ಸಂಬಂಧಿಗಳಾಗಿದ್ದಾರೆ ಎಂಬುದು ಗಮನಾರ್ಹ. ಹೀಗಾಗಿ, ಇವರಲ್ಲಿ ಆರಂಭಿಕ ಸಾಕ್ಷಿಯ ಮುಖ್ಯ ವಿಚಾರಣೆ ಮುಗಿದ ಕೂಡಲೇ ಆತನ ಪಾಟಿ ಸವಾಲಿಗೆ ಅವಕಾಶ ಮಾಡಿಕೊಟ್ಟಲ್ಲಿ ಅದರಿಂದ ಹೊರಹೊಮ್ಮುವ ಪ್ರಾಸಿಕ್ಯೂಷನ್ ದೌರ್ಬಲ್ಯ ನ್ಯಾಯದ ಸತ್ವವನ್ನು ಉಡುಗಿಸುತ್ತದೆ ಎಂಬ ಅರ್ಜಿದಾರರ ಆತಂಕ ಯಥೋಚಿತವಾಗಿದೆ. ಮಾತ್ರವಲ್ಲ, ನ್ಯಾಯಯುತವಾಗಿಯೂ ಗುರುತಿಸಲಾದ ಅಂಶಗಳನ್ನು ಒಳಗೊಂಡಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ತನಿಖೆಯ ಸಮಯದಲ್ಲಿ ದೋಷಾರೋಪ ಪಟ್ಟಿಯಲ್ಲಿರುವ 1 ರಿಂದ 8ರವರೆಗಿನ ಎಲ್ಲಾ ಸಾಕ್ಷಿಗಳು ಕಲಂ 161ರ ಅಡಿಯಲ್ಲಿ ಒಂದೇ ರೀತಿಯ ಹೇಳಿಕೆಗಳನ್ನು ನೀಡಿದ್ದಾರೆ ಎಂಬ ಅಂಶದ ಹಿನ್ನೆಲೆಯಲ್ಲಿ, ಸೆಷನ್ಸ್ ನ್ಯಾಯಾಲಯ ಕಾನೂನಿಗೆ ಅನುಸಾರವಾಗಿ ತನ್ನ ವಿವೇಚನಾ ಅಧಿಕಾರ ಚಲಾಯಿಸುವಲ್ಲಿ ವಿಫಲವಾಗಿದೆ’ ಎಂದೂ ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎ.ವಿಕ್ರಂ ರಾಜ್ ವಾದ ಮಂಡಿಸಿದ್ದರು.

> **ಸೆಷನ್ಸ್ ಕೋರ್ಟ್, ಸಿಆರ್‌ಪಿಸಿ ಕಲಂ 231(2)ರ ಅಡಿಯಲ್ಲಿ ಅರ್ಜಿ ತಿರಸ್ಕರಿಸಿರುವುದು ನ್ಯಾಯಸಮ್ಮತವಾದ ವಿಚಾರಣಾ ಚೌಕಟ್ಟನ್ನು ದುರ್ಬಲಗೊಳಿಸುವಂತಿದೆ**
> **ನ್ಯಾ. ಎಂ.ನಾಗಪ್ರಸನ್ನ**

ಭಾನುವಾರ, ಫೆಬ್ರುವರಿ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 53 | ಪುಟ 22

www.prajavani.net | prajavani.net | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ರೇಯಾಂಕಾ ಮಿಂಚು

ಕನ್ನಡತಿ ಶ್ರೇಯಾಂಕಾ ಪಾಟೀಲ ಶನಿವಾರ ಆಸ್ಟ್ರೇಲಿಯಾ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ 3 ವಿಕೆಟ್ ಪಡೆದು ಮಿಂಚಿದರು. 17 ರನ್‌ಗಳಿಂದ ಗೆದ್ದ ಭಾರತ ಸರಣಿಯನ್ನು 2–1ರಿಂದ ವಶಮಾಡಿಕೊಂಡಿತು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

1.70 ಕೋಟಿ ಮತದಾರರಿಗೆ ಕೊಕ್ 7

ಸಮಾಧಿಗಳಲ್ಲಿ ಮತ್ತೆ 'ಒಂದಾದ' ಅಪ್ಪ- ಅಮ್ಮ 6

ಕಾಣದ ಕೈ: ಕಾಡುವ ಡ್ರಗ್ಸ್

ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ಫ್ಯಾಕ್ಟರಿ: ಹಲವು ಜಿಲ್ಲೆಗಳಲ್ಲೂ ಜಾಲ

• ಶಿವಪ್ರಸಾದ್‌ ರೈ

ಒಳನೋಟ

ಮೈಸೂರು: 'ಹತ್ತು ವರ್ಷಗಳ ಹಿಂದೆ ಜಿಲ್ಲೆಯ ಕಾಡಂಚಿನ ಪ್ರದೇಶದಲ್ಲಿ ಕೆಲವರು ಸಾಮಾನ್ಯ ಬೆಳೆಗಳ ಜೊತೆಗೆ ಗಾಂಜಾ ಬೆಳೆಯುತ್ತಿದ್ದರು. ನಗರ ಪ್ರದೇಶಕ್ಕೆ ಮಾರಲು ತಂದಾಗ ಸಿಕ್ಕಿಹಾಕಿಕೊಳ್ಳುತ್ತಿದ್ದರು. ಮಾದಕ ವಸ್ತು ವ್ಯವಹಾರ ಜಿಲ್ಲೆಯೊಳಗೆ ಇದ್ದ ಕಾರಣ ಮೂಲ ಪತ್ತೆಹಚ್ಚುವುದು ಸುಲಭವಾಗುತ್ತಿತ್ತು. ಆದರೆ ಈಚೆಗೆ ಸಿಂಥೆಟಿಕ್ ಡ್ರಗ್ಸ್ ಉತ್ಪಾದನಾ ಘಟಕ ನಗರ ಪ್ರದೇಶದಲ್ಲಿ ಪತ್ತೆಯಾಗುತ್ತಿರುವುದು ಆಘಾತಕಾರಿ, ಇದು ಯುವಜನರ ಮೇಲಷ್ಟೇ ಅಲ್ಲದೆ, ಜನಸಾಮಾನ್ಯರ ಜೀವನದ ಮೇಲೂ ಕೆಟ್ಟ ಪ್ರಭಾವ ಬೀರಲಿದೆ..'

ನಿವೃತ್ತ ಎಸ್‌ಪಿ ಶಂಕರೇಗೌಡರು ಏಕಕಾಲಕ್ಕೆ ನೆನಪು ಮತ್ತು ವಾಸ್ತವವನ್ನು ತೆರೆದಿಟ್ಟರು. ಮೈಸೂರು ನಗರದ ಹೊರ ವಲಯದಲ್ಲಿ ಎಂಡಿಎಂಎ ಉತ್ಪಾದನಾ ಘಟಕವನ್ನು ಹೊರರಾಜ್ಯದ ಪೊಲೀಸರು ಪತ್ತೆ ಮಾಡಿದ ಬಳಿಕ ಇಂತಹ ಹಲವು ಮಾತುಗಳು ಪೊಲೀಸ್ ಅಧಿಕಾರಿಗಳ ವಲಯದಲ್ಲಿ ಕೇಳಿಬರುತ್ತಿವೆ.



ಈ ಭಾಗದಲ್ಲಿ ಹಿಂದೆ ಗಾಂಜಾ ಬಳಕೆ ಹೆಚ್ಚಿತ್ತು. ಕಾಡು ಪ್ರದೇಶ, ಗ್ರಾಮೀಣ ಭಾಗದಲ್ಲಿ ಬೆಳೆಗಳ ನಡುವೆ ಗಾಂಜಾ ಬೆಳೆಸುವವರು ಪತ್ತೆಯಾಗುತ್ತಿದ್ದರು. ಆದರೆ ಈಚೆಗೆ ಬೆಂಗಳೂರನ್ನು ಮಾರಾಟದ ಕೇಂದ್ರವಾಗಿಟ್ಟುಕೊಂಡು, ಮೈಸೂರಿನಲ್ಲಿ ಸಿಂಥೆಟಿಕ್ ಡ್ರಗ್ಸ್ ಉತ್ಪಾದನಾ ಪ್ರಯತ್ನ ನಡೆದಿರುವುದು, ಇತರೆ ಜಿಲ್ಲೆಗಳಿಗೂ ಡ್ರಗ್ಸ್ ಭೀತಿ ಹಬ್ಬುವಂತೆ ಮಾಡಿದೆ. ಇದು ಸಹಜವಾಗಿ ಸ್ಥಳೀಯ ಪೊಲೀಸ್ ವ್ಯವಸ್ಥೆ, ಆಡಳಿತದ ಮೇಲೆ ಕಪ್ಪು ಚುಕ್ಕೆ ಮೂಡಿಸಿದ್ದು, ನಿಯಂತ್ರಣದ ಪ್ರಯತ್ನದ ಬಳಿಕವೂ ಡ್ರಗ್ಸ್ ಉತ್ಪಾದನಾ ಘಟಕ ಪತ್ತೆಯಂಥ ಘಟನೆಗಳು ಗೃಹ ಇಲಾಖೆಗೂ ತಲೆನೋವಾಗಿ ಪರಿಣಮಿಸಿವೆ.

▶4

ಎನ್‌ಸಿಬಿ ತಂಡ ದಾಳಿ ನಡೆಸಿದ್ದ ಹೆಬ್ಬಾಳದಲ್ಲಿರುವ 'ಟುಕ್– ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡಕ್ಷನ್ ಸಲ್ಯೂಷನ್ ಮ್ಯಾನಿಫ್ಯಾಕ್ಚರಿಂಗ್' ಹೆಸರಿನ ಘಟಕ

> **ಮಾದಕ ವಸ್ತುಗಳ ಬಳಕೆಯಿಂದ ಆಗುವ ದುಷ್ಪರಿಣಾಮ, ಹಾನಿ ಕುರಿತೂ ವಿದ್ಯಾರ್ಥಿಗಳಿಗೆ ಶಾಲಾ-ಕಾಲೇಜುಗಳಲ್ಲಿ ಅರಿವು ಮೂಡಿಸುವ ಕೆಲಸ ಇನ್ನೂ ಹೆಚ್ಚು ನಡೆಯಬೇಕು**
> **ಜಿ.ಪರಮೇಶ್ವರ,** ಗೃಹ ಸಚಿವ

> **ಎರಡು ವಾರದಲ್ಲಿ 16 ಪೆಡ್ಲರ್‌ಗಳನ್ನು ಬಂಧಿಸಿದ್ದೇವೆ. ಡ್ರೋಣ್ ಮೂಲಕ ಸೂಕ್ಷ್ಮ ಪ್ರದೇಶಗಳ ಚಟುವಟಿಕೆಗಳನ್ನೂ ಗಮನಿಸಲಾಗುತ್ತಿದೆ**
> **ಸೀಮಾ ಲಾಟ್ಕರ್,** ಮೈಸೂರು ನಗರ ಪೊಲೀಸ್ ಆಯುಕ್ತೆ

ಆಸ್ಪತ್ರೆಯಲ್ಲಿ ₹5 ಲಕ್ಷ ಪಡೆಯುವಾಗ ಸಿಕ್ಕಿಬಿದ್ದ ಶಿರಹಟ್ಟಿಯ ಚಂದ್ರು ಲಮಾಣಿ

ಬಿಜೆಪಿ ಶಾಸಕ 'ಲೋಕಾ' ಬಲೆಗೆ

ಪ್ರಜಾವಾಣಿ ವಾರ್ತೆ

ಗದಗ: ಗುತ್ತಿಗೆದಾರನಿಂದ ₹5 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಶಿರಹಟ್ಟಿ ಮತಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕರು ಶನಿವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗೆ ಸಂಬಂಧಿಸಿದಂತೆ ಚಂದ್ರು ಲಮಾಣಿ ಅವರು ಗುತ್ತಿಗೆದಾರನ ಬಳಿ ₹11 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಗದಗ ತಾಲ್ಲೂಕಿನ ಚಿಂಚಲಿ ಗ್ರಾಮದ ಪ್ರಥಮದರ್ಜೆ ಗುತ್ತಿಗೆದಾರ ವಿಜಯ್ ಪೂಜಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ತಮ್ಮದೇ ಮಾಲೀಕತ್ವದ ಬಾಲಾಜಿ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ 2.15ರ ಸುಮಾರಿಗೆ ಚಂದ್ರು ಲಮಾಣಿ ಮತ್ತು ಅವರ ಆಪ್ತ ಸಹಾಯಕರಾದ ಮಂಜುನಾಥ ವಾಲ್ಮೀಕಿ ಮತ್ತು ಗುರು ನಾಯ್ಕ್ ₹5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

▶7

ವೈದ್ಯರಾಗಿದ್ದಾಗಲೂ ಪ್ರಕರಣ

ಶಿರಹಟ್ಟಿ ತಾಲ್ಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರಾಗಿದ್ದ ಅವಧಿಯಲ್ಲೂ ಚಂದ್ರು ಲಮಾಣಿ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿತ್ತು. ಇವರು ಬಿಜೆಪಿಯಿಂದ ಸ್ಪರ್ಧಿಸಿದಾಗ, ಅವರು ನೌಕರಿಗೆ ನೀಡಿದ್ದ ರಾಜೀನಾಮೆ ಇನ್ನೂ ಅಂಗೀಕಾರಗೊಂಡಿರಲಿಲ್ಲ. ಚಂದ್ರು ಲಮಾಣಿ ಬಿಜೆಪಿ ಅಭ್ಯರ್ಥಿ ಎಂದು ಘೋಷಣೆ ಆದ ನಂತರವೂ ಅವರಿಗೆ ಟಿಕೆಟ್ ಕೈ ತಪ್ಪುವ ಭೀತಿ ಎದುರಾಗಿತ್ತು.

ಆಗಿನ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು, 2023ರ ಏ. 17ರಂದು ಆರೋಗ್ಯ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಈ ಮಾಹಿತಿ ನೀಡಿದ್ದರು. 'ಚಂದ್ರು ಲಮಾಣಿ ಅವರು ತಮ್ಮ ಮೇಲಿನ ಆರೋಪಗಳಿಂದ ನುಣುಚಿಕೊಳ್ಳಲು 2021ರ ಜುಲೈ 31ರಂದು ವೈದ್ಯ ವೃತ್ತಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ರಾಜೀನಾಮೆ ಈವರೆಗೆ ಅಂಗೀಕಾರಗೊಂಡಿಲ್ಲ. ಸರ್ಕಾರಿ ನೌಕರರಾಗಿದ್ದರೂ ರಾಜಕೀಯ ಪ್ರಭಾವ ಬಳಸಿ, ಶಿರಹಟ್ಟಿ ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಿಸಿಕೊಂಡು ಸರ್ಕಾರಿ ನೌಕರರ ನಿಯಮಗಳ ಶಿಸ್ತು ಉಲ್ಲಂಘನೆ ಮಾಡಿದ್ದಾರೆ' ಎಂದು ಜಿಲ್ಲಾಧಿಕಾರಿ ಪತ್ರದಲ್ಲಿ ತಿಳಿಸಿದ್ದರು.

ಈ ಹಿಂದೆ ಬಲೆಗೆ ಬಿದ್ದಿದ್ದ ಶಾಸಕರು

ವೈ.ಸಂಪಂಗಿ (ಬಿಜೆಪಿ), ಕೆಜಿಎಫ್

ಬಿಜೆಪಿ ನೇತೃತ್ವದ ಸರ್ಕಾರದ ಮೊದಲ ಅವಧಿಯಲ್ಲಿ ಕೋಲಾರ ಜಿಲ್ಲೆ ಕೆಜಿಎಫ್ ಶಾಸಕ ವೈ. ಸಂಪಂಗಿ ಅವರು ವ್ಯಾಜ್ಯ ಪ್ರಕರಣವೊಂದರ ಇತ್ಯರ್ಥಕ್ಕೆ ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 2009ರ ಜನವರಿ 29 ರಂದು ಶಾಸಕರ ಭವನದ ತಮ್ಮ ಕಚೇರಿಯಲ್ಲಿ ಲಂಚ ಪಡೆಯುತ್ತಿದ್ದಾಗಲೇ ಸಂಪಂಗಿಯವರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದು, ಬಳಿಕ ಬಂಧಿಸಿದ್ದರು. ₹50 ಸಾವಿರ ನಗದು ಹಾಗೂ ₹4.5 ಲಕ್ಷ ಲಂಚಕ್ಕೆ ಕೈಯೊಡ್ಡಿದ್ದರು. ಕರ್ನಾಟಕದಲ್ಲಿ ಶಾಸಕರೊಬ್ಬರನ್ನುಲೋಕಾಯುಕ್ತ ಪೊಲೀಸರು ಬಲೆಗೆ ಕೆಡವಿದ ಮೊದಲ ಪ್ರಕರಣವೂ ಇದಾಗಿತ್ತು.

ಮಾಡಾಳ್ ವಿರೂಪಾಕ್ಷಪ್ಪ (ಬಿಜೆಪಿ), ಚನ್ನಗಿರಿ

ಬಿಜೆಪಿ ನೇತೃತ್ವದ ಸರ್ಕಾರದ ಎರಡನೇ ಅವಧಿಯಲ್ಲಿ, ದಾವಣಗೆರೆ ಜಿಲ್ಲೆ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರು ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ಅಧ್ಯಕ್ಷರಾಗಿದ್ದರು. ನಿಗಮದ ಟೆಂಡರ್‌ಗೆ ಸಂಬಂಧಿಸಿದಂತೆ ಶಾಸಕರ ಮಗ ಹಾಗೂ ಸರ್ಕಾರಿ ಅಧಿಕಾರಿಯೂ ಆಗಿದ್ದ ಪ್ರಶಾಂತ್ ಮಾಡಾಳ್, 2023ರ ಮಾರ್ಚ್ 2 ರಂದು ₹40 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು. ಅವರ ಖಾಸಗಿ ಕಚೇರಿಯಲ್ಲಿ ₹1.62 ಕೋಟಿ ನಗದು ಹಾಗೂ ಡಾಲರ್ಸ್ ಕಾಲೊನಿಯ ಮನೆಯಲ್ಲಿ ಸಂಗ್ರಹಿಸಲಾಗಿದ್ದ ₹6 ಕೋಟಿ ನಗದನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದರು. ವಿರೂಪಾಕ್ಷಪ್ಪ ಅವರನ್ನು ಇದೇ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪ್ರತಿಸುಂಕ ಶೇ15: ಟ್ರಂಪ್ ಇಂಗಿತ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಎಲ್ಲ ದೇಶಗಳ ಮೇಲೆ ಶೇ 15ರಷ್ಟು ಪ್ರತಿಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶನಿವಾರ ಘೋಷಿಸಿದ್ದಾರೆ.

ಈ ಕುರಿತು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರುತ್ ಸೋಷಿಯಲ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹೊಸ ಪ್ರತಿಸುಂಕ ಎಂದಿನಿಂದ ಜಾರಿಯಾಗಲಿದೆ ಎಂಬ ಬಗ್ಗೆ ಶ್ವೇತಭವನ ಪ್ರತಿಕ್ರಿಯೆ ನೀಡಿಲ್ಲ.

ಅಮೆರಿಕವು ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ವಿಧಿಸಿದ್ದ ಪ್ರತಿಸುಂಕವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿ ಆದೇಶಿಸಿತ್ತು. ಬಳಿಕ ಟ್ರಂಪ್ ಎಲ್ಲ ದೇಶಗಳ ಮೇಲೆ ಶೇ 10ರಷ್ಟು ಪ್ರತಿಸುಂಕ ವಿಧಿಸುವ ಕಾರ್ಯಕಾರಿ ಆದೇಶಕ್ಕೆ ಶುಕ್ರವಾರ ಸಹಿ ಹಾಕಿದ್ದರು. ಈ ಆದೇಶದಂತೆ ಮುಂದಿನ ಐದು ತಿಂಗಳ ವರೆಗೆ ಶೇ 10 ಪ್ರತಿಸುಂಕ ಅನ್ವಯವಾಗಲಿತ್ತು.

ಉಭಯ ದೇಶಗಳ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದದಿಂದಾಗಿ, ಭಾರತದ ಮೇಲಿನ ಪ್ರತಿಸುಂಕವು ಶೇ 18ರಿಂದ ಶೇ 10ಕ್ಕೆ ಇಳಿಕೆಯಾಗಲಿತ್ತು. ಈಗ, ಟ್ರಂಪ್ ಅವರ ಹೊಸ ಘೋಷಣೆಯಿಂದಾಗಿ ಪ್ರತಿಸುಂಕವು ಶೇ 15ರಷ್ಟಾಗಲಿದೆ.

▶8

> **ಭಾರತದ ಜತೆಗಿನ ವ್ಯಾಪಾರ ಒಪ್ಪಂದ ಆರಂಭಗೊಂಡಿದೆ. ನಾವು ಈ ಒಪ್ಪಂದವನ್ನು ವಿಭಿನ್ನ ರೀತಿಯಲ್ಲಿ ಮಾಡಿಕೊಳ್ಳಲಿದ್ದೇವೆ**
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

ಅಧ್ಯಕ್ಷರ ಅಧಿಕಾರ ಬಳಸಿ ಸರ್‌ಚಾರ್ಜ್

1974ರ ವ್ಯಾಪಾರ ಕಾಯ್ದೆಯ ಅಡಿ ಅಧ್ಯಕ್ಷರಿಗೆ ಕೆಲವು ಆಮದು ನಿರ್ಬಂಧಗಳನ್ನು ಹೇರುವ ಅಧಿಕಾರ ಇದೆ. ಇದರಡಿ ಸರ್‌ಚಾರ್ಜ್ ವಿಧಿಸಲಾಗಿದೆ ಎಂದು ಶ್ವೇತ ಭವನದ ಫ್ಯಾಕ್ಟ್‌ಶೀಟ್ ವರದಿ ಹೇಳಿದೆ. ಖನಿಜಗಳು, ಇಂಧನ, ನೈಸರ್ಗಿಕ ಸಂಪನ್ಮೂಲಗಳು, ರಸಗೊಬ್ಬರ ಸೇರಿ ಅಮೆರಿಕದ ಅಗತ್ಯತೆಗೆ ಅನುಗುಣವಾಗಿ ಕೆಲ ಸರಕುಗಳು ಸರ್‌ಚಾರ್ಜ್ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದಿದೆ.

ಏಳು ಮಂದಿ ವಿರುದ್ಧ ಪ್ರಕರಣ ದಾಖಲು; ಒಬ್ಬನ ಬಂಧನ

ದೇಗುಲದಿಂದ ದಲಿತ ದಂಪತಿ ಹೊರಕ್ಕೆ

ಪ್ರಜಾವಾಣಿ ವಾರ್ತೆ

ತುರುವೇಕೆರೆ (ತುಮಕೂರು): ತಾಲ್ಲೂಕಿನ ಗೋಣಿ ತುಮಕೂರು ಗ್ರಾಮದ ಆದಿಶಕ್ತಿ ಅರಸಮ್ಮ ದೇವಾಲಯ ಪ್ರವೇಶಿಸಿದ್ದ ಪರಿಶಿಷ್ಟ ಜಾತಿಗೆ ಸೇರಿದ ನವದಂಪತಿಯನ್ನು ಹೊರಗೆ ಕಳುಹಿಸಲಾಗಿದೆ.

ಕಳೆದ ವಾರ ಮದುವೆಯಾಗಿದ್ದ ಪುನೀತ್ ಹಾಗೂ ಪಂಕಜ ದಂಪತಿ ಗುರುವಾರ (ಫೆ. 19) ಅರಸಮ್ಮ ದೇಗುಲಕ್ಕೆ ಪೂಜೆ ಸಲ್ಲಿಸಲು ಹೋಗಿದ್ದರು. ದೇವಾಲಯದಲ್ಲಿದ್ದ ನಾರಾಯಣಪ್ಪ, ಪ್ರಭಾ, ಕಾಂತಣ್ಣ, ಅಮೂಲ್ಯ, ಪುಟ್ಟೇಗೌಡ, ಪದ್ಮಾ ಹಾಗೂ ಇತರರು ಆಕ್ಷೇಪ ಎತ್ತಿದ್ದಾರೆ. ದಂಪತಿಯನ್ನು ದೇಗುಲದಿಂದ ಹೊರಗೆ ಕಳುಹಿಸಿದ್ದಾರೆ ಎಂದು ತುರುವೇಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ.

'ನನ್ನ ತಂಗಿ, ಬಾವನ ಜತೆ ದೇವಸ್ಥಾನಕ್ಕೆ ಹೋಗಿದ್ದೆ. ಆಗ ದೇವಾಲಯದಲ್ಲಿ ಇದ್ದವರು ನಮ್ಮನ್ನು ತಡೆದರು. ನೀವು ಹಟ್ಟಿಯವರು, ಒಳಗಡೆ ಬಂದ ತಪ್ಪಿಗೆ ಪುಣ್ಯ ಮಾಡಿಸಬೇಕಾಗುತ್ತದೆ ಎಂದು ಅವಮಾನಿಸಿದರು. ಹೊರಗೆ ಹೋಗುವಂತೆ ಬಲವಂತ ಮಾಡಿದರು. ಪೂಜಾ ಸಾಮಗ್ರಿಯನ್ನು ಹಿಂದಿರುಗಿಸದೆ ದೇವಾಲಯದಿಂದ ಕಳುಹಿಸಿದರು' ಎಂದು ಗೋಣಿ ತುಮಕೂರಿನ ಜಗದೀಶ್ ದೂರಿನಲ್ಲಿ ತಿಳಿಸಿದ್ದಾರೆ.

'ಉದ್ದೇಶಪೂರ್ವಕವಾಗಿ ಜಾತಿ ಹೆಸರಿನಲ್ಲಿ ಅವಮಾನಿಸಿದ್ದಾರೆ. ಸಾರ್ವಜನಿಕವಾಗಿ ಅವಮಾನಿಸಿ, ಮಾನಸಿಕವಾಗಿ ತೊಂದರೆ ನೀಡಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಕೋರಿದ್ದಾರೆ. ದೂರು ಆಧರಿಸಿ ಪರಿಶಿಷ್ಟ ಜಾತಿ, ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಏಳು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಮುಖ್ಯ ಆರೋಪಿ ನಾರಾಯಣಪ್ಪ ಎಂಬುವರನ್ನು ಶುಕ್ರವಾರ ರಾತ್ರಿ ಪೊಲೀಸರು ಬಂಧಿಸಿದ್ದಾರೆ.

▶6

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಪೀಣ್ಯದ ಎಸ್‌ಆರ್‌ಎಸ್ 220/66/11ಕೆ.ವಿ ಉಪ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಫೆ.22ರಂದು (ಭಾನುವಾರ) ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎಚ್.ಎಂ.ಟಿ ರಸ್ತೆ, ಆರ್‌ಎನ್‌ಎಸ್ ಅಪಾರ್ಟ್‌ಮೆಂಟ್, ಸಿಎಂಟಿಐ, ಬೋರಲಿಂಗಪ್ಪ ಗಾರ್ಡನ್, ಪೀಣ್ಯ ಪೊಲೀಸ್ ಠಾಣೆ ರಸ್ತೆ, ಟೆಲಿಫೋನ್ ಎಕ್ಸ್‌ಚೇಂಜ್, ರಿಲಯನ್ಸ್ ಕಮ್ಯುನಿಕೇಷನ್, ಗಣಪತಿನಗರ ಮುಖ್ಯ ರಸ್ತೆ, ಚಾಮುಂಡಿಪುರ, ಮುನೇಶ್ವರ ದೇವಸ್ಥಾನ ರಸ್ತೆ, ಕೆಎಚ್‌ಬಿ ಲೇಔಟ್, ರಾಜೇಶ್ವರಿನಗರ, ಆಕಾಶ್ ಥಿಯೇಟರ್ ರಸ್ತೆ, ವಿಜ್ಞಾನ ಪಬ್ಲಿಕ್ ಸ್ಕೂಲ್ ರಸ್ತೆ, ಬ್ಯಾಂಕ್ ಕಾಲೊನಿ, ಯುಕೊ ಬ್ಯಾಂಕ್ ರಸ್ತೆ, ರಾಜಗೋಪಾಲ ನಗರ, ಕಸ್ತೂರಿ ಬಡಾವಣೆ, ಜಿಕೆಡಬ್ಲ್ಯು ಲೇಔಟ್, ಭೈರವೇಶ್ವರನಗರ, ಇಎಸ್‌ಐಸಿ ಆಸ್ಪತ್ರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

‘ಮಲದ ಗುಂಡಿಗೆ ಇಳಿಯುವುದು ನಿಲ್ಲಲಿ’

‘ಮನೆಯಂಗಳದಲ್ಲಿ ಮಾತುಕತೆ’ಯಲ್ಲಿ ದು. ಸರಸ್ವತಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಏಳೆಂಟು ವರ್ಷಗಳಲ್ಲಿ ಸ್ವಚ್ಛತೆಗಾಗಿ ಮಲದ ಗುಂಡಿಗೆ ಇಳಿದವರಲ್ಲಿ ನೂರಕ್ಕೂ ಅಧಿಕ ಕಾರ್ಮಿಕರು ಮೃತಪಟ್ಟಿದ್ದಾರೆ. ಸರ್ಕಾರ ಈ ಕಡೆಗೆ ಗಮನ ಹರಿಸಬೇಕು. ಮಲದ ಗುಂಡಿಗೆ ಇಳಿಯುವುದು ಕಟ್ಟುನಿಟ್ಟಾಗಿ ಕೊನೆಗೊಳ್ಳಬೇಕು’ ಎಂದು ಸಾಮಾಜಿಕ ಕಾರ್ಯಕರ್ತೆ, ರಂಗಭೂಮಿ ಕಲಾವಿದೆ ದು. ಸರಸ್ವತಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಆಯೋಜಿಸಿದ್ದ ‘ಮನೆಯಂಗಳದಲ್ಲಿ ಮಾತುಕತೆ’ಯ ಅತಿಥಿಯಾಗಿ ಮಾತನಾಡಿದರು.

‘ಮಲದ ಗುಂಡಿಗೆ ಇಳಿಯುವುದು ನಿಷೇಧ ಎಂದು ಕಡತದಲ್ಲಷ್ಟೇ ಇದೆ. ಆದರೆ ಈ ಕೆಲಸ ನಿಂತಿಲ್ಲ. ಮೃತಪಟ್ಟವರ ಅವಲಂಬಿತರ ಜೀವನಕ್ಕೆ ₹10 ಲಕ್ಷ, ₹12 ಲಕ್ಷ ನೀಡಲಾಗುತ್ತಿದೆ. ಸಫಾಯಿ ಕರ್ಮಚಾರಿಗಳ ಪರ ಹೋರಾಟಗಳನ್ನು ಹಮ್ಮಿಕೊಂಡೇ ಬಂದಿದ್ದೇವೆ’ ಎಂದು ಅವರು ವಿವರಿಸಿದರು.

‘ಮಹಿಳಾ ಪೌರಕಾರ್ಮಿಕರು ಅನುಭವಿಸುವ ಯಾತನೆ ಅಷ್ಟಿಷ್ಟಲ್ಲ. ಊರಿನ ಕಸವನ್ನು ಗುಡಿಸುವವರ ಬದುಕು ಶೋಚನೀಯವಾಗಿದೆ. ಅವರನ್ನು ಸರ್ಕಾರ ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳುವುದು ನಾಗರಿಕ ಸಮಾಜ ಒಪ್ಪುವಂಥದ್ದಲ್ಲ. ಎಲ್ಲರನ್ನು ಕಾಯಂ ನೌಕರರನ್ನಾಗಿ ನೇಮಕ ಮಾಡಿಕೊಂಡು ಗೌರವಯುತ ಜೀವನ ನಡೆಸಲು ಅವಕಾಶ ನೀಡಬೇಕು. ಇತ್ತೀಚೆಗೆ ಈ ವಿಚಾರದಲ್ಲಿ ಒಂದಷ್ಟು ಕೆಲಸಗಳಾಗಿರುವುದು ಖುಷಿಯ ವಿಚಾರ’ ಎಂದು ದು. ಸರಸ್ವತಿ ಅವರು ಹೇಳಿದರು.

ಹೋರಾಟ, ಸಾಹಿತ್ಯ, ರಂಗಭೂಮಿಯ ಅನುಭವಗಳನ್ನು ಹಂಚಿಕೊಂಡರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಲವಂತರಾವ್ ಪಾಟೀಲ, ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ, ಸಾಹಿತಿ ಸುನಂದಮ್ಮ ಭಾಗವಹಿಸಿದ್ದರು.

‘ಮನುಷ್ಯಳಾಗಿ ರೂಪುಗೊಂಡಿದ್ದೇನೆ’

ದಲಿತ ಮಹಿಳೆಯರು, ಸಫಾಯಿ ಕರ್ಮಚಾರಿಗಳು, ಮಹಿಳಾ ಪೌರಕಾರ್ಮಿಕರು, ಗಾರ್ಮೆಂಟ್ಸ್ ಹೆಣ್ಣುಮಕ್ಕಳು, ಸಾಧನಾ ಆರಾಧನಾ ಸಂಘದ ಮೂಲಕ ಲೈಂಗಿಕ ಕಾರ್ಯಕರ್ತೆಯರ ಪರ ಕೆಲಸ ಮಾಡಿದ್ದೇನೆ. ಅವರ ನೋವು– ನಲಿವುಗಳನ್ನು ನೋಡಿ ಕಲಿತದ್ದು ಸಾಕಷ್ಟಿದೆ. ಈ ಎಲ್ಲ ಬೋಧಿಸತ್ವಗಳ ಒಡನಾಟದಿಂದ ಮನುಷ್ಯಳಾಗಿ ರೂಪುಗೊಂಡಿದ್ದೇನೆ ಎಂದು ದು. ಸರಸ್ವತಿ ಅವರು ಹೇಳಿದರು.

ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ರೋಹಿಣಿ ಸಿಂಧೂರಿ

ಬೆಂಗಳೂರು: ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಹೂಡಿರುವ ಮಾನಹಾನಿ ಪ್ರಕರಣದ ಅಪರಾಧವನ್ನು ವಿಚಾರಣೆಗೆ ಪರಿಗಣಿಸಿರುವ ಆದೇಶ ಪ್ರಶ್ನಿಸಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ, ರೋಹಿಣಿ ಸಿಂಧೂರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ಪ್ರಕಟಿಸಿತು.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.

ಇ–ಮೇಲ್:ghkoratagere@gmail.com ದೂರವಾಣಿ ಸಂಖ್ಯೆ:08138–232146

ಸಂಖ್ಯೆ: ತಾಸಾಆಕೊ/ಸರಬ/ಟೆಂಡರ್/37/2025–26

ದಿನಾಂಕ : 16.02.206

ಟೆಂಡರ್ ಪ್ರಕಟಣೆ

ವಿಷಯ: 2025–26 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ ಇಲ್ಲಿಗೆ ನಿರ್ದೇಶನಾಲಯದ ಅನುಧಾನದಲ್ಲಿ ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು, ಲಿನನ್ ವಸ್ತುಗಳು, ಯಂತ್ರೋಪಕರಣಗಳು ಉಪಕರಣ ಸಾಮಗ್ರಿಗ ಮತ್ತು ಇತರೆ ಪರಿಕರ ಸಾಮಗ್ರಿಗಳನ್ನು ಖರೀದಿಸಲು ಇ-ಮುಖಾಂತರ ಟೆಂಡರ್ ಕರೆಯಲಾಗಿರುವ ಬಗ್ಗೆ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ ಇಲ್ಲಿಗೆ 2025–26ನೇ ಸಾಲಿಗೆ ನಿರ್ದೇಶನಾಲಯದ ಅನುದಾನ ಬಿಡುಗಡೆಯಾಗಿದ್ದು ಆಸ್ಪತ್ರೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು, ಲಿನನ್ ವಸ್ತುಗಳು, ಯಂತ್ರೋಪಕರಣಗಳು ಉಪಕರಣ ಸಾಮಗ್ರಿಗ ಮತ್ತು ಇತರೆ ಪರಿಕರ ಸಾಮಗ್ರಿಗಳನ್ನು ಪಡೆಯುವ ಸಂಬಂಧ ಇ-ಆಡಳಿತ ಇಲಾಖೆಯಲ್ಲಿ ನೊಂದಾಯಿಸಿರುವ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿ ಟೆಂಡರ್‌ಗಳನ್ನು ಆಹ್ವಾನಿಸಿದೆ, ಆಸಕ್ತಿಯುಳ್ಳವರು ಟೆಮಡರ್ ದಾಖಲಾತಿಗಳನ್ನು ದಿನಾಂಕ: 16/02/2026 ರಿಂದ 24/02/2026ರವರೆಗೆ ವಿವರಗಳನ್ನು (https://kppp.karnataka.gov.in) ನಲ್ಲಿ ಪಡೆದು ಡೌನ್‌ಲೋಡ್ ಮಾಡಬಹುದಾಗಿದೆ. ಹಾಗೂ ಟೆಂಡರ್‌ಗಳನ್ನು ಮೇಲ್ಕಾಣಿಸಿದ ವೆಬ್‌ಸೈಟ್‌ನಲ್ಲಿ ದಿನಾಂಕ: 24.02.2026 ರ ಮಧ್ಯಾಹ್ನ 4.30 ರವರಗೆ ಅನ್‌ಲೈನ್ ಮೂಲಕ ಸಲ್ಲಿಸಬಹುದು ಹೆಚ್ಚಿನ ಮಾಹಿತಿಯನ್ನು ಮುಖ್ಯ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (KPPP) ಟೆಂಡರ್ ವೇಳಾ ಪಟ್ಟಿ, ವಿವರ : 1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆಯ ದಿನಾಂಕ: **16/02/2026 ಬೆಳಿಗ್ಗೆ 10.00ಗಂಟೆ.** 2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **16/02/2026** ಬೆಳಿಗ್ಗೆ 11.00ಗಂಟೆಯಿಂದ. 3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **24/02/2026** ಸಂಜೆ 4.30ಗಂಟೆಯವರೆಗೂ. 4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ **26/02/2026** 10.30 **AM.** 5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅರ್ಥಿಕ ಟೆಂಡರ್ ತೆರೆಯುವ ದಿನಾಂಕ & ಸಮಯ: **27/02/2026 10.30AM.** ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕದಂದು ಪರಿಗಣಿಸಲಾಗುವುದು. ಹಾಗೂ ಟೆಕ್ನಿಕಲ್ ಟೆಂಡರ್ ಅನುಮೋದನೆಗೊಂದ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವದು..

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಕೊರಟಗೆರೆ, ತುಮಕೂರು ಜಿಲ್ಲೆ.

DIPR/TUM/453/KSMCA/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ಆ/ಉಕಾ–1/ಆ/ಸಿ.ಪಿ/1260/2025–26 ದಿನಾಂಕ: 21.02.2026

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಯನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂಬಂಧ ಪ್ರಕಟಣೆ ಸಂಖ್ಯೆ:ಬೆಂಅಪ್ರಾ/ಆ/ಉಕಾ–1/ಆ/ಸಿ.ವಿ/1260/2025–26 ದಿನಾಂಕ:20.02.2026 ರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು **15 ದಿನಗಳ ಒಳಗೆ** ಸಲ್ಲಿಸುವಂತೆ ತಿಳಿಸಿದ್ದು, ಸದರಿ ಪ್ರಕಟಣೆಗೆ ಆಕ್ಷೇಪಣೆಗಳು ಸ್ವೀಕೃತಗೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 28612/2025 ಬಾಕಿಯಿರುವುದರಿಂದ ತಾತ್ಕಾಲಿಕವಾಗಿ ಸದರಿ ಪ್ರಕಟಣೆಯನ್ನು ಹಿಂಪಡೆಯಲಾಗಿದೆಯೆಂದು ಈ ಮೂಲಕ ತಿಳಿಸಿದೆ.

ಸಹಿ/– ಕಾರ್ಯದರ್ಶಿ, ಬೆಂ.ಅ.ಪ್ರಾ. ಬೆಂಗಳೂರು.

ಕೇಂದ್ರೀಯ ವಿದ್ಯಾಲಯ, ರೈಲ್ವೆ ಕಾಲೋನಿ, ಯಶವಂತಪುರ, ಬೆಂಗಳೂರು–560022
KENDRIYA VIDYALAYA RAILWAY COLONY YESHWANTHAPUR, BANGALORE-560022
Phone No.: 080-23372277 Email: kvyeshwanthpur@gmail.com

WALK IN INTERVIEW- CONTRACTUAL TEACHERS 2026-2027

WALK IN INTERVIEW FOR THE FOLLOWING POSTS ON CONTRACTUAL BASIS FOR THE YEAR 2026-2027 ON 02.03.2026 AT 10.00 AM IN THE VIDYALAYA PREMISES ARE AS DETAILED BELOW:

Sl. No	POST	SUBJECT	DATE OF INTERVIEW	TIME OF INTERVIEW
1	Primary Teachers	Primary Teachers (PRT)s	02.03.2026	10.00 AM onwards
2	Trained Graduate Teachers	Hindi		
3	Other Posts	Computer Instructor/ Kannada Coach / Special Educator		
4	Sports Coach (Female)	Kho Kho		

➢ Candidates should report to the school on 02-03-2026 at 9.00 am with relevant original documents, one set of Xerox copies, One Passport Size Photo for each post separately.
➢ For eligibility criteria, please refer to https://yeshwanthpurrly.kvs.ac.in/ School notice Board.

Principal

ಬಿಎಂಟಿಸಿ: 2,500 ನಿರ್ವಾಹಕ ಹುದ್ದೆಗಳ ಭರ್ತಿ– ಸಚಿವ ರಾಮಲಿಂಗಾರೆಡ್ಡಿ

ಅನುಕಂಪ ಆಧಾರಿತ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾವಧಿಯಲ್ಲೇ ಮೃತಪಟ್ಟ ಬಿಎಂಟಿಸಿಯ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಆದೇಶವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಶನಿವಾರ ವಿತರಿಸಿದರು.

‘ಅನುಕಂಪದ ಆಧಾರದ ಮೇಲೆ ಉದ್ಯೋಗದ ನಿರೀಕ್ಷಣೆಯಲ್ಲಿದ್ದ ಮೃತರ ಅವಲಂಬಿತರ ಪೈಕಿ 334 ಮಂದಿ ವಿವಿಧ ಹುದ್ದೆಗಳಿಗೆ ನೇಮಕಗೊಂಡಿದ್ದಾರೆ. ಇಂದು 40 ಕಿರಿಯ ಸಹಾಯಕ ಹಾಗೂ 42 ಕರ್ನಾಟಕ ರಾಜ್ಯ ಸಾರಿಗೆ ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ನೀಡಲಾಗುತ್ತಿದೆ. ಒಟ್ಟು ಅನುಕಂಪ ಆಧಾರದ ಮೇಲೆ ನೇಮಕಗೊಂಡವರ ಸಂಖ್ಯೆ 416ಕ್ಕೆ ಏರಿಕೆಯಾಗಿದೆ’ ಎಂದು ಸಚಿವರು ತಿಳಿಸಿದರು.

ಸಂಸ್ಥೆಯ ಕಾರ್ಯನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲು 2,500 ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನಿಯಮಾನುಸಾರ ಭರ್ತಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ, ಉಪಾಧ್ಯಕ್ಷ ನಿಕೇತ್‌ರಾಜ್ ಎಂ., ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಶಿವಕುಮಾರ್, ನಿರ್ದೇಶಕರಾದ ಅಬ್ದುಲ್ ಅಹದ್, ಶಿಲ್ಪಾ ಎಂ., ಕೆನರಾ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಕೆ. ಕಲಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉಪ ಪ್ರಧಾನ ವ್ಯವಸ್ಥಾಪಕ ಅಲೋಕ್ ಕುಮಾರ್ ಚತುರ್ವೇದಿ ಉಪಸ್ಥಿತರಿದ್ದರು.

ಪ್ರಾಮಾಣಿಕ ಸಿಬ್ಬಂದಿಗೆ ಗೌರವ

ಪ್ರಯಾಣಿಕರೊಬ್ಬರು ಯುಪಿಐ ಆಧಾರಿತ ಆ್ಯಪ್ ಮೂಲಕ ₹ 6 ಪಾವತಿಸುವ ಬದಲು ₹ 62,316 ಪಾವತಿಸಿದ್ದರು. ಒಂದು ವಾರದ ಒಳಗೆ ಮರುಪಾವತಿಗೆ ಕ್ರಮ ಕೈಗೊಂಡಿದ್ದ ಘಟಕ ವ್ಯವಸ್ಥಾಪಕಿ ಚಂದ್ರಕಲಾ ಬಿ.ಆರ್. ಚಾಲಕ-ಕಂ-ನಿರ್ವಾಹಕ ಕೆ. ಪುಟ್ಟಸ್ವಾಮಿ ಅವರಿಗೆ ₹ 2,000 ನಗದು ಮತ್ತು ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ಮೌಲ್ಯಯುತ ರೋಬೋಟ್ ವ್ಯಾಕ್ಯೂಮ್ ಕ್ಲೀನರ್ ಹೊಂದಿದ್ದ ಬ್ಯಾಗ್ ಅನ್ನು ಮರೆತು ಹೋಗಿದ್ದ ಪ್ರಯಾಣಕರಿಗೆ ಬ್ಯಾಗ್ ಹಿಂತಿರುಗಿಸಿದ್ದ ನಿರ್ವಾಹಕ ಶ್ರೀಧರ್ ಎಸ್., ಚಾಲಕ ನಟರಾಜನ್ ಎಂ., ಸಹಾಯಕ ಸಂಚಾರ ನಿರೀಕ್ಷಕ ರಾಮಪ್ಪ ಜ್ಯೋತಿ ಅವರಿಗೂ ₹ 2,000 ನಗದು ಮತ್ತು ಪ್ರಶಂಸನಾ ಪತ್ರ ನೀಡಿ ಅಭಿನಂದಿಸಲಾಯಿತು.

₹ 10 ಲಕ್ಷ ಮೌಲ್ಯದ ಚಿನ್ನದ ಆಭರಣವಿದ್ದ ಬ್ಯಾಗ್ ಮರೆತ ಪ್ರಯಾಣಿಕ ಮಹಿಳೆಗೆ ಬ್ಯಾಗ್ ಹಿಂತಿರುಗಿಸಿದ ನಿರ್ವಾಹಕಿ ಗಂಗಾ ಪೂಜಾರಿ, ಚಾಲಕ ಗೋವರ್ಧನ್ ಅವರಿಗೆ ₹1,000 ಮತ್ತು ಪ್ರಶಂಸನಾ ಪತ್ರ ನೀಡಲಾಯಿತು.

‘ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ 2026–27ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ಒದಗಿಸಬೇಕು’ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಗ್ಯಾರಂಟಿ ಯೋಜನೆ ಸೇರಿ ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗಿದೆ. ಅನ್ಯಾಯ ಸರಿಪಡಿಸಲು ಹೆಚ್ಚು ಅನುದಾನ ನೀಡಬೇಕು’ ಎಂದರು.

‘ಡಾ.ಬಿ.ಆರ್. ಅಂಬೇಡ್ಕರ್ ನಿಗಮ, ಆದಿಜಾಂಬವ ನಿಗಮ, ಬಾಬು ಜಗಜೀವನ್ ರಾಮ್ ನಿಗಮ ಸೇರಿದಂತೆ ನಮ್ಮ ಸಮುದಾಯದ ಎಲ್ಲ ನಿಗಮಗಳಿಗೆ ತಲಾ ₹3 ಸಾವಿರ ಕೋಟಿ ಅನುದಾನ ನೀಡಬೇಕು. ನಾಗಮೋಹನದಾಸ್ ವರದಿಯಂತೆ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಪ್ರಮಾಣ ಹಂಚಿಕೆ ಮಾಡಿ, ಜಾರಿಗೊಳಿಸಬೇಕು’ ಎಂದರು.

ಮಾಧ್ವ ಸಭಾ ಭವನ ಉದ್ಘಾಟನೆ

ನೆಲಮಂಗಲ: ಪಟ್ಟಣದ ರಾಘವೇಂದ್ರ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ‘ಮಾಧ್ವ ಸಭಾ ಭವನ’ ಹಾಗೂ ಗೋಪುರವನ್ನು ಉಡುಪಿ ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಿದರು.

ಉದ್ಘಾಟನೆಗೂ ಮೊದಲು ಸ್ವಾಮೀಜಿಯವರನ್ನು ಪೂರ್ಣಕುಂಭ ಕಳಶಗಳೊಂದಿಗೆ ಪೇಟೆಬೀದಿ ಮೂಲಕ ಶೋಭಾಯಾತ್ರೆಯೊಂದಿಗೆ ಕರೆತರಲಾಯಿತು. ರಾಘವೇಂದ್ರ ಸ್ವಾಮಿಗಳಿಗೆ ಪೂಜೆ ಸಲ್ಲಿಸಿದ ಶ್ರೀಗಳು, ನೆರೆದಿದ್ದ ಭಕ್ತರಿಗೆ ಆಶೀರ್ವಚನ, ಫಲ–ಮಂತ್ರಾಕ್ಷತೆ ನೀಡಿದರು.

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರ ಶೋಭಾಯಾತ್ರೆ ನಡೆಯಿತು

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು

ಸ್ಥಾಪನೆ : 1969

ಪ್ರಧಾನ ಕಛೇರಿ : ನಂ 24, "ಸುವರ್ಣ ಭವನ", 1ನೇ ಮುಖ್ಯರಸ್ತೆ, ಹಕ್ಕರಸ್ತೆ, ಹಂಪಿನಗರ, ವಿಜಯನಗರ, ಬೆಂಗಳೂರು – 560 104. ದೂರವಾಣಿ ಸಂಖ್ಯೆ : 41159606, 23300497, 23359600. Email: jscbinfo@jscbl.bank.in, Website: www.jscbl.bank.in

ಹೃತ್ಪೂರ್ವಕ ಅಭಿನಂದನೆಗಳು

ಪ್ರಸ್ತುತ ಬ್ಯಾಂಕಿನ ಅಧ್ಯಕ್ಷರಾಗಿ ಮತ್ತು ಕಳೆದ 20 ವರ್ಷಗಳಿಗಿಂತ ಹೆಚ್ಚು ಕಾಲ ಸುದೀರ್ಘವಾಗಿ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ವಿವಿಧ ದರ್ಜೆಯ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ **ಶ್ರೀ ಹೆಚ್.ಸಿ. ಗೋಪಾಲ್** ರವರಿಗೆ ಈ ಪ್ರಶಸ್ತಿಗಳು ಸಂದಿರುವುದು ಹರ್ಷದಾಯಕವಾಗಿರುತ್ತದೆ. ಇವರಿಗೆ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರಿಂದ ಹೃತ್ಪೂರ್ವಕ ಅಭಿನಂದನೆಗಳು.

ನಾಡಿನ ಪ್ರತಿಷ್ಠಿತ ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣನ್ಯೂಸ್ ಸಂಸ್ಥೆ ವತಿಯಿಂದ ಸಹಕಾರ ಕ್ಷೇತ್ರದ ಮಹತ್ತರ ಕೊಡುಗೆಯನ್ನು ಗುರುತಿಸಿ ‘ಕರ್ನಾಟಕ ಸಹಕಾರ ಶಿರೋಮಣಿ-2025’ ಪ್ರಶಸ್ತಿಯನ್ನು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲ್ ರವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ರಾಜ್ಯ ಸರ್ಕಾರ ಪರಿಗಣಿಸಿ ನೀಡುವ ‘ಸಹಕಾರ ರತ್ನ’ ಪ್ರಶಸ್ತಿಯನ್ನು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲ್ ರವರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಪ್ರದಾನ ಮಾಡಿ ಸನ್ಮಾನಿಸಿದರು. ಶಾಸಕರಾದ ಶ್ರೀ ಎಸ್.ಟಿ. ಸೋಮಶೇಖರ್ ಮತ್ತು ಶ್ರೀ ಜಿ.ಟಿ. ದೇವೇಗೌಡ ಉಪಸ್ಥಿತರಿದ್ದರು.

ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ರಾಜ್ಯದ ಅತ್ಯುತ್ತಮ ಸಹಕಾರಿ ಬ್ಯಾಂಕುಗಳಿಗೆ ನೀಡಲ್ಪಡುವ 2024-25ನೇ ಸಾಲಿನ "ಅತ್ಯುತ್ತಮ ನಿರ್ವಹಣಾ ಸಹಕಾರ ಬ್ಯಾಂಕ್" ಪ್ರಶಸ್ತಿಯನ್ನು "ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್"ಗೆ ನೀಡಲಾಯಿತು. ಬ್ಯಾಂಕಿನ ಪರವಾಗಿ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲ್ ರವರನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್ ರವರು, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಶ್ವಥನಾರಾಯಣ್ ರವರು ಮತ್ತು ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವೆಂಕಟೇಶ್ ರವರು ಗೌರವಿಸಿದರು.

ಆಡಳಿತ ಮಂಡಳಿ ನಿರ್ದೇಶಕರುಗಳು

ಶ್ರೀ ಹೆಚ್.ಸಿ. ಗೋಪಾಲ್
ಅಧ್ಯಕ್ಷರು

ಶ್ರೀ ಡಾ|| ವೆಂಕಟೇಶ ಮೂರ್ತಿ ಪಿ.ಎಲ್.
M.A. L.L.B. Ph.D.
ಉಪಾಧ್ಯಕ್ಷರು

ಶ್ರೀ ಪಿ. ಮರಿಯಪ್ಪ
ನಿರ್ದೇಶಕರು

ಶ್ರೀ ಸಿದ್ದಪ್ಪ ಜಿ.
BOM ಚೇರ್‌ಮನ್

ಶ್ರೀ ಜಯರಾಂ ಎಂ.
ನಿರ್ದೇಶಕರು

ಶ್ರೀ ವೀರಣ್ಣಗೌಡ ಎಂ.ಟಿ.
ನಿರ್ದೇಶಕರು

ಶ್ರೀ ರಾಜ್‌ಗೋಪಾಲ್ ಹೆಗ್ಡೆ
ವೃತ್ತಿಪರ ನಿರ್ದೇಶಕರು

ಡಾ|| ಉಮಾ ರಾಮು
ನಿರ್ದೇಶಕರು

ಶ್ರೀ ಚನ್ನಕೇಶವ ಡಿ.ಎಲ್.
ನಿರ್ದೇಶಕರು

ಶ್ರೀ ಕೆಂಪಯ್ಯ ಎಂ.
ನಿರ್ದೇಶಕರು

ಶ್ರೀ ಚಂದ್ರಮೌಳಿ ಎಸ್.
ನಿರ್ದೇಶಕರು

ಶ್ರೀಮತಿ ಚಂದ್ರಕಲಾ ಕೆ.
ನಿರ್ದೇಶಕರು

ಶ್ರೀಮತಿ ಆರತಿ ಹೆಚ್.ಆರ್.
ನಿರ್ದೇಶಕರು



ಶ್ರೀ ಕೃಷ್ಣಪ್ಪ ಸಿ.
ನಿರ್ದೇಶಕರು

ಶ್ರೀ ಪುಟ್ಟಸ್ವಾಮಿಗೌಡ ಬಿ.ಟಿ.
ನಿರ್ದೇಶಕರು

ಶ್ರೀ ಬಿ. ಶಿವರಾಂ
ವೃತ್ತಿಪರ ನಿರ್ದೇಶಕರು

ವ್ಯವಸ್ಥಾಪನ ಮಂಡಳಿ ಸದಸ್ಯರು

ಶ್ರೀ ಆನಂದ ರಾಮಯ್ಯ ರಮೇಶ್

ಶ್ರೀ ಶಿವಕುಮಾರ್ ಟಿ.ಎನ್.

ಶ್ರೀ ಜವರೇಗೌಡ ಬಿ.ಎಸ್.

ಶ್ರೀಮತಿ ಭಾಗ್ಯ ಎಸ್.
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಠೇವಣಾತಿಗಳ ಮೇಲಿನ ಶೇಕಡ ಬಡ್ಡಿ ದರ

ವಿವರಗಳು	ಸಾಮಾನ್ಯ	ಹಿರಿಯ ನಾಗರೀಕರಿಗೆ
31 ದಿನಗಳಿಂದ 90 ದಿನಗಳು	5.00	5.50
91 ದಿನಗಳಿಂದ 180 ದಿನಗಳು	5.50	6.00
181 ದಿನಗಳಿಂದ 365 ದಿನಗಳು	6.25	6.75
12 ತಿಂಗಳಿಂದ 18 ತಿಂಗಳವರೆಗೆ	8.00	8.50
19 ತಿಂಗಳಿಂದ 36 ತಿಂಗಳವರೆಗೆ	7.50	8.00
37 ತಿಂಗಳಿಂದ 60 ತಿಂಗಳವರೆಗೆ	7.25	7.75
ಜನತಾ ಸೇವಾ ಸಮೃದ್ಧಿ ಠೇವಣಿ 21 ತಿಂಗಳು	7.80	8.30

ಸಾಲಗಳ ಮೇಲಿನ ಕಡಿಮೆ ಬಡ್ಡಿದರಗಳು

ಸಾಲದ ವಿಧಗಳು	ಶೇಕಡ ಬಡ್ಡಿದರ*
ಸ್ಥಿರಾಸ್ತಿ ಸಾಲ [ಮನೆ ಖರೀದಿ ಮತ್ತು ನಿರ್ಮಾಣಕ್ಕಾಗಿ]	8.50 - 9.50
ಅಡಮಾನ ಸಾಲ	12.00
ವಿದ್ಯಾಭ್ಯಾಸ	9.25 - 9.50
ವಾಹನ ಸಾಲ	8.50 - 9.50
ಚಿನ್ನಾಭರಣ ಸಾಲ	8.00 - 9.00
ವ್ಯಾಪಾರಾಭಿವೃದ್ಧಿ ಸಾಲ	10.00 - 11.50
ಬಿ-ಖಾತಾ ಸ್ಥಿರಾಸ್ತಿ ಸಾಲ	10.00 - 12.50
OD (Over Draft) ಸೌಲಭ್ಯ	11.00 - 11.50
ಮದುವೆ ಸಾಲ	10.00
ಜಾಮೀನು ಸಾಲ	13.00

*ಷರತ್ತುಗಳು ಅನ್ವಯ

ಬ್ಯಾಂಕಿನ ಆರ್ಥಿಕ ಅಂಶಗಳು (ದಿನಾಂಕ: 15–02–2026ಕ್ಕೆ)
(ರೂ. ಕೋಟಿಗಳಲ್ಲಿ)

ಷೇರು ಬಂಡವಾಳ	ರೂ. 36.62
ನಿಧಿಗಳು ಮತ್ತು ಅವಕಾಶಗಳು	ರೂ. 223.95
ಹೂಡಿಕೆಗಳು	ರೂ. 712.53
ಠೇವಣಿಗಳು	ರೂ. 1447.06
ಸಾಲಗಳು ಮತ್ತು ಮುಂಗಡಗಳು	ರೂ. 935.58
ದುಡಿಯುವ ಬಂಡವಾಳ	ರೂ. 1755.08
ಒಟ್ಟು ಲಾಭ	ರೂ. 30.34
ನಿವ್ವಳ ಎನ್.ಪಿ.ಎ	ಶೇ.0.00
ಲಾಭಾಂಶ/ಡಿವಿಡೆಂಡ್ [ಕಳೆದ 5 ವರ್ಷಗಳಿಂದ]	ಶೇ.15.00

ಏಪ್ರಿಲ್ ಅಂತ್ಯಕ್ಕೆ ರಸ್ತೆ ಕಾಮಗಾರಿ ಪೂರ್ಣ

₹2,671 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ಪ್ರಗತಿಯಲ್ಲಿ : ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

₹5,065 ಕೋಟಿ ನಗರ ರಸ್ತೆ ಅಭಿವೃದ್ಧಿಗೆ ಈವರೆಗೆ ಮಾಡಿರುವ ವೆಚ್ಚ

10 ಲಕ್ಷ ಆಸ್ತಿ ಸ್ಕ್ಯಾನಿಂಗ್ ಪೂರ್ಣ, ಏಪ್ರಿಲ್ 3ನೇ ಭಾನುವಾರ ದಾಖಲೆ ವಿತರಣೆ

2 ತಿಂಗಳು ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ, ವಾಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸುಮಾರು ₹2,671 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಏಪ್ರಿಲ್ ಅಂತ್ಯಕ್ಕೆ ಎಲ್ಲ ರಸ್ತೆಗಳ ಕಾಮಗಾರಿ ಮುಗಿಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್

ಜಿಬಿಎ ಕಚೇರಿಯಲ್ಲಿ ಕಾಮಗಾರಿಗಳ ಪ್ರಗತಿ ಸಭೆಯನ್ನು ಶನಿವಾರ ನಡೆಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಎರಡು ಪ್ಯಾಕೇಜ್‌ಗಳಲ್ಲಿ ಹೊರ ವರ್ತುಲ ರಸ್ತೆಗೆ ₹420 ಕೋಟಿ, ವಾರ್ಡ್ ರಸ್ತೆಗಳಿಗೆ 82 ಪ್ಯಾಕೇಜ್‌ಗಳಲ್ಲಿ ₹1,000 ಕೋಟಿ, ಸರ್ಕಾರದ ಅನುದಾನದ 81 ಪ್ಯಾಕೇಜ್‌ಗಳಲ್ಲಿ ₹1,241 ಕೋಟಿ ಸೇರಿದಂತೆ ₹2,671 ಕೋಟಿ ರೂ. ಮೊತ್ತದ ರಸ್ತೆ ಅಭಿವೃದ್ಧಿ ಕೆಲಸ ಪ್ರಾರಂಭವಾಗಿದೆ. ಈ ಕಾಮಗಾರಿ ಕೆಲಸಗಳು ತ್ವರಿತವಾಗಿ ಮಾಡಬೇಕು, ಮಳೆ ಆರಂಭವಾಗುವ ಮುನ್ನ ಎಲ್ಲಾ ಕೆಲಸ ಮುಗಿಸಬೇಕು ಎಂದು ಸೂಚಿಸಿದ್ದೇನೆ’ ಎಂದರು.

‘ಮೂರು ತಿಂಗಳಲ್ಲಿ ₹2,671 ಕೋಟಿ ಅನುದಾನವನ್ನು ಸರ್ಕಾರದ ವತಿಯಿಂದ ನೀಡಲಾಗಿದ್ದು,ಶೇ 80ರಷ್ಟು ಟೆಂಡರ್ ಕರೆಯಲಾಗಿದೆ. ಕಳೆದ ವರ್ಷ 389 ಕಿ.ಮೀ.ರಸ್ತೆಗಳ ಬ್ಲಾಕ್ ಟಾಪಿಂಗ್‌ಗೆ ₹694 ಕೋಟಿ ಹಾಗೂ ವೈಟ್ ಟಾಪಿಂಗ್‌ಗೆ ₹1,700 ಕೋಟಿ ಸೇರಿ ₹2,394 ಕೋಟಿ ವಿಶ್ವಬ್ಯಾಂಕ್‌ನಿಂದ ಕೆನಾಲ್ ಲಿಂಕ್ ಲೈನಿಂಗ್ ಕೆಲಸಕ್ಕೆ ₹1,600 ಕೋಟಿ ಟೆಂಡರ್ ಕರೆದು ಕೆಲಸ ಆರಂಭವಾಗಿದೆ’ ಎಂದು ಮಾಹಿತಿ ನೀಡಿದರು.

‘ಸುಮಾರು 10 ಲಕ್ಷಕ್ಕೂ ಹೆಚ್ಚು ನಾಗರಿಕರ ಆಸ್ತಿಗಳನ್ನು ಸ್ಕ್ಯಾನ್ ಮಾಡಿಸಿದ್ದು, ಒಂದೇ ದಿನ ಈ ನಾಗರಕರಿಗೆ ಇ ಖಾತಾ ನೀಡಲಾಗುವುದು. ಏಪ್ರಿಲ್ ತಿಂಗಳ ಮೂರನೇ ಭಾನುವಾರದಂದು ಈ ಕಾರ್ಯಕ್ರಮ ಮಾಡಲು ದಿನಾಂಕ ನಿಗದಿ ಮಾಡಿದ್ದೇನೆ. ನಗರದಲ್ಲಿ ಬಿ ಯಿಂದ ಎ ಖಾತಾ ಪರಿವರ್ತನೆ ಆರಂಭವಾಗಿದೆ. ಅವರ ಆಸ್ತಿಗಳನ್ನು ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಖಾತಾ ಪರಿವರ್ತನೆ ಮಾಡಲಾಗುವುದು. ಎಲ್ಲಾ ಕಂದಾಯ ಜಾಗದಲ್ಲಿ ಮಾಡಲಾಗಿರುವ ಬಡಾವಣೆ ರಸ್ತೆಗಳನ್ನು ಪಾಲಿಕೆ ರಸ್ತೆಗಳನ್ನಾಗಿ ಮಾಡಿದ್ದೇವೆ’ ಎಂದರು.

‘ಬೀದಿ ವ್ಯಾಪಾರಿಗಳು, ನಾಗರಕರಿಗೆ ಸಹಾಯ ಮಾಡುವ ಕಲ್ಯಾಣ ಯೋಜನೆಗಳನ್ನು ಪ್ರತಿ ಪಾಲಿಕೆಯಲ್ಲಿ ಪ್ರತ್ಯೇಕ ಕಾರ್ಯಕ್ರಮ ಮಾಡಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗುವುದು. 30 ಸಾವಿರ ಬೀದಿ ವ್ಯಾಪಾರಿಗಳು ನೋಂದಣಿ ಮಾಡಿಸಿಕೊಂಡಿದ್ದು, ತಳ್ಳುಗಾಡಿ, ತ್ರಿಚಕ್ರ ಹಾಗೂ ನಾಲ್ಕು ಚಕ್ರ ವಾಹನ ನೀಡಲಾಗುವುದು. ಬೀದಿ ವ್ಯಾಪಾರಿಗಳು ಪಾದಚಾರಿ ಮಾರ್ಗದ ಬದಲು ವಾಹನಗಳಲ್ಲಿ ವ್ಯಾಪಾರ ಮಾಡುವಂತೆ ಮಾಡಲು ತೀರ್ಮಾನಿಸಿದ್ದೇವೆ. ಮುಂದಿನ ಎರಡು ತಿಂಗಳ ಒಳಗೆ ಈ ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಹಾಗೂ ವಾಹನ ವಿತರಣೆ ಮಾಡಲಾಗುವುದು’ ಎಂದು ಹೇಳಿದರು.

‘ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆ ಭೂ ಸಂತ್ರಸ್ತರಿಗೆ ಪರಿಹಾರ ರೂಪವಾಗಿ ಕೆಲವು ಕಡೆ ಜಿಬಿಎ ವತಿಯಿಂದ ಟಿಡಿಆರ್ ನೀಡಬೇಕಾಗಿದೆ. ಪಾಲಿಕೆ ವತಿಯಿಂದ ಒಂದು ಕೇಂದ್ರ ಆರಂಭಿಸಿ ಸಂತ್ರಸ್ತರು ಅರ್ಜಿ ಕೊಟ್ಟ ಬಳಿಕ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಎರಡು ಮೂರು ದಿನಗಳಲ್ಲಿ ಟಿಡಿಆರ್ ನೀಡಲು ತೀರ್ಮಾನಿಸಲಾಗಿದೆ. ಟಿಡಿಆರ್ ವಿನಿಮಯ ಬಗ್ಗೆ ಮುಂದಿನ ಎರಡು ವಾರದಲ್ಲಿ ಮಾಹಿತಿ ನೀಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಸಣ್ಣ ಪುಟ್ಟ ಮನೆಯವರು ಹೊರತಾಗಿ ಉಳಿದವರು ಅವರು ಪ್ರತಿ ತಿಂಗಳು ಬಾಡಿಗೆ ಪಡೆಯುತ್ತಿದ್ದಾರೆ. ಶೇ 80ರಷ್ಟು ಜನ ವಾಣಿಜ್ಯ ಆಸ್ತಿಗಳಿಂದ 7-8 ವರ್ಷಗಳಿಂದ ತೆರಿಗೆ ಪಾವತಿ ಮಾಡಿಲ್ಲ. ಕೆಲವು ಮಾಜಿ ಶಾಸಕರ ಆಸ್ತಿಗಳಿವೆ. ನಾನು ಅವರ ಹೆಸರು ಹೇಳುವುದಿಲ್ಲ. ಆಸ್ತಿ ತೆರಿಗೆ ಪಾವತಿ ಮಾಡದಿದ್ದರೆ, ನಾವು ಹೇಗೆ ನಡೆಬೇಕು. ಅವಕಾಶ ನೀಡಬೇಕು ಎಂದು ಒಟಿಎಸ್ ವ್ಯವಸ್ಥೆ ಕಲ್ಪಿಸಿದ್ದೆವು. ತೆರಿಗೆ ಸಂಗ್ರಹ ಬಗ್ಗೆ ನಾನು ಹಸ್ತಕ್ಷೇಪ ಮಾಡುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಒಟಿಎಸ್ ಯೋಜನೆಯಲ್ಲಿ 2.65 ಲಕ್ಷ ಜನರು ಪ್ರಯೋಜನ ಪಡೆದಿದ್ದಾರೆ. ಇದರಿಂದ ಪಾಲಿಕೆಗೆ ₹1,200 ಕೋಟಿ ಸಂಗ್ರಹವಾಗಿದೆ. ಇದು ಐತಿಹಾಸಿಕ ನಿರ್ಧಾರ’ ಎಂದರು.

ಮಂತ್ರಿ ಮಾಲ್ ನವರು 35 ಕೋಟಿ ಬಾಕಿ ಉಳಿಸಿಕೊಂಡಿದ್ದು, ಅವರಿಗೆ ಈ ರೀತಿ ಮಾಡುತ್ತಿಲ್ಲ ಬೇರೆಯವರಿಗೆ ಯಾಕೆ ಎಂದು ಕೇಳಿದಾಗ, ‘ಮಂತ್ರಿ ಮಾಲ್‌ಗೆ ಬೀಗಹಾಕಿಸಿ ₹8 ಕೋಟಿ ತೆರಿಗೆ ಪಾವತಿಸಿಕೊಳ್ಳಲಾಗಿದೆ. ಅವರಿಗೆ ನ್ಯಾಯಾಲಯ ಕಾಲಾವಕಾಶ ನೀಡಿದೆ. ₹20 ಕೋಟಿ ಬಾಕಿ ಇದೆ’ ಎಂದು ಹೇಳಿದರು.

ಲೋಗೊ, ಕಟ್ಟಡ ವಿನ್ಯಾಸ ಅಂತಿಮ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ನಗರ ಪಾಲಿಕೆಗಳ ಲೋಗೊವನ್ನು ಅಂತಿಮಗೊಳಿಸಲಾಗಿದೆ. ಜೊತೆಗೆ, ನಗರ ಪಾಲಿಕೆಗಳ ಕಟ್ಟಡ ಹೇಗಿರಬೇಕು ಎಂಬ ಮಾದರಿಯನ್ನೂ ತೀರ್ಮಾನಿಸಲಾಗಿದೆ. ದಕ್ಷಿಣ ನಗರ ಪಾಲಿಕೆಯ ಕಟ್ಟಡ ಬನಶಂಕರಿ ದೇವಸ್ಥಾನದ ಎದುರು ನಿರ್ಮಾಣವಾಗಲಿದೆ. ಈ ಮಾದರಿಯಲ್ಲೇ ಎಲ್ಲ ನಗರ ಪಾಲಿಕೆ ಕಟ್ಟಡಗಳ ವಿನ್ಯಾಸವಿರಲಿದೆ. ಜಿಬಿಎ ಮುಖ್ಯ ಆಯುಕ್ತರು ಮುಂದಿನ ದಿನಗಳಲ್ಲಿ ಲೋಗೊ ಮತ್ತು ವಿನ್ಯಾಸವನ್ನು ಸಾರ್ವಜನಿಕವಾಗಿ ಪ್ರಕಟಿಸಲಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಗುತ್ತಿಗೆದಾರರ ಬಿಲ್ ಸಮಸ್ಯೆ ಇಲ್ಲ’

‘ಪಾಲಿಕೆಗಳಲ್ಲಿ ಕ್ರಾಂತಿಕಾರಿ ತೀರ್ಮಾನ ಮಾಡಿ ಬಿಲ್ ವಿತರಣೆ ಮಾಡುತ್ತಿದ್ದೇವೆ. ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಬಿಲ್ ಸಮಸ್ಯೆ ಇಲ್ಲ. ಬೇರೆ ಕಡೆ ಕಾಮಗಾರಿಗಳ ಗುತ್ತಿಗೆದಾರರು ಈ ರೀತಿ ಕೇಳುತ್ತಿರಬಹುದು. ನಾವು ಸಮಸ್ಯೆ ಆದಷ್ಟು ಬಗೆಹರಿಸಿದ್ದೇವೆ. ಸುಮಾರು ಶೇ 90ರಷ್ಟು ಸಮಸ್ಯೆ ಬಗೆಹರಿಸಿದ್ದು, ತಾಂತ್ರಿಕ ಕಾರಣಗಳಿಂದಾಗಿ ಶೇ 10ರಷ್ಟು ಮಾತ್ರ ಬಾಕಿ ಉಳಿದಿವೆ. ಬೆಂಗಳೂರು ರಸ್ತೆ ಕಾಮಗಾರಿ ವಿಚಾರದಲ್ಲಿ ಯಾವ ಗುತ್ತಿಗೆದಾರರ ಬಿಲ್ ಬಾಕಿ ಇಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಇಕ್ಬಾಲ್ ಬಾಯಿಗೆ ಬೀಗ ಹಾಕಿಕೊಳ್ಳಲಿ’

‘ಇಕ್ಬಾಲ್ ಹುಸೇನ್ ಬಾಯಿಗೆ ಬೀಗ ಹಾಕಿಕೊಂಡರೆ ಒಳ್ಳೆಯದು. ನಾನು ಎಲ್ಲರಿಗೂ ಹೇಳಿದಂತೆ ಇಕ್ಬಾಲ್ ಹುಸೇನ್ ಅವರಿಗೂ ಹೇಳುತ್ತಿದ್ದೇನೆ. ನನಗೆ ಒಳ್ಳೆಯದು ಮಾಡಬೇಕು ಎಂದು ಅಂದುಕೊಂಡಿದ್ದರೆ ಬಾಯಿಗೆ ಬೀಗ ಹಾಕಿಕೊಳ್ಳಲಿ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. 26ರಂದು ನೀವು ದೆಹಲಿಗೆ ಹೋಗುತ್ತೀರಿ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅವರು ಸುಮ್ಮನಿದ್ದರೇ ನನಗೆ ಒಳ್ಳೆಯದು’ ಎಂದರು.

ಕಸ ವಿಲೇವಾರಿಗೆ ಭೂಮಿ ಖರೀದಿ

‘ಕಸ ವಿಲೇವಾರಿಗೆ ಬೆಂಗಳೂರಿನ 40 ಕಿ.ಮೀ ಒಳಗೆ ಗುಡ್ಡ ಪ್ರದೇಶದ ಅಕ್ಕಪಕ್ಕ 100 ಎಕರೆ ಭೂಮಿ ಸಿಕ್ಕರೆ, ಅದನ್ನು ಒಪ್ಪಿತ ಆಧಾರದ ಮೇಲೆ ಖರೀದಿ ಮಾಡಿ ಸ್ವಾಧೀನ ಪಡಿಸಿಕೊಳ್ಳಲು ಸಿದ್ಧವಿದ್ದೇವೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಿದ್ದೇವೆ. ಈ ಬಗ್ಗೆ ಭೂ ಮಾಲೀಕರು, ರೈತರು, ವ್ಯಾಪಾರಿಗಳು ಮುಂದೆ ಬಂದು ಜಮೀನು ನೀಡಬಹುದು ಇದಕ್ಕೆ ನಾವು ಪ್ರತ್ಯೇಕ ರಸ್ತೆ ಮಾಡಿಕೊಳ್ಳುತ್ತೇವೆ’ ಎಂದರು.

ರಾಜ್ಯ ಬಜೆಟ್‌ನಲ್ಲಿ ಬೆಂಗಳೂರಿಗೆ ಏನು ನಿರೀಕ್ಷೆ ಮಾಡಬಹುದು ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಈ ಬಗ್ಗೆ ನಮ್ಮ ಅಧಿಕಾರಿಗಳು ಪ್ರಸ್ತಾವ ನೀಡಿದ್ದಾರೆ. ಉಳಿದ ವಿಚಾರವನ್ನು ಮುಖ್ಯಮಂತ್ರಿಯವರ ಬಳಿ ಕೇಳಿ. ಸರ್ಕಾರದ ಬಳಿ ಇರುವ ಹಣದ ಮೇಲೆ ಅವರು ತೀರ್ಮಾನ ಮಾಡುತ್ತಾರೆ’ ಎಂದರು.

ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಬೆಂಗಳೂರು: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗ ಮತ್ತು ಸಂಯೋಜಿತ ಸಂಶೋಧನಾ ಕೇಂದ್ರಗಳಿಗೆ ಸಂಶೋಧನಾ ವಿದ್ಯಾರ್ಥಿಗಳಿಂದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸ್ನಾತಕೋತರ ಪದವೀಧರರು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆಯ ವಿವರ, ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಹೊಂದುವ ವಿವರ, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ, ವಿಷಯವಾರು ಖಾಲಿ ಸ್ಥಾನಗಳು, ಸಂಶೋಧನ ಕೇಂದ್ರಗಳ ವಿವರಗಳನ್ನು ಜಾಲತಾಣ https;//bcu.ac..in/onlineapp/ ನಲ್ಲಿ ಪ್ರಕಟಿಸಲಾಗಿದೆ.

ಮಾರ್ಚ್ 18ರವರೆಗೆ ದಂಡ ಇಲ್ಲದೇ ಶುಲ್ಕ, ಮಾ.25ರವರೆಗೆ ₹200 ದಂಡ ಸಹಿತ ಶುಲ್ಕ ಪಾವತಿಸಬಹುದು. ಪರೀಕ್ಷೆ ದಿನಾಂಕ www.bcu.ac.in ನಲ್ಲಿ ಪ್ರಕಟಿಸಲಾಗುವುದು. ಅರ್ಜಿಗಳನ್ನು ಕುಲಸಚಿವರ (ಮೌಲ್ಯಮಾಪನ) ಕಚೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು– 560001 ಇಲ್ಲಿಗೆ ತಲುಪಿಸಲು ಕೋರಲಾಗಿದೆ.



ಕರಗದ ಪ್ರತಿಮೆ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅಮಾನಿಕೆರೆಯ ಹಸಿ ಕರಗ ಮಂಟಪದ ಆವರಣದಲ್ಲಿ ವಹ್ನಿಕುಲ ಕ್ಷತ್ರಿಯ ಕುಲದ ಆರಾಧ್ಯ ದೇವತೆ ಆದಿಶಕ್ತಿ ದ್ರೌಪದಿ ಅಮ್ಮನವರ 25 ಅಡಿಗಳ ಎತ್ತರದ ಕರಗ ಪ್ರತಿಮೆಯನ್ನು ಲೋಕಾರ್ಪಣೆ ಮಾಡಲಾಯಿತು.

ವಿವಿಧ ಪೂಜಾ ಕೈಂಕರ್ಯಗಳು, ಹೋಮ–ಹವನಗಳು ನೆರವೇರಿದವು. ಮಹಿಳೆಯರು ಕಳಶಗಳನ್ನು ಹೊತ್ತು ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬಳಿಕ ದ್ರೌಪದಿ ಅಮ್ಮನವರ ಪ್ರತಿಮೆಯ ಸುತ್ತ ಪ್ರದಕ್ಷಿಣೆ ಹಾಕಿದರು. ನಂತರ, ನೂತನ ವಿಗ್ರಹಕ್ಕೆ ಕುಂಭಾಭಿಷೇಕ ನೆರವೇರಿಸಲಾಯಿತು.

ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪ್ರತಿಮೆಯನ್ನು ಅನಾವರಣಗೊಳಿಸಿದರು. ದ್ರೌಪದಿ ಆದಿಶಕ್ತಿ ಮಹಾಸಂಸ್ಥಾನ ಪೀಠದ ಬಾಲಯೋಗಿ ಸಾಯಿ ಮಂಜುನಾಥ ಮಹಾರಾಜ್ ಸ್ವಾಮೀಜಿ, ಆದಿಶಕ್ತಿ ಮಹಾಸಂಸ್ಥಾನ ಮಠದ ಪ್ರಣವಾನಂದ ಪುರಿ ಸ್ವಾಮೀಜಿ, ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯ) ಸಂಘದ ರಾಜ್ಯ ಘಟಕದ ಅಧ್ಯಕ್ಷ ಮು.ಕೃಷ್ಣಮೂರ್ತಿ, ಕರ್ನಾಟಕ ರಾಜ್ಯ ತಿಗಳ ಮಹಾಸಭಾ ಅಧ್ಯಕ್ಷ ಎಚ್.ಸುಬ್ಬಣ್ಣ, ಕೆ.ಎಸ್.ಟಿ.ಐ.ಡಿ.ಸಿ. ಉಪಾಧ್ಯಕ್ಷ ಜಿ.ವಿ.ಬಾಲಾಜಿ, ಸಂಘದ ಮಾಜಿ ಅಧ್ಯಕ್ಷ ಸಿ.ಜಯರಾಜ್, ಖಜಾಂಚಿ ಹೂಡಿ ವಿಜಯಕುಮಾರ್, ನಿರ್ದೇಶಕ ನಾಗಾರ್ಜುನ ಉಪಸ್ಥಿತರಿದ್ದರು.

ರಸಸಂಜೆ ಕಾರ್ಯಕ್ರಮ, ದ್ರೌಪದಿ ಅಮ್ಮನವರ ಕರಗದ ನಾಟಕ, ಕಾಂತಾರ ಮತ್ತು ಗುಳಿಗ, ಭದ್ರಕಾಳಿ, ನವಶಕ್ತಿ ವೈಭವ, ಕಾಳಿ ಹಾಗೂ ಅಘೋರಿ ನೃತ್ಯಗಳ ಪ್ರದರ್ಶನಗಳು ಜನರ ಗಮನ ಸೆಳೆದವು.

ಆದಿಶಕ್ತಿ ದ್ರೌಪದಿ ಅಮ್ಮನವರ 25 ಅಡಿ ಎತ್ತರದ ಕರಗ ಪ್ರತಿಮೆ

ಸುಮಾರು 7,000 ಆಸ್ತಿಗಳಿಂದ ₹437 ಕೋಟಿ ಬಾಕಿ

ತೆರಿಗೆ ಬಾಕಿ: ಏಳು ಆಸ್ತಿ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದ ಸ್ವತ್ತುಗಳ ಹರಾಜು ಪ್ರಕ್ರಿಯೆಯನ್ನು ನಗರ ಪಾಲಿಕೆಗಳು ಆರಂಭಿಸಿದ್ದು, ಶನಿವಾರ ಒಟ್ಟು ಏಳು ಆಸ್ತಿಗಳನ್ನು ಹರಾಜು ಹಾಕಲಾಗಿದೆ.

ಉತ್ತರ ನಗರ ಪಾಲಿಕೆಯಲ್ಲಿ ಎರಡು ಹಾಗೂ ಪೂರ್ವ ನಗರ ಪಾಲಿಕೆಯಲ್ಲಿ ಐದು ಆಸ್ತಿಗಳನ್ನು ಹರಾಜು ಹಾಕಲಾಗಿದೆ. ಹರಾಜು ಮಾರಾಟ ಪ್ರಕ್ರಿಯೆ ನಿಯಮಿತವಾಗಿ ಮುಂದುವರಿಯಲಿದೆ. ಹರಾಜು ನೋಟಿಸ್ ಪಡೆದಿರುವ ಎಲ್ಲಾ ಬಾಕಿದಾರರು ತಮ್ಮ ಬಾಕಿ ತೆರಿಗೆಯನ್ನು ತಕ್ಷಣ ಪಾವತಿಸಿದರೆ ಹರಾಜು ನಿಲ್ಲಿಸಲಾಗುತ್ತದೆ ಎಂದು ಜಿಬಿಎ ಕಂದಾಯ ವಿಭಾಗ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದರು.

ಸುಮಾರು 7,000 ಆಸ್ತಿಗಳಿಂದ ₹437 ಕೋಟಿ ರೂಪಾಯಿಗಳಷ್ಟು ಆಸ್ತಿ ತೆರಿಗೆ ಬಾಕಿ ಉಳಿದಿದೆ. ಪಾವತಿಸದ ತೆರಿಗೆಗಾಗಿ ಬೇಡಿಕೆ ನೋಟಿಸ್‌ಗಳನ್ನು ಜಾರಿ ಮಾಡಲಾಗಿತ್ತು. ಆದರೂ ಪಾವತಿ ಮಾಡಿರುವುದಿಲ್ಲ. ಎಸ್‌ಎಂಎಸ್, ಐವಿಆರ್‌ಎಸ್ ಕರೆಗಳು ಹಾಗೂ ಸ್ಥಳೀಯ ಮಟ್ಟದಲ್ಲಿ ಫಾಲೋ ಅಪ್ ಮಾಡಿದರೂ ಪಾವತಿ ಆಗಲಿಲ್ಲ. ಆಸ್ತಿಗಳ ಜಪ್ತಿ ಆದೇಶಗಳನ್ನು ಹೊರಡಿಸಲಾಯಿತು. ಆದಾಗ್ಯೂ ಪಾವತಿಸಲಿಲ್ಲ. ಹೀಗಾಗಿ ಹರಾಜು ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಮುಖ್ಯಾಂಶಗಳು
- ಉತ್ತರ ನಗರ ಪಾಲಿಕೆಯಲ್ಲಿ ಎರಡು ಆಸ್ತಿ
- ಪೂರ್ವ ನಗರ ಪಾಲಿಕೆಯಲ್ಲಿ ಐದು ಆಸ್ತಿ

107 ಪ್ರಕ್ರಿಯೆ: ಬೆಂಗಳೂರು ಉತ್ತರ ನಗರ ಪಾಲಿಕೆಯ ವಲಯ-1 ಮತ್ತು 2ರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದ 107 ಆಸ್ತಿಗಳಿಂದ ಬಾಕಿ ಇರುವ ₹2.49 ಕೋಟಿ ಗಳನ್ನು ವಸೂಲಿ ಮಾಡಲು ಶನಿವಾರ ಹರಾಜು ಪ್ರಕ್ರಿಯೆ ನಡೆಯಿತು.

ಈ ಹರಾಜು ಪ್ರಕ್ರಿಯೆಯಲ್ಲಿ ಸುಮಾರು 10ಕ್ಕಿಂತ ಹೆಚ್ಚು ಬಿಡ್‌ದಾರರು ಭಾಗವಹಿಸಿದ್ದರು. ಎರಡು ಆಸ್ತಿಗಳನ್ನು ಹರಾಜುದಾರರು ಖರೀದಿಸಿದರು.

ಮೆ. ಸ್ಟ್ಯಾಂಡರ್ಡ್ ಬ್ರಿಕ್ ಆ್ಯಂಡ್ ಟೈಲ್ ಸುಸ್ತಿದಾರರಿಗೆ ಸೇರಿದ ಸ್ವತ್ತಿನ ಸಂಖ್ಯೆ 1024/709/181/898/755/2/ಡಿ -0901, 9ನೇ ಮಹಡಿ ಆರ್.ಎಂ.ಜೆಡ್. ವಸತಿ ಸಮುಚ್ಚಯ, ಅಳ್ಳಾಳಸಂದ್ರ , ಬೆಂಗಳೂರು-64 ರ ಫ್ಲಾಟ್ ನಂ .ಡಿ.0901, SBA, 2087 ಚದರ ಅಡಿಗಳನ್ನು ₹84,60,000ಗೆ ಹಾಗೂ ವೈ.ಕೆ. ಲಿಂಗಪ್ಪ ಅವರಿಗೆ ಸೇರಿದ ದೇಶದಪೇಟೆ ರಸ್ತೆ, ಯಲಹಂಕ ಓಲ್ಡ್ ಟೌನ್ ನಲ್ಲಿರುವ 989 ಚದರ ಅಡಿಯಿರುವ ಸ್ವತ್ತಿನ ಸಂಖ್ಯೆ: 125/242ರಲ್ಲಿ ನಿರ್ಮಿಸಿರುವ 2,069 ಚದರ ಅಡಿ ವಸತಿ ಕಟ್ಟಡವನ್ನು ₹60,00,000ಗಳಿಗೆ ಬಿಡ್ ಅನ್ನು ಕಮಲ ಕೋಂ ರಾಮಂಜಿನೇಯಲು ಅವರು ಕೂಗಿದ್ದರು.

ಸುಸ್ತಿದಾರರು ಕ್ರಮವಾಗಿ ₹1,17,209 ಹಾಗೂ ₹1,53,377 ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದರು. ಹರಾಜು ಕೂಗಿದ ಎರಡು ಆಸ್ತಿಗಳಲ್ಲಿ ಬಿಡ್‌ದಾರರು ಮೆ. ಸ್ಟ್ಯಾಂಡರ್ಡ್ ಬ್ರಿಕ್ ಆ್ಯಂಡ್ ಟೈಲ್ ಸುಸ್ತಿದಾರರಿಗೆ ಸೇರಿದ ಸ್ವತ್ತಿಗೆ ಮಾತ್ರ ಡಿಡಿ ಖರೀದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮತ್ತೊಂದು ಸ್ವತ್ತಿಗೆ ಬಿಡ್‌ದಾರರು ಡಿಸಿ ನೀಡದ ಕಾರಣ, ಸ್ವತ್ತಿನ ಹರಾಜನ್ನು ರದ್ದುಪಡಿಸಿ, ಸದರಿ ಆಸ್ತಿಯನ್ನು ಪಾಲಿಕೆಯ ವಶದಲ್ಲಿರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಳ್ಳಂದೂರು ನಿಲ್ದಾಣ ನಾಮಕರಣ ಮೆಟ್ರೊ– ಪ್ರೆಸ್ಟೀಜ್ ನಡುವೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ವರ್ತುಲ ರಸ್ತೆ ಕಾರಿಡಾರ್‌ನಲ್ಲಿ ನಮ್ಮ ಮೆಟ್ರೊ ನೀಲಿ ಮಾರ್ಗದ ಬೆಳ್ಳಂದೂರು ಮೆಟ್ರೊ ನಿಲ್ದಾಣದ ನಾಮಕರಣ ಹಕ್ಕುಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಮತ್ತು ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯ ನಡುವೆ ಶನಿವಾರ ಒಪ್ಪಂದ ನಡೆದಿದೆ.

ಈ ಒಪ್ಪಂದದಂತೆ, ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾದ ದಿನದಿಂದ 30 ವರ್ಷ ‘ಪ್ರೆಸ್ಟೀಜ್ ಬೆಳ್ಳಂದೂರು ಮೆಟ್ರೊ ನಿಲ್ದಾಣ’ ಎಂದು ಹೆಸರು ಇರಲಿದೆ. ಒಪ್ಪಂದದ ಮೌಲ್ಯ ₹80 ಕೋಟಿ ಆಗಿದೆ.

ಮೆಟ್ರೊ ನಿಲ್ದಾಣದಿಂದ ಪ್ರೆಸ್ಟೀಜ್ ಆವರಣಕ್ಕೆ ಸಂಪರ್ಕಿಸುವ ವಿಶೇಷ ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಆಯ್ಕೆ ಮಾಡಿದಲ್ಲಿ ಹೆಚ್ಚುವರಿ ₹ 10 ಕೋಟಿ ಪಾವತಿಸಬೇಕಾಗುತ್ತದೆ. ಇದರಿಂದ ಒಟ್ಟು ಸಹಭಾಗಿತ್ವದ ಮೌಲ್ಯ ₹90 ಕೋಟಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣ ದರಯೇತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಮೆಟ್ರೊ ಜಾಲದ ಆರ್ಥಿಕ ಸ್ಥಿರತೆಯನ್ನು ಬಲಪಡಿಸುವ ಯೋಜನೆಯ ಭಾಗವಾಗಿ ಈ ಒಪ್ಪಂದ ಮಾಡಿಕೊಳ್ಳಲಾಗಿದೆ.

ಪ್ರಯಾಣಿಕರ ಸೌಕರ್ಯಗಳು ಮತ್ತು ಒಳಾಂಗಣ ಗುಣಮಟ್ಟವನ್ನು ಮೇಲ್ದರ್ಜೆ ಗೇರಲಿದೆ. ಬಿಎಂಆರ್‌ಸಿಎಲ್‌ನ ಸಮನ್ವಯದೊಂದಿಗೆ ನಿಲ್ದಾಣದ ನಿರ್ವಹಣೆಯ ಜವಾಬ್ದಾರಿಯನ್ನು ಪ್ರೆಸ್ಟೀಜ್ ಗ್ರೂಪ್ ವಹಿಸಿಕೊಳ್ಳಲಿದೆ.

ನಿಲ್ದಾಣದ ನಾಮಕರಣ ಹಕ್ಕು, ಗರಿಷ್ಠ 1,000 ಚದರ ಅಡಿ ಒಳಾಂಗಣ ಜಾಹೀರಾತು ಹಕ್ಕು ಹಾಗೂ ನಿಲ್ದಾಣದ ಆವರಣದಲ್ಲಿ 3,000 ಚದರ ಅಡಿ ವಾಣಿಜ್ಯ ಸ್ಥಳದ ಹಂಚಿಕೆ ಒಪ್ಪಂದದಲ್ಲಿ ಸೇರಿವೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ರೇಸ್

ಬಕಿಂಗ್‌ಹ್ಯಾಮ್ ಗೆಲ್ಲುವ ನಿರೀಕ್ಷೆ

ಪೂನಾವಾಲ ಬ್ರೀಡರ್ಸ್ ಮಲ್ಟಿ-ಮಿಲಿಯನ್ ಮೂರು ವರ್ಷದ ಕುದುರೆಗಳಿಗಾಗಿ ಮೀಸಲಾಗಿಟ್ಟಿರುವ ದೇಶದ ಶ್ರೀಮಂತ ರೇಸ್. ಭಾನುವಾರ ಮುಂಬೈನಲ್ಲಿ ನಡೆಯಲಿರುವ ಈ ಪ್ರಧಾನ ರೇಸ್‌ನಲ್ಲಿ ಬಕಿಂಗ್‌ಹ್ಯಾಮ್ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಜಫೆರಾನೊ 4, ಬ್ರೇಕ್ ಪಾಯಿಂಟ್ 5, ಕಿಂಗ್ಸ್ ಗ್ಯಾಂಬಿಟ್ 1
2ನೇ ರೇಸ್: ಕೆಸ್ಸಿನಿ 5, ಲಿಟ್ಲ್‌ಬ ಜಾನ್ 2, ಡಿಯೆಗೊ ಗಾರ್ಸಿಯಾ 1
3ನೇ ರೇಸ್: ವಾರ್‌ಲಾಕ್ 15, ಹರ್ ಚಾರ್ಚ್ 11, ಮಾರಿಯಸ್ 4
4ನೇ ರೇಸ್: ಪಿನ್ನಾಕಲ್ 10, ಬ್ರೇವಿಯೋನ್ 2, ಆರ್ಗನೈಸ್ಟ್ ಕೆಯೊಸ್ 3
5ನೇ ರೇಸ್: ಬಕಿಂಗ್‌ಹ್ಯಾಮ್ 1, ಎನ್ರಿಚ್ 2, ನೆಬೂಲ 8
6ನೇ ರೇಸ್: ವೇಫಥ 7, ಚಾಲೆಂಜ್ ಅಕ್ಸೆಪ್ಟೆಡ್ 1, ಮ್ಯಾನರ್ ಹೌಸ್ 6
7ನೇ ರೇಸ್: ಮಾರ್ಕೆಟ್ ಕಿಂಗ್ 2, ಸೋಷಿಯಲ್ ಬಟರ್‌ಫ್ಲೈ 5, ಐರಿಶ್ ಗೋಲ್ಡ್ 3
8ನೇ ರೇಸ್: ಮ್ಯಾಕಿಯಾವೆಲಿಯನ್ 1, ಮಿನಿಸ್ಟ್ರಿ ಆಫ್ ಟೈಮ್ 2, ಸಸೆಕ 4

ಉತ್ತಮ ಬೆಟ್: ಜಫೆರಾನೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7



ಚಿಟಿಕೆ ಸುದ್ದಿ

ಕಾರ್ಖಾನೆಯಲ್ಲಿ ಬೆಂಕಿ

ಬೆಂಕಿಯಿಂದಾಗಿ ಸ್ಥಳದಲ್ಲಿ ಹೊಗೆ ಆವರಿಸಿತ್ತು

ಬಿಡದಿ (ರಾಮನಗರ): ಇಲ್ಲಿನ ಕೈಗಾರಿಕಾ ಪ್ರದೇಶದ ತಾಳಗುಪ್ಪದಲ್ಲಿರುವ ಕ್ವಾಲಿಟಿ ಥರ್ಮೋಪ್ಯಾಕ್ ಅಂಡ್ ಇನ್ಸುಲೇಷನ್ ಇಂಡಸ್ಟ್ರೀಸ್‌ನಲ್ಲಿ ಶನಿವಾರ ಸಂಜೆ ಶಾರ್ಟ್ ಸರ್ಕೀಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡು, ಲಕ್ಷಾಂತರ ರೂಪಾಯಿ ಮೌಲ್ಯದ ಸಾಮಗ್ರಿಗಳು ಬೆಂಕಿಗೆ ಆಹುತಿಯಾದವು.

ಫ್ಯಾಕ್ಟರಿಯಲ್ಲಿ ಸಂಜೆ 6.15ಕ್ಕೆ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿಯು ಕೆಲವೇ ಕ್ಷಣಗಳಲ್ಲಿ ಇತರೆಡೆಗೂ ವ್ಯಾಪಿಸಿತು. ಕೂಡಲೇ ಭದ್ರತಾ ಸಿಬ್ಬಂದಿ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ವಿಷಯ ತಿಳಿಸಿದರು. ಸ್ಥಳಕ್ಕೆ ಮೂರು ವಾಹನಗಳೊಂದಿಗೆ ಬಂದ ಅಗ್ನಿಶಾಮಕ ತಂಡವು ಸತತ 3 ತಾಸು ಕಾರ್ಯಾಚರಣೆ ನಡೆಸಿ ಅಗ್ನಿ ನಂದಿಸಿತು.

‘ಬನ್ನೇರುಘಟ್ಟ’ಕ್ಕೆ ಬರಲಿದೆ ಚೀತಾ

ದಕ್ಷಿಣ ಆಫ್ರಿಕಾದಿಂದ ವಿನಿಮಯ, ಏಪ್ರಿಲ್‌ನಲ್ಲಿ ಪ್ರದರ್ಶನಕ್ಕೆ ಸಿದ್ಧತೆ



• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನವು(ಬಿಬಿಪಿ) ಮೊದಲ ಬಾರಿಗೆ ಆಫ್ರಿಕನ್ ಚೀತಾಗಳ ಪ್ರದರ್ಶನಕ್ಕೆ ಅಣಿಯಾಗುತ್ತಿದೆ. ಮಾರ್ಚ್ ಮೊದಲ ವಾರದಲ್ಲಿ ದಕ್ಷಿಣ ಆಫ್ರಿಕಾದಿಂದ ಚೀತಾಗಳು ಬೆಂಗಳೂರು ತಲುಪಲಿದ್ದು, ಏಪ್ರಿಲ್‌ನಲ್ಲಿ ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಲಿವೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ನಂತರ ಕರ್ನಾಟಕದಲ್ಲಿ ಚೀತಾಗಳನ್ನು ಪ್ರದರ್ಶಿಸಲಿ ರುವ ಎರಡನೇ ಮೃಗಾಲಯವಿದು. ಭಾರತದಲ್ಲಿ 13 ವರ್ಷದಿಂದ ಹೈದ್ರಾಬಾದ್‌ನ ನೆಹರೂ ಜ್ಯೂವಾಲಾಜಿಕಲ್ ಪಾರ್ಕ್‌ನಲ್ಲಿ ಚೀತಾಗಳು ವೀಕ್ಷಣೆಗೆ ಲಭ್ಯವಿವೆ. ಆರು ವರ್ಷದಿಂದ ಮೈಸೂರು ಮೃಗಾಲಯದಲ್ಲಿ ಮೂರು ಚೀತಾಗಳನ್ನು ಇರಿಸಲಾಗಿದೆ.

ಪ್ರಾಣಿ ವಿನಿಮಯ ಯೋಜನೆಯಡಿ ನಾಲ್ಕು ಆನೆಗಳನ್ನು ನೀಡಿ ನಾಲ್ಕು ಚೀತಾಗಳನ್ನು ಪಡೆಯಲು ಕಳೆದ ವರ್ಷವೇ ಒಪ್ಪಂದ ಆಗಿತ್ತು. ಆನೆಗಳನ್ನು ಬನ್ನೇರುಘಟ್ಟ ಉದ್ಯಾನದಿಂದ ರವಾನಿ ಸಲಾಗಿತ್ತು. ಈಗ ಚೀತಾಗಳು ಇಲ್ಲಿಗೆ ಬರುತ್ತಿವೆ. ಈ ತಿಂಗಳಲ್ಲಿಯೇ ಎಂಟು ಕೆಪುಚಿನ್ ಕೋತಿಗಳನ್ನೂ ದಕ್ಷಿಣ ಆಫ್ರಿಕಾದಿಂದ ಬನ್ನೇರುಘಟ್ಟಕ್ಕೆ ತರಲಾಗಿದೆ. ಕಳೆದ ವರ್ಷ ಹೆಣ್ಣು ಹುಲಿ, ಜಂಗಲ್ ಕ್ಯಾಟ್‌ಗಳನ್ನು ತರಿಸಲಾಗಿತ್ತು.

ಚೀತಾಗಳನ್ನು ಇರಿಸಲು ಪ್ರತ್ಯೇಕ ಜಾಗವನ್ನು ಅಣಿಗೊಳಿಸಲಾಗಿದೆ. ವೇಗವಾಗಿ ಓಡುವ ಈ ಪ್ರಾಣಿಗಳಿಗೆ ವಿಶಾಲ ಜಾಗವೇ ಬೇಕಾಗಿರುವುದರಿಂದ ಜನರ ವೀಕ್ಷಣೆಗೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ.

‘ನಮ್ಮಲ್ಲಿ ಚಿರತೆಗಳ ಸಫಾರಿ ಇದೆ. ಆದರೆ ಚೀತಾಗಳು ಪ್ರವಾಸಿಗರಿಗೆ ವಿಶೇಷ ಆಕರ್ಷಣೆಯಾಗಬಲ್ಲವು ಎನ್ನುವ ಕಾರಣದಿಂದ ಅವುಗಳನ್ನು ತರಲು ಪ್ರಯತ್ನಗಳು ನಡೆದಿದ್ದವು. ಈಗ ಪ್ರಕ್ರಿಯೆ ಪೂರ್ಣಗೊಂಡು ದಕ್ಷಿಣಾ ಆಫ್ರಿಕಾದ ಸಂರಕ್ಷಣಾ ಕೇಂದ್ರವೊಂದರಿಂದ ನಮ್ಮಲ್ಲಿಗೆ ತರಲು ಸಿದ್ಧತೆ ಮಾಡಿಕೊಂಡಿದ್ದೇವೆ. ಚೀತಾಗಳನ್ನು ಒಂದು ತಿಂಗಳು ಕ್ವಾರಂಟೈನ್‌ನಲ್ಲಿ ಇರಿಸಿ ನಂತರ ಸಾರ್ವಜನಿಕ ವೀಕ್ಷಣೆ ಆರಂಭಿಸುತ್ತೇವೆ’ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನವನದ ಕಾರ್ಯ ನಿರ್ವಾಹಕ ನಿರ್ದೇಶಕ ಎ.ವಿ. ಸೂರ್ಯಸೇನ್ ತಿಳಿಸಿದರು.

ಗಂಟೆಗೆ 110 ಕಿ.ಮೀಗೂ ಹೆಚ್ಚಿನ ವೇಗದ ಓಟಕ್ಕೆ ಚೀತಾ ಹೆಸರುವಾಸಿ. ಇವು ಭಾರತದ ಚಿರತೆಗಳಿಗಿಂತ ಭಿನ್ನ. ಭಾರತದಲ್ಲಿ ಚೀತಾ ಪುನರುಜ್ಜೀವಗೊಳಿಸುವ ಯೋಜನೆಯನ್ನು ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಸಚಿವಾಲಯ ಜಾರಿಗೊಳಿಸಿದೆ. ಈಗಾಗಲೇ ಮಧ್ಯಪ್ರದೇಶದಲ್ಲಿ ಯೋಜನೆಯೂ ಜಾರಿಯಾಗಿದೆ.

ಬನ್ನೇರಘಟ್ಟದಲ್ಲಿ ಸದ್ಯ 85 ಚಿರತೆಗಳಿವೆ. 20 ಹುಲಿ, 27 ಸಿಂಹಗಳಿವೆ. ಇದಲ್ಲದೇ ಒಂಬತ್ತು ಜೀಬ್ರಾ, ಎರಡು ಜಿರಾಫೆ, 29 ಆನೆಗಳ ಸಹಿತ 2,000 ವಿವಿಧ ಪ್ರಾಣಿಗಳಿವೆ. ಜೈವಿಕ ಉದ್ಯಾನಕ್ಕೆ ಪ್ರತಿ ವರ್ಷ 20 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

ಪ್ರಾಣಿ, ಪಕ್ಷಿಗೆ ನೀರು ಸಿಂಪರಣೆ

ಬೇಸಿಗೆ ವೇಳೆ ಪ್ರಾಣಿ, ಪಕ್ಷಿಗಳು ಬಸವಳಿಯದಂತೆ ನೋಡಿಕೊಳ್ಳಲು ಜೈವಿಕ ಉದ್ಯಾನದಲ್ಲಿ ತಣ್ಣನೆಯ ವಾತಾವರಣವನ್ನು ನಿರ್ಮಿಸಲಾಗುತ್ತಿದೆ.

ಜಿರಾಫೆ, ಜೀಬ್ರಾ ಸಹಿತ ಕೆಲವು ಪ್ರಾಣಿ, ಪಕ್ಷಿಗಳ ಮನೆ ಆವರಣದಲ್ಲಿ ನೀರು ಸಿಂಪರಣಾ ಯಂತ್ರಗಳನ್ನು ಅಳವಡಿಸಿದರೆ, ಆನೆಗಳಿಗೆ ನಿತ್ಯ ಸ್ನಾನ ವ್ಯವಸ್ಥೆ ಮಾಡಲಾಗುತ್ತದೆ. ಮಂಗಗಳಿಗೆ ಐಸ್ ಲಾಲಿ ಪಾಪ್‌ಗಳನ್ನು ನೀಡಲಾಗುತ್ತದೆ. ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಈ ವ್ಯವಸ್ಥೆ ಇರಲಿದೆ.

ಚಿಂಪಾಂಜಿಗೂ ಅನುಮತಿ

ಮೂರು ಚಿಂಪಾಂಜಿಗಳನ್ನು ಸಿಂಗಪುರ ಮೃಗಾಲಯದಿಂದ ಬನ್ನೇರುಘಟ್ಟಕ್ಕೆ ತರಲು ಅನುಮತಿ ದೊರೆತಿದ್ದು, ಪ್ರಕ್ರಿಯೆ ಶುರುವಾಗಿದೆ. ನಾಲ್ಕು ತಿಂಗಳ ಒಳಗೆ ಅವುಗಳು ಲಭ್ಯವಾಗುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಪ್ರಾಣಿ, ಪಕ್ಷಿ ಎಷ್ಟಿವೆ

	ಪ್ರಭೇಧ	ಒಟ್ಟು
ಸಸ್ತನಿಗಳು	34	1,619
ಪಕ್ಷಿಗಳು	40	1,000
ಸರಿಸೃಪಗಳು	21	206

ಸುದ್ದಿ 2 ನಿಮಿಷ

ಬಸ್ ನಿರ್ವಾಹಕ ಅಮಾನತು

ಬೆಂಗಳೂರು: ಮಹಿಳಾ ಪ್ರಯಾಣಿಕರೊಂದಿಗೆ ಜಗಳಕ್ಕಿಳಿದು ಅಸಭ್ಯ ಪದಗಳನ್ನು ಬಳಸಿದ್ದ ಬಿಎಂಟಿಸಿ ಬಸ್ ಚಾಲಕ ಕಂ ನಿರ್ವಾಹಕ ಕಾಂತರಾಜು ಅವರನ್ನು ಅಮಾನತು ಮಾಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಟಿಸಿ ಘಟಕ –37ರ ಬಸ್ ಅನ್ನು ಫೆ. 14ರಂದು ಕೊಳ್ಳೇಗಾಲ–ಬೆಂಗಳೂರು ಮಾರ್ಗದಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಪ್ರಯಾಣಿಕರಾದ ಗೌರಮ್ಮ ಅವರಿಗೆ ಏಕವಚನದಲ್ಲಿ ಬೈದಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರಗೊಂಡಿತ್ತು.

ಪ್ರಕರಣವನ್ನು ಪರಿಗಣಿಸಿ, ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲು ತೀರ್ಮಾನಿಸಲಾಗಿದೆ. ವಿಚಾರಣೆಯು ಇತ್ಯರ್ಥ ಆಗುವವರೆಗೆ ಅಮಾನತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪತ್ರಕರ್ತರಿಗೆ ನಿರ್ಬಂಧ ಖಂಡಿಸಿ ಜೆಡಿಎಸ್ ಪ್ರತಿಭಟನೆ

ಬೆಂಗಳೂರು: ವಿಧಾನಸೌಧದಲ್ಲಿ ವರದಿ ಮಾಡುವ ಪತ್ರಕರ್ತರಿಗೆ ಕೆಲವು ನಿರ್ಬಂಧ ವಿಧಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ, ಜೆಡಿಎಸ್ ನಗರ ಘಟಕದಿಂದ ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ಜೆಡಿಎಸ್ ಕಾರ್ಯಕರ್ತರು ಮೇಣದ ಬತ್ತಿ ಹಿಡಿದು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

‘ಸರ್ಕಾರದ್ದು ಸರ್ವಾಧಿಕಾರಿ ಧೋರಣೆ. ಕಾಂಗ್ರೆಸ್ ಇನ್ನೂ ತುರ್ತು ಪರಿಸ್ಥಿತಿಯ ಮನಃಸ್ಥಿತಿಯಿಂದ ಹೊರ ಬಂದಿಲ್ಲ’ ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯ ಮಾಧ್ಯಮ ನಾಲ್ಕನೇ ಅಂಗವಾಗಿದೆ. ಅದರ ಹೊಣೆಗಾರಿಕೆ ಮಹತ್ವದ್ದು. ಹೀಗಾಗಿ ಕೂಡಲೇ ಈ ನಿರ್ಬಂಧವನ್ನು ತೆಗೆದು ಹಾಕಬೇಕು ಎಂದು ಒತ್ತಾಯ ಮಾಡಿದರು.

ಮಾಜಿ ಶಾಸಕ ಕೆ.ಎನ್. ತಿಪ್ಪೇಸ್ವಾಮಿ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಹೊನ್ನಾರು ರಂಗೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಸಿದ್ದರಾಮಯ್ಯ ಅವರನ್ನು ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ರಂಗಭೂಮಿ ಶಿಕ್ಷಕರ ನೇಮಕಾತಿ ಪರಿಗಣನೆ: ಮುಖ್ಯಮಂತ್ರಿ

ಬೆಂಗಳೂರು: ರಂಗಭೂಮಿ ಶಿಕ್ಷಕರ ನೇಮಕಾತಿಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಟರಂಗ, ಬೆನಕ, ಸಮುದಾಯ, ಸ್ಪಂದನ, ಕಲಾಗಂಗೋತ್ರಿ ಹಾಗೂ ರಂಗಸಂಪದ ನಾಟಕ ತಂಡಗಳ ಸುವರ್ಣ ಮಹೋತ್ಸವದ ಅಂಗವಾಗಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹೊನ್ನಾರು ರಂಗೋತ್ಸವವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಉಮಾಶ್ರೀ, ಪ್ರಕಾಶ್ ರಾಜ್ ಸೇರಿದಂತೆ ಬಹುತೇಕ ರಂಗಭೂಮಿ ಕಲಾವಿದರು ಚಲನಚಿತ್ರ ಕ್ಷೇತ್ರದಲ್ಲಿ ಬೆಳೆದಿದ್ದಾರೆ. ರಂಗಭೂಮಿಯಲ್ಲಿ ಕೆಲಸ ಮಾಡಿದವರೇ ಸಿನಿಮಾರಂಗದಲ್ಲಿಯೂ ಹೆಸರು ಮಾಡಿದ್ದಾರೆ. ಹಿಂದಿನ ಸಿನಿಮಾಗಳಲ್ಲಿ ಉತ್ತಮ ಸಂದೇಶಗಳಿರುತ್ತಿದ್ದವು. ಈಗ ಉತ್ತಮ ಸಂದೇಶಗಳ ಸಿನಿಮಾಗಳು ಇಲ್ಲವಾಗಿವೆ’ ಎಂದರು.

ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಚಿತ್ರನಟರಾದ ‘ಮುಖ್ಯಮಂತ್ರಿ’ ಚಂದ್ರು, ಪ್ರಕಾಶ್ ರಾಜ್, ಕಲಾವಿದರಾದ ದತ್ತಣ್ಣ, ಗಿರಿಜಾ ಲೋಕೇಶ್, ನಿರ್ದೇಶಕ ಟಿ.ಎಸ್. ನಾಗಾಭರಣ, ಹೊನ್ನಾರು ರಂಗೋತ್ಸವ ಸಂಚಾಲಕರಾದ ಶ್ರೀನಿವಾಸ ಜಿ. ಕಪ್ಪಣ್ಣ ಉಪಸ್ಥಿತರಿದ್ದರು.

ಸಿದ್ಧಲಿಂಗಯ್ಯ ಅವರಿಗೆ ದಲಿತ ಕವಿ ಟ್ಯಾಗ್ ಸರಿಯಲ್ಲ: ಕೃಷ್ಣಮೂರ್ತಿ

‘ಹೊಸ ತಲೆಮಾರಿಗೂ ಆಶಯ ತಿಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ಧಲಿಂಗಯ್ಯ ಅವರ ಕಾವ್ಯ, ಬದುಕು, ಹೋರಾಟದ ದನಿಯನ್ನು ಪ್ರಸ್ತುತ ಸನ್ನಿವೇಶಕ್ಕೆ ಬಳಕೆ ಮಾಡಿಕೊಳ್ಳುವ ಜತೆಗೆ ಹೊಸ ತಲೆಮಾರಿಗೆ ಅವರ ಆಶಯವನ್ನು ತಿಳಿಸಿಕೊಡುವ ಕುರಿತು ಚಿಂತನೆ ನಡೆಸಬೇಕು’ ಎಂದು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಸಲಹೆ ನೀಡಿದರು.

ನಾಡೋಜ ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ ಸರ್ಕಾರಿ ಕಲಾ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಹೊಲೆಮಾದಿಗರ ಹಾಡು–50’, ‘ದಲಿತ ಕವಿ ಸಿದ್ಧಲಿಂಗಯ್ಯ–72’ ವಿಷಯ ಕುರಿತ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ಸಿದ್ಧಲಿಂಗಯ್ಯ ಅವರು ನವ್ಯದ ಪ್ರಖರತೆಯಲ್ಲಿ ಬರೆದರು. ಎಲ್ಲವನ್ನೂ ಎದುರಿಸುವ ಶಕ್ತಿಯೂ ಅವರಲ್ಲಿತ್ತು. ಹೊಲೆ ಮಾದಿಗರ ಹಾಡನ್ನು ಗಟ್ಟಿ ದನಿಯಲ್ಲಿ ಓದಿ ಎಂದು ಪುಸ್ತಕದಲ್ಲಿ ಬರೆದುಕೊಂಡಿದ್ದರು. ಅವರು ಎಲ್ಲ ಜಾತಿಯ ಶೋಷಿತರು, ಕಾಯಕ ಜೀವಿಗಳ ದನಿಯಾಗಿ ಬರೆದು ಜಾಗೃತಿ ಮೂಡಿಸಿದ್ದಾರೆ. ಅವರಿಗೆ ದಲಿತ ಕವಿ ಎನ್ನುವ ಟ್ಯಾಗ್ ನೀಡುವುದು ಸರಿಯಲ್ಲ’ ಎಂದರು.

ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ ಆಯೋಜಿಸಿದ್ದ ಹೊಲೆಮಾದಿಗರ ಹಾಡು–50 ಕಾರ್ಯಕ್ರಮದಲ್ಲಿ ಅಗ್ರಹಾರ ಕೃಷ್ಣಮೂರ್ತಿ, ಎಲ್. ಎನ್. ಮುಕುಂದರಾಜ್, ಶೂದ್ರ ಶ್ರೀನಿವಾಸ್, ಆರ್. ಜಿ. ಹಳ್ಳಿ ನಾಗರಾಜ್, ಶ್ರೀನಿವಾಸ ಕಪ್ಪಣ್ಣ ಮತ್ತು ಅಪ್ಪಗೆರೆ ತಿಮ್ಮರಾಜು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್‌ನ ಮಾಜಿ ಸದಸ್ಯ ಕೊಂಡಜ್ಜಿ ಮೋಹನ್ ಮಾತನಾಡಿ, ‘ಕಮ್ಯುನಿಸ್ಟ್ ಹೋರಾಟ, ಸಾಮಾಜಿಕ ಚಳವಳಿಗಳ ಭಾಗವೇ ಆಗಿದ್ದ ಸಿದ್ಧಲಿಂಗಯ್ಯ, ಬಳಿಕ ಬಿಜೆಪಿ ನಾಯಕರೊಂದಿಗೆ ಆತ್ಮೀಯತೆ ಬೆಳೆಸಿಕೊಂಡಿದ್ದರೂ ಕೊನೆವರೆಗೂ ಹೋರಾಟದ ಸಂಕೇತದಂತಿದ್ದರು’ ಎಂದು ತಿಳಿಸಿದರು.

ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಪಿಚ್ಚಳ್ಳಿ ಶ್ರೀನಿವಾಸ್ ಮಾತನಾಡಿ, ‘ತಮ್ಮ ಹಾಡುಗಳ ಮೂಲಕವೇ ಸಿದ್ದಲಿಂಗಯ್ಯ ಅವರು ದಲಿತರ ಹೋರಾಟಗಳಿಗೆ ಶಕ್ತಿ ತುಂಬಿದರು. ಸಿನಿಮಾಗಳಲ್ಲೂ ಹಾಡು ಬರೆದು ಪ್ರೀತಿಯನ್ನೂ ಹಂಚಿದರು’ ಎಂದು ಹೇಳಿದರು.

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮಾತನಾಡಿ, ‘ಜನತಾ ಪಕ್ಷದ ಹೋರಾಟಗಳಿಗೆ ಸಿದ್ಧಲಿಂಗಯ್ಯ ಅವರು ಗೀತೆಗಳನ್ನು ಬರೆಯುತ್ತಿದ್ದರು. ಇಂದಿರಾಗಾಂಧಿ ವಿರುದ್ಧವಾಗಿ ಬರೆದ ಹಾಡುಗಳು ಜನಪ್ರಿಯವಾಗಿದ್ದವು’ ಎಂದು ನೆನಪಿಸಿಕೊಂಡರು.

ಸಾಹಿತಿ ಶೂದ್ರ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್.ಮುಕುಂದರಾಜ್, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ.ರಮೇಶ್, ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಬಿ.ಸಿ. ನಾಗೇಂದ್ರಕುಮಾರ್, ಲೇಖಕ ಆರ್. ಜಿ.ಹಳ್ಳಿ ನಾಗರಾಜ್, ರಂಗ ಸಂಘಟಕ ಶ್ರೀನಿವಾಸ ಕಪ್ಪಣ್ಣ, ಗಾಯಕ ಅಪ್ಪಗೆರೆ ತಿಮ್ಮರಾಜು, ಕನ್ನಡ ಸಂಘದ ಸಂಚಾಲಕ ರುದ್ರೇಶ ಅದರಂಗಿ ಉಪಸ್ಥಿತರಿದ್ದರು.

ಚನ್ನಪಟ್ಟಣದಿಂದ ಎಚ್‌ಡಿಕೆ ಕಣಕ್ಕೆ

ರಾಮನಗರ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ 2028ರ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಮೂಲಕ ಮತ್ತೇ ರಾಜ್ಯ ರಾಜಕಾರಣಕ್ಕೆ ಮರಳಲಿದ್ದಾರೆ ಎಂದು ಜೆಡಿಎಸ್ ನೂತನ ಜಿಲ್ಲಾಧ್ಯಕ್ಷ ಎಚ್.ಸಿ. ಜಯಮುತ್ತು ಹೇಳಿದ್ದಾರೆ.

ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣಕ್ಕೆ ಮರಳುವಂತೆ ಪಕ್ಷದ ಕಾರ್ಯಕರ್ತರು, ಜನರು ಒತ್ತಡ ಹೇರುತ್ತಿದ್ದಾರೆ. ಅದಕ್ಕೆ ಅವರೂ ಒಪ್ಪಿದ್ದಾರೆ. ಅವರನ್ನು ಮತ್ತೆ ಚನ್ನಪಟ್ಟಣಕ್ಕೆ ಕರೆ ತಂದು ಗೆಲ್ಲಿಸಲು ತೀರ್ಮಾನಿಸಿದ್ದೇವೆ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಂಗ್ರೆಸ್ ಶಾಸಕ ಸಿ.ಪಿ. ಯೋಗೇಶ್ವರ್ ಮುಂಬರುವ ಚುನಾವಣೆಗೆ ವೇಳೆಗೆ ಬಿಜೆಪಿಗೆ ಮರಳಿ ಚನ್ನಪಟ್ಟಣದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲಿದ್ದಾರೆ ಎಂಬ ಸುದ್ದಿಯನ್ನು ಅವರು ತಳ್ಳಿ ಹಾಕಿದರು.

ಆದೇಶ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಪುಸ್ತಕಗಳ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದಂತೆ ಹೊರಡಿಸಲಾದ ಆದೇಶವನ್ನು ತಾತ್ಕಾಲಿಕವಾಗಿ ಹಿಂಪಡೆಯುವಂತೆ ಕರ್ನಾಟಕ ಪ್ರಕಾಶಕರ ಸಂಘ ಆಗ್ರಹಿಸಿದೆ.

ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷೆ ಡಾ.ವಸುಂಧರ ಭೂಪತಿ, ಪ್ರಧಾನ ಕಾರ್ಯದರ್ಶಿ ರವಿಕುಮಾರ, ‘ಫೆ. 18ರಂದು ಹೊರಡಿಸಿರುವ ಆದೇಶವು ಅವೈಜ್ಞಾನಿಕವಾಗಿದೆ ಮತ್ತು ಏಕಪಕ್ಷೀಯವಾಗಿದೆ ಎಂದು ಪ್ರಕಾಶಕರು ಮತ್ತು ಸಾಹಿತಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಿದ್ದಾರೆ.

‘ರಾಜ್ಯಮಟ್ಟದ ಆಯ್ಕೆ ಸಮಿತಿಯು ಆಯ್ಕೆ ಮಾಡುವ ಸಾಹಿತ್ಯ ಮತ್ತಿತರ ವಿಷಯಗಳ ಅನುಪಾತಗಳನ್ನು ಕಡಿಮೆ ಮಾಡಿ, ಸ್ಪರ್ಧಾತ್ಮಕ ಮತ್ತು ಇತರ ಪುಸ್ತಕಗಳಿಗೆ ಹೆಚ್ಚು ಮಾಡಿರುವುದು ಮತ್ತು ಅವುಗಳನ್ನು ಕರ್ನಾಟಕ ಪಾರದರ್ಶಕ ನಿಯಮಾವಳಿಗಳ ಪ್ರಕಾರ (ಟೆಂಡರ್) ಖರೀದಿ ಪ್ರಕ್ರಿಯೆಗೆ ಒಳಪಡಿಸುತ್ತಿರುವುದು ಅವೈಜ್ಞಾನಿಕವಾಗಿದೆ. ಬಾನು ಮುಷ್ತಾಕ್ ಮತ್ತು ಭೈರಪ್ಪ ನವರಂಥ ಲೇಖಕರ ಪುಸ್ತಕಗಳನ್ನು ಖರೀದಿಸುವ ಸಲುವಾಗಿ ಈ ಆದೇಶ ಮಾಡಿರುವುದಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರು ಹೇಳಿದ್ದಾರೆ. ಆದರೆ, ಈ ಲೇಖಕರ ಪುಸ್ತಕಗಳು ಗ್ರಂಥಾಲಯಕ್ಕೆ ಬರುತ್ತಿಲ್ಲ-ದಿರುವುದಕ್ಕೆ ಕಾಲ ಕಾಲಕ್ಕೆ ಪುಟವಾರು ಬೆಲೆ ಪರಿಷ್ಕರಣೆ ಮಾಡದಿರುವುದೇ ಕಾರಣ. ಹಾಗೆಯೇ 2019 ಮತ್ತು 2020ರಲ್ಲಿ ಇಲಾಖೆ ಖರೀದಿಸಿದ ಪುಸ್ತಕಗಳನ್ನು ಆಯಾ ಶಾಖಾ ಗ್ರಂಥಾಲಯಗಳಿಗೆ ಕಳಿಸದೆ ಗೋದಾಮಿನಲ್ಲಿ ಕೊಳೆಯುವಂತೆ ಮಾಡಿರುವುದು ಸಹ ಕಾರಣವಾಗಿದೆ’ ಎಂದು ತಿಳಿಸಿದ್ದಾರೆ.

ಪುಸ್ತಕಗಳ ಆಯ್ಕೆ

‘ಪುಸ್ತಕಗಳಿಗೆ ಯಾವುದೇ ರೀತಿಯ ತೆರಿಗೆ ವಿಧಿಸಬಾರದು ಮತ್ತು ಓದುಗಸ್ನೇಹಿ ನಿಯಮ ರೂಪಿಸಬೇಕೆಂದು ಯೂನೆಸ್ಕೋ ತಿಳಿಸಿದೆ. ಈಗ ಉಪ ನಿರ್ದೇಶಕರ ಮತ್ತು ಸ್ಥಳೀಯ ಸಂಸ್ಥೆಗಳ ವಿವೇಚನಾ ಕೋಟಾದಡಿ ಖರೀದಿಸುವ ಪುಸ್ತಕಗಳಿಗೆ ನಿಯಮಾವಳಿಗಳು ಇಲ್ಲ. ಏಕಾಏಕಿ ಅನುಪಾತ ಹೆಚ್ಚಿಸಿದರೆ ಇರುವ ವ್ಯವಸ್ಥೆಯನ್ನು ಸಂಕೀರ್ಣಗೊಳಿಸುವುದರ ಜತೆಗೆ ಅವ್ಯವಹಾರಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ’ ಎಂದು ಎಚ್ಚರಿಸಿದ್ದಾರೆ.

‘2022ರಲ್ಲಿ ಪುಸ್ತಕಗಳ ಪಟ್ಟಿಯೇ ಬಿಡುಗಡೆಯಾಗದೆ ಗ್ರಂಥಾಲಯ ಸೇರದಿರುವಾಗ 2026ರ ಹೊಸ ಪುಸ್ತಕಗಳು ಗ್ರಂಥಾಲಯಕ್ಕೆ ಸೇರುವುದು ಯಾವಾಗ?. ಪುಸ್ತಕ ಆಯ್ಕೆ ಮತ್ತು ಖರೀದಿ ನಿಯಮಗಳಲ್ಲಿ ಅನೇಕ ಲೋಪದೋಷಗಳಿವೆ. ಅವುಗಳನ್ನು ಚರ್ಚಿಸಿ ತೀರ್ಮಾನಿಸಲು ಕರ್ನಾಟಕ ಪ್ರಕಾಶಕರ ಸಂಘ, ನಿವೃತ್ತ ಅಧಿಕಾರಿಗಳು ಹಾಗೂ ಮುದ್ರಣಾಲಯದ ತಾಂತ್ರಿಕ ಪರಿಣತರ ಸಮಿತಿ ರಚಿಸಿ ಆ ಸಮಿತಿಯು ನೀಡುವ ಶಿಫಾರಸಿನಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸಂಘದ ಅಭ್ಯಂತರ ಇಲ್ಲ. ಈಗಿನ ಆದೇಶದಲ್ಲಿ ಒಂದು ವರ್ಷದ ಹಿಂದಿನ ಪುಸ್ತಕಗಳನ್ನು ತೆಗೆದುಕೊಳ್ಳಬಾರದು ಎಂದಿದೆ. 2022ರ ಪಟ್ಟಿ ಎಂದರೆ ನಾಲ್ಕು ವರ್ಷದ ಪುಸ್ತಕಗಳನ್ನು ಹಿಂದಿನ ಪುಸ್ತಕಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆ? ಈ ಎಲ್ಲ ಕಾರಣಗಳಿಂದ ಮತ್ತು ಅಗತ್ಯ ನಿಯಮಾವಳಿಗಳನ್ನು ರೂಪಿಸುವವರೆಗೆ ಮೇಲ್ಕಂಡ ಆದೇಶವನ್ನು ಅಮಾನತ್ತಿನಲ್ಲಿ ಇರಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಕಾಮಗಾರಿಗಳಿಗೆ ವೇಗ ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಮುನಿರಾಜು

ಪೀಣ್ಯ ದಾಸರಹಳ್ಳಿ: ‘ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ನಾಲ್ಕು ವಾರ್ಡ್‌ಗಳಲ್ಲಿ ನಿಧಾನಗತಿಯಲ್ಲಿರುವ ಕಾಮಗಾರಿಗಳಿಗೆ ಒಂದು ವಾರದಲ್ಲಿ ವೇಗ ನೀಡಬೇಕು’ ಎಂದು ಶಾಸಕ ಎಸ್. ಮುನಿರಾಜು ಅವರು ಉತ್ತರ ನಗರ ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಅವರೊಂದಿಗೆ ಇತ್ತೀಚೆಗೆ ನಡೆಸಿದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

‘ನಾಲ್ಕು ವಾರ್ಡ್‌ಗಳಲ್ಲಿ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಿವೆ. ಒಂದು ವಾರದೊಳಗೆ ಕಾನೂನು ಬದ್ಧ ಮತ್ತು ವ್ಯವಸ್ಥಿತವಾಗಿ ಎಲ್ಲಾ ಕಾಮಗಾರಿಗಳು ಚಾಲನೆ ಆಗಬೇಕು. ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ಅಧಿಕಾರಿಗಳಿಗೆ ಶಿಸ್ತಿನ ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದರು.

ಎಂಜಿನಿಯರ್, ಕಂದಾಯ, ಜಲ ಮಂಡಳಿ, ಆರೋಗ್ಯ ಇಲಾಖೆ, ತೋಟಗಾರಿಕೆ, ಕಲ್ಯಾಣ ಇಲಾಖೆ ಮುಂತಾದ ಇಲಾಖೆಗಳ ಅಧಿಕಾರಿಗಳು ಬೇಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದರೆ, ಆಯುಕ್ತರು ಶಿಸ್ತುಕ್ರಮ ಜರುಗಿಸಲಿದ್ದಾರೆ ಎಂದರು.

ಜಂಟಿ ಆಯುಕ್ತೆ ಪಲ್ಲವಿ ಕೆ.ಆರ್, ಮುಖ್ಯ ಎಂಜಿನಿಯರ್ ಯಮುನಾ, ಉಪ ಆಯುಕ್ತೆ ಮಂಗಳ ಗೌರಿ, ಅಧೀಕ್ಷಕ ಎಂಜಿನಿಯರ್ ಕೃಷ್ಣಕುಮಾರ್, ಜಲಮಂಡಳಿಯ ಕಾರ್ಯಕಾರಿ ಎಂಜಿನಿಯರ್ ಮಂಜುನಾಥ್, ಇನ್‌ಸ್ಪೆಕ್ಟರ್ ಹನುಮಂತರಾಜು ಉಪಸ್ಥಿತರಿದ್ದರು.

ಗ್ರಾಮದಿಂದ ಗ್ರಾಮಕ್ಕೆ ಕೆರೆಯ ಏರಿ ಮೇಲಿನ ರಸ್ತೆ ಸಂಪರ್ಕ, ಕೆರೆಗಳ ಸುರಕ್ಷತೆ, ಅಭಿವೃದ್ಧಿ ಮತ್ತು ಒತ್ತುವರಿ ಬಗ್ಗೆ ಶಿವಪುರ ಮತ್ತು ನೆಲಗದರನಹಳ್ಳಿ ಕೆರೆಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಎಸ್. ಮುನಿರಾಜು ಪರಿಶೀಲನೆ ನಡೆಸಿದರು. ‘ಯಾರಿಗೂ ತೊಂದರೆಯಾಗದಂತೆ ಸುರಕ್ಷಿತ ರಸ್ತೆ ಮತ್ತು ಕೆರೆ ಅಭಿವೃದ್ಧಿಪಡಿಸಲಾಗುತ್ತದೆ’ ಎಂದರು.

ಎಇಇ ವೆಂಕಟೇಶ್, ಎಇ ಪ್ರವೀಣ್, ಆರೋಗ್ಯ ಅಧಿಕಾರಿ ಮಮತಾ, ಬಿಜೆಪಿ ಮುಖಂಡರಾದ ಸಿ.ಎಂ. ನಾಗರಾಜು, ನಿಸರ್ಗ ಕೆಂಪರಾಜು, ಎಂ.ಕೆ. ಜಗದೀಶ್, ವೆಂಕಟೇಶ್ (ವೆಂಕಿ), ಕೌಸಲ್ಯ ಇದ್ದರು.

ಪ್ರಶಸ್ತಿ ಪ್ರದಾನ..

ಪ್ರಜಾವಾಣಿ ಚಿತ್ರ

ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನದಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಮೈಸೂರಿನ ಓ.ಎಲ್.ನಾಗಭೂಷಣ ಸ್ವಾಮಿ ಅವರಿಗೆ ಜಿಎಸ್‌ಎಸ್ ಪುರಸ್ಕಾರ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷೆ ಪ್ರೊ.ಕಿರಣ್ ದೇಸಾಯಿ, ಕಾರ್ಯದರ್ಶಿ ಕೆ.ಎಸ್.ಈಶ್ವರಪ್ಪ, ಪದಾಧಿಕಾರಿ ಚೆನ್ನಬಸಪ್ಪ ನ್ಯಾಮತಿ, ಕರ್ನಾಟಕ ಸಂಘದ ವಿನಯ್ ಶಿವಮೊಗ್ಗ, ಉಪನ್ಯಾಸಕಿ ಸಬಿತಾ ಬನ್ನಾಡಿ, ಗಾಯಕ ಕೆ.ಯುವರಾಜ್ ಹಾಗೂ ಶಿಕ್ಷಕ ಹಸನ್ ಬೆಳ್ಳಿಗನೂಡು ಉಪಸ್ಥಿತರಿದ್ದರು

ಹಣ ಡ್ರಾ ಮಾಡಿಕೊಡುವ ನೆಪದಲ್ಲಿ ವಂಚನೆ

ಚಿಂತಾಮಣಿ: ನಗರದ ಬೆಂಗಳೂರು ರಸ್ತೆಯಲ್ಲಿರುವ ಎಟಿಎಂನಲ್ಲಿ ಹಣ ಡ್ರಾ ಮಾಡಿಕೊಡುವ ನೆಪದಲ್ಲಿ ವ್ಯಕ್ತಿಯೊಬ್ಬರಿಗೆ ಅಪರಿಚಿತರು ₹33 ಸಾವಿರ ವಂಚನೆ ಮಾಡಿದ್ದಾರೆ ಎಂದು ನಗರ ಪೊಲೀಸ್ ಠಾಣೆಗೆ ಶನಿವಾರ ದೂರು ನೀಡಲಾಗಿದೆ.

ತಾಲ್ಲೂಕಿನ ಬ್ರಾಹ್ಮಣದಿನ್ನೆ ಗ್ರಾಮದ ಶ್ರೀನಿವಾಸ್ ಅವರು ಬೆಂಗಳೂರು ರಸ್ತೆಯ ಎಟಿಎಂ ಕೇಂದ್ರದಲ್ಲಿ ಹಣ ಡ್ರಾ ಮಾಡಲು ಹೋಗಿದ್ದಾಗ ಯಂತ್ರದಿಂದ ಹಣ ಪಡೆಯಲು ಸಾಧ್ಯವಾಗಲಿಲ್ಲ. ಇಬ್ಬರು ವ್ಯಕ್ತಿಗಳು ಹಣ ತೆಗೆದುಕೊಡುವುದಾಗಿ ಎಟಿಎಂ ಕಾರ್ಡ್ ತೆಗೆದುಕೊಂಡು ವಂಚಿಸಿದ್ದಾರೆ.

‘ಪರಂಪರೆ ಮಿಳಿತ ಸಾಹಿತ್ಯವೇ ಗಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಯೋಗದ ಮೂಲಕ ರೋಮಾಂಚನದೊಂದಿಗೆ ತಾತ್ಕಾಲಿಕ ಅನುಭವ ನೀಡಿ ಮರೆಯಾಗುವುದಕ್ಕಿಂತ ಪರಂಪರೆ ಗಟ್ಟಿ ಮಿಳಿತದ, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುವ ಸಾಹಿತ್ಯ ರಚಿಸಿ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಬರಗೂರು ರಾಮಚಂದ್ರಪ್ಪ

ಇತ್ತೀಚೆಗೆ ಇಲ್ಲಿ ಆಯೋಜಿಸಿದ್ದ, ಚಾಮರಾಜನಗರದ ಜೋಳಿಗೆ ಪ್ರಕಾಶನ ಹೊರ ತಂದಿರುವ ಹನೂರು ಚನ್ನಪ್ಪ ಅವರ ‘ಕಬ್ಬಿಣದ ಕುದುರೆಗಳು’ ಕಾದಂಬರಿಯ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪ್ರಯೋಗದಿಂದ ಹೊರ ಬಂದ ಕೃತಿಗಳು ತಾತ್ಕಾಲಿಕ ರೋಮಾಂಚನ ನೀಡಬಲ್ಲವು. ಆದರೆ, ಅವುಗಳು ಜನರ ನೆನಪಿನಲ್ಲಿ ಉಳಿಯುವುದಿಲ್ಲ. ಕನ್ನಡದಲ್ಲಿ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ಶಿವರಾಮ ಕಾರಂತರ ಮರಳಿ ಮಣ್ಣಿಗೆ, ರಾವ್ ಬಹದ್ದೂರ್ ಅವರ ಗ್ರಾಮಾಯಣ ಕಾದಂಬರಿಗಳು ಬದುಕಿನ ವಿವಿಧ ಸ್ಥಿತ್ಯಂತರಗಳನ್ನು ಕಟ್ಟಿಕೊಟ್ಟಿವೆ. ಈ ಕಾರಣದಿಂದಲೇ ಈಗಲೂ ಜನರ ನಡುವೆ ಸಾರ್ವತ್ರಿಕವಾಗಿ ಉಳಿದುಕೊಂಡಿವೆ’ ಎಂದರು.

‘ಕೆಲವು ಕಾದಂಬರಿಗಳು ವಸ್ತು ವಿಷಯದಲ್ಲಿ ಗಟ್ಟಿಯಾಗಿದ್ದರೂ ಜನಪ್ರಿಯವಾಗುವುದಿಲ್ಲ. ವಿಮರ್ಶೆಯ ಮಾನದಂಡದಿಂದಲೂ ಕೆಲವೊಮ್ಮೆ ಈ ರೀತಿ ಆಗಿರುವುದನ್ನು ಜಗತ್ತಿನ ಸಾಹಿತ್ಯದಲ್ಲಿ ಕಾಣುತ್ತೇವೆ. ಸಾಹಿತ್ಯ, ಸಾಮಾಜಿಕ ನೆಲೆಯನ್ನು ಬಿಟ್ಟು ರಾಜಕೀಯ ನೆಲೆಯಲ್ಲಿ ನೋಡಿದಾಗ ವಿಮರ್ಶೆ, ನೈಜ ಚರ್ಚೆ ಕ್ಷೀಣವಾಗುತ್ತದೆ’ ಎಂದರು.

‘ಚನ್ನಪ್ಪ ಅವರು ಚಾಮರಾಜನಗರ ಜಿಲ್ಲೆಯ ಕೆಳ ಸಮುದಾಯದ ದನಿಯನ್ನು ತಮ್ಮ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಶ್ರೇಣಿಕೃತ ವ್ಯವಸ್ಥೆಯ ಪಲ್ಲಟಗಳ ಚಿತ್ರಣದಿಂದ ಚಲನಶೀಲತೆಯನ್ನು ಉಳಿಸಿಕೊಂಡಿದ್ದು, ಅಧ್ಯಯನಾಸಕ್ತರಿಗೆ ಇದು ಪಠ್ಯವಾಗಬಲ್ಲದು’ ಎಂದು ಹೇಳಿದರು.

ಕರ್ನಾಟಕ ಗೃಹ ಮಂಡಳಿ ಆಯುಕ್ತ ಕೆ.ಎ.ದಯಾನಂದ ಕಾದಂಬರಿ ಜನಾರ್ಪಣೆಗೊಳಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಪ್ರಜಾವಾಣಿಯ ‘ಅಭಿಮತ’ದ ಸಂಪಾದಕ ರಘುನಾಥ ಚ.ಹ. ಕಾದಂಬರಿ ಕುರಿತು ಮಾತನಾಡಿದರು. ಲೇಖಕ ಹನೂರು ಚನ್ನಪ್ಪ, ಪ್ರಕಾಶಕ ಮಂಜು ಕೋಡಿಉಗನೆ ಉಪಸ್ಥಿತರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರ ಉತ್ಸವ ‘ಒಂದೆಡೆ ರಂಗೋತ್ಸವ’ ಆರಂಭ

ಮನ ಮಿಡಿದ ರಂಗ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಡು ಹೆಣ್ಣಾಗುವುದನ್ನು ಒಪ್ಪದ ಕುಟುಂಬ, ಸಮಾಜ, ನಡುವೆ ಅರಳುವ ಪ್ರೀತಿ- ಪ್ರೇಮಗಳ ಬಂಧನ, ಕಾಮ ಪಿಪಾಸುಗಳ ಕೆಂಗಣ್ಣು, ಮೈಮಾರುವ, ಭಿಕ್ಷೆ ಬೇಡುವ ಕೆಲಸಕ್ಕೆ ಇತಿಶ್ರೀ ಹಾಡಿ ವೈಚಾರಿಕ ಹೋರಾಟದಲ್ಲಿ ಕಟ್ಟಿಕೊಂಡ ಬದುಕು, ರಂಗದ ಮೇಲೆ ತೆರೆದುಕೊಳ್ಳುತ್ತಿದ್ದರೆ ನೋಡುಗರ ಕಣ್ಣಾಲಿ ತುಂಬಿಕೊಳ್ಳುತ್ತಿತ್ತು.

ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ (ಎನ್‌ಜಿಎಂಎ) ವೇದಿಕೆಯಲ್ಲಿ ಶನಿವಾರ ಆರಂಭಗೊಂಡ ಎರಡು ದಿನಗಳ ಲಿಂಗತ್ವ ಅಲ್ಪಸಂಖ್ಯಾತರ ಉತ್ಸವ ‘ಒಂದೆಡೆ ರಂಗೋತ್ಸವ’ದಲ್ಲಿ ‘ಅಕ್ಕೈ ಕರುಣೆಗೊಂದು ಸವಾಲು’ ರಂಗ ಪ್ರದರ್ಶನ ಭಾವುಕ ಕ್ಷಣಗಳನ್ನು ಸೃಷ್ಟಿಸಿತು.

ಬಾಡಿಗೆ ಮನೆಯಲ್ಲಿದ್ದವನೊಂ-ದಿಗೆ ಹುಟ್ಟುವ ಪ್ರೀತಿ, ಹೆಣ್ಣಿನಂತೆ ವರ್ತಿಸುವ ಮಗನನ್ನು ಮನೆಯಿಂದಲೇ ಹೊರ ಹಾಕುವ ಅಪ್ಪ, ಸೀರೆ ಉಡುವ ಸಂಭ್ರಮ, ಶೌಚಾಲಯದಲ್ಲಿ ಎರಗುವ ಕಾಮುಕರು, ಸಮುದಾಯದೊಂದಿಗೆ ಸೇರುವ ಕ್ಷಣಗಳು, ಸಮುದಾಯದ ತಾಯಿಯನ್ನು ಸ್ವೀಕರಿಸುವ ಕ್ಷಣಗಳು, ಲಾಲ್‌ಬಾಗ್‌ನಲ್ಲಿ ಮೈಮಾರುತ್ತಲೇ ಮೆರೆದ ದಿನಗಳು, ಮೌಢ್ಯಗಳನ್ನು ವಿರೋಧಿಸುತ್ತ ವೈಚಾರಿಕವಾಗಿ ಬೆಳೆದ ಪರಿ, ಸಂವಿಧಾನದ ದಾರಿಯಲ್ಲಿ ಕಂಡುಕೊಂಡ ಹೋರಾಟಗಳು ರಂಗದಲ್ಲಿ ಅನಾವರಣಗೊಂಡವು.

ರಂಗ ಪಯಣ ತಂಡದ ನಯನಾ ಸೂದ್ ಅವರು ಬೇಲೂರು ರಘುನಂದನ್ ನಿರ್ದೇಶನದಲ್ಲಿ ‘ಅಕ್ಕೈ’ಯನ್ನು ಕಟ್ಟಿಕೊಟ್ಟರು. ರಾಜಗುರು ಹೊಸಕೋಟೆ ತಂಡ ಹಿನ್ನೆಲೆಯಲ್ಲಿ ಸಹಕರಿಸಿತು.

ವೈಷ್ಣವಿ ನಾಟ್ಯಶಾಲಾ ತಂಡದ ಕಲಾವಿದರ ಭರತನಾಟ್ಯ, ಮಾಳವಿಕ, ಸುಮತಿ, ಅಬೇದ ಬೇಗಂ, ರಕ್ಷಿತಾ ಮಲ್ಲಿಕಾರ್ಜುನ, ದೀಪಾ ಬುದ್ದೆ, ನಿತ್ಯಾನಂದ, ಗೌತಮಿ ಗೌಡ ಅವರ ಕವನ ವಾಚನ, ಸಾಧನಾ ಮಹಿಳಾ ತಂಡದವರು ಪ್ರದರ್ಶಿಸಿದ ‘ಹಸಿವು ಕನಸು’, ಚಂದ್ರಿಕಾ ಅವರ ‘ಕರಗಾಟ’ಗಳು ಕಾರ್ಯಕ್ರಮಕ್ಕೆ ಮೆರುಗು ನೀಡಿದವು.

‘ಮನಸ್ಥಿತಿ ಬದಲಾಗಲಿ’

ಇಂಥ ಕಾರ್ಯಕ್ರಮಗಳು ಬೆಂಗಳೂರಿಗೆ ಸೀಮಿತವಾಗದೇ ರಾಜ್ಯದ ವಿವಿಧೆಡೆ ಮಾತ್ರವಲ್ಲ, ದೇಶದ ಅನೇಕ ಕಡೆಗಳಲ್ಲಿ ನಡೆಯಬೇಕು. ಲಿಂಗತ್ವ ಅಲ್ಪಸಂಖ್ಯಾತರ ಬಗೆಗೆ ಸಮಾಜದಲ್ಲಿ ಇರುವ ಮನಸ್ಥಿತಿ ಬದಲಾಗಬೇಕು. ಎಲ್ಲರಿಗೂ ನೆಮ್ಮದಿಯ ಬದುಕು ಕಟ್ಟಿಕೊಡಲು ಸಾಧ್ಯವಿಲ್ಲದಷ್ಟು ದುಃಸ್ಥಿತಿ ನಮ್ಮ ದೇಶದಲ್ಲಿ ಇಲ್ಲ. ಆದರೆ, ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿ ಇಲ್ಲ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ ಅತಿಥಿಗಳು ಅಭಿಪ್ರಾಯಪಟ್ಟರು.

ಲಿಂಗತ್ವ ಅಲ್ಪಸಂಖ್ಯಾತರ ಸಮಾನ ಅವಕಾಶಗಳ ಸಮಿತಿ ಅಧ್ಯಕ್ಷೆ ನ್ಯಾಯಮೂರ್ತಿ ಆಶಾ ಮೆನನ್, ಎನ್‌ಜಿಎಂಎ ನಿರ್ದೇಶಕಿ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಕರ್ನಾಟಕ ವಸತಿ ಮಂಡಳಿ ಆಯುಕ್ತ ಕೆ.ಎ. ದಯಾನಂದ, ಭಾರತೀಯ ಸಾಮಾಜಿಕ ಸಂಸ್ಥೆ ನಿರ್ದೇಶಕ ಸೆಲ್ವರಾಜ್ ಅರುಳ್‌ನಾಥನ್, ಸಂಸ್ಥಾನ ಮಠದ ಗುರೂಜಿ ಗೀತಮ್ಮ ನಾಯಕ, ರಂಗ ಕಲಾವಿದ ಮಂಡ್ಯ ರಮೇಶ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ‘ಒಂದೆಡೆ’ ಸಂಸ್ಥಾಪಕಿ ಅಕ್ಕೈ ಪದ್ಮಸಾಲಿ ಉಪಸ್ಥಿತರಿದ್ದರು.



‘ಒಂದೆಡೆ ರಂಗೋತ್ಸವ’ದಲ್ಲಿ ಅಕ್ಕೈ ಪದ್ಮಶಾಲಿ ಅವರನ್ನು ಗೌರವಿಸಲಾಯಿತು

ನಯನ ಸೂದ್ ಅವರು ‘ಅಕ್ಕೈ ಕರುಣೆಗೊಂದು ಸವಾಲು’ ರಂಗಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ

ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನ ಪ್ರಶಸ್ತಿ

ಪ್ರಮೋದ್ ಮರವಂತೆ

ಸಿದ್ದು ಸತ್ಯಣ್ಣವರ

ಶೋಭಾ ನಾಯಕ

ವಸು ವತ್ಸಲೆ

ಬಾಗಲಕೋಟೆ: ಜಿಲ್ಲೆಯ ಯಂಡಿಗೇರಿಯ ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನವು ನೀಡಲಿರುವ ಸಾಹಿತ್ಯ ಪ್ರಶಸ್ತಿಗೆ ಪ್ರಮೋದ್ ಮರವಂತೆ ಅವರ ‘ತೊಂಡೆ ಚಪ್ಪರ’ ಕಾದಂಬರಿ, ಸಿದ್ದು ಸತ್ಯಣ್ಣವರ ಅವರ ‘ಒಂದು ತೇಗದ ಕುರ್ಚಿ’ ಕಥಾ ಸಂಕಲನ, ಶೋಭಾ ನಾಯಕ ಅವರ ‘ಅರ್ಧ ಮುಖಗಳ ಶಹರು’ ಕವನ ಸಂಕಲನ ಆಯ್ಕೆಯಾಗಿವೆ.

‘ಪ್ರಶಸ್ತಿ ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದ್ದು, ಮಾ.8ರಂದು ಬಾಗಲಕೋಟೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಸುಶ್ರಾವ್ಯ ಶೆಲ್ಲಿಕೇರಿ ಶಿಶು ಸಾಹಿತ್ಯ ಪ್ರಶಸ್ತಿಗೆ ವಸು ವತ್ಸಲೆ ಅವರ ‘ಮಹಿ’ ಕಾದಂಬರಿ ಹಾಗೂ ಗುಂಡೂರಾವ್ ದೇಸಾಯಿ ಅವರ ‘ಚಾರ್ಲಿ..ಚಾರ್ಲಿ.. ವೇರ್ ಆರ್ ಯೂ’ (ಕತೆಗಳು) ಆಯ್ಕೆಯಾಗಿದ್ದು, ತಲಾ ₹5 ಸಾವಿರ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

ಖಾಲಿ ನಿವೇಶನಗಳ ದಂಡ ಪರಿಷ್ಕರಣೆ

ಬಿಡಿಎ: ನಿವೇಶನ ವಿಸ್ತೀರ್ಣದ ಅನುಸಾರ ಶೇ 2.5ರಿಂದ ಶೇ 10ರವರೆಗೆ ದಂಡ

• ಕೆ.ಎಸ್.ಸುನಿಲ್

> ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ, ಖಾಲಿ ನಿವೇಶನಗಳ ದಂಡದ ಪ್ರಮಾಣವನ್ನು ಪರಿಷ್ಕರಣೆ ಮಾಡಿ, ಶುಲ್ಕವನ್ನು ಇಳಿಕೆ ಮಾಡಲಾಗಿದೆ.
> **ಪಿ.ಮಣಿವಣ್ಣನ್**, ಬಿಡಿಎ ಆಯುಕ್ತ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಗುತ್ತಿಗೆ ಮತ್ತು ಒಪ್ಪಂದ ಪ್ರಕಾರ ಐದು ವರ್ಷಗಳ ನಂತರವೂ ಮನೆ, ಕಟ್ಟಡ ನಿರ್ಮಿಸದ ಮಾಲೀಕರಿಗೆ ವಿಧಿಸುತ್ತಿದ್ದ ದಂಡವನ್ನು ಪರಿಷ್ಕರಣೆ ಮಾಡಲಾಗಿದೆ. ದಂಡದ ಪ್ರಮಾಣ ಇಳಿಕೆ ಮಾಡಿರುವುದರಿಂದ ಸಾವಿರಾರು ನಿವೇಶನಗಳ ಫಲಾನುಭವಿಗಳಿಗೆ ಅನುಕೂಲವಾಗಿದೆ.

ನಿವೇಶನದ ಮಾಲೀಕರಿಗೆ ವಿಧಿಸುತ್ತಿದ್ದ ಶೇಕಡ 10ರಷ್ಟು (ಮಾರ್ಗಸೂಚಿ ದರಕ್ಕೆ ಅನುಗುಣವಾಗಿ) ದಂಡವನ್ನು ಪರಿಷ್ಕರಿಸಿ, ಶೇಕಡ 2.5 ರಿಂದ ಶೇಕಡ 10ರವರೆಗೆ ನಾಲ್ಕು ವಿಭಾಗಗಳಲ್ಲಿ ದರ ನಿಗದಿ ಮಾಡಲಾಗಿದೆ. ಪರಿಷ್ಕೃತ ದರ 2024ರ ಸೆಪ್ಟೆಂಬರ್ 23ರಿಂದಲೇ ಅನ್ವಯವಾಗುತ್ತದೆ.

2024ರ ಅಧಿಸೂಚನೆಯಂತೆ ಮಾರ್ಗಸೂಚಿ ದರದ ಶೇಕಡ 10ರಷ್ಟನ್ನು ಖಾಲಿ ನಿವೇಶನಕ್ಕೆ ದಂಡವನ್ನಾಗಿ ವಿಧಿಸಲಾಗುತ್ತಿತ್ತು. ಆದರೆ, ಫಲಾನುಭವಿಗಳು ದಂಡ ಮರುಪರಿಷ್ಕರಣೆಗೆ ಒತ್ತಾಯಿಸಿದ್ದರು. ಹಾಗಾಗಿ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಪರಿಷ್ಕರಣೆ ಮಾಡಲಾಗಿದೆ.

ದಂಡವು ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಅರ್ಕಾವತಿ ಬಡಾವಣೆಗಳಿಗೆ ಅನ್ವಯವಾಗುವುದಿಲ್ಲ.

ಪ್ರಾಧಿಕಾರದಿಂದ ನೋಂದಾಯಿಸಲಾದ ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರದ ಪ್ರಕಾರ ನಿಗದಿತ ಅವಧಿಯೊಳಗೆ ಕಟ್ಟಡ ನಿರ್ಮಿಸದೇ ನಂತರದ ಅವಧಿಯಲ್ಲಿ ಕಟ್ಟಡ ನಿರ್ಮಿಸಿರುವ ಪ್ರಕರಣಗಳಲ್ಲಿ ಕಟ್ಟಡ ನಿರ್ಮಾಣವಾದ ದಿನಾಂಕದವರೆಗೂ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರಕ್ಕೆ ಪರಿಷ್ಕೃತ ದರ ಅನ್ವಯವಾಗಲಿದೆ. ನಿವೇಶನದ ಅಳತೆ ಅನುಗುಣವಾಗಿ ದಂಡ ನಿಗದಿ ಪಡಿಸಲಾಗಿದೆ.

ಒಂದು ವೇಳೆ ಸದರಿ ಮಾರ್ಗಸೂಚಿ ದರ ಲಭ್ಯವಿಲ್ಲದಿದ್ದಲ್ಲಿ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರದಲ್ಲಿನ ದರದಂತೆ ಗುತ್ತಿಗೆ ಮಾರಾಟ ಒಪ್ಪಂದ ಪತ್ರದ ದಿನಾಂಕದಿಂದ ಪ್ರಸ್ತುತ ದಿನಾಂಕದವರೆಗೂ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲೆ ಶೇಕಡ 2 ಬಡ್ಡಿ ಪಾವತಿಸಬೇಕು.

ಇಲ್ಲವೇ ಪ್ರಸ್ತುತ ದಿನಾಂಕದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರದ ಮೇಲೆ ಪರಿಷ್ಕೃತ ಪಟ್ಟಿಯಂತೆ ನಿವೇಶನದ ಅಳತೆಗೆ ಅನುಗುಣವಾಗಿ ಶೇಕಡವಾರು ಲೆಕ್ಕಾಚಾರ ಮಾಡಿ, ಎರಡು ದರಗಳ ಪೈಕಿ ಯಾವುದು ಕಡಿಮೆಯೊ, ಆ ದರವನ್ನು ಖಾಲಿ ನಿವೇಶನಕ್ಕೆ ದಂಡವಾಗಿ ವಿಧಿಸಲಾಗುತ್ತದೆ.

'ಈ ಹಿಂದೆ ಎರಡು ವರ್ಷದೊಳಗೆ ಮನೆ ನಿರ್ಮಿಸಬೇಕು ಎಂಬ ನಿಯಮವನ್ನು ಮೂರು ವರ್ಷಕ್ಕೆ ವಿಸ್ತರಿಸಲಾಯಿತು. ಈಗ ಐದು ವರ್ಷದೊಳಗೆ ಮನೆ ನಿರ್ಮಿಸಲು ಅವಕಾಶ ನೀಡಲಾಗಿದೆ. ಕಾನೂನು ಪ್ರಕಾರ ನಿಗದಿತ ಸಮಯದಲ್ಲಿ ಮನೆ ಕಟ್ಟದಿದ್ದರೆ ಶೇಕಡ 12.50ರಷ್ಟು ಹಣ ಕಡಿತ ಮಾಡಿಕೊಂಡು ಉಳಿದ ಹಣವನ್ನು ವಾಪಸ್ ಕೊಟ್ಟು ನಿವೇಶನ ಹಿಂಪಡೆಯಬೇಕು.

ಕೆಲವರು ನಿವೇಶನ ಪಡೆದು ದಶಕ ಕಳೆದರೂ ಮನೆ ನಿರ್ಮಿಸಿಲ್ಲ. ಕ್ರಯಪತ್ರ ನೀಡುವ ವೇಳೆ ದಂಡದ ಮೊತ್ತವನ್ನು ಕಟ್ಟಿಸಿಕೊಳ್ಳಲಾಗುವುದು' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ಖಾಲಿ ನಿವೇಶನಕ್ಕೆ ದಂಡ ಪಾವತಿಸಲು ಇಷ್ಟ ಇಲ್ಲದವರು, ನಿವೇಶನವನ್ನು ಪ್ರಾಧಿಕಾರಕ್ಕೆ ಹಿಂತಿರುಗಿಸಿ, ಪಾವತಿಸಿರುವ ಮೊತ್ತದಲ್ಲಿ ಶೇಕಡ 12.5ರಷ್ಟು ಕಳೆದು ಬಾಕಿ ಮೊತ್ತವನ್ನು ಹಿಂಪಡೆಯಲು ಸ್ವತಂತ್ರರಾಗಿರುತ್ತಾರೆ. ದಂಡ ಪಾವತಿಸುವಂತೆ ಹಿಂಬರಹ ನೀಡಿದ 90 ದಿನಗಳಲ್ಲಿ ಪಾವತಿಸದಿದ್ದಲ್ಲಿ ಎಸ್‌ಬಿಐನ ಎಂ.ಸಿ.ಎಲ್.ಆರ್ ಮತ್ತು ಶೇಕಡ 2 ಬಡ್ಡಿ ದರವನ್ನು ವಿಧಿಸಲಾಗುವುದು' ಎಂದು ಬಿಡಿಎ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

'ಈಗಾಗಲೇ ಖಾಲಿ ನಿವೇಶನಕ್ಕೆ ದಂಡವನ್ನು ಪಾವತಿಸಿರುವ ಹಂಚಿಕೆದಾರರಿಗೆ ಇದು ಅನ್ವಯಿಸುವುದಿಲ್ಲ. ಪಾವತಿಸಿರುವ ಮೊತ್ತವನ್ನು ಯಾವುದೇ ಸಂದರ್ಭದಲ್ಲಿ ಹಿಂತಿರುಗಿಸುವುದಿಲ್ಲ' ಎಂದು ಹೇಳಿದ್ದಾರೆ.

64 ಬಡಾವಣೆ: 65 ಸಾವಿರ ನಿವೇಶನ ಖಾಲಿ

ಬಿಡಿಎ ಅಧಿಕಾರಿಗಳ ಪ್ರಕಾರ, ನಗರದಾದ್ಯಂತ ಪ್ರಾಧಿಕಾರ ನಿರ್ಮಿಸಿರುವ 64 ಬಡಾವಣೆಗಳಲ್ಲಿ ಸುಮಾರು 65 ಸಾವಿರ ನಿವೇಶನಗಳು ಖಾಲಿಯಿವೆ. 20 ಸಾವಿರಕ್ಕೂ ಅಧಿಕ ನಿವೇಶನಗಳು ವ್ಯಾಜ್ಯಗಳಿಂದ ಕೂಡಿವೆ. ಕೆಂಪೇಗೌಡ ಬಡಾವಣೆ ಮತ್ತು ಅರ್ಕಾವತಿ ಬಡಾವಣೆಗಳಲ್ಲಿ ಹೊರತುಪಡಿಸಿ, ಇತರೆ ಬಡಾವಣೆಗಳಲ್ಲಿ ಖಾಲಿ ನಿವೇಶನಗಳಿವೆ.

ಪ್ರಮುಖವಾಗಿ ಇಂದಿರಾನಗರ, ಜಯನಗರ, ಬಿಟಿಎಂ ಲೇಔಟ್, ಬನಶಂಕರಿ, ಅಂಜನಾಪುರ, ಎಚ್‌ಎಎಲ್, ಜೆ.ಪಿ.ನಗರ, ನಾಗರಬಾವಿ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್ ಸೇರಿ ಹಲವು ಬಡಾವಣೆಗಳಲ್ಲಿ ಖಾಲಿ ನಿವೇಶನಗಳಿವೆ.

ನಿವೇಶನದ ಅಳತೆ	ಪರಿಷ್ಕೃತ ದರ
20×30 ನಿವೇಶನ (0 ಯಿಂದ 600 ಚದರ ಅಡಿ)	2.5%
30×40 ನಿವೇಶನ (601 ರಿಂದ 1200)	5%
40×60 ನಿವೇಶನ (1201 ರಿಂದ 2400)	7.5%
60×40 ಹಾಗೂ ಮೇಲ್ಪಟ್ಟ ನಿವೇಶನ (2401 ಮತ್ತು ಮೇಲ್ಪಟ್ಟು)	10%

ಕೋರ್ಟ್ ವಿಚಾರಣೆ ಹಾಜರಿಗೆ ವಿಳಂಬ

ಕೈದಿಗಳ ವಿವರ ಸಲ್ಲಿಕೆಗೆ ಆದೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದ ವಿವಿಧ ಜೈಲುಗಳಲ್ಲಿರುವ ವಿಚಾರಣಾಧೀನ ಕೈದಿಗಳಲ್ಲಿ ಕಳೆದ ಆರು ತಿಂಗಳಿನಿಂದ ಅಂತಹ ಎಷ್ಟು ಜನರನ್ನು ಅವರ ಮುದ್ದತಿನ ದಿನದಂದು ನಿಯಮಿತವಾಗಿ ಖುದ್ದು ಅಥವಾ ವಿಡಿಯೊ ಕಾನ್ಫರೆನ್ಸ್ ಮೂಲಕ ಕೋರ್ಟ್ ವಿಚಾರಣೆಗೆ ಹಾಜರುಪಡಿಸಲಾಗಿದೆ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಕಾರಾಗೃಹಗಳ ಡಿಐಜಿಗೆ ತಾಕೀತು ಮಾಡಿದೆ.

ನಾಲ್ಕು ವರ್ಷಗಳಿಂದ ಜೈಲಿನಲ್ಲಿರುವ ಆರೋಪಿ 'ಇಮ್ರಾನ್ ಅಲಿಯಾಸ್ ಕಬ್ಬನನ್ನು ವಿಚಾರಣೆಗೆ ಹಾಜರುಪಡಿಸದ ಕರ್ತವ್ಯ ಲೋಪ ಎಸಗಿರುವ ಆರೋಪದ ಹಿನ್ನೆಲೆಯ ಪ್ರಕರಣವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿರುವ ಲೋಪಗಳನ್ನು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಒಬ್ಬ ವಿಚಾರಣಾ ಕೈದಿಗೆ ನಾಲ್ಕು ವರ್ಷಗಳಲ್ಲಿ 20 ಬಾರಿ ಮುದ್ದತು ನೀಡಿದ್ದರೂ ಕೋರ್ಟ್‌ಗೆ ಹಾಜರು ಪಡಿಸಿಲ್ಲ ಎಂದರೆ ಏನರ್ಥ? ಒಬ್ಬ ಸಾಮಾನ್ಯ ಕೈದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಎಂದು ಹೈಕೋರ್ಟ್ ಆದೇಶಿಸಬೇಕೆ? ಜೈಲಿನ ನಡೆಯಿಂದ ನ್ಯಾಯಾಂಗದ ಸಮಯ ವ್ಯರ್ಥವಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಒಂದೇ ಠಾಣೆಯಲ್ಲಿ ದಾಖಲಾಗಿರುವ ಮೂರ್ನಾಲ್ಕು ಪ್ರಕರಣಗಳಲ್ಲಿ ಕೈದಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂಬುದನ್ನು ವಿವೇಚಿಸದೆ ಬಾಡಿ ವಾರಂಟ್ ಪೆಂಡಿಂಗ್ ಇರುವಾಗ ಜಾಮೀನು ರಹಿತ ವಾರಂಟ್ ಜಾರಿಗೆ ಹಣಾಹುರುವುದಕ್ಕೆ ಏನು ಹೇಳಬೇಕು? ಆರೋಪಿ ಸಿಕ್ಕಿಲ್ಲ ಎಂದು ಬರೆದಿಟ್ಟಿರುವ ಮಹಾಶಯ ಎಚ್‌ಎಎಲ್ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮುತ್ತಣ್ಣ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು' ಎಂದು ಆದೇಶಿಸಿತು.

'ಕೈದಿಗಳು ಕೂಡ ನಮ್ಮಂತೆಯೇ ಮನುಷ್ಯರು. ಅವರ ಬಗ್ಗೆಯೂ ನಮಗೆ ಮಾನವೀಯ ಅನುಕಂಪ ಇರಬೇಕು. ಶ್ಯೂರಿಟಿ ಕೊಟ್ಟಿಲ್ಲ ಎಂದು ಕೈದಿಯನ್ನು ಅಲ್ಲೇ ಕೊಳೆಯುವಂತೆ ಮಾಡುವುದು ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾದ ನಡೆ. ಇನ್ನು ಮುಂದೆ ಹೀಗಾಗಬಾರದು. ಜೈಲಿನ ನಿಯಮಗಳಲ್ಲಿಯೂ ಕ್ರಮಬದ್ಧವಾಗಿ ಇರಬೇಕು' ಎಂದು ಡಿಐಜಿ ಅವರಿಗೆ ಖಡಕ್ ನಿರ್ದೇಶನ ನೀಡಿ ವರದಿ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು. ಕಾರಾಗೃಹ ಇಲಾಖೆಯ ಡಿಐಜಿ ದಿವ್ಯಶ್ರೀ ಮತ್ತು ವೈಟ್‌ಫೀಲ್ಡ್ ಡಿಸಿಪಿ ಸೈದುಲ್ಲಾ ಅದಾವತ್ ವಿಚಾರಣೆ ವೇಳೆ ಖುದ್ದು ಹಾಜರಿದ್ದರು.

ಶ್ರೀಧರ್ ಸಾವಿನ ಪ್ರಕರಣ: ಎಸ್‌ಐಟಿ ರಚನೆ

'ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಶಿಬಾಜೆ ಗ್ರಾಮದ ಸಾರಾ ಫಾರ್ಮ್ ಉದ್ಯೋಗಿ ಶ್ರೀಧರ್ ಸಾವಿನ ಪ್ರಕರಣದ ತನಿಖೆಗಾಗಿ ಹೈಕೋರ್ಟ್ ಆದೇಶದ ಅನುಸಾರ ಎಸ್‌ಐಟಿ ರಚನೆ ಮಾಡಲಾಗಿದೆ' ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಇದೇ ವೇಳೆ ನ್ಯಾಯಪೀಠಕ್ಕೆ ವಿವರಿಸಿದರು.

ಹೈಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಜರಾಗಿದ್ದ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ.ವಿ. ಶರತ್‌ಚಂದ್ರ ಅವರಿಗೆ ನ್ಯಾಯಪೀಠ, 'ಈ ಕೋರ್ಟ್, ಸರ್ಕಾರದ ಹಿರಿಯ ಅಧಿಕಾರಿಗಳನ್ನು ಸುಖಾಸುಮ್ಮನೆ ಬರಮಾಡಿಕೊಳ್ಳಲು ಬಯಸುವುದಿಲ್ಲ' ಎಂದು ಹೇಳಿತು. ಅಂತೆಯೇ, ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ನಾಲ್ಕು ವಾರಗಳಲ್ಲಿ ಕೋರ್ಟ್‌ಗೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿತು. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಹಾಜರಿದ್ದರು.

ಬಿಕ್ಲು ಶಿವು ಕೊಲೆ ಪ್ರಕರಣ • 5ನೇ ಆರೋಪಿ ಹೇಳಿಕೆ ದಾಖಲಿಸಿಕೊಂಡ ಸಿಐಡಿ

ಶಾಸಕ ಬೈರತಿ ಬಸವರಾಜ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಒಂಬತ್ತು ದಿನಗಳಿಂದ ಸಿಐಡಿ ಕಸ್ಟಡಿಯಲ್ಲಿದ್ದ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ಶನಿವಾರ ಮಧ್ಯಾಹ್ನದ ವೇಳೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದರು.

ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಐದನೇ ಆರೋಪಿ ಆಗಿರುವ ಬೈರತಿ ಬಸವರಾಜ ಅವರನ್ನು ಫೆ.12ರಂದು, ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿ ಸಿಐಡಿ ಪೊಲೀಸರು ಬಂಧಿಸಿದ್ದರು. ಬಳಿಕ ಕಸ್ಟಡಿಗೆ ಪಡೆದುಕೊಂಡಿದ್ದ ಸಿಐಡಿ ಪೊಲೀಸರು, ಪ್ರಕರಣದ ಸಂಬಂಧ ವಿಚಾರಣೆ ನಡೆಸಿ, ಆರೋಪಿಯ ಹೇಳಿಕೆ ದಾಖಲಿಸಿ ಕೊಂಡಿದ್ದರು. ಶನಿವಾರ ಬೆಳಿಗ್ಗೆ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಆರೋಪಿಯನ್ನು ಪೊಲೀಸರು ಹಾಜರು ಪಡಿಸಿದ್ದರು.

ಬೈರತಿ ಬಸವರಾಜ

ಸಿಐಡಿ ವಾದಕ್ಕೆ ಆಕ್ಷೇಪ: ವಿಚಾರಣೆ ಆರಂಭ ಆಗುತ್ತಿದ್ದಂತೆಯೇ ಬೈರತಿ ಬಸವರಾಜ ಅವರನ್ನು ಮತ್ತೆ ಸಿಐಡಿ ಕಸ್ಟಡಿಗೆ ನೀಡುವಂತೆ ಪ್ರಾಸಿಕ್ಯೂಷನ್ ಪರ ವಕೀಲರು ಮನವಿ ಮಾಡಿದರು.

'ಆರೋಪಿ ತನಿಖೆಗೆ ಸಹಕಾರ ನೀಡಿಲ್ಲ. ಇನ್ನಷ್ಟು ವಿಚಾರಣೆ ಅಗತ್ಯವಿದ್ದು ಸಿಐಡಿ ಕಸ್ಟಡಿಗೆ ನೀಡಬೇಕು' ಎಂದು ಕೋರಿದರು. ಅದಕ್ಕೆ ಶಾಸಕ ಪರ ವಕೀಲರು ಆಕ್ಷೇಪಿಸಿ, ಈಗಾಗಲೇ ಒಂಬತ್ತು ದಿನ ಕಸ್ಟಡಿಗೆ ನೀಡಲಾಗಿದೆ. ವೈದ್ಯಕೀಯ ವರದಿ ಆಧರಿಸಿ ಕಸ್ಟಡಿಗೆ ನೀಡಬಾರದು ಎಂದು ವಾದ ಮಂಡಿಸಿದರು.

ನ್ಯಾಯಾಲಯವು ಆರೋಪಿಯನ್ನು ಫೆಬ್ರುವರಿ 26ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರಿಂದ ಬಿಗಿಭದ್ರತೆಯ ನಡುವೆ ಜೈಲಿಗೆ ಕಳುಹಿಸಲಾಗಿದೆ. ಜೈಲಿನ ಮುಖ್ಯದ್ವಾರ ಪ್ರವೇಶಿಸುತ್ತಿದ್ದಂತೆಯೇ ಬೈರತಿ ಬಸವರಾಜ ಅವರು ಕಣ್ಣೀರು ಹಾಕಿದರು.

ನಾಯಿಗಾಗಿ ಕಚ್ಚಾಟ: ತನಿಖೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಚ್ಚಲು ಬಂದ ನಾಯಿಗೆ ಕಲ್ಲಿನಿಂದ ಹೊಡೆಯಲಾಗಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ನೆರೆಮನೆಯವರ ಮೇಲೆ ಹಲ್ಲೆ ನಡೆಸಿದ ಆರೋಪ ದಡಿ ನಾಯಿಯ ಮಾಲೀಕರ ವಿರುದ್ಧ ದಾಖಲಾಗಿದ್ದ ಪ್ರಕರಣವೊಂದರ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನಮ್ಮ ವಿರುದ್ಧ ಸೂರ್ಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಆನೇಕಲ್‌ನ 2ನೇ ಹೆಚ್ಚುವರಿ ಸಿವಿಲ್ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ನಾಯಿಯ ಮಾಲೀಕರಾದ ಮುನಿಕೃಷ್ಣ, ಅವರ ಕುಟುಂಬದ 7 ಜನ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

'ಅರ್ಜಿದಾರರು ನಾಯಿಯನ್ನು ಮನೆಯಿಂದ ಹೊರಗೆ ಬಿಡಬಾರದು' ಎಂಬ ಷರತ್ತಿಗೆ ಒಳಪಡಿಸಿ ತನಿಖೆಗೆ ತಡೆ ನೀಡಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 12ಕ್ಕೆ ಮುಂದೂಡಿತು.

ಏನಿದು ಪ್ರಕರಣ?

'ದೂರುದಾರರಾದ ಎಂ.ಮಂಜುಳಾ ಅರ್ಜಿದಾರರ ನೆರೆಮನೆಯವರು. ಮಂಜುಳಾ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ವೇಳೆ ಅವರನ್ನು ಮುನಿಕೃಷ್ಣ ಅವರಿಗೆ ಸೇರಿದ ನಾಯಿ ಬೆನ್ನಟ್ಟಿ, ಕಚ್ಚಲು ಯತ್ನಿಸಿದೆ' ಎಂಬುದು ಆರೋಪ. ಈ ಸಂಬಂಧ ಮಂಜುಳಾ 2026ರ ಜನವರಿ 5ರಂದು ರಾತ್ರಿ 9.45ಕ್ಕೆ ಸೂರ್ಯನಗರ ಪೊಲೀಸ್ ಠಾಣೆಗೆ ತೆರಳಿ ಮುನಿಕೃಷ್ಣ ಸೇರಿದಂತೆ 7 ಜನರ ವಿರುದ್ಧ ದೂರು ನೀಡಿದ್ದರು.

ದೂರಿಗೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 115(1) (ಗಾಯಗೊಳಿಸುವುದು), 118(1) (ಅಪಾಯಕಾರಿ ಆಯುಧ ಅಥವಾ ವಿಧಾನಗಳಿಂದ ತೀವ್ರವಾಗಿ ಗಾಯಗೊಳಿಸುವುದು), 352 (ಶಾಂತಿ ಭಂಗಕ್ಕೆ ಪ್ರಚೋದಿಸುವ ಅಥವಾ ಉದ್ದೇಶಪೂರ್ವಕ ಅವಮಾನ), 291 (ಪ್ರಾಣಿಗಳ ವಿಷಯದಲ್ಲಿ ನಿರ್ಲಕ್ಷ್ಯದ ನಡವಳಿಕೆ), 189(2) (ಕಾನೂನುಬಾಹಿರ ಗುಂಪುಗೂಡುವಿಕೆ) ಮತ್ತು 190ರ (ಸಾಮಾನ್ಯ ಉದ್ದೇಶ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ತಲೆಮರೆಸಿಕೊಂಡಿದ್ದ ಶಂಕಿತ ಉಗ್ರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಮೀನು ಪಡೆದ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಶಂಕಿತ ಉಗ್ರ ಅರ್ಷಾದ್ ಖಾನ್ ಅವರನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ.

ನಗರದಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಹಾಗೂ ಗ್ರೆನೇಡ್ ಸಂಗ್ರಹಿಸಿಕೊಂಡಿದ್ದ ಆರೋಪದ ಮೇರೆಗೆ ಅರ್ಷಾದ್ ಖಾನ್ ಅವರನ್ನು ಈ ಹಿಂದೆ ಸಿಸಿಬಿ ಪೊಲೀಸರು ಬಂಧಿಸಿದ್ದರು. ಬಳಿಕ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಹಸ್ತಾಂತರ ಮಾಡಲಾಗಿತ್ತು.

'ಅರ್ಷಾದ್ ಖಾನ್ ಅವರಿಗೆ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ನಿಗದಿತ ದಿನ ದಂದು ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುವಂತೆಯೂ ನ್ಯಾಯಾಲಯ ಸೂಚಿಸಿತ್ತು. ಆದರೆ, ನಿಯಮದಂತೆ ಅವರು ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

ಎನ್‌ಐಎ ವಿಶೇಷ ನ್ಯಾಯಾಲಯವು ಅರ್ಷಾದ್ ಖಾನ್ ವಿರುದ್ಧ ಬಂಧನ ವಾರಂಟ್ ಮಾಡಿ ಘೋಷಿತ ಅಪರಾಧಿ ಆದೇಶ ಹೊರಡಿಸಿತ್ತು. ನ್ಯಾಯಾಲಯದ ಆದೇಶದ ಬೆನ್ನಲ್ಲೇ ಶಂಕಿತ ಉಗ್ರನನ್ನು ಬಂಧಿಸಲಾಗಿದೆ. ಶಂಕಿತ ಉಗ್ರ ತಲೆಮರೆಸಿ ಕೊಂಡಿದ್ದ ಅವಧಿಯಲ್ಲಿ ಯಾರ ಜತೆಗೆ ಸಂಪರ್ಕದಲ್ಲಿದ್ದರು, ಬೇರೆ ಪ್ರದೇಶದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಏನಾದರೂ ಸಂಚು ರೂಪಿಸಲಾಗಿತ್ತೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಎನ್‌ಐಎ ಮೂಲಗಳು ಹೇಳಿವೆ.

ಅತ್ಯಾಚಾರ: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಬಿಹಾರದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದ ಅಡಿ ಬಿಹಾರದ ಜಹಂಗೀರ್ (43) ಎಂಬಾತನನ್ನು ಗೋವಿಂದಪುರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

34 ವರ್ಷದ ಸಂತ್ರಸ್ತೆ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಿಹಾರದ ದಂಪತಿ ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಟೈಲರಿಂಗ್ ಕೆಲಸ ಮಾಡಿಕೊಂಡಿದ್ದರು. ಈ ವೇಳೆ ಜಹಂಗೀರ್ ಪರಿಚಯವಾಗಿತ್ತು. 2023ರಲ್ಲಿ ಸಂತ್ರಸ್ತೆಯ ಮನೆಗೆ ನುಗ್ಗಿ ಅತ್ಯಾಚಾರ ಎಸಗಿದ್ದ. ಇತ್ತೀಚೆಗೆ ಸಂತ್ರಸ್ತೆಯನ್ನು ಸಂಪರ್ಕಿಸಿದ್ದ ಜಹಂಗೀರ್, 'ವಿಡಿಯೊವೊಂದು ನನ್ನ ಬಳಿ ಇದೆ. ನನ್ನೊಂದಿಗೆ ಸಹಕರಿಸದಿದ್ದರೆ, ಆ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಸಿದ್ದ. ಅಲ್ಲದೇ ₹5 ಲಕ್ಷ ಹಣ ಕೊಡುವಂತೆಯೂ ಬೇಡಿಕೆಯಿಟ್ಟಿದ್ದ. ಇದರಿಂದ ಆತಂಕಗೊಂಡ ಸಂತ್ರಸ್ತೆ ಹಾಗೂ ಆಕೆಯ ಪತಿ ಗೋವಿಂದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ತನಿಖೆ ನಡೆಸಿ ಜಹಂಗೀರ್‌ನನ್ನು ಬಂಧಿಸಲಾಗಿದೆ. ಜಹಂಗೀರ್ ವಿಚಾರಣೆ ಹಾಗೂ ಆತನ ಮೊಬೈಲ್ ಪರಿಶೀಲನೆ ವೇಳೆ ಯಾವುದೇ ವಿಡಿಯೊ ಪತ್ತೆಯಾಗಿಲ್ಲ. ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಡಿಪ್ಲೊಮಾ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಸಂಜಯ ನಗರದ ಲೊಟ್ಟೆಗೊಲ್ಲಹಳ್ಳಿಯ ಮನೆಯಲ್ಲಿ ಡಿಪ್ಲೊಮಾ ವಿದ್ಯಾರ್ಥಿ ಹೇಮಂತ್ (22) ಅವರು ಶುಕ್ರವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೇಮಂತ್

ಸಂಸದ ಬಸವರಾಜ ಬೊಮ್ಮಾಯಿ ಅವರ ಆಪ್ತ ಕಾರ್ಯದರ್ಶಿ ಚಂದ್ರು ಅವರ ಪುತ್ರ ಹೇಮಂತ್.

'ಹೇಮಂತ್ ಅವರು ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಅಂತಿಮ ವರ್ಷದ ಡಿಪ್ಲೊಮಾ ಓದುತ್ತಿದ್ದರು. ಕುಟುಂಬದವರ ಜತೆಗೆ ಶನಿವಾರ ಹೇಮಂತ್ ಅವರೂ ತಿರುಪತಿಗೆ ತೆರಳಲು ಸಿದ್ಧತೆ ನಡೆಸಿದ್ದರು. ಶನಿವಾರ ಮುಂಜಾನೆ ಶವವಾಗಿ ಪತ್ತೆ ಆಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ತಾಯಿ ಜತೆಗೆ ಗಲಾಟೆ: 'ತಿರುಪತಿಗೆ ಹೊರಟಿದ್ದರಿಂದ ಹೇಮಂತ್ ತಾಯಿ ಮಗಳಿಗೆ ಆಭರಣ ಕೊಡಿಸಿದ್ದರು. ಈ ವಿಚಾರಕ್ಕೆ ಮನೆಯಲ್ಲಿ ಗಲಾಟೆ ನಡೆದಿತ್ತು. 'ತಂಗಿಗೆ ಕೇಳಿದ್ದೆಲ್ಲಾ ಕೊಡಿಸುತ್ತೀರಿ. ನನಗೇನೂ ಕೊಡಿಸಲ್ಲ' ಎಂದು ಕೋಪದಲ್ಲಿ ಕೋಣೆಗೆ ಹೋಗಿದ್ದ ಹೇಮಂತ್ ಅವರು ಬಾಗಿಲು ಹಾಕಿಕೊಂಡಿದ್ದನು. ರಾತ್ರಿ ಊಟಕ್ಕೂ ಕರೆದರೂ ಕೋಣೆಯಿಂದ ಹೊರಗೆ ಬಂದಿರಲಿಲ್ಲ. ನಿದ್ರೆ ಮಾಡುತ್ತಿರಬಹುದು ಅಥವಾ ಮೊಬೈಲ್‌ನಲ್ಲಿ ಸ್ನೇಹಿತರ ಜತೆಗೆ ಮಾತನಾಡುತ್ತಿರಬಹುದು ಎಂದು ಕುಟುಂಬಸ್ಥರು ಭಾವಿಸಿದ್ದರು. ಶನಿವಾರ ಮುಂಜಾನೆ ಬಾಗಿಲು ಒಡೆದು ಪರಿಶೀಲಿಸಿದಾಗ ನೇಣು ಹಾಕಿಕೊಂಡಿರುವುದು ಪತ್ತೆ ಆಗಿತ್ತು' ಎಂದು ಮೂಲಗಳು ಹೇಳಿವೆ.

'ಎಲ್ಲರ ಜತೆಗೂ ಹೇಮಂತ್ ಚೆನ್ನಾಗಿಯೇ ಇದ್ದ. ಯಾರ ಬಳಿ ಸಹ ಏನೂ ಹೇಳಿಕೊಂಡಿರಲಿಲ್ಲ. ತಂದೆ–ತಾಯಿಯೂ ಮಗನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಯಾವ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದು ಗೊತ್ತಿಲ್ಲ' ಎಂದು ಮೃತ ಹೇಮಂತ್ ಅಜ್ಜ ಮರಿಯಪ್ಪ ತಿಳಿಸಿದರು.

ಸ್ಥಳಕ್ಕೆ ಸಂಜಯನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಎಂ.ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ನಗರದ ಹೆಬ್ಬಾಳದಲ್ಲಿ ನೂತನವಾಗಿ ಆರಂಭವಾದ ಜೈನ್ ಹೆರಿಟೇಜ್ ಸ್ಪೋರ್ಟ್ಸ್ ಸ್ಕೂಲ್ ಉದ್ಘಾಟನಾ ಸಮಾರಂಭದಲ್ಲಿ ಜೆಎಚ್‌ಎಸ್ ನಿರ್ದೇಶಕಿ ಅರ್ಚನಾ ವಿಶ್ವನಾಥ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಜೈನ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್, ಕ್ರಿಕೆಟಿಗ ಕೆ.ಎಲ್. ಶ್ರೀಜಿತ್, ಒಲಿಂಪಿಯನ್ ಈಜುತಾರೆ ಶ್ರೀಹರಿ ನಟರಾಜ್, ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಹಾಗೂ 91 ಸ್ಪೋರ್ಟಿಂಗ್ ಕಂಪನಿಯ ಸ್ಥಾಪಕ ಸಿಇಒ ರಾಹುಲ್ ಮೆನನ್ ಹಾಜರಿದ್ದರು

ಜೈನ್ ಹೆರಿಟೇಜ್ ಸ್ಪೋರ್ಟ್ಸ್ ಸ್ಕೂಲ್‌ಗೆ ಚಾಲನೆ

ಬೆಂಗಳೂರು: ನಗರದ ಹೆಬ್ಬಾಳದ ಜೈನ್ ಕ್ಯಾಂಪಸ್‌ನಲ್ಲಿ ಜೈನ್ ಹೆರಿಟೇಜ್ ಸ್ಕೂಲ್ (ಜೆಎಸ್‌ಎಸ್) ಮತ್ತು 91 ಸ್ಪೋರ್ಟಿಂಗ್ ಕಂಪನಿಯ ಸಹಯೋಗದಲ್ಲಿ ಆರಂಭಿಸಲಾದ 'ಜೈನ್ ಹೆರಿಟೇಜ್ ಸ್ಪೋರ್ಟ್ಸ್ ಸ್ಕೂಲ್' ಅನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಶನಿವಾರ ಲೋಕಾರ್ಪಣೆ ಮಾಡಿದರು.

'ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು ಎಷ್ಟು ಮುಖ್ಯವೋ, ಶೈಕ್ಷಣಿಕ ಪ್ರಗತಿಯೂ ಅಷ್ಟೇ ಮುಖ್ಯ. ಜೈನ್ ಹೆರಿಟೇಜ್ ಸ್ಪೋರ್ಟ್ಸ್ ಸ್ಕೂಲ್‌ನಂತಹ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ತಮ್ಮ ಕ್ರೀಡಾ ಮಹತ್ವಾಕಾಂಕ್ಷೆಗಳನ್ನು ಪೂರೈಸುವುದರ ಜೊತೆಗೆ ಶೈಕ್ಷಣಿಕ ನೈಪುಣ್ಯವನ್ನು ಪಡೆಯಲು ಉತ್ತಮ ಅವಕಾಶವನ್ನು ಒದಗಿಸುತ್ತವೆ' ಎಂದು ಪ್ರಸಾದ್ ಹೇಳಿದರು.

ಜೈನ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್ ಮಾತನಾಡಿ, 'ಜೈನ್ ಹೆರಿಟೇಜ್ ಸ್ಪೋರ್ಟ್ಸ್ ಸ್ಕೂಲ್ ಮೂಲಕ ನಾವು ಪ್ರತಿವರ್ಷ 300 ಗಂಟೆಗಳ ಕೇಂದ್ರೀಕೃತ ಶಿಕ್ಷಣದೊಂದಿಗೆ ಸುಮಾರು 1,000 ಗಂಟೆಗಳ ವ್ಯವಸ್ಥಿತ ಕ್ರೀಡಾ ತರಬೇತಿಯನ್ನು ನೀಡುದ್ದೇವೆ. ಈ ಮಾದರಿಯು ಕೇವಲ ಕ್ರೀಡಾಪಟುಗಳನ್ನು ಮಾತ್ರವಲ್ಲದೆ ನಾಯಕರು, ಉದ್ಯಮಿಗಳು, ಚಿಂತಕರು ಮತ್ತು ಎಲ್ಲಾ ಕ್ಷೇತ್ರಗಳಲ್ಲಿ ಚಾಂಪಿಯನ್‌ಗಳನ್ನು ಸೃಷ್ಟಿಸುತ್ತದೆ' ಎಂದು ತಿಳಿಸಿದರು.

'ನಾನು ರೈತ ಪರ ನಮಗೆ ಕೈಗಾರಿಕೆ ಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಿರುವ ಟಾಟಾ–ಏರ್‌ಬಸ್ ಎಚ್ 125 ಲಘು ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕದ ಉದ್ಘಾಟನಾ ಕಾರ್ಯಕ್ರಮಕ್ಕೆ ಸ್ಥಳೀಯ ಜನಪ್ರತಿನಿಧಿ ಗಳನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್ ಮತ್ತೆ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೌದು, ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಹೇಳಿದಂತೆ ನಾನು ಕೈಗಾರಿಕೆ, ಕೈಗಾರಿಕೋದ್ಯಮಿಗಳ ಪರ ಇಲ್ಲ. ಕೈಗಾರಿಕೆಗಳು, ಹೂಡಿಕೆದಾರರ ಅಗತ್ಯವೂ ನಮಗಿಲ್ಲ. ಆದರೆ, ನಾನು ಜಿಲ್ಲೆಯ ರೈತರು, ಗ್ರಾಮಸ್ಥರು, ವಿದ್ಯಾವಂತ ಯುವಕರು, ಜನಪ್ರತಿನಿಧಿಗಳ ಪರವಿದ್ದೇನೆ. ಹೆಲಿಕಾಪ್ಟರ್ ಘಟಕ ಉದ್ಘಾಟನೆಗೆ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸದೆ ನಿರ್ಲಕ್ಷ್ಯ ಮಾಡಿದ್ದಾರೆ' ಎಂದರು.

ಜಿಲ್ಲೆಯಲ್ಲಿರುವ ಕೈಗಾರಿಕೆಗಳು ಸರೋಜಿನಿ ಮಹಿಷಿ ವರದಿ ಪ್ರಕಾರ ಸ್ಥಳೀಯರಿಗೆ ಕೆಲಸ ನೀಡಿಲ್ಲ. ಜಮೀನು ನೀಡಿದ ರೈತರ ಮಕ್ಕಳಿಗೆ ಉದ್ಯೋಗ ನೀಡದೆ ವಂಚಿಸಲಾಗುತ್ತಿದೆ. ಇಂಥ ಕಂಪನಿಗಳ ಪರ ನಾನು ಏಕೆ ಇರಬೇಕು? ಅವರು ಹೇಳಿದಂತೆ ನಾವು ಕೇಳಬೇಕೇ? ನಾವು ಅವರ ಗುಲಾಮರಾಗಬೇಕೇ' ಎಂದು ಪ್ರಶ್ನಿಸಿದರು.

ನಗರದಲ್ಲಿ ಇಂದು

ರಾಮಕೃಷ್ಣರ ಜಯಂತಿ ಅಂಗವಾಗಿ ವಿಶೇಷ ಭಜನೆಗಳು: ಬೆಳಿಗ್ಗೆ 6ಕ್ಕೆ ವೇದ ಹಾಗೂ ಸ್ತೋತ್ರ ಪಠಣ, ಬೆಳಿಗ್ಗೆ 7ರಿಂದ ಭಜನೆಗಳು: ಸೀತಾರಾಮ ಭಜನಾ ಮಂಡಳಿ, ಶಾರದಾ ಸತ್ಸಂಗ ಕೇಂದ್ರ, ಶಾಂತಲಾ ಭಜನಾ ಮಂಡಳಿ, ವೀರಾಂಜನೇಯ ಭಜನಾ ಮಂಡಳಿ, ಪ್ರವಚನ, ಆರತಿ ಹಾಗೂ ಪ್ರಸಾದ ವಿನಿಯೋಗ, ವಿಶ್ವ ಹಿಂದೂ ಪರಿಷದ್ ಭಜನಾ ಮಂಡಳಿ, ಸೌಂದರ್ಯ ಲಹರಿ ಭಜನಾ ಮಂಡಳಿ, ಶ್ರೀರಾಮ ಮಂದಿರ ಭಜನಾ ಮಂಡಳಿ, ಕಾಮಾಕ್ಷಿ ಭಜನಾ ಮಂಡಳಿ, ಪ್ರವಚನ, ರಾಮಕೃಷ್ಣ ಆರತಿ ಮತ್ತು ಭಜನೆ: ಕೆ. ಗುರುರಾಜ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಸ್ವಾಮಿ ವಿವೇಕಾನಂದ ರಸ್ತೆ, ಹಲಸೂರು.

ತ್ಯಾಗರಾಜ, ಪುರಂದರ ಮತ್ತು ಕನಕದಾಸರ ಆರಾಧನಾ ಮಹೋತ್ಸವ: ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಬೆಳಿಗ್ಗೆ 7ರಿಂದ

ಡಾ.ಕೆ.ಶಿವರಾಮ ಕಾರಂತರ ಬದುಕು–ಬರಹ: ಅಧ್ಯಕ್ಷತೆ: ಎನ್. ಕೃಷ್ಣಪ್ಪ, ಅತಿಥಿಗಳು: ಸುನಿತಾ ಬಿ.ವಿ., ಅಜ್ಜಂಪುರ ಎಸ್. ಶೃತಿ, ಆಯೋಜನೆ: ಶ್ರೀ ಕನ್ನಡ ಕಸ್ತೂರಿ ಸಂಘ, ಸ್ವಾಮಿ ವಿವೇಕಾನಂದ ಅಭ್ಯುದಯ ಪ್ರತಿಷ್ಠಾನ, ಸ್ಥಳ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡ, ಎಂಟನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಬೆಳಿಗ್ಗೆ 9.50

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಆರ್. ಸದಾಶಿವಯ್ಯ ಜರಗನಹಳ್ಳಿ, ಎಚ್.ಎಸ್. ಪರಮೇಶ್, ಡಿ.ಎಂ. ದಯಾನಂದ, ಆಯೋಜನೆ: ಸಹಮತ, ಸ್ಥಳ: ನಂ. 323, ಹೇಮ ಸದನ, ಸಹಕಾರ ನಗರ, ಬೆಳಿಗ್ಗೆ 10

ಪಂ.ಕೆ.ಪಿ. ಶಿವಲಿಂಗಯ್ಯ ಸಂಸ್ಮರಣಾರ್ಥ ಸಂಸ್ಥಾಪಕರ ದಿನಾಚರಣೆ: ಉದ್ಘಾಟನೆ: ಚಂದ್ರಶೇಖರ್, 'ಶಿವಲಿಂಗ ಪ್ರಶಸ್ತಿ' ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಸ್ವೀಕರಿಸುವವರು: ಸರಸ್ವತಿ ಹೆಗಡೆ, ಅತಿಥಿಗಳು: ಸೋಮಶೇಖರ ಗಾಂಜಿ, ಶಿವಕುಮಾರಸ್ವಾಮಿ ತಡಗ, ಮಹೇಶ್ ಗುಬ್ಬಿ, ಗುರುಪ್ರಸಾದ್ ಕುಚ್ಚಂಗಿ, ಎಸ್. ರುದ್ರಕುಮಾರ್, ಅಧ್ಯಕ್ಷತೆ: ರುದ್ರಪ್ಪ ಫ. ದೇಸಾಯಿ, ಪ್ರಾಸ್ತಾವಿಕ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಇಂದಿರಾಗಾಂಧಿ ಕಲಾಕೇಂದ್ರ, ಕೆಂಗುಂಟೆ ವೃತ್ತದ ಬಳಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.15


ಎಸ್.ಜಿ. ಸಿದ್ಧರಾಮಯ್ಯ

ಅನೇಕತನ್ ಸುವ್ವಿ ಅವರ 'ಲೀಗಲ್ ಪರ್ಸನಾಲಿಟೀಸ್ ಲೈಫ್ ಆ್ಯಂಡ್ ಲೆಸ್ಸಂನ್ಸ್' ಪುಸ್ತಕ ಬಿಡುಗಡೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಎಚ್. ಎನ್. ನಾಗಮೋಹನ ದಾಸ್, ಅತಿಥಿ: ಅನಿಲ್ ಜೋಸೆಫ್ ಪಿಂಟೊ, ಪುಸ್ತಕದ ಕುರಿತು: ಸಂಜನಾ ಎಸ್. ಜೈನ್, ಆಯೋಜನೆ: ಅಂಕುರ, ಸ್ಥಳ: ಡಾ.ಎಚ್. ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ನಾಗಮೋಹನ ದಾಸ್

ಉಪನ್ಯಾಸ, ಕವಿಗೋಷ್ಠಿ, ಕರೋಕೆ ಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಕಾಶೀನಾಥ ಹಂದ್ರಾಳ, ಅತಿಥಿಗಳು: ಶರತ್ ಚಂದ್ರ, ಬಿ. ಶಾಂತಕುಮಾರ್, ಆಯೋಜನೆ: ಕಲಾಚಂದಿರ ಕಲಾಮಂದಿರ ಟ್ರಸ್ಟ್, ಸ್ಥಳ: ಜೈಪ್ರದ ಗಾನಲಹರಿ ಆಡಿಟೋರಿಯಂ, ಸ್ವಾತಂತ್ರ್ಯ ಯೋಧರನಗರ, ಬೆಳಿಗ್ಗೆ 10.30

ಎಂ.ಜಿ. ಹೆಗಡೆ ಅವರ 'ಭಾರತ ಮುಸ್ಲಿಂ ರಾಷ್ಟ್ರ ಆಗುವುದೇ?' ಪುಸ್ತಕ ಬಿಡುಗಡೆ: ವಿ.ಎಸ್. ಉಗ್ರಪ್ಪ, ಅತಿಥಿಗಳು: ಬಿ.ಎಂ. ಹನೀಫ್, ಶಿವಸುಂದರ್, ಸುಧಾಕರ ಬನ್ನಂಜೆ, ವಿಮಲಾ ಕೆ.ಎಸ್., ಸ್ವಯಂಪ್ರಕಾಶ ಭಟ್, ಆಯೋಜನೆ: ಎಂ.ಜಿ. ಹೆಗಡೆ ಗೆಳೆಯರ ಬಳಗ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30

ಅರಸು–60: ಅತಿಥಿಗಳು: ಪ.ಸ. ಕುಮಾರ್, ಎಂ.ಎಸ್. ಮೂರ್ತಿ, ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಬಿ.ಎಂ. ವೆಂಕಟೇಶ್, ಎಸ್. ತಿರುಣಾವುಕರಸು, ಆಯೋಜನೆ: ಕಲಾಮಂದಿರ ಕಲಾ ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಸ್ನೇಹಿತರು, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ನಾದೋಪಾಸನ, ಸಂಗೀತ ಸಾಹಿತ್ಯದ ಹಬ್ಬ, ಪಿ.ವಿ.ಎನ್. ಸ್ಮರಣೆ, ಪುಸ್ತಕ ಬಿಡುಗಡೆ: ನಾಂದಿ ಗಮಕ ವಾಚನ: ಎಂ.ಆರ್. ಸತ್ಯನಾರಾಯಣ, ಕೊಳಲು ವಾದನ: ಶಶಾಂಕ್ ಚಿನ್ನ, ವ್ಯಾಖ್ಯಾನ: ಸಂತೋಷ್ ಭಾರದ್ವಾಜ್, ಶ್ಯಾಮಲಾ ಪ್ರಕಾಶ್ ಅವರು ಸಂಪಾದಿಸಿದ 'ಆರೋಹಣ' ಪುಸ್ತಕ ಬಿಡುಗಡೆ: ಧೃತಿ ಭಾರದ್ವಾಜ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಅನಿತಾಕೌಲ್ ಸ್ಮರಣೆ 'ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ' ಪ್ರದಾನ: ಎಲ್. ಎನ್. ಮುಕುಂದರಾಜ್, ಅತಿಥಿಗಳು: ಎಲ್. ಕೆ. ಅತೀಕ್, ಶಿಲ್ಪಾನಾಗ್, ಅಧ್ಯಕ್ಷತೆ: ಆರ್. ಎನ್. ರಾಜಾನಾಯಕ್, ಪ್ರಾಸ್ತಾವಿಕ ನುಡಿ: ಈ. ಬಸವರಾಜು, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ತಿಂಗಳ ತೇರು: ಮ್ಯಾಂಡೋಲಿನ್: ವಿಷ್ಣು ವೆಂಕಟೇಶ್, ಘಟ: ಕೃಷ್ಣಪ್ರಸಾದ್, ಮೃದಂಗ: ಕಿರಣ್‌ಕುಮಾರ್, ಪಿಟೀಲು: ಶಂಕರ್ ರಾಜನ್ ಮಹದೇವನ್, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಮೂರನೇ ಮಹಡಿ, ಇಂದಿರಾನಗರ ಕ್ಲಬ್, ಎಚ್‌ಎಎಲ್ ಮೂರನೇ ಹಂತ, ಮಧ್ಯಾಹ್ನ 3.30

ಲಿಂಗತ್ವ ಅಲ್ಪಸಂಖ್ಯಾತರ ಉತ್ಸವ 'ಒಂದೆಡೆ ರಂಗೋತ್ಸವ': ಮಧ್ಯಾಹ್ನ 12ಕ್ಕೆ ಉತ್ತರ ಕರ್ನಾಟಕ ಜೋಗಪ್ಪ ತಂಡದಿಂದ ಚೌಡಕಿ ಸ್ತುತಿ, ಮಧ್ಯಾಹ್ನ 1ಕ್ಕೆ ರೂಮಿ ಹರೀಶ್ ಅವರಿಂದ 'ಜರ್ನಿ ಎ ಟು ಇ' ಏಕವ್ಯಕ್ತಿ ಪ್ರದರ್ಶನ, ಮಧ್ಯಾಹ್ನ 2.30ಕ್ಕೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದಿಂದ 'ತಲ್ಕಿ' ನಾಟಕ ಪ್ರದರ್ಶನ, ಮಧ್ಯಾಹ್ನ 3.30ಕ್ಕೆ ಸಾಂಸ್ಕೃತಿಕ ಗಾಯನ, ಆಯೋಜನೆ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಪ್ರವಾಸೋದ್ಯಮ ಸಚಿವಾಲಯ, ಭಾರತೀಯ ಸಾಮಾಜಿಕ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿ, 'ಒಂದೆಡೆ' ಸಂಸ್ಥೆ, ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ವಸಂತನಗರ

ರೂಮಿ ಹರೀಶ್

ವಿಶೇಷ ಪ್ರವಚನ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಸಂಜೆ 4ರಿಂದ

26ನೇ ವಾರ್ಷಿಕೋತ್ಸವ ಸಂಭ್ರಮ, ಪುರಂದರದಾಸರು, ಕನಕದಾಸರು, ತ್ಯಾಗರಾಜರ ಆರಾಧನಾ ಮಹೋತ್ಸವ, 'ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ' ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ತಿಮ್ಮಣ್ಣ ರಾಮಕೃಷ್ಣ ಭಟ್ಟ ಬಾಲೀಗದ್ದೆ, ಅತಿಥಿಗಳು: ಆರ್. ವಸಂತಕುಮಾರ ಶಾಸ್ತ್ರಿ, ಶ್ರೀಧರ ಎನ್. ಭಟ್ಟ, ಅಧ್ಯಕ್ಷತೆ: ಆರ್.ಕೆ. ಪದ್ಮನಾಭ, 'ಶ್ರೀರಾಮ ಚರಿತ್ರೆ ದಶಾವತಾರ' ನೃತ್ಯ ವೈಭವ: ಮಮತಾ ಓಜಾ, ಮಾನಸಿ ಪ್ರಿಯದರ್ಶಿನಿ, ಧರಾಶ್ರೀ ಮಹಾರಾಣಾ, ಆಯೋಜನೆ: ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ದೇವಗಿರಿ ವೆಂಕಟೇಶ್ವರ ಟ್ರಸ್ಟ್, ದೇವಗಿರಿ ವೆಂಕಟೇಶ್ವರ ದೇವಸ್ಥಾನ, ದಿವಂಗತ ವೆಂಕೋಬಾಚಾರ್ಯ, ಸ್ಮೃತಿ ಮಂಟಪ, ಸಂಜೆ 5ರಿಂದ

ಗಿರೀಶ್ ಕಾಸರವಳ್ಳಿ ಅವರ ಚಲನ ಚಿತ್ರೋತ್ಸವ–2026: ಅತಿಥಿಗಳು: ಜಯಮಾಲಾ, ಎನ್. ಮನು ಚಕ್ರವರ್ತಿ, ಉಪಸ್ಥಿತಿ: ಗಿರೀಶ್ ಕಾಸರವಳ್ಳಿ, 'ತಾಯಿ ಸಾಹೇಬ' ಚಲನಚಿತ್ರ ಪ್ರದರ್ಶನ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಕೆ.ವಿ. ಸುಬ್ಬಣ್ಣ ಆಪ್ತ ರಂಗಮಂದಿರ, ಕುಮಾರಸ್ವಾಮಿ ಲೇಔಟ್, ಸಂಜೆ 5

ಜಯಮಾಲಾ

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಟಿ.ವಿ. ರಾಮಪ್ರಸಾದ್, ಪಿಟೀಲು: ಟಿ.ಕೆ.ವಿ. ರಾಮಾನುಜಾಚಾರ್ಯಲು, ಮೃದಂಗ: ಬಿ.ಸಿ. ಮಂಜುನಾಥ್, ಖಂಜೀರಾ: ವ್ಯಾಸ ವಿಠಲ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಹರಿನಾಮ ಸಂಕೀರ್ತನೆ: ರಮ್ಯಾ ಸುಧೀರ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಮುಖ್ಯರಸ್ತೆ, ಬಿಇಎಲ್ ಲೇಔಟ್, ಮೂರನೇ ಬ್ಲಾಕ್, ವಿದ್ಯಾರಣ್ಯಪುರ, ಸಂಜೆ 5.30

'ಪರಮ್ ವಿಹಾರ' ಸಂಗೀತ–ನೃತ್ಯದ ಸಾಂಸ್ಕೃತಿಕ ಸಂಜೆ: ಸುಗಮ ಸಂಗೀತ: ಸ್ಕಂದೇಶ್ ತಂಡ, ಕಥಕ್ ನೃತ್ಯ ಪ್ರದರ್ಶನ: ಸಾತ್ತ್ವತಿ ಸ್ಕೂಲ್‌ನ ವಿದ್ಯಾರ್ಥಿಗಳು, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಅಬಲಾಶ್ರಮ, ಬಸವನಗುಡಿ, ಸಂಜೆ 6ರಿಂದ

'ಗಿರಿಧಾರ' ಭರತನಾಟ್ಯ ಪ್ರದರ್ಶನ: ಆಯೋಜನೆ: ಸ್ವರವಿ ಆರ್ಟ್ಸ್ ಫೌಂಡೇಷನ್, ಸ್ಥಳ: ದಯಾನಂದಸಾಗರ್ ಆಡಿಟೋರಿಯಂ, ಸಂಜೆ 6

ಕಲಾ ರಂಗೋತ್ಸವ: ಸಾನ್ನಿಧ್ಯ: ಎಂ. ಅನಂತಮೂರ್ತಿ, ಉದ್ಘಾಟನೆ: ಮಹೇಂದ್ರ ಮುನ್ನೋತ್, ಅಧ್ಯಕ್ಷತೆ: ದತ್ತುಗುರು ಹೆಗಡೆ, ಆಯೋಜನೆ: ಕಲಾ ರಂಗಲೋಕ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಸಂಜೆ 6

ಹೊನ್ನಾರು ರಂಗೋತ್ಸವ: 'ಭಗವಂತನ ಮರಣ' ನಾಟಕ ಪ್ರದರ್ಶನ: ನಿರ್ದೇಶನ: ಸ್ಯಾಮ್‌ಕುಟ್ಟಿ ಪಟ್ಟಂಕರಿ, ರಂಗ ಗೌರವ ಸ್ವೀಕರಿಸುವವರು: ಜೆ.ಸಿ. ಶಶಿಧರ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ ಸಂಜೆ 6.30

'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ರಾಜೇಂದ್ರ ಕಾರಂತ, ನಿರ್ದೇಶನ: ಬಿ. ಅಶೋಕ್, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಉಡುಪ ಸಂಗೀತೋತ್ಸವ: ವೀಣಾ ವಾದನ: ವಿಶ್ವಮೋಹನ ಭಟ್, ಕೊಳಲು: ಶಶಾಂಕ್ ಸುಬ್ರಹ್ಮಣ್ಯ, ಗಾಯನ: ಹರೀಶ ಶಿವರಾಮ ಕೃಷ್ಣನ್, ಡ್ರಮ್ಸ್: ದರ್ಶನ್ ದೋಷಿ, ಬಾಸ್ ಗಿಟಾರ್: ಶೆಲ್ಟನ್ ಡಿಸಿಲ್ವಾ, ಪರ್ಕೂಶನ್ಸ್: ಮಂಜುನಾಥ ಸತ್ಯಶೀಲ್, ಕೀ–ಬೋರ್ಡ್: ರಾಹುಲ್ ವಾಡ್ವಾಣಿ, ತಬಲಾ: ಹಿಮಾಂಶು ಮಹಾಂತ, ಆಯೋಜನೆ: ಉಡುಪ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಮಲ್ಲೇಶ್ವರ, ಸಂಜೆ 7ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕಾಣದ ಕೈ: ಕಾಡುವ ಡ್ರಗ್ಸ್

ಎಐ ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ..

ಬನ್ನಿಮಂಟಪದ ವರ್ತುಲ ರಸ್ತೆಯ ಉನ್ನತಿ ನಗರದ ಗ್ಯಾರೇಜ್‌ನಲ್ಲಿ ತಂಡವೊಂದು ಗುಪ್ತವಾಗಿ ನಡೆಸುತ್ತಿದ್ದ ಎಂಡಿಎಂಎ ಘಟಕಕ್ಕೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ 10 ಕೆ.ಜಿ ಎಂಡಿಎಂಎ ಮತ್ತು ದ್ರವ-ರೂಪದಲ್ಲಿ ಸಂಸ್ಕರಣೆಯಾಗುತ್ತಿದ್ದ 50 ಕೆ.ಜಿಯಷ್ಟು ಎಂಡಿಎಂಎ ಮಾದಕ ವಸ್ತುವನ್ನು ವಶಕ್ಕೆ ಪಡೆದಿದ್ದರು. ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ‘ಟುಕ್- ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡಕ್ಷನ್ ಸಲ್ಯೂಷನ್ ಮ್ಯಾನಿಫ್ಯಾಕ್ಚರಿಂಗ್’ ಹೆಸರಿನ ಘಟಕದ ಮೇಲೆ ದೆಹಲಿಯ ಎನ್‌ಸಿಬಿ ತಂಡ ದಾಳಿ ನಡೆಸಿದಾಗ ಡ್ರಗ್ಸ್ ಉತ್ಪಾದಿಸುವ ಸುಸಜ್ಜಿತ ಪ್ರಯೋಗಾಲಯ ಪತ್ತೆಯಾಗಿದ್ದು, ಗಣಪತ್ ಲಾಲ್ ಎಂಬಾತ ಫಿನಾಯಿಲ್ ತಯಾರಿಕಾ ಘಟಕ ಸ್ಥಾಪಿಸಲು ಕಟ್ಟಡ ಬಾಡಿಗೆ ಪಡೆದಿದ್ದ ಆತನ ಸಂಬಂಧಿ ಮನೋಹರ್ ಬಿಷ್ಣೋಯಿ ಸೂರತ್‌ನಲ್ಲಿ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಎಂದು ತಂಡವು ತಿಳಿಸಿದೆ.

ಇದರ ಬೆನ್ನಲ್ಲೇ, ಮೈಸೂರು ಜಿಲ್ಲಾ ಪೊಲೀಸರು ಯಾಂದಳ್ಳಿಯಲ್ಲಿರುವ ಗಣಪತ್‌ಲಾಲ್ ಬಾಡಿಗೆಗೆ ಪಡೆದಿರುವ ಮನೆಗೆ ದಾಳಿ ನಡೆಸಿದ್ದು, ಅಲ್ಲಿ ಸಂಶಯಾಸ್ಪದ ರಾಸಾಯನಿಕ ದ್ರವ್ಯ ಪತ್ತೆಯಾಗಿದ್ದವು. ಈ ಮೂರು ಪ್ರಕರಣಗಳಲ್ಲೂ ಹೊರ-ರಾಜ್ಯದವರೇ ಆರೋಪಿಗಳಾಗಿದ್ದು, ಮೈಸೂರಿನಲ್ಲಿ ಡ್ರಗ್ಸ್ ಉತ್ಪಾದಿಸಿ ಹೊರರಾಜ್ಯದ ಮಾರುಕಟ್ಟೆಗೆ ಪೂರೈಸುವ ಕೆಲಸ ಮಾಡುತ್ತಿದ್ದರು. ಎಲ್ಲಾ ಪ್ರಕರಣಗಳನ್ನು ಪತ್ತೆ ಮಾಡಿದ್ದು ಹೊರ ರಾಜ್ಯದ ಪೊಲೀಸರು ಎನ್ನುವುದು ಗಮನಾರ್ಹ. ಇದು ಸ್ಥಳೀಯ ಪೊಲೀಸರ ಮೇಲೆ ಕಪ್ಪುಚುಕ್ಕೆ ಮೂಡಿಸಿದೆ.

‘ಡ್ರಗ್ಸ್ ಮಾರಾಟ ಮಾಡಲು ಆರೋಪಿಗಳಿಗೆ ರಾಜ್ಯದ ರಾಜಧಾನಿ ಬೆಂಗಳೂರೇ ಗುರಿಯಾಗಿದ್ದು, ಡ್ರಗ್ಸ್ ತಯಾರಿಸಲು ಮೈಸೂರೇ ಪ್ರಶಸ್ತ ಸ್ಥಳವೆಂದು ಕಂಡುಕೊಂಡು, ಯಾವ ತಪಾಸಣೆಯೂ ನಡೆಯದ ಮೈಸೂರು–ಬೆಂಗಳೂರು ಹೆದ್ದಾರಿಯೇ ಡ್ರಗ್ಸ್ ಸಾಗಿಸಲು ಅವರಿಗೆ ಸುಲಭ ಮಾರ್ಗವಾಗಿತ್ತು’ ಎಂಬುದು ತನಿಖೆಯ ವೇಳೆ ಗೊತ್ತಾಗಿತ್ತು. ಹೀಗಾಗಿ ಹೆಚ್ಚು ತಪಾಸಣೆ ನಡೆಯದ ಕೈಗಾರಿಕಾ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದರು.

‘ಈ ಎಲ್ಲಾ ಘಟಕಗಳು ನಗರದ ಕೇಂದ್ರ ಭಾಗದಿಂದ ಸರಾಸರಿ 15 ಕಿ.ಮೀ ದೂರದಲ್ಲಿದೆ. ಅಲ್ಲಿಂದ ವರ್ತುಲ ರಸ್ತೆಯ ಮೂಲಕ ಬೆಂಗಳೂರು ಸಂಪರ್ಕಿಸಲು ಅನುಕೂಲವಾಗು-ವಂತೆ ಘಟಕ ಸ್ಥಾಪಿಸಿಕೊಂಡಿದ್ದಾರೆ. ಜನವಸತಿಯು ಕಡಿಮೆ ಇರುವುದರಿಂದ ಜನರಿಗೂ ಸಂಶಯ ಬರುವುದಿಲ್ಲ. ವ್ಯವಹಾರ ಹೊರರಾಜ್ಯದಲ್ಲಿರುವುದರಿಂದ ಸ್ಥಳೀಯ ಪೊಲೀಸರಿಗೂ ಮಾಹಿತಿ ದೊರಕುತ್ತಿರಲಿಲ್ಲ’ ಎಂಬುದು ಪೊಲೀಸರ ಅಭಿಪ್ರಾಯ.

ಅಸಲಿಗೆ ಈ ವಿಚಾರಗಳೆಲ್ಲವೂ ಹೌದು. ಆದರೆ ಬೆಳೆಯುತ್ತಿರುವ ಮೈಸೂರು ನಗರಕ್ಕೆ ಪ್ರಥಮ ಬಾರಿ ಈ ರೀತಿಯ ಕಳಂಕ ಬಂದಿರುವುದರಲ್ಲಿ ಪೊಲೀಸರ ನಿರ್ಲಕ್ಷ್ಯವೂ ಇದೆ. ಘಟಕ ಪತ್ತೆಯಾದ ಬಳಿಕದ ಪೊಲೀಸರ ಗೊಂದಲಕಾರಿ ಹೇಳಿಕೆಗಳು ಮೈಸೂರಿನ ಜನರನ್ನು ಆತಂಕಕ್ಕೂ ದೂಡಿವೆ.

ಉನ್ನತಿ ನಗರದ ಘಟಕಕ್ಕೆ ದಾಳಿ ನಡೆಸಿದ ಮುಂಬೈ ಪೊಲೀಸರು ₹ 390 ಕೋಟಿ ಮೌಲ್ಯದ ಎಂಡಿಎಂಎ ಡ್ರಗ್ಸ್ ತಯಾರಿಕಾ ಘಟಕವನ್ನು ಪತ್ತೆ ಹಚ್ಚಲಾಗಿದೆ ಎಂದು ಹೇಳಿಕೆ ನೀಡಿದ್ದರು. ಆದರೆ ಮೈಸೂರು ನಗರ ಪೊಲೀಸ್ ಆಯುಕ್ತರು ಇದನ್ನು ಅಲ್ಲಗಳೆದಿದ್ದು, ದ್ರವ ರೂಪದ ವಸ್ತುಗಳಷ್ಟೇ ಸಿಕ್ಕಿತ್ತು ಎಂದಿದ್ದರು. ಈಚೆಗೆ ಎನ್‌ಸಿಬಿ ದಾಳಿ ನಡೆಸಿ, ಪ್ರಯೋಗಾಲಯ ಪತ್ತೆ ಹಚ್ಚಲಾಗಿದೆ ಎಂದು ಪತ್ರಿಕಾ ಪ್ರಕಟಣೆ ಹೊರಡಿಸಿತ್ತು. ಪೊಲೀಸ್ ಆಯುಕ್ತರು ಅದನ್ನೂ ನಿರಾಕರಿಸಿದ್ದು, ಗೃಹಸಚಿವರೂ ಅದೇ ನಿಲುವನ್ನು ಪುನರುಚ್ಚರಿಸಿದ್ದಾರೆ.

ಪ್ರಯೋಗಾಲಯವು ಪತ್ತೆಯಾಗಿಲ್ಲ ಎನ್ನುವುದೇ ನಿಜವಾದರೆ, ಅದನ್ನು ನಿರೂಪಿಸಿ, ಜನರಲ್ಲಿ ಮೂಡಿರುವ ಆತಂಕ ನಿವಾರಿಸುವ ಪ್ರಯತ್ನ ನಡೆಯಬೇಕಿತ್ತು. ಆದರೆ ಅದಾಗಿಲ್ಲ. ಮುಂಬೈ ಪೊಲೀಸರ ದಾಳಿಯ ನಂತರ ಮಾದಕ ವಸ್ತು ಮಾರಾಟ ಹಾಗೂ ಸೇವನೆ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ಕೈಗಾರಿಕೆಗಳಲ್ಲಿ ಪೂರ್ಣ ಪ್ರಮಾಣದ ಪರಿಶೀಲನೆ ನಡೆದಿರಲಿಲ್ಲ. ಎನ್‌ಸಿಬಿ ತಂಡದ ದಾಳಿಯ ಬಳಿಕ ಶ್ವಾನ ದಳದೊಂದಿಗೆ ಪರಿಶೀಲನೆ ನಡೆಸಲಾಗುತ್ತಿದೆ. ಸಿಸಿಬಿಯ ಅಧಿಕಾರಿ, ಸಿಬ್ಬಂದಿಗಳ ಅಮಾನತು ಮಾಡಲಾಗಿದೆ. ಈ ಎಲ್ಲಾ ಬೆಳವಣಿಗೆಗಳು ಪೊಲೀಸರ ಕಾರ್ಯಚಟುವಟಿಕೆಗಳ ಮೇಲೆ ಸಾರ್ವಜನಿಕರು ಸಂಶಯ ಪಡುವಂತೆ ಮಾಡುತ್ತಿದೆ.

‘ಎನ್‌ಸಿಬಿಯು ಪ್ರಕಟಣೆ ನೀಡುವ ಮೊದಲೇ, ನಗರ ಪೊಲೀಸ್ ಆಯುಕ್ತರು ಹೇಳಿಕೆ ನೀಡಿರುವುದು ಸಂಶಯಕ್ಕೆ ಕಾರಣವಾಗಿದೆ. ಪೊಲೀಸರೇ ಇಂತಹ ಪ್ರಕರಣಕ್ಕೆ ಬೆಂಬಲ ನೀಡಿ, ಸತ್ಯ ಮರೆಮಾಚುತ್ತಿದ್ದಾರೆಯೇ ಎಂಬ ಅನುಮಾನ ಮೂಡುತ್ತಿದೆ’ ಎಂದು ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸ್ಥಳೀಯ ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಹೇಳಿಕೆಯನ್ನೂ ಇದೇ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ವಿದ್ಯಾರ್ಥಿಗಳೇ ಗುರಿ: ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಮಾದಕ ವ್ಯಸನದ ಬೇರು ಹಬ್ಬಿದೆ. ಗಾಂಜಾ, ಸಿಂಥೆಟಿಕ್ ಡ್ರಗ್ಸ್‌ಗಳನ್ನು ಮಾರುವವರು ಕಾಲೇಜು ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡಿದ್ದಾರೆ.

‘ವೈದ್ಯಕೀಯ, ಅರೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಶ್ರೀಮಂತ ವಿದ್ಯಾರ್ಥಿಗಳಲ್ಲಷ್ಟೇ ಕಾಣಸಿಗುತ್ತಿದ್ದ ಎಂಡಿಎಂಎ ಮುಂತಾದ ಸಿಂಥೆಟಿಕ್ ಡ್ರಗ್ಸ್‌ಗಳು ಪದವಿ ವಿದ್ಯಾ-ರ್ಥಿಗಳಿಗೂ ಯಥೇಚ್ಛವಾಗಿ ಸಿಗುತ್ತಿವೆ. ಜಾಗೃತಿ ಮೂಡಿಸುವ ಪ್ರಯತ್ನವೂ ಯಶಸ್ಸು ನೀಡಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸುತ್ತವೆ.

ಶಿಕ್ಷಣ ಕಾಶಿ ಎಂದು ಹೆಸರಾಗಿದ್ದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು, ಈಚಿನ ವರ್ಷಗಳಲ್ಲಿ ಡ್ರಗ್ಸ್ ಹಾವಳಿಯ ಕಾರಣಕ್ಕೂ ಕುಖ್ಯಾತಿಯನ್ನೂ ಪಡೆಯುತ್ತಿವೆ. ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಮಾದಕ ಪದಾರ್ಥಗಳ ಹಾವಳಿ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. 2025ರಲ್ಲಿ ಒಟ್ಟು 5,632 ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿದ್ದು ಅವರಲ್ಲಿ 20 ವಿದ್ಯಾರ್ಥಿಗಳು ಮಾದಕ ಪದಾರ್ಥ ಸೇವಿಸಿದ್ದುದು ಪತ್ತೆಯಾಗಿತ್ತು.

‘ಬೆಳಗಾವಿ, ಹಾವೇರಿ, ವಿಜಯನಗರ, ಉತ್ತರ ಕನ್ನಡ ಜಿಲ್ಲೆಗಳಲ್ಲೂ ಕಾಲೇಜು ವಿದ್ಯಾರ್ಥಿಗಳು ಗಾಂಜಾ ಸೇವನೆ ಮಾಡುತ್ತಾರೆ’ ಎಂಬ ಮಾತು ಸಾರ್ವಜನಿಕವಾಗಿ ಕೇಳಿ ಬರುತ್ತಿದೆ. ಮೈಸೂರಿನಲ್ಲಿ ಹೊರ ಜಿಲ್ಲೆ, ರಾಜ್ಯದಿಂದ ಬಂದ ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ಒಳಗಾಗಿದ್ದು, ಪಿ.ಜಿ (ಪೇಯಿಂಗ್ ಗೆಸ್ಟ್), ಹಾಸ್ಟೆಲ್ ಪಾರ್ಟಿಗಳಲ್ಲಿ ಬಳಕೆಯಲ್ಲಿದೆ ಎಂದು ಮೂಲಗಳು ತಿಳಿಸಿವೆ. ಆದರೆ ಪೊಲೀಸರು ಪರಿಶೀಲಿಸಿದಾಗ ಡ್ರಗ್ಸ್ ಪತ್ತೆಯಾಗಿಲ್ಲ.

‘ವಿದ್ಯಾರ್ಥಿಗಳು ಡ್ರಗ್ಸ್ ಸೇವನೆಯಿಂದ ಮಾನಸಿಕ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಖಿನ್ನತೆ ಹೆಚ್ಚುತ್ತಿದೆ. ಹಣ ಇರುವವರೆಗೆ ಡ್ರಗ್ಸ್ ಕೊಂಡುಕೊಳ್ಳುತ್ತಾರೆ, ನಂತರ ಹಣಕ್ಕಾಗಿ ಅಪರಾಧ ಕೃತ್ಯಗಳಲ್ಲಿ ಭಾಗವಹಿಸುವ ಪ್ರಕರಣ ಹೆಚ್ಚಾಗಿ ಕಂಡು ಬರುತ್ತದೆ. ಬಾಲಾಪರಾಧಿ ನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆಯಡಿ ವಾರಕ್ಕೆ ಒಂದು ಪ್ರಕರಣ ಇರುತ್ತಿತ್ತು. ಆದರೆ ಈಚೆಗೆ ದಿನಕ್ಕೆ 3– 4 ಪ್ರಕರಣ ಬರುತ್ತಿವೆ’ ಎಂದು ಮೈಸೂರು ವೈದ್ಯಕೀಯ ವಿದ್ಯಾಲಯದ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಬಿ.ಎನ್.ರವೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಡ್ರಗ್ಸ್ ಸೇವಿಸಿ ಅಪರಾಧ ಕೃತ್ಯಗಳಲ್ಲಿ ಭಾಗವಹಿಸಿದ ಅನೇಕ ಘಟನೆಗಳು ರಾಜ್ಯದಲ್ಲಿ ವರದಿಯಾಗಿವೆ. ಮೈಸೂರಿನ ವಸ್ತು-ಪ್ರದರ್ಶನ ಮೈದಾನದ ಬಳಿ ಬಲೂನ್ ಮಾರಲು ಬಂದಿದ್ದ ಬಾಲಕಿಯನ್ನು ಅಪಹರಣ ಮಾಡಿ ಅತ್ಯಾಚಾರ ಮಾಡಿ, ಕೊಂದಿದ್ದ ಆರೋಪಿ ಮಾದಕ ವ್ಯಸನಿಯಾಗಿದ್ದ, ಕೊಲೆ ಪ್ರಕರಣದ ಆರೋಪಿಗಳು ಡ್ರಗ್ಸ್ ಸೇವಿಸುವ ಬೆಳವಣಿಗೆಗಳನ್ನು ಪೊಲೀಸರು ಗಮನಿಸಿದ್ದಾರೆ. ಹೀಗಾಗಿ ಮಾದಕ ವ್ಯಸನವು ಪರೋಕ್ಷವಾಗಿ ಕಾನೂನು ಮತ್ತು ಸುವ್ಯವಸ್ಥೆಗೂ ತೊಂದರೆ ನೀಡುತ್ತಿದೆ.

ಪ್ರವಾಸಿ ತಾಣಗಳಲ್ಲೇ ಹೆಚ್ಚು

ಡ್ರಗ್ ಪೆಡ್ಲರ್‌ಗಳು ಪ್ರವಾಸೋದ್ಯಮ ಹೆಚ್ಚಿರುವ ಜಿಲ್ಲೆಗಳನ್ನೂ ಗುರಿಯಾಗಿಸಿರುವುದು ಕೆಲವು ಪ್ರಕರಣಗಳಿಂದ ತಿಳಿದು ಬರುತ್ತದೆ. ಐಷಾರಾಮಿ ರೆಸಾರ್ಟ್, ಕಾಲೇಜು ಕ್ಯಾಂಪಸ್‌ಗಳು, ಡಾಬಾಗಳು, ಪಬ್‌ಗಳಲ್ಲಿ ಡ್ರಗ್ಸ್ ಬಳಕೆಯಾಗಿದೆ.

ಮೈಸೂರು ತಾಲ್ಲೂಕಿನ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನಲ್ಲಿ ನಡೆದ ರೇವ್ ಪಾರ್ಟಿ ಪ್ರಕರಣದಲ್ಲಿ ಯಥೇಚ್ಛವಾಗಿ ಡ್ರಗ್ಸ್ ಬಳಕೆಯಾಗಿತ್ತು. ಅಲ್ಲಿ ವಶಕ್ಕೆ ಪಡೆದ 64 ಮಂದಿಯಲ್ಲಿ ಬಹುತೇಕರು ಹೊರ ಜಿಲ್ಲೆ, ರಾಜ್ಯಗಳ ಪ್ರವಾಸಿಗರಾಗಿದ್ದರು. ಮೈಸೂರು, ಕೊಡಗಿನಲ್ಲೂ ಪ್ರವಾಸಿಗರಿಗಾಗಿ ಗಾಂಜಾ, ಡ್ರಗ್ಸ್ ಪೂರೈಸಲಾಗುತ್ತಿದೆ ಎನ್ನಲಾಗಿದೆ.

ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡ ಬೆಳಗಾವಿಯಲ್ಲಿ ಡ್ರಗ್ಸ್ ಸೇವನೆ ಹಾಗೂ ಸರಬರಾಜು ನಿರಂತರವಾಗಿದೆ. ಈ ಎರಡೂ ರಾಜ್ಯಗಳು ಪ್ರವಾ-ಸೋದ್ಯಮಕ್ಕೆ ಹೆಸರಾಗಿವೆ. ದೇಶದ ಬೇರೆ ಬೇರೆ ಭಾಗಗಳಿಂದ ಪ್ರವಾಸಿಗರ ನೆಪದಲ್ಲಿ ಬರುವ ಕೆಲವರು ಈ ಡ್ರಗ್ಸ್ ದಂಧೆ ನಡೆಸಿದ್ದಾರೆ. ಗೋವಾ ರಾಜ್ಯದಿಂದ ವ್ಯಾಪಕ ಪ್ರಮಾಣದಲ್ಲಿ ಕಾರವಾರ, ಗೋಕರ್ಣ, ದಾಂಡೇಲಿ ಭಾಗಕ್ಕೆ ಗಾಂಜಾ ಪೂರೈಕೆ ಆಗುತ್ತಿದೆ.

‘ಚರಸ್, ಕೊಕೇನ್, ಅಫೀಮ್‌ನಂಥ ಮಾದಕ ವಸ್ತುಗಳು ಗೋವಾಗೆ ರವಾನೆಯಾಗುತ್ತವೆ. ಗೋವಾದ ಬೀಚ್‌ಗಳಿಗೆ ಬರುವ ಪ್ರವಾಸಿಗರೇ ಗ್ರಾಹಕರು. ಹೀಗೆ ಅಂತರ ರಾಜ್ಯಗಳಿಗೆ ಸರಬರಾಜು ಮಾಡುವವರೇ ಬೆಳಗಾವಿಯಲ್ಲಿಯೂ ಏಜೆಂಟರ ಮೂಲಕ ವ್ಯಾಪಾರ ಮಾಡುತ್ತಾರೆ. ಹೀಗಾಗಿ, ಅದನ್ನು ಪತ್ತೆ ಮಾಡುವುದು ಸವಾಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಾಣಾಪುರ, ಆನೆಗೊಂದಿ, ಕೊಪ್ಪಳ ತಾಲ್ಲೂಕಿನ ಬಸಾಪುರ ಭಾಗದಲ್ಲಿ ನೂರಾರು ಐಷಾರಾಮಿ ರೆಸಾರ್ಟ್‌ಗಳಿದ್ದು, ಅಲ್ಲಿ ದೇಶದ ವಿವಿಧ ಸಿನಿಮಾ ತಾರೆಯರು ಬಂದು ಬಿಡಾರ ಹೂಡುತ್ತಾರೆ. ಅವರು ವ್ಯಾಪಕ ಗಾಂಜಾ ಬಳಕೆ ಮಾಡುತ್ತಾರೆ’ ಎನ್ನುವ ಆರೋಪಗಳಿವೆ.

ಇದಕ್ಕೆ ಪುಷ್ಟಿ ನೀಡುವಂತೆ ಕಳೆದ ವರ್ಷದ ಮೇನಲ್ಲಿ ಗಂಗಾವತಿ ಬಳಿ ಹೈಡ್ರೊ ಗಾಂಜಾ ಸಾಗಣೆಗೆ ಸಂಬಂಧಿಸಿ ಎಂಟು ಜನರನ್ನು ಕೊಪ್ಪಳ ಜಿಲ್ಲೆಯ ಪೊಲೀಸರು ಬಂಧಿಸಿದ್ದರು. ಅದನ್ನು ಥಾಯ್ಲೆಂಡ್‌ನಿಂದ ತರಿಸಿ ಹೈದರಾಬಾದ್ ಮಾರ್ಗದ ಮೂಲಕ ಗಂಗಾವತಿಗೆ ಸಾಗಿಸುತ್ತಿದ್ದ ಮಾಹಿತಿ ಬಹಿ-ರಂಗಗೊಂಡಿತ್ತು.

ಮಂಗಳೂರಿನ ಸಿಸಿಬಿ ಪೊಲೀಸರು 2025ರ ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದಲ್ಲಿ ಜಿಲ್ಲೆಯ ಪೆಡ್ಲರ್‌ಗಳಿಗೆ ಎಂಡಿಎಂಎ ಸಹಿತ ವಿವಿಧ ಸಿಂಥೆಟಿಕ್ ಡ್ರಗ್ ಪೂರೈಸುತ್ತಿದ್ದ ದಕ್ಷಿಣ ಆಫ್ರಿಕಾದ ಬಾಂಬಾ ಫಾಂಟಾ ಅಲಿಯಾಸ್ ಅಡ್ನೋಯಿಸ್ ಜಾಬುಲಿಲೆ (31) ಹಾಗೂ ಅಬಿಗೇಲ್ ಅಡ್ನೋಯಿಸ್ ಅಲಿಯಾಸ್ ಒಲಿಜೊ ಇಯಾನ್ಸ್ (30) ಎಂಬ ಇಬ್ಬರು ಮಹಿಳೆಯರನ್ನು ಬಂಧಿಸಿ, ₹75 ಕೋಟಿ ಮೌಲ್ಯದ 37.878 ಕೆ.ಜಿ ಎಂಡಿಎಂಎ ವಶಪಡಿಸಿಕೊಂಡಿದ್ದರು.

ಬೆಂಗಳೂರಿನ ಕೆ.ಆರ್ ಪುರ ಪೊಲೀಸರು ಕೊಕೇನ್ ಪೂರೈಸುತ್ತಿದ್ದ ನೈಜೀರಿಯಾದ ನದುದಿ ಎಂಬ ವಿದೇಶಿ ಪೆಡ್ಲರ್‌ನ್ನು ಬಂಧಿಸಿದ್ದರು. ಈ ರೀತಿಯ ಪ್ರಕರಣಗಳು ಮಾದಕ ವಸ್ತು ಮಾರಾಟಕ್ಕೆ ವಿದೇಶಿ ಜಾಲಗಳ ಸಂಪರ್ಕವಿರುವುದನ್ನು ಸ್ಪಷ್ಟಪಡಿಸಿವೆ. ಹೀಗಾಗಿ ವಿದ್ಯಾಭ್ಯಾಸ, ಉದ್ಯೋಗಕ್ಕೆ ಬರುವ ವಿದೇಶಿಗರ ಮೇಲೆ ಗಮನಹರಿಸುವ ಅನಿವಾರ್ಯತೆಯೂ ಇದೆ.

ಪುನರ್ವಸತಿಯ ಸಾಧ್ಯತೆ ಕಡಿಮೆ: ‘ಗಾಂಜಾ ಅಥವಾ ಸಿಂಥೆಟಿಕ್ ಡ್ರಗ್ಸ್ ವ್ಯಸನಕ್ಕೆ ಒಳಗಾದವರು, ಸ್ವಯಂ ಚಿಕಿತ್ಸೆ ಪಡೆಯಲು ಮುಂದೆ ಬರುತ್ತಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅಪರಾಧ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಪೊಲೀಸರ ಮೂಲಕ ಅಥವಾ ಕುಟುಂಬದವರು ಪುನರ್ವಸತಿ ಕೇಂದ್ರ ಸಂಪರ್ಕಿಸುತ್ತಾರೆ. ಹೀಗಾಗಿ ಸರ್ಕಾರದ ಮಟ್ಟದಲ್ಲಿ ಸುಸಜ್ಜಿತ ಪುನರ್ವಸತಿ ಕೇಂದ್ರ ತೆರೆಯುವ ಅಗತ್ಯವಿದೆ’ ಎಂಬುದು ಸಾಮಾಜಿಕ ಕಾರ್ಯಕರ್ತರ ಆಗ್ರಹ.

‘ಪ್ರಸ್ತುತ 100 ಮಾದಕ ವ್ಯಸನಿಗಳಲ್ಲಿ ಒಬ್ಬರಷ್ಟೇ ಪುನರ್ವಸತಿ ಕೇಂದ್ರಕ್ಕೆ ಸೇರಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸಾ ಶಿಬಿರಗಳನ್ನು ನಡೆಸಿ, ಅವರನ್ನು ಪುನರ್ವಸತಿಗೆ ಒಳಪಡಿಸುವ ಅನಿವಾರ್ಯತೆ ಇದೆ’ ಎನ್ನುತ್ತಾರೆ ಅವರು.

ಡ್ರಗ್ಸ್ ಮಾರಾಟ ಮತ್ತು ಸೇವನೆ ತಡೆಯುವುದು ಕೇವಲ ಗೃಹ ಇಲಾಖೆಯ ಕೆಲಸವಾಗಿ ಉಳಿದಿಲ್ಲ. ಅದಕ್ಕೆ ಸಾಂಘಿಕ ಪ್ರಯತ್ನ ಅಗತ್ಯ. ಡ್ರಗ್ಸ್ ಪ್ರಕರಣಗಳು ಸಾಮಾಜಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿವೆ. ಭವಿಷ್ಯದ ಕಣ್ಣುಗಳಾದ ಯುವ ಸಮೂಹವನ್ನು ದಿಕ್ಕು ತಪ್ಪಿಸುತ್ತಿವೆ. ಇದು ರಾಜ್ಯದ ಶಿಕ್ಷಣ ವ್ಯವಸ್ಥೆ, ಪ್ರವಾಸೋದ್ಯಮದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತಿದೆ. ಹೀಗಾಗಿ ಪೊಲೀಸರು ಗೊಂದಲದ ಹೇಳಿಕೆ ನೀಡುವ ಬದಲು ಜನರಿಗೆ ಸ್ಪಷ್ಟವಾದ ಮಾಹಿತಿ ತಿಳಿಸಬೇಕು ಮತ್ತು ಡ್ರಗ್ಸ್ ಜಾಲವನ್ನು ಬುಡಸಮೇತವಾಗಿ ಕಿತ್ತುಹಾಕುವ ಕೆಲಸ ಮಾಡಬೇಕು.

ಪರಿಕಲ್ಪನೆ: ಜಿ.ಡಿ. ಯತೀಶ್‌ಕುಮಾರ್
ಪೂರಕ ಮಾಹಿತಿ: ಪ್ರವೀಣ್ ಕುಮಾರ್ ಪಿ.ವಿ, ಸಂತೋಷ ಜಿಗಳಿಕೊಪ್ಪ, ಆದಿತ್ಯ ಕೆ.ಎ., ಬಸೀರ ಅಹ್ಮದ್ ನಗಾರಿ

ಮೈಸೂರಿನ ಸೂಕ್ಷ್ಮ ಪ್ರದೇಶಗಳಲ್ಲಿ ಮಾದಕ ವಸ್ತುವಿಗಾಗಿ ನಗರ ಪೊಲೀಸರ ಕಾರ್ಯಾಚರಣೆ

ಸಿಂಧನೂರಿನಲ್ಲಿ ಗಾಂಜಾ ಜಾತ್ರೆ!

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸೋಮಲಾಪುರ ಸಮೀಪದ ಧಾರ್ಮಿಕ ಕ್ಷೇತ್ರ ಅಂಬಾಮಠದ ಅಂಬಾದೇವಿ ಜಾತ್ರಾ ಮಹೋತ್ಸವ ಪ್ರತಿ ವರ್ಷ ಜನವರಿಯಲ್ಲಿ ನಡೆಯುತ್ತದೆ. ಇದು ಕೆಲವರ ಪಾಲಿಗೆ ‘ಗಾಂಜಾ ಜಾತ್ರೆ’ ಎಂದೇ ಕುಖ್ಯಾತಿ ಪಡೆದಿದೆ.

ಜಿಲ್ಲಾಡಳಿತವು ಭಕ್ತರಿಗೆ ಎಷ್ಟೇ ಎಚ್ಚರಿಕೆ, ತಿಳಿವಳಿಕೆ ನೀಡಿದರೂ ಗಾಂಜಾ ಸೇವನೆ ನಿಂತಿಲ್ಲ. ಕೆಲ ಭಕ್ತರೇ ಗಾಂಜಾ ತಂದು ಸಾಧುಗಳಿಗೆ ಕೊಟ್ಟು ಅವರನ್ನು ಖುಷಿಪಡಿಸುತ್ತಾರೆ. ಸಾಧುಗಳು ಬೆಟ್ಟದ ಇಳಿಜಾರಿನ ಕಲ್ಲುಬಂಡೆಗಳ ಮಧ್ಯೆ ಆಶ್ರಯ ಪಡೆದು ಗಾಂಜಾ ಸೇದಿ ವಿಭಿನ್ನ ಬಗೆಯಲ್ಲಿ ಸಂಭ್ರಮಿಸುವುದು ‘ಸಂಪ್ರದಾಯದ ಆಚರಣೆ’ ಹೆಸರಲ್ಲಿ ಮುಂದುವರಿದಿದೆ.

ಜಾತ್ರೆಯಲ್ಲಿ ಮಾದಕ ವಸ್ತುಗಳ ಸಾಗಣೆ, ಮಾರಾಟ ಹಾಗೂ ಸೇವನೆ ತಡೆಗೆ ಪೊಲೀಸರು ಚೆಕ್‌ಪೋಸ್ಟ್ ಸ್ಥಾಪಿಸುತ್ತಾರೆ. ಆದರೂ ‘ಗಾಂಜಾ ಘಾಟು’ ಮಾತ್ರ ಹರಡುತ್ತಲೇ ಇರುತ್ತದೆ. ಸಿಂಧನೂರು ತಾಲ್ಲೂಕಿನಲ್ಲಿ ಜನವರಿಯಲ್ಲೇ 37 ಗಾಂಜಾ ಪ್ರಕರಣಗಳು ದಾಖಲಾಗಿವೆ.

ಲಿಂಗಸುಗೂರು ತಾಲ್ಲೂಕಿನಲ್ಲಿ ನಿರ್ದಿಷ್ಟ ಸಮುದಾಯವೊಂದು ಗುಡ್ಡಗಾಡು ಹಾಗೂ ಹೊಲಗಳಲ್ಲಿ ತೊಗರಿಬೆಳೆಗಳ ಮಧ್ಯೆ ಗಾಂಜಾ ಬೆಳೆದು ಸಾಗಾಣೆ ಮಾಡಿದ ಹಲವು ಪ್ರಕರಣಗಳು ಹಿಂದೆ ಬೆಳಕಿಗೆ ಬಂದಿದ್ದವು. ಜಿಲ್ಲೆಯಲ್ಲಿ ಗಾಂಜಾ ಪೂರ್ಣಪ್ರಮಾಣ-ದಲ್ಲಿ ನಿಷೇಧ ಸಾಧ್ಯವಾಗಿಲ್ಲ.

ಪೊಲೀಸರಿಂದ ಹಲವು ಪ್ರಯತ್ನ..

- ದಕ್ಷಿಣ ಕನ್ನಡ ಜಿಲ್ಲಾಡಳಿತವು ಪೊಲೀಸ್ ಇಲಾಖೆ ಮುಂದಾಳತ್ವದಲ್ಲಿ ಪ್ರತಿ ಶಿಕ್ಷಣ ಸಂಸ್ಥೆಯಲ್ಲೂ ಮಾದಕ ವ್ಯಸನ ತಡೆ ಸಮಿತಿಗಳನ್ನು ರಚಿಸಿದೆ. ವಿದ್ಯಾರ್ಥಿ ಮಾದಕ ಪದಾರ್ಥ ಸೇವನೆ ಚಟ ಹೊಂದಿರುವ ಸಣ್ಣ ಸುಳಿವು ಸಿಕ್ಕರೂ ಆತ/ಆಕೆಯ ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಲಾ ಗುತ್ತಿದೆ. ಪೊಲೀಸರೂ ದಿಢೀರ್ ಭೇಟಿ ನೀಡಿ ರಕ್ತದ ಮಾದರಿ ಸಂಗ್ರಹಿಸುತ್ತಿದ್ದಾರೆ.
- ಗೆಳೆಯರು ವ್ಯಸನಿಗಳಾಗಿದ್ದರೆ ಸ್ಕ್ಯಾನರ್ ಕೋಡ್‌ಗಳ ಮೂಲಕ ಮಾಹಿತಿ ನೀಡುವಂತೆ ದಕ್ಷಿಣ ಕನ್ನಡ ಪೊಲೀಸರು ವ್ಯವಸ್ಥೆ ಮಾಡಿದ್ದಾರೆ. ವ್ಯಸನ ಮುಕ್ತರಾದವರಿಂದಲೇ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.
- ಉತ್ತರ ಕರ್ನಾಟಕ ಪೊಲೀಸರು ಪ್ರವಾಸಿ ತಾಣಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.
- ಮೈಸೂರು ನಗರ ಪೊಲೀಸರು ‘ವಿಮುಕ್ತಿ’ ಹೆಸರಿನಲ್ಲಿ ಕಾರ್ಯಕ್ರಮ ರೂಪಿಸಿದ್ದು, ಎಲ್ಲಾ ಶಾಲಾ– ಕಾಲೇಜುಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಪೊಲೀಸರಿಗೆ ಗುಪ್ತವಾಗಿ ಮಾಹಿತಿ ನೀಡಲು ವಾಟ್ಸ್‌ಆ್ಯಪ್ ಸಹಾಯವಾಣಿ ಆರಂಭಿಸಲಾಗಿದೆ.
- ಕಲಬುರಗಿ ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ‘ಡ್ರಗ್ ಸೆಲ್’ ಸ್ಥಾಪಿಸಲಾಗಿದೆ. ಮಾದಕ ವಸ್ತುಗಳ ಸಾಗಣೆ, ಸೇವನೆ ವೇಳೆ ಸಿಕ್ಕಿ ಬೀಳುವವರ ಮೇಲೆ ನಿರಂತರ ನಿಗಾ ವಹಿಸಲು ‘ಸನ್ಮಿತ್ರ’ ವ್ಯವಸ್ಥೆ ರೂಪಿಸಲಾಗಿದೆ. ಆರೋಪಿಗೆ ಒಬ್ಬರಂತೆ ಪೊಲೀಸರನ್ನು ನಿಯೋಜಿಸಲಾಗಿದ್ದು, ಅವರು ಆಗಾಗ ಆರೋಪಿಗಳ ಚಲನವಲನದ ಮೇಲೆ ಕಣ್ಣಿಡುತ್ತಿದ್ದಾರೆ.

ರಾಜ್ಯದಲ್ಲಿ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ (ಎಎನ್‌ಟಿಎಫ್) ರಚಿಸಲಾಗಿದೆ. ಮಾದಕ ವಸ್ತುಗಳ ಮಾರಾಟಗಾರರು, ಪೂರೈಕೆದಾರರ, ಸಿಂಥೆಟಿಕ್ ಡ್ರಗ್ಸ್ ಉತ್ಪಾದಕರ ವಿರುದ್ಧ ಕಾರ್ಯಾಚರಣೆ ಚುರುಕು ಮಾಡಲಾಗಿದೆ

ಎಂ.ಎ.ಸಲೀಂ, ರಾಜ್ಯ ಪೊಲೀಸ್ ಮಹಾನಿರ್ದೇಶಕ

ಬೇಗ ಕಿಕ್ ಸಿಗಬೇಕು ಎನ್ನುವ ಕಾರಣಕ್ಕೆ ಮಾದಕ ವ್ಯಸನಕ್ಕೆ ತುತ್ತಾಗಿರುವ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. 13– 19 ವರ್ಷದೊಳಗಿನವರು ಇದಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ. ಸಮಾಜದಲ್ಲಿ ಕೆಲವು ಘಾತಕ ಶಕ್ತಿಗಳು ಮಕ್ಕಳನ್ನು ಗುರಿಯಾಗಿಸಿ, ಲಾಭ ಪಡೆಯುವ ದುಷ್ಕೃತ್ಯ ನಡೆಸುತ್ತಿವೆ. ಡ್ರಗ್ಸ್ ಸೇವನೆಯಿಂದ ಮಕ್ಕಳ ಒಟ್ಟಾರೆ ಬೆಳವಣಿಗೆ ಮೇಲೆ ಮಾರಕ ಪರಿಣಾಮಗಳಾಗುತ್ತಿವೆ. ಕುಟುಂಬಗಳೂ ಸಂಕಟದಲ್ಲಿವೆ.

ಡಾ.ಬಿ.ಎನ್.ರವೀಶ್, ಮೈಸೂರು ವೈದ್ಯಕೀಯ ವಿದ್ಯಾಲಯದ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ

ಡ್ರಗ್ ಪೆಡ್ಲಿಂಗ್ ಹಿಂದಿನಿಂದಲೇ ಇತ್ತು. ಶ್ರೀಮಂತ ಮಕ್ಕಳು ಸಣ್ಣ ಪ್ರಮಾಣದಲ್ಲಿ ಬಳಸುತ್ತಿದ್ದರು. ಗಾಂಜಾ ಬಳಕೆ ಹೆಚ್ಚಿತ್ತು. ನಾರ್ಕೊಟಿಕ್ ಡ್ರಗ್ಸ್ ಉತ್ಪಾದನೆ ಮಾಡುವವರು ಪೊಲೀಸರಿಗೆ ಯಾವುದೇ ಲಿಂಕ್ ಸಿಗದಂತೆ ಗೌಪ್ಯವಾಗಿ ಕೆಲಸ ಮಾಡುವುದರಿಂದ ಪತ್ತೆ ಕಾರ್ಯ ಕಷ್ಟವಾಗುತ್ತಿ-ರಬಹುದು. ಕಾರ್ಖಾನೆಗಳಿಗೆ ಅನುಮತಿ ನೀಡುವಾಗಲೇ ಎಚ್ಚರಿಕೆ ವಹಿಸುವುದು ಸೂಕ್ತ.

ಜೆ.ಬಿ.ರಂಗಸ್ವಾಮಿ, ನಿವೃತ್ತ ಡಿವೈಎಸ್‌ಪಿ

ಎಲ್ಲಾ ಜಿಲ್ಲೆಗಳಲ್ಲಿ ಡ್ರಗ್ಸ್ ವ್ಯಸನಿಗಳ ಸುಸಜ್ಜಿತ ಪುನರ್ವಸತಿ ಕೇಂದ್ರ ತೆರೆಯಬೇಕು. ಅಲ್ಲಿ ವ್ಯಸನಿಗಳು ಯಾವ ಪ್ರಮಾಣದಲ್ಲಿ ವ್ಯಸನಕ್ಕೆ ತುತ್ತಾಗಿದ್ದಾರೆ ಹಾಗೂ ಯಾವ ಡ್ರಗ್ಸ್ ಸೇವಿಸಿದ್ದಾರೆ ಎಂಬುದನ್ನು ತಿಳಿಸುವ ಆಧುನಿಕ ಉಪಕರಣ ಅಳವಡಿಸಬೇಕು. ಕೆಲವೆಡೆ ವ್ಯಸನ ತಗ್ಗಿಸುವ ಪ್ರಯತ್ನವಷ್ಟೇ ಆಗುತ್ತಿದೆ. ಆದರೆ ಅದರಿಂದ ಬೇರ್ಪಡಿಸುವ ಕೆಲಸವಾಗಬೇಕಿದೆ. ಅದಕ್ಕಾಗಿ ತಜ್ಞ ಆಪ್ತಸಮಾಲೋಚಕರು, ವಿಶಾಲವಾದ ಸ್ಥಳದ ಅವಶ್ಯಕತೆಯಿದೆ. ಹೀಗಾಗಿ ಟ್ರಸ್ಟ್ ಮೂಲಕ ನಡೆಸುವುದು ಕಷ್ಟಸಾಧ್ಯ. ಸರ್ಕಾರವೇ ಪ್ರಯತ್ನಿಸಬೇಕು

ಎಂ.ಎಲ್.ಪರಶುರಾಮ್, ಒಡನಾಡಿ ಸಂಸ್ಥೆಯ ನಿರ್ದೇಶಕ

ನಮ್ಮ ಪುನರ್ವಸತಿ ಕೇಂದ್ರಗಳಲ್ಲಿ 20 ಜನ ಮಾದಕ ವ್ಯಸನಿಗಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ. 56 ಕಡೆ ಡ್ರಗ್ಸ್ ವ್ಯಸನಿಗಳ ಶಿಬಿರ ನಡೆಸಿ ಪ್ರಾರಂಭಿಕ ಹಂತದ ಚಿಕಿತ್ಸೆ ನೀಡಿದ್ದೇವೆ. ಸರ್ಕಾರವೂ ಈ ನಿಟ್ಟಿನಲ್ಲಿ ಯೋಚಿಸಬೇಕು. ಜಾಗೃತಿ ಮೂಡಿಸುವುದರಿಂದ ಪರಿಣಾಮ ಬೀರುವುದಿಲ್ಲ. ಪರ್ಯಾಯ ಕ್ರಮಗಳ ಬಗ್ಗೆ ಚಿಂತಿಸಬೇಕು.

ಎಸ್.ಬಸವರಾಜು, ಸಂಸ್ಥಾಪಕರು ಬಸವಮಾರ್ಗ ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರ, ಹೆಬ್ಬಾಳ, ಮೈಸೂರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 22-2-2001

- **ದೇವೇಗೌಡರ ಪತ್ನಿ, ಸೊಸೆ ಮೇಲೆ ಆ್ಯಸಿಡ್**

ಹಾಸನ, ಫೆ.21– ದೇವಾಲಯದಲ್ಲಿ ಪೂಜೆ ಸಲ್ಲಿಸಲು ಆಗಮಿಸಿದ್ದ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ಪತ್ನಿ ಚನ್ನಮ್ಮ ಮತ್ತು ಅವರ ಸೊಸೆ ಭವಾನಿ ರೇವಣ್ಣ ಅವರ ಮೇಲೆ ಆ್ಯಸಿಡ್ ಎರಚಿ ಹತ್ಯೆ ಮಾಡಲು ಯತ್ನಿಸಿರುವ ಘಟನೆ ಇಂದು ರಾತ್ರಿ 8 ಗಂಟೆಯಲ್ಲಿ ನಡೆಯಿತು.

ದೇವೇಗೌಡರ ಸೋದರ ಬಸವೇಗೌಡರ ಪುತ್ರ ಲೋಕೇಶ್ ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಆ್ಯಸಿಡ್ ಎರಚುವಾಗಲೇ ಆರೋಪಿ ಲೋಕೇಶ್‌ನನ್ನು ಸ್ಥಳದಲ್ಲಿದ್ದ ಪೊಲೀಸರು ಬಂಧಿಸಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 22-2-1951

- **38ನೇ ಅಕ್ಷಾಂಶ ದಾಟುವ ಬಗ್ಗೆ ಮುಂಜಾಗ್ರತೆ**

ಟೋಕಿಯೋ, ಫೆ.20– ‘28ನೇ ಅಕ್ಷಾಂಶವನ್ನು ಪುನಃ ದಾಟದಿರಲು ಸೂಕ್ತ ರಾಜಕೀಯ ಕಾರಣಗಳನ್ನು ಕೊಡುವುದಾದರೆ ತಾವು ಅಧಿಕಾರವನ್ನು ಸ್ವೇಚ್ಛೆಯಿಂದ ಚಲಾಯಿಸುವುದಿಲ್ಲ’ ಎಂದು ವಿಶ್ವಸಂಸ್ಥೆಯ ಮಹಾದಂಡನಾಯಕ ಇಂದು ತಿಳಿಸಿದರು.

ಕೇಂದ್ರ ಕೊರಿಯಾದ ವೊಂಜು ರಂಗಕ್ಕೆ ಭೇಟಿಯಿತ್ತಾಗ ಕಳೆದ ವಾರ ಚೀಣೀಯರ ಪ್ರತಿದಾಳಿಯಿಂದ ಚೀಣೀಯರಿಗೆ ತೀವ್ರ ನಷ್ಟವುಂಟಾಗಿದೆಯೆಂದು ಮೆಕಾರ್ಥರ್ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

22 ಫೆಬ್ರವರಿ 2026 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪಂಚಮಿ ಗಂ. 11-10, **ನಕ್ಷತ್ರ:** ಅಶ್ವಿನಿ ಗಂ. 17-55, **ಯೋಗ:** ಶುಕ್ಲ (ಶುಕ್ರ) ಗಂ. 13-09, **ಕರಣ:** ಬಾಲವ ಗಂ. 11-10 ಕುಂಭ ಮಾಸದ 10 ನೇ ದಿನ. **ಮಳೆ ನಕ್ಷತ್ರ:** ಶತಭಿಷ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00, **ಸೂರ್ಯೋದಯ:** 06-54 **ಸೂರ್ಯಾಸ್ತ:** 06-34, **ಮುಸ್ಲಿಂ ದಿನಾಂಕ:** 4 ರಂಜಾನ್, **ಅದೃಷ್ಟ ಸಂಖ್ಯೆ:** 9, 12

ಮೇಷ: ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂತಹ ಸಮಾರಂಭಗಳ ಆಲಿಕೆಯು ಕಾರಣವಾಗುವುದು. ಕಣ್ಣಿನ ವಿಷಯದಲ್ಲಿ ನಿರ್ಲಕ್ಷ್ಯ ತೋರುವುದು ಅನಾಹುತಕ್ಕೆ ಕಾರಣವಾಗುವುದು.

ವೃಷಭ: ಉದ್ಯಮಿಗಳು, ವಿದ್ಯಾರ್ಥಿಗಳು ಪ್ರಗತಿ ಸಾಧಿಸುವರು. ಕಲಾವಿದರಿಗೆ ಹಾಗೂ ನಟ ನಟಿಯರಿಗೆ ಉತ್ತಮ ಅವಕಾಶಗಳು ಒದಗಿಬರುವುವು. ಮಕ್ಕಳ ತುಂಟತನದ ಬಗ್ಗೆ ಗಮನವಿರಲಿ.

ಮಿಥುನ: ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ಮಹಿಳೆಯರಿಗೆ ಕಚೇರಿಯ ಒತ್ತಡದಲ್ಲಿ ಮನೆಯ ಮುಖ್ಯ ಕೆಲಸಗಳತ್ತ ಗಮನ ಕಡಿಮೆಯಾಗುವುದು.

ಕರ್ಕಾಟಕ: ವೃತ್ತಿರಂಗದಲ್ಲಿ ಸಂದರ್ಭಕ್ಕೆ ಸರಿಯಾಗಿ ವರ್ತಿಸುವುದರಿಂದ ಲಾಭವಾಗುವುದು. ಆದರೆ, ಈ ದಿನದ ನಿಮ್ಮ ವರ್ತನೆಯನ್ನು ನಾಳೆಗೆ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ನೇರ ನುಡಿ ಗೆಳೆತನಕ್ಕೆ ಸಂಕಷ್ಟವಾಗಬಹುದು.

ಸಿಂಹ: ವ್ಯವಹಾರದಲ್ಲಿ ನಿಮ್ಮಿಂದ ಮೋಸ ನಡೆದು ಹಣ ಸಂಗ್ರಹವಾಗುವುದು ಮತ್ತು ಅದರ ದುಷ್ಫಲವನ್ನು ಅನುಭವಿಸುವಂತಾಗುವುದು. ಮಡದಿಯ ಸಲಹೆಗಳಿಗೆ ಗಮನ ನೀಡಿ ಸ್ವಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗ್ಗಿ.

ಕನ್ಯಾ: ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಚಾರದಲ್ಲಿ ಎಂದಿಗೂ ಮರೆಯಲಾಗದ ಒಂದು ಕಹಿ ಘಟನೆ ನಡೆಯಬಹುದು. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಹೆಚ್ಚಿನ ಅವಕಾಶ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ತುಲಾ: ನೆರೆಹೊರೆಯವರೊಂದಿಗೆ ಮತ್ತು ಸಹೋದರಿಯವರೊಂದಿಗೆ ಸೌಹಾರ್ದದಿಂದ ವರ್ತಿಸಿ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ ಕೂಡಿ ಬರುವುದು. ಖರ್ಚು ವೆಚ್ಚಗಳು ಈ ದಿನ ತಗ್ಗುವುವು.

ವೃಶ್ಚಿಕ: ಮಿತ್ರರ ಚಾಣಾಕ್ಷತನ, ಮಾತುಗಾರಿಕೆಯನ್ನು ನೋಡಿ ಕಲಿಯುವುದರಿಂದ ವ್ಯಾಪಾರದಲ್ಲಿ ಪ್ರಗತಿ ಇರುವುದು. ಗೃಹ ಕೃತ್ಯದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಿರಿ. ವ್ಯಾಸಂಗಕ್ಕಾಗಿ ಹಣದ ವ್ಯವಸ್ಥೆ ಆಗುವುದು.

ಧನು: ನಿಮ್ಮ ಮಾತು, ಸಕಾಲದ ಆರ್ಥಿಕ ನೆರವು ಸೋದರಿಯ ಸಂಸಾರ ನೆಲೆ ನಿಲ್ಲುವುದಕ್ಕೆ ಕಾರಣವಾಗಲಿದ್ದು, ಅದರಿಂದ ನಿಮ್ಮ ಜವಾಬ್ದಾರಿ ಪೂರೈಸಿದ ತೃಪ್ತಿ ಈ ದಿನ ದೊರೆಯಲಿದೆ. ಸಾಲದ ಹಣ ಹಿಂತಿರುಗಿಸುವಲ್ಲಿ ಗಮನವಿರಲಿ.

ಮಕರ: ವೃತ್ತಿಗಿಂತ ಪ್ರವೃತ್ತಿಗೆ ಸಮಯ ಕೊಡುವುದು ಹೆಚ್ಚಲಿದೆ. ಉದ್ಯಮಿಗಳಿಗೆ ವಿದೇಶ ವ್ಯವಹಾರಗಳಿಂದ ಹೆಚ್ಚಿನ ಲಾಭ ಪ್ರಾಪ್ತಿಯಾಗುವುದು. ನಿಮ್ಮ ಸುತ್ತಲಿನ ವಾತಾವರಣ ಸಂತಸದಾಯಕವಾಗಿ ಇರುತ್ತದೆ.

ಕುಂಭ: ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ಬರಲಿವೆ. ಕಾರ್ಖಾನೆಯ ವಿದ್ಯುತ್ ಲೋಪಗಳನ್ನು ಸರಿಪಡಿಸಲು ಅಧಿಕ ವೆಚ್ಚವಾಗುವುದು. ಹಿರಿಯರ ಆಸ್ತಿ ನಿಮ್ಮ ಪಾಲಿಗೆ ಬರಲಿದೆ.

ಮೀನ: ಕೆಲವು ಮಾನಸಿಕ ತೊಂದರೆಗಳು ಎದುರಾಗಬಹುದು. ಆದರೆ, ದೊಡ್ಡ ಸಮಸ್ಯೆ ಉಂಟಾಗುವ ಪರಿಸ್ಥಿತಿ ಕಂಡುಬರುವುದಿಲ್ಲ. ಹಾಲಿನ ಡೇರಿ ಪದಾರ್ಥಗಳ ವ್ಯಾಪಾರಸ್ಥರಿಗೆ ಹೆಚ್ಚಿನ ಉತ್ಪಾದನೆ ಹಾಗೂ ಲಾಭ ತರುವುದು.

ಪದಬಂಧ 6323

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರವನ್ನೂ ಕೊಚ್ಚಿಕೊಂಡು ಹೋದ ದೊಡ್ಡ ಪ್ರವಾಹ (4)
3.ಈತ ಅನುಭವವುಳ್ಳವನು (4)
5.ಕರದಲ್ಲಿ ಕಾಣಿಸಿದ ದೇವರು (3)
6.ಭ್ರೂಣವನ್ನು ಆವರಿಸಿರುವ ಪೊರೆ (3)
8.ಸಂಗನ ಬದುಕಿನಲ್ಲಾದ ಘಟನೆ (3)
10.ಶ್ರದ್ಧೆಗೊಂದು ಪರ್ಯಾಯ ಪದ (3)
11.ಕಾಗೆ ಇಲ್ಲಿಗೆ ಹಾರಿ ಬಂದಿದೆ (3)
13.ಅಳುವಿನೊಂದಿಗೆ ಹೆದರಿಕೆ ಬಂದಿದೆಯಲ್ಲಾ (3)
15.ಪೂರ್ವದ ಸ್ಥಿತಿಯಿದು (4)
16.ಯುದ್ಧದ ನಗಾರಿಯಿದು (4)

ಮೇಲಿಂದ ಕೆಳಕ್ಕೆ

1.ಮಜವಾಗಿ ಆಳ್ವಿಕೆ ನಡೆಸಿದ ಚಕ್ರವರ್ತಿ (4)
2.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
3.ಸುರನ ಹತ್ತಿರ ಬಂದಿರುವ ರಾಕ್ಷಸ (3)
4.ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ! (4)
7.ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9.ದಾಯಾದಿ ಮಾಡಿರುವ ಪಾವತಿ (3)
10.ಖರ್ಚು ಮತ್ತು ವೆಚ್ಚ (4)
12.ಒಳ್ಳೆಯ ಆಚಾರವುಳ್ಳವನು (4)
13.ದೇವತೆಗಳ ಜನನಿ (3)
14.ಅಷ್ಟ ದಿಕ್ಪಾಲಕರಲ್ಲಿ ಈತ ಅತೀ ಶ್ರೀಮಂತ (3)



6322ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಅನುಭಾವ 5.ವಲೀಮುಖ 7.ಅವಿರತ 9.ಅಂತರ್ದೇಶಿಯ 12.ಬಳಲಿಕೆ 13.ರಸಹೀನ 15.ರಿಕ್ತಹಸ್ತ 16.ಅಪಘಾತ

ಮೇಲಿಂದ ಕೆಳಕ್ಕೆ:
1.ಗೊತ್ತುವಳಿ 2.ಗುದಾಮು 4ವರಾತ 6.ಖಚಿತ 8.ವಿಜಯ 9.ಅಂಗುಲಿ 10.ಶೀಕರ 11.ಜನಹಿತ 12.ಬತೇರಿ 14.ಸಲ್ಲಾಪ

ಸುಡೊಕು 6707

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		6			8	5		1
			2	1			7	
1		2			5	3		8
6		9				8		
			5	4	6			
3		5				2		7
		4				1		
			1	5				9
9		1			2	7		

6706 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿ.ಎಂ ಕುರ್ಚಿಗಾಗಿ ಜಾತಿ ಅಸ್ತ್ರ

ಸಿದ್ದರಾಮಯ್ಯ ಹೇಳಿಕೆ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಎಚ್‌ಡಿಕೆ ಹೇಳಿದ್ದು
- ಕಾಂಗ್ರೆಸ್‌ನ ಹಿರಿಯರನ್ನೇ ಮೂಲೆಗುಂಪು ಮಾಡಿದ್ದ ಸಿದ್ದರಾಮಯ್ಯ
- 'ಅಹಿಂದ' ಉದ್ಧಾರಕ್ಕಾಗಿ ಮುಖ್ಯಮಂತ್ರಿಯಾಗಿಲ್ಲ
- ಅವರು ಮುಖ್ಯಮಂತ್ರಿ ಆಗಲು ಕುರುಬರಷ್ಟೇ ಕಾರಣ ಅಲ್ಲ

ಬೆಂಗಳೂರು: ರಾಜಕೀಯವಾಗಿ ಅತಂತ್ರವಾದಾಗ ಆಶ್ರಯ ನೀಡಿದ್ದ ಕಾಂಗ್ರೆಸ್ ಹಿರಿಯರನ್ನೇ ಮೂಲೆಗುಂಪು ಮಾಡಿ ಪಕ್ಷದ ಮೇಲೆ ಹಿಡಿತ ಸಾಧಿಸಿದ್ದ ಸಿದ್ದರಾಮಯ್ಯ, ಈಗ ಮುಖ್ಯಮಂತ್ರಿ ಕುರ್ಚಿ ಬಿಡುವುದಿಲ್ಲ ಎನ್ನುವುದನ್ನು ಹೇಳಲು ಜಾತಿಯ ಅಸ್ತ್ರ ಬಳಸಿರುವುದು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಕುರಿ ಕಾಯುತ್ತಿದ್ದವನು ಮುಖ್ಯಮಂತ್ರಿ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ. ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆ-ಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ' ಎಂಬ ಬರಹವನ್ನು ಸಿದ್ದರಾಮಯ್ಯ ಅವರು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಕುರಿತು ಅವರು ಪ್ರತಿಕ್ರಿಯಿಸಿದರು.

ಕುಮಾರಸ್ವಾಮಿ

'ಸಿದ್ದರಾಮಯ್ಯ ಅವರು ಸಮಾಜಕ್ಕಾಗಿ ಅಥವಾ ಅವರೇ ಹೇಳುವ 'ಅಹಿಂದ' ಉದ್ಧಾರಕ್ಕಾಗಿ ಮುಖ್ಯಮಂತ್ರಿಯಾಗಿಲ್ಲ. ಅವರಿಗೆ ಬೇಕಿರುವುದು ಕುರ್ಚಿ ಅಷ್ಟೆ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಬರಲು ಕುರುಬರಷ್ಟೇ ಕಾರಣ ಅಲ್ಲ, ಇತರ ಜಾತಿಗಳ ಸಹಕಾರವೂ ಇದೆ. ಒಂದೇ ಜಾತಿ ಹೆಸರಿನಲ್ಲಿ ರಾಜಕೀಯ ಮಾಡಲು ಆಗದು. ಈಗಾಗಲೇ ಎಂಟು ವರ್ಷ ಮುಖ್ಯಮಂತ್ರಿ ಆಗಿದ್ದಾರೆ. ದಾಖಲೆಯ ಬಜೆಟ್ ಮಂಡಿಸಿದ್ದಾರೆ. ಈಗ ಅಧಿಕಾರಕ್ಕೆ ಅಂಟಿಕೊಳ್ಳಲು ತಮ್ಮ ಜಾತಿ ಬಳಸಿಕೊಳ್ಳುತ್ತಿದ್ದಾರೆ' ಎಂದು ದೂರಿದರು.

'ಮುಖ್ಯಮಂತ್ರಿ ಸ್ಥಾನದಿಂದ ತಮ್ಮನ್ನು ಕೆಳಗೆ ಇಳಿಸಲು ಹೊರಟಿರುವವರ ಕುರಿತು ಸಿದ್ದರಾಮಯ್ಯ ಅವರು ಅಂತಹ ಪೋಸ್ಟ್ ಮಾಡಿರಬಹುದು' ಎಂದು ಅವರು ಪ್ರತಿಕ್ರಿಯಿಸಿದರು.

'ಪಕ್ಷದಲ್ಲಿ ಯಾರೂ ಸಿ.ಎಂ ವಿರುದ್ಧ ಇಲ್ಲ'

ಪ್ರಿಯಾಂಕ್

ಬೆಂಗಳೂರು: 'ಕಾಂಗ್ರೆಸ್‌ನಲ್ಲಿ ಯಾರೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಇಲ್ಲ. ನಮ್ಮ ಪಕ್ಷದ ಎಲ್ಲರೂ ಅವರ ಜೊತೆಗೆ ಇದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು 'ಎಕ್ಸ್' ಪೋಸ್ಟ್ ಏಕೆ ಮಾಡಿದ್ದಾರೆಂದು ಗೊತ್ತಿಲ್ಲ. ಕುರಿ ಕಾಯುವವರನ್ನು ಮುಖ್ಯಮಂತ್ರಿ ಆಗುವುದನ್ನು ಸಹಿಸಿಕೊಳ್ಳಲು ಆಗುವುದಿಲ್ಲ ಎಂದರೆ, ಅವರು ದಾಖಲೆಯ ಬಜೆಟ್ ಮಂಡನೆ ಮಾಡಲು ಸಾಧ್ಯವೇ? ಮುಖ್ಯಮಂತ್ರಿಯಾಗಿ ಅವರು ದೇವರಾಜ ಅರಸು ಅವರ ದಾಖಲೆ ಮುರಿದಿದ್ದಾರೆ. ಒಳ್ಳೆಯ ಆಡಳಿತ ನೀಡುತ್ತಿದ್ದಾರೆ' ಎಂದರು.

'ತಮ್ಮ ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯನವರ ಹಲವು ಭಾಗ್ಯಗಳನ್ನು ನೀಡಿದ್ದರು. ಇದೀಗ ಐದು ಗ್ಯಾರಂಟಿ ಯೋಜನೆಗಳನ್ನು ನೀಡಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರ್ಥಿಕ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಿದ್ದಾರೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬದ್ಧತೆಗೆ ಎದುರಾಳಿಗಳು ಯಾರೆಂದರೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು. ಅವರೇ ಬಹಿರಂಗವಾಗಿ ಇದನ್ನು ಹೇಳಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್ ತತ್ವ ಪಾಲಿಸಿಕೊಂಡು ಬಂದವರು ಸಿದ್ದರಾಮಯ್ಯನವರು. ಆ ವಿಚಾರಕ್ಕೆ ವಿರೋಧ ಮಾಡಿದವರೇ ಬಿಜೆಪಿ, ಆರ್‌ಎಸ್‌ಎಸ್‌ನವರು' ಎಂದು ಟೀಕಿಸಿದರು.

ಸಫಾರಿಗೆ ಷರತ್ತುಬದ್ಧ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಸಫಾರಿ ಮತ್ತೆ ಆರಂಭಿಸಲು ಷರತ್ತುಬದ್ಧ ಅನುಮತಿ ನೀಡಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಮಾನವ-ವನ್ಯಜೀವಿ ಸಂಘರ್ಷದ ಕಾರಣದಿಂದಾಗಿ 2025ರ ನ.7ರಿಂದ ಸಫಾರಿ ಸ್ಥಗಿತಗೊಳಿಸಲಾಗಿತ್ತು. ಪರಿಸರ ಪ್ರವಾಸೋದ್ಯಮದ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ನಿರ್ಣಯಿಸಲು ಸಮಿತಿ ರಚಿಸಿ, ಹಂತ ಹಂತವಾಗಿ ಪ್ರವಾಸೋದ್ಯಮ ಚಟುವಟಿಕೆ ಆರಂಭಿಸಲು ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಜ.2ರಂದು ಸೂಚನೆ ನೀಡಲಾಗಿತ್ತು. ಸಮಿತಿಯು ಮಧ್ಯಂತರ ವರದಿ ನೀಡಿದೆ. ಈ ವರದಿಯಲ್ಲಿ ಮಾಡಲಾದ ಶಿಫಾರಸಿನಂತೆ ಕ್ರಮ ಕೈಗೊಳ್ಳಲು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದರು.

ಅದರಂತೆ ಷರತ್ತು ಬದ್ಧ ಅನುಮತಿ ನೀಡಿ ಶನಿವಾರ ಆದೇಶ ಹೊರಡಿಸಲಾಗಿದೆ.

ಮೂರು ವಲಯಗಳಲ್ಲಿ ಒಂದು ದಿನದಲ್ಲಿ ಇಂತಿಷ್ಟೇ ಭೇಟಿಗೆ ಅವಕಾಶ ನೀಡಿ ಮಿತಿ ಹೇರಲಾಗಿದೆ.

ಬಂಡೀಪುರ ಪರಿಸರ ಪ್ರವಾಸೋದ್ಯಮ ವಲಯದಲ್ಲಿ ಅರಣ್ಯ ಇಲಾಖೆಗೆ 19 ಹಾಗೂ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್‌ಗೆ (ಜೆಎಲ್‌ಆರ್) 12 ಒಟ್ಟು 31 ಬಾರಿ ಭೇಟಿ ನೀಡಲು ಅವಕಾಶ ನೀಡಲಾಗಿದೆ. ಪ್ರತಿ ಭೇಟಿಯ ಅವಧಿ ಎರಡೂವರೆ ಗಂಟೆ ನಿಗದಿಪಡಿಸಲಾಗಿದೆ. ಬೆಳಿಗ್ಗೆ 6.30ರಿಂದ 9 ಹಾಗೂ ಮಧ್ಯಾಹ್ನ 3.30ರಿಂದ 6ರವರೆಗೆ ಸಫಾರಿಗೆ ಅವಕಾಶ ಇರಲಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸುಂಕದಕಟ್ಟೆ ಪರಿಸರ ಪ್ರವಾಸೋದ್ಯಮ ವಲಯದಲ್ಲಿ ಅರಣ್ಯ ಇಲಾಖೆಗೆ 13 ಹಾಗೂ ಜೆಎಲ್‌ಆರ್‌ಗೆ 23 ಒಟ್ಟು 36 ಬಾರಿ ಭೇಟಿ ನೀಡಲು ಅವಕಾಶ ನೀಡಲಾಗಿದೆ. ಪ್ರತಿ ಭೇಟಿಯ ಅವಧಿ ಮೂರು ಗಂಟೆ ನಿಗದಿಪಡಿಸಲಾಗಿದೆ. ಬೆಳಿಗ್ಗೆ 6.30ರಿಂದ 9.30 ಹಾಗೂ ಮಧ್ಯಾಹ್ನ 3ರಿಂದ 6ರವರೆಗೆ ಸಫಾರಿಗೆ ಅವಕಾಶ ಇರಲಿದೆ.

ನಾಗರಹೊಳೆ ಪರಿಸರ ಪ್ರವಾಸೋದ್ಯಮ ವಲಯದಲ್ಲಿ ಅರಣ್ಯ ಇಲಾಖೆಗೆ 6 ಹಾಗೂ ಜೆಎಲ್‌ಆರ್‌ಗೆ 8 ಒಟ್ಟು 14 ಬಾರಿ ಭೇಟಿ ನೀಡಲು ಅವಕಾಶ ನೀಡಲಾಗಿದೆ. ಪ್ರತಿ ಭೇಟಿಯ ಅವಧಿ ಎರಡು ಗಂಟೆ ನಿಗದಿಪಡಿಸಲಾಗಿದೆ. ಬೆಳಿಗ್ಗೆ 7ರಿಂದ 9 ಹಾಗೂ ಮಧ್ಯಾಹ್ನ 3ರಿಂದ 5ರವರೆಗೆ ಸಫಾರಿಗೆ ಅವಕಾಶ ಇರಲಿದೆ.

ಕರ್ನಾಟಕ ಗೃಹ ಮಂಡಳಿ

3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009, ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–10/ಬೇ.ಸ.ಪ್ರ/2025–26 ದಿನಾಂಕ : 20–02–2026

ತಿದ್ದುಪಡಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಕೊತ್ತತ್ತಿ–1 ಹೋಬಳಿ, ಎಲೆಚಾಕನಹಳ್ಳಿ ಗ್ರಾಮದ ಸರ್ವೆ ನಂಬರ್ 62,63/1,63/2,63/3ಎ,64/1,64/2,64/3,64/4ಸಿ,64/5,64/7,64/8,69/1,69/2,69/3,69/5 ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ:20–02–2026 ರಂದು ಪ್ರಜಾವಾಣಿ, ಕನ್ನಡ ಪ್ರಭ ಮತ್ತು ಮೈಸೂರು ಮಿತ್ರ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಸದರಿ ಪ್ರಕಟಣೆಯಲ್ಲಿ ಮನೆಯ ತಾತ್ಕಾಲಿಕ ಬೆಲೆ (ಪ್ರತಿ ಚ. ಅ ಗೆ) ಎಂದು ನಮೂದಿಸಲಾಗಿರುತ್ತದೆ. ಸದರಿ ಪ್ರಕಟಣೆಯಲ್ಲಿ "ಮನೆಯ ತಾತ್ಕಾಲಿಕ ಬೆಲೆ (ಪ್ರತಿ ಚ. ಅ ಗೆ)" ಎಂಬುವ ಬದಲು "ಮನೆಯ ತಾತ್ಕಾಲಿಕ ಬೆಲೆ (ಪ್ರತಿ ಮನೆಗೆ)" ಎಂದು ಓದಿಕೊಳ್ಳತಕ್ಕದ್ದು. ಉಳಿದಂತೆ ದಿನಾಂಕ:20–02–2026 ರಂದು ಪ್ರಕಟಿಸಿರುವ ಸಾರ್ವಜನಿಕ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/5812/Zen/2025-26

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ

ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು - 560 042. ದೂರವಾಣಿ : 080-25365053.
ಇ-ಮೇಲ್ : kvmegbangalore@gmail.com, ವೆಬ್‌ಸೈಟ್ : megcentre.kvs.ac.in

2026–27 ನೇ ಸಾಲಿಗೆ ಸಂಸ್ಥೆಯ ನೋಂದಣಿ

ಉಕ್ತ ಅಧಿವೇಶನದಲ್ಲಿ ಅಗತ್ಯತೆ ಆಧಾರದ ಮೇಲೆ ಕೆಳಕಂಡ ಕೆಲಸಗಳು / ಸೇವೆಗಳಿಗಾಗಿ ನಿಗದಿತ ನಮೂನೆಯಲ್ಲಿ ದಾಖಲೆಗಳನ್ನು ಸಲ್ಲಿಸುವ ಮೂಲಕ ಸಂಸ್ಥೆಗಳ ನೋಂದಣಿಯನ್ನು ಆಹ್ವಾನಿಸಲಾಗುತ್ತದೆ. ನಾಗರಿಕ ಕೆಲಸಗಳು (ಪ್ಲಂಬಿಂಗ್, ಮರಕಮ್ಮಟ / ಕಾರ್ಪೆಂಟ್ರಿ, ಬಣ್ಣ ಹಚ್ಚುವ ಕೆಲಸ, ವಿದ್ಯುತ್ ಕೆಲಸ, ನೆಲಹಾಸು ಹಾಗೂ ಮೇಸನ್ರಿ), ಕುಡಿಯುವ ನೀರಿನ ಸರಬರಾಜು, ಕಸದ ಸಂಗ್ರಹಣೆ ಮತ್ತು ವಿಲೇವಾರಿ, ಕ್ಯಾಟರಿಂಗ್ ಕೆಲಸ, ಬಸ್ / ಸಾರಿಗೆ ಸೌಲಭ್ಯ, ಟೆಂಟ್, ಬೆಳಕು ವ್ಯವಸ್ಥೆ ಹಾಗೂ ಜನರೇಟರ್ ಸೇವೆಗಳು ಇತ್ಯಾದಿ. ಆಸಕ್ತ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಗಳನ್ನು **ದಿನಾಂಕ : 28.02.2026 ರಂದು ಮಧ್ಯಾಹ್ನ 04.00 ಗಂಟೆಯೊಳಗೆ** ಸ್ಪೀಡ್ ಪೋಸ್ಟ್ ಮೂಲಕ ಅಥವಾ ಸ್ವಯಂವಾಗಿ ವಿದ್ಯಾಲಯದ ಕಚೇರಿಗೆ ಸಲ್ಲಿಸಬೇಕು. ಸಂಸ್ಥೆ ನೋಂದಣಿ ಅರ್ಜಿ ನಮೂನೆಯನ್ನು ವಿದ್ಯಾಲಯದ **ವೆಬ್‌ಸೈಟ್ : megcentre.kvs.ac.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ವಿದ್ಯಾಲಯ ಕಚೇರಿಯಿಂದ ಬೆಳಿಗ್ಗೆ 09.00 ಗಂಟೆಯಿಂದ ಮಧ್ಯಾಹ್ನ 04.00 ಗಂಟೆಯವರೆಗೆ ಪಡೆದುಕೊಳ್ಳಬಹುದು.

ಸಹಿ/- ಪ್ರಾಂಶುಪಾಲರು

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ

ದೂರವಾಣಿ ನಂ.: 08419–261273 Email: dcfyellapur@gmail.com
ಎ3/Etender/KFDF/01/2025–26/2053 ದಿನಾಂಕ: 21–02–2026

ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಲೆಕ್ಕಶೀರ್ಷಿಕೆ: **KFDF** ಯೋಜನೆ ಅಡಿ ಅತಿಕ್ರಮಣ ತೆರವು ಪ್ರದೇಶ, ಬೆತ್ತ ಹಾಗೂ ಕಟಾವು ಮಾಡಿದ ನೆಡುತೋಪಿನಲ್ಲಿ ಪುನ: ನೆಡುತೋಪು ಬೆಳೆಸಲು ನರ್ಸರಿಯಲ್ಲಿ ಸಸಿ ಬೆಳೆಸಿ ಮುಂಗಡ ಕಾಮಗಾರಿ ಕೈಗೊಳ್ಳಲು ಯಲ್ಲಾಪುರ ವಿಭಾಗದಲ್ಲಿ ಇ–ಟೆಂಡರ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಕೆಡಬ್ಲ್ಯೂ–2 ದ್ವಿ ಲಕೋಟೆ ಪದ್ಧತಿ) ಕರೆಯಲಾಗಿದೆ. ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ರೂ: 253.00 ಲಕ್ಷ ಅನುದಾನದ ಕಾಮಗಾರಿಗಳಿಗೆ ದಿನಾಂಕ: 27–02–2026 & 02–03–2026 ರಂದು ಕೊನೆಯ ದಿನಾಂಕ ನಿಗದಿಪಡಿಸಿ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಯಲ್ಲಾಪುರ ವಿಭಾಗ, ಯಲ್ಲಾಪುರ ರವರನ್ನು ಕಚೇರಿ ವೇಳೆಯಲ್ಲಿ ದೂರವಾಣಿ (08419–261273) ಅಥವಾ ಈ ಮೇಲ್ ಮೂಲಕ (dcfyellapur@gmail.com) ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಯಲ್ಲಾಪುರ ಉಪವಿಭಾಗ, ಯಲ್ಲಾಪುರ

DIPR/KWR/KSMCA/1137/25-26 Dt.21.02.2026

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"

ಸಂಖ್ಯೆ:ಜಿನಕೊಬ/ತಾಂತ್ರಿಕ/ಮುಅನ/ಹಂತ–4/ಕಟ್ಟಡ/02/2025–26
ದಿನಾಂಕ: 20.02.2026

ಟೆಂಡರ್ ಪ್ರಕಟಣೆ

ಬಳ್ಳಾರಿ ಜಿಲ್ಲೆಯ ಮಾನ್ಯ ಮುಖ್ಯ ಮಂತ್ರಿಗಳ ಅಮೃತ್ ನಗರೋತ್ಥಾನ (ಮುನ್ಸಿಪಾಲಿಟಿ) ಹಂತ 04 ರ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ ಕಾಯ್ದೆ ಹಾಗೂ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜುಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ.

01.ಪ್ಯಾಕೇಜ್ ಕಾಮಗಾರಿ ವಿವರ: Development of Maratha samaja Burial ground and Lakshmipura survey no 70 Burial ground in sandur TMC Limits DMA/2023-24/OW/WORK_INDENT16023/CALL-6 **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ): 61.63. **ಟೆಂಡರ್‌ಗಿಟ್ಟ ಮೊತ್ತ** (ರೂ.ಲಕ್ಷಗಳಲ್ಲಿ): 52.18. **EMD (Rs):** 1,04,500.00

02.ಪ್ಯಾಕೇಜ್ ಕಾಮಗಾರಿ ವಿವರ: Providing and installation of Highmast light at ward no-5 and 6,Construction Community Toilet in ward no-6 and Construction of Modern library (H.M. Kumaraswamy Layout)for the Handicapped at Kurugodu Town. DMA/2024-25/BD/WORK_INDENT16560/CALL-6. **ಅಂದಾಜು ಮೊತ್ತ** (ರೂ.ಲಕ್ಷಗಳಲ್ಲಿ): 38.36. **ಟೆಂಡರ್‌ಗಿಟ್ಟ ಮೊತ್ತ** (ರೂ.ಲಕ್ಷಗಳಲ್ಲಿ): 32.49. **EMD (Rs):** 65,000.00

Last date & time for tender queries / clarifications: **26.02.2026 at 11.00 Hrs.** Last date and time for receipt of tender technical bids: **02.03.2026 at 16.30 Hrs.** Date & time for opening of (technical bids): **03.03.2026 at 17.00 hrs.** Auto extension of tender schedule: **02 days**

ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಕೆ.ಪಿ.ಪಿ. ಪೋರ್ಟಲ್ ನಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: **https://kppp.karnataka.gov.in/** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು ಹೆಚ್ಚಿನ ವಿವರಗಳಿಗೆ ದೂ ಸಂ : 7760848568, 7892198334 ಗಳಿಗೆ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1036/ಕೆಎಸ್‌ಎಂಸಿಎ/2025–26

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ತಿಪಟೂರು

ದಿನಾಂಕ:18.02.2026

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ತಿಪಟೂರು ಇಲ್ಲಿಗೆ 2026–27 ನೇ ಸಾಲಿನ ಅವಧಿಗೆ ಕೆಳಕಾಣಿಸಿದ ಅನುಸಾರ ಟೆಂಡರ್‌ಗಳನ್ನು ಇ–ಪ್ರಕ್ಯೂರ್ ಮೆಂಟ್ ಮೂಲಕ ದ್ವಿಲಕೋಟೆಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
1) ನಾನ್ ಕ್ಲಿನಿಕಲ್ ಗ್ರೂಪ್ ಡಿ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು, 2) ಪಥ್ಯಾಹಾರ, 3) ನಮೂನೆಗಳ ಮುದ್ರಣ, 4) ಔಷಧಿ ಮತ್ತು ರಸಾಯನಿಕಗಳನ್ನು 5) ರಸಾಯನಿಕಗಳು
* ಟೆಂಡರ್ ಫಾರಂನ್ನು ವಿತರಿಸುವ ದಿನಾಂಕ: 20/02/2026 ರಿಂದ 07/03/2026 ರವರೆಗೆ.
* ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 07/03/2026 ರಂದು ಸಂಜೆ 5 ಘಂಟೆಗೆ
* ದಿನಾಂಕ: 07/03/2026 ರಂದು ಬೆಳಿಗ್ಗೆ 11 ಘಂಟೆಗೆ ದಾಖಲಾತಿ ಲಕೋಟೆಯನ್ನು ತೆರೆಯಲಾಗುವುದು.
* ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಪೊ.ನಂ– 8310823104, 8867269601ವೆಬ್‌ಸೈಟ್ ಸಂಖ್ಯೆ : https://www.eproc.karnataka.gov.in
* ಟೆಂಡರ್ ಅಪ್‌ಲೋಡ್ ಮಾಡುವಾಗ ದಿನಾಂಕಗಳು ಬದಲಿಯಾದಲ್ಲಿ ವೆಬ್‌ಸೈಟ್: https://www.eproc.karnataka.gov.in ನಲ್ಲಿ ನಮೂದಿಸಿರುವ ದಿನಾಂಕಗಳಿಗೆ ಬದ್ದರಾಗಿರತಕ್ಕದ್ದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ತಿಪಟೂರು

DIPR/TUM/459/KSMCA/2025-26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195–250307 E.Mail I.D.: ubpee06@gmail.com

ಸಂಖ್ಯೆ:ವಿಜನಿನಿ/ಭಮೇಯೋ/ಕಾಇಂ/ವಿ–6/ಚ/ಕೊಟೇಶನ್–ಪ್ರಕಟಣೆ/2025–26 1249/ ದಿನಾಂಕ:20.02.2026

ಕೊಟೇಶನ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟರಿ ರೋಡ್, ಬೆಂಗಳೂರು–560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿಯಡಿ ಬರುವ ಕಾಮಗಾರಿಗೆ ಸಂಬಂಧಿಸಿದಂತೆ Informative quotations are invited for the works "Consultancy Services for Preparation of Detailed Project Report (DPR) and estimates including Survey, detailed investigation, preparation of designs, drawings for modernization of Ranikere feeder canal network (Canal Re section, Lining & Canal Structures, including Bridges, Aqueduct, Under Tunnels, Super passages etc) including flow measurements, preparing detailed plans and designs and DTP for the work ಗೆ ಸಂಬಂಧಿಸಿದಂತೆ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಮುಚ್ಚಿದ ಲಕೋಟೆಯಲ್ಲಿ ಕೊಟೇಶನ್‌ನ್ನು ದಿನಾಂಕ: 19.02.2026 ರಿಂದ 05.03.2026 ರ ಸಂಜೆ 4.00 ಗಂಟೆಯವರೆಗೆ ಈ ಕೆಳಗೆ ಸಹಿ ಮಾಡಿರುವ ವಿಭಾಗ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ವಿವರವಾದ ಕೊಟೇಶನ್‌ನ್ನು ನಿಗಮ ವೆಬ್‌ಸೈಟ್‌ನಲ್ಲಿ www.vjnl.in ಪ್ರಕಟಿಸಿದ್ದು, ಅಲ್ಲಿಂದ ಅಥವಾ ಕಚೇರಿ ಸಮಯದಲ್ಲಿ ಈ ಕಚೇರಿಯಿಂದ ವಿವರವನ್ನು ಪಡೆಯಬಹುದಾಗಿರುತ್ತದೆ. ಸದರಿ ಪ್ರಕಟಣೆಯನ್ನು ಪ್ರಕಟಿಸಿದ ಅಧಿಕಾರಿಯು ಯಾವುದೇ ಕಾರಣ ನೀಡದೆ ಸದರಿ ಅಧಿಸೂಚನೆಯನ್ನು ಮಾರ್ಪಡಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

DIPR/CTA/KSMCA/691/2025-26

ಸಹಿ/ ಕಾರ್ಯಪಾಲಕ ಅಭಿಯಂತರರು,
ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.
ಸಂಖ್ಯೆ:ದಾವಿಃಅಬಿ768/2025–26/5017 ದಿನಾಂಕಃ 18.02.2026

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ.
Tender Name:- Tender for Supply Installation, Testing & Commissioning of Computers and other equipments/Furniture for P.G Department of Mathematics.
Tender No: DU/2025-26/IND0035,
ಇವುಗಳನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ಇ–Portal Tender ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 05.03.2026 ಹೆಚ್ಚಿನ ಮಾಹಿತಿಗಾಗಿ website:-www.kppp.karnataka.gov.in ಹಾಗೂ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, – ದಾವಣಗೆರೆ ದೂ.ಸಂ:08192–208029 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ವಾಸಾಇ/ದಾವಣಗೆರೆ/769/ಕೆಎಸ್‌ಎಂಸಿಎ/2025–26

ಸಹಿ/– ಕುಲಸಚಿವರು, ದಾವಣಗೆರೆ
ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 59/2025–26 ದಿನಾಂಕಃ 20.02.2026

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ದಕ್ಷಿಣ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ.192.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 09.03.2026 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 10.03.2026 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/5808/Zen/2025-26

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.

(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ ಮಂಡ್ಯ–571402
ಸಂಖ್ಯೆ: ಎಂ.ಎಸ್.ಕೋ/ಎಮ್.ಎಮ್/ 128/2025–26
ದಿನಾಂಕ: 21–02–2026

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಈ ಕೆಳಕಂಡ ಕೆಲಸ/ ಸಾಮಾಗ್ರಿ/ಮಾನವ ಸಂಪನ್ಮೂಲ ಒದಗಿಸಲು, ಕಂಟಾಕ್ಟರ್/ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಮರು ಇ– ಟೆಂಡರ್ ಆಹ್ವಾನಿಸಲಾಗಿದೆ.
ಮರು ಟೆಂಡರ್ ಸಂಖ್ಯೆ : MSCO/2025-26/SE0012/call-3

ಕ್ರಮ ಸಂಖ್ಯೆ : 01. ಸಾಮಾಗ್ರಿಗಳ ವಿವರ : 5000 ಟಿಸಿಡಿ ಸಾಮರ್ಥ್ಯದ ಸಕ್ಕರೆ ಘಟಕ ಮತ್ತು 30 ಮೆ.ವ್ಯಾ. ಸಹ ವಿದ್ಯುತ್ ಘಟಕಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಿ 2026–27 ಹಾಗೂ 2027–28 ನೇ ಹಂಗಾಮಿನ ದುರಸ್ಥಿ ನಿರ್ವಹಣೆ ಮತ್ತು ಚಾಲನೆ ಹಾಗೂ ನಿರ್ವಹಣೆ ಮಾಡಲು (Turn Key Job). ಪರಿಮಾಣ : 01 ಕೆಲಸ. ಇ.ಎಂ.ಡಿ ಹಣ : ರೂ. 15,00,000.00.

ಇ–ಪ್ರಕ್ಯೂರ್‌ಮೆಂಟ್ ಮರು ಟೆಂಡರನ್ನು www.kppp.karnataka.gov.in ಮುಖಾಂತರ ತುಂಬುವುದು. (1) ಟೆಂಡರನ್ನು ತುಂಬಲು ಕೊನೆಯ ದಿನಾಂಕ: 02.03.2026 ಸಂಜೆ: 05–30 ರ ವರೆಗೆ (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 04.03.2026. (3) ವಾಣಿಜ್ಯ ಬಿಡ್ ತೆರೆಯುವ ದಿನಾಂಕ: 05.03.2026.

ಟೆಂಡರನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸೆಲ್ 080–25501216/ 25501227 ಅಥವಾ 9964390489 ರವರನ್ನು ಸಂಪರ್ಕಿಸುವುದು.

ಸಹಿ/–ಪ್ರಧಾನ ವ್ಯವಸ್ಥಾಪಕರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/816/2025–26

ಪೊಲೀಸ್ ಇಲಾಖೆ

ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿ.ಐ.ಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಕಾರ್ಲ್‌ಟನ್ ಭವನ, ಅರಮನೆ ರಸ್ತೆ, ಬೆಂಗಳೂರು–560 001,

ಸಂಖ್ಯೆ: 02/ಸಂಗ್ರಹ–1/ಎಂಡಿಎನ್/ಸಿಸಿಡಿ/ಸಿಐಡಿ/2025–26 ದಿನಾಂಕ: 21/02/2026

ಇ–ಖರೀದಿ ನೋಟೀಸ್

ಸಿಐಡಿ ಕಛೇರಿಗೆ ಅವಶ್ಯವಿರುವ ಕೆಳಕಂಡ ಸಾಫ್ಟ್‌ವೇರ್/ಪರಿಕರಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (www.eproc.karnataka.gov.in) ಮೊದಲನೇ ಬಾರಿಗೆ ಕರೆಯಲಾಗಿರುವ 15 ದಿನಗಳ ಅಲ್ಪಾವಧಿ ಇ–ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಟೆಂಡರ್‌ಗೆ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

Sl. No.	Name of the Item/ Component	Qty	Approximate Cost in Rs.	Last date for bid submission
	15 days short term E-Tender			
1	DVR Data Extraction / Tool (License for 03 Years)	01 No.	₹ 35,00,000.00	04.03.2026 at 17-00 Hours
2	Crypto Currency Investigation Tool (License for 03 Years)	01 No.	₹ 34,00,000.00	
3	Forensic Workstations (License for 03 Years)	02 No's	₹ 52,00,000.00	

ಮೇಲಿನ ಸಾಫ್ಟ್‌ವೇರ್/ಪರಿಕರಗಳನ್ನು ಸರಬರಾಜು ಮಾಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿಯ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸಲಾಗುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 080–46010000, 080–68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಫ್ಲಾಟ್‌ಫಾರಂನಲ್ಲಿ ನೋಂದಾಯಿಸಿ ಕೊಳ್ಳುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ ಸಂಖ್ಯೆ 080–46010000, 080–68948777 ಗಳಿಗೆ ಸಂಪರ್ಕಿಸತಕ್ಕದ್ದು.

ಪೊಲೀಸ್ ಮಹಾ ನಿರ್ದೇಶಕರು
ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು ರವರ ಪರವಾಗಿ

ವಾ.ಸಾ.ಸಂ.ಇ/ವಾಪ್ರ/5804/ಆಕಾರ್/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:2025–26/3373
ದಿನಾಂಕ:20.02.2026 ದೂ:08232–224195
ಇ–ಮೇಲ್:eepredmandya@gmail.com

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:53/2025–26

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ಮಂಡ್ಯರವರಿಂದ 2025–26ನೇ ಸಾಲಿನ ಮಳವಳ್ಳಿ ವಿಧಾನ ಸಭಾಕ್ಷೇತ್ರಕ್ಕೆ ಸಂಬಂಧಿಸಿದಂತೆ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಒಟ್ಟು 04 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು https://kppp.karnataka.gov.in, KPP Portal ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:02.03.2026ರ ಸಂಜೆ 4.00ಗಂಟೆವರೆಗೆ ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ,

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/810/2025–26

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

Karnataka One State, Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಪೋರೇಟ್ ಕಛೇರಿ, 5ನೇ ಮಹಡಿ, ಇಂಧನ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009. ದೂ: 080–42775575
ಫ್ಯಾಕ್ಸ್: 080–42775589 ವೆಬ್‌ಸೈಟ್: www.kstdc.co
ಸಂಖ್ಯೆ: ಕೆಎಸ್‌ಟಿಡಿಸಿ/ಆರ್ ಓ ಎಂ ಟಿ/01/2025–26 ದಿನಾಂಕ: 21.02.2026

ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಕೆಎಸ್‌ಟಿಡಿಸಿ) ಕರ್ನಾಟಕದಾದ್ಯಂತ ಪ್ರವಾಸೋದ್ಯಮ ಸ್ವತ್ತುಗಳನ್ನು ನಿರ್ವಹಿಸಲು ಮತ್ತು ಕಾರ್ಯಾಚರಣೆಗೊಳಿಸಲು ಅನುಭವಿ ವೃತ್ತಿಪರ ನಿರ್ವಾಹಕರೊಂದಿಗೆ ಪಾಲುದಾರಿಕೆ ಹೊಂದಲು ಮತ್ತು ಅದರ ಸ್ವತ್ತುಗಳ ಮೇಲೆ ಪ್ರವಾಸೋದ್ಯಮ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರಸ್ತಾಪಿಸಲು ಹೂಡಿಕೆದಾರರು, ಉದ್ಯಮಿಗಳು ಮತ್ತು ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ) ಯನ್ನು ಆಹ್ವಾನಿಸಿದೆ.

ಗುರುತಿಸಲಾದ ಆಸ್ತಿಗಳ ವಿವರ: 1. ಹೆದ್ದಾರಿ ಸೌಲಭ್ಯ ಹುಮನಾಬಾದ್, ಬೀದರ್. **2.** ಹೆದ್ದಾರಿ ಸೌಲಭ್ಯ ಸಸ್ತಾಪುರ, ಬಸವಕಲ್ಯಾಣ, ಬೀದರ್. **3.** ಹೆದ್ದಾರಿ ಸೌಲಭ್ಯ ಕೂಡ್ಲಗಿ, ಬಳ್ಳಾರಿ. **4.** ಹೋಟೆಲ್ ಮಯೂರ ಅಪೂರ್ವ, ಮುಳಬಾಗಿಲು, ಕೋಲಾರ. **5.** ಅದಿಲ್ ಶಾಹಿ ಅನೆಕ್ಸ್, ವಿಜಯಪುರ. **6.** ಮಾರಘಟ್ಟ, ಚಿತ್ರದುರ್ಗ.

ಇಓಐ ಪ್ರಕಟಣೆ ದಿನಾಂಕ: **21.02.2026. ಟೆಂಡರ್ ದಿನಾಂಕಗಳ ವಿವರ:** (1) ಅರ್ಜಿ ಪೂರ್ವ ಸಮ್ಮೇಳನ: **25.02.2026 ರಂದು ಮಧ್ಯಾಹ್ನ 12.00 ಗಂಟೆಗೆ** ಮೇಲ್ಕಂಡ ಕಚೇರಿ ವಿಳಾಸದಲ್ಲಿ (2) ಇ–ಮೇಲ್ ಮೂಲಕ ವಿಚಾರಣೆಗಳು/ಸ್ಪಷ್ಟನೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: ಸ್ಪಷ್ಟನೆಗಳಿಗಾಗಿ ಕೋರಿಕೆಯನ್ನು **26.02.2026ರಂದು ಮಧ್ಯಾಹ್ನ 12.00 ಗಂಟೆಯವರೆಗೆ** ಸಲ್ಲಿಸಬಹುದು. ಇ–ಮೇಲ್: **legal@kstdc.co** (3) ಪ್ರಸ್ತಾವನೆಗಳನ್ನು ಸಲ್ಲಿಸುವ ಕಡೆಯ ದಿನಾಂಕ: ಪ್ರಸ್ತಾವನೆಗಳನ್ನು **23.03.2026 ರಂದು ಮಧ್ಯಾಹ್ನ 3.00 ಗಂಟೆ ವರೆಗೆ** ಸಲ್ಲಿಸಬಹುದು. ಯಾವುದೇ ಬದಲಾವಣೆಗಳಿದ್ದಲ್ಲಿ ಅದನ್ನು ಕೆಎಸ್‌ಟಿಡಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳು, ಅರ್ಹತಾ ಅಗತ್ಯತೆ ಮತ್ತು ಸಲ್ಲಿಕೆಯ ಮಾರ್ಗಸೂಚಿಗಳಿಗಾಗಿ ದಯವಿಟ್ಟು ಕೆಎಸ್‌ಟಿಡಿಸಿ ವೆಬ್‌ಸೈಟ್‌ಗೆ ಅಥವಾ ಕೆಲಸದ ಸಮಯದಲ್ಲಿ ಕಛೇರಿಗೆ ಭೇಟಿ ನೀಡಿ. ಸಂಪರ್ಕಿಸಿ: ಪ್ರಧಾನ ವ್ಯವಸ್ಥಾಪಕರು (ಆಡಳಿತ), ದೂರವಾಣಿ ಸಂಖ್ಯೆ: 080–42775575. ಮೊಬೈಲ್: 8970222220. ಇ–ಮೇಲ್: **legal@kstdc.co**

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಕೃಷಿ ಇಲಾಖೆ

ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01
ಸಂ.: ಉಕೃನಿ(ಕೃಯಾಂ)/FM RfP/2025–26 ದಿನಾಂಕ: 21.02.2026

ಅಲ್ಪಾವಧಿ Request for Proposal ಪ್ರಕಟಣೆ

ಕೃಷಿ ಇಲಾಖೆಯ ಸಹಾಯಧನ ಕಾರ್ಯಕ್ರಮಗಳಡಿ ಶುಗರ್ ಕೇನ್ ಹಾರ್ವೆಸ್ಟರ್ಸ್, ಕಂಬೈನ್ಡ್ ಹಾರ್ವೆಸ್ಟರ್ಸ್ ಹಾಗೂ ಬೇಲರ್ಸ್ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಲು ಅಲ್ಪಾವಧಿ Request for Proposal (RfP) ಯನ್ನು ಕರೆಯಲಾಗಿರುತ್ತದೆ. ಸದರಿ ಅಲ್ಪಾವಧಿ Request for Proposal ನಡಿ ಭಾಗವಹಿಸಲು ಇಚ್ಛಿಸುವ ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ **https://kppp.karnataka.gov.in** ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ.

ಆಸಕ್ತ, ಸದರಿ ಕೃಷಿ ಯಂತ್ರೋಪಕರಣಗಳು ಮೂಲ ಉಪಕರಣ ತಯಾರಕರು / ತಯಾರಕರು / ಆಮದುದಾರ ಸಂಸ್ಥೆಗಳು RfP ಡಾಕ್ಯೂಮೆಂಟ್‌ನ್ನು **https://kppp.karnataka.gov.in** ನಿಂದ, ಇ–ಪ್ರೊಕ್ಯೂರ್‌ಮೆಂಟ್ ಪ್ರೋಸೆಸಿಂಗ್ ಶುಲ್ಕ ಮತ್ತು ಇಲಾಖೆಯು ನಿಗದಿಪಡಿಸಿರುವ ಇ.ಎಂ.ಡಿ ಮೊತ್ತವನ್ನು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಖಾಲಿ ಅರ್ಜಿಗಳನ್ನು ದಿ. **21.02.2026** ರಿಂದ ದಿ. **28.02.2026**ವರೆಗೆ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **28.02.2026, ಸಂಜೆ 5:30 ಗಂಟೆ**. ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **02.03.2026** ರಂದು **ಪೂರ್ವಾಹ್ನ 11:00 ಗಂಟೆಗೆ** ಸಮೃದ್ಧಿ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01 ಇಲ್ಲಿ ತೆರೆಯಲಾಗುವುದು.

RfP ಷರತ್ತುಗಳನ್ವಯ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳ ದಾಖಲಾತಿಗಳನ್ನು (Hard Copy / Physical deposition) ಉಪ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಯಾಂತ್ರೀಕರಣ ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು – 560001 ಇಲ್ಲಿ ದಿನಾಂಕ **02.03.2026** ರಂದು **ಸಂಜೆ 4:30** ರವರಗೆ ಸ್ವೀಕರಿಸಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು DSC Key / e-Token ಗಳನ್ನು ಪರಿಗಣಿಸಿರುವ ಏಜೆನ್ಸಿಗಳ ಮುಖಾಂತರ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಕೇಂದ್ರ, 4ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಕಾಂಪೌಂಡ್, ನೃಪತುಂಗ ರಸ್ತೆ, ಬೆಂಗಳೂರು–560001 **(Helpdesk: +91 80 46010000, +91 80 68948777).**

ಸೂಚನೆ: e-procurement ಸೇವಾ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ ಹಾಗೂ **RfP** ದಾಖಲೆಗಳನ್ನು ಬೇರೆಯವರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ.

ಸಹಿ/–, ಕೃಷಿ ನಿರ್ದೇಶಕರು
ಮತ್ತು ಟೆಂಡರ್ ಆಹ್ವಾನ ಅಧಿಕಾರಿಗಳು

ವಾಸಾಸಂಇ/ವಾಪ್ರ/ಎಲ್‌ಸಿ/5800/2025–26

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com

No. SGITO/e-Tender/ME/OT/Anaesth/04/2025-26 Date:.21.02-2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಪಿಪಿ ಪೋರ್ಟಲ್‌ನಲ್ಲಿ ಈ ಕೆಳಕಂಡ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದೆ.

ANAESTHESIA DEPARTMENT:
(1) Depth Of Anaesthesia Monitoring - 3 Nos., (2) Convective Patient Warming Unit With Blanket - 3 Nos., (3) Target Controlled Infusion Pumps - 3 Nos. (4) Pulse Co-oximeter With Capnography - 3 Nos., (5) Portable Capnography Monitor - 5 Nos.

O.T & ANAESTHESIA DEPT:
(1) Dvt Pump Machine - 2 Nos., (2) Defibrillators - 2 Nos., (3) Flexible Fiberoptic Bronchoscope -1 No., (4) Video Laryngoscope -1 No., (5) Air Compressor - 1 No.

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **22–02–2026**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ದಿನಾಂಕ **12–03–2026**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.

ಸಹಿ/– ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ

ಡಿಐಪಿಆರ್/ಎಸ್‌ಐ/5803/2025–26

ಕರ್ನಾಟಕ ಸರ್ಕಾರ
ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟರವರ ಕಾರ್ಯಾಲಯ–587103

ದೂರವಾಣಿ :08354–200462 Email : gmlaqukp1@gmail.com
ಕ್ರ.ಸಂ:ಅ/ಸಿಬ್ಬಂದಿ/ಕಾಕೋ/ವನೇ/ವಿನಿವ–99/25–26/2405 ದಿನಾಂಕ:19–02–2026.

–: ಭೂಸ್ವಾಧೀನ ಪ್ರಕರಣಗಳನ್ನು ನಿರ್ವಹಿಸಲು ವಕೀಲರ ಹುದ್ದೆಗಾಗಿ ಅರ್ಜಿ ಅಹ್ವಾನ :–

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಮತ್ತು ಕಲಬುರಗಿ ಪೀಠದಲ್ಲಿ ದಾಖಲಾಗಿರುವ ಪ್ರಕರಣಗಳ ನಿರ್ವಹಣೆಗಾಗಿ ಹಾಗೂ ಈ ಕಛೇರಿಯಲ್ಲಿ ಕಾನೂನು ಸಲಹೆ ನೀಡಲು ವಕೀಲರ ನೇಮಕ ಮಾಡುವ ಕುರಿತು ವಕೀಲರಿಂದ ಅರ್ಜಿ ಆಹ್ವಾನಿಸಿದೆ. ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕದ ಪೀಠಗಳಲ್ಲಿ 05 ವರ್ಷ ಭೂಸ್ವಾಧೀನದ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸಿದ ಅನುಭವ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ 08 ವರ್ಷಗಳ ಕಾಲ ಭೂಸ್ವಾಧೀನ ಪ್ರಕರಣಗಳ ನಿರ್ವಹಣೆ ಮಾಡಿದ ವಕೀಲರಿಂದ ಅರ್ಜಿ ಅಹ್ವಾನಿಸಲಾಗಿದೆ. ಸದರಿ ಪ್ರಕಟಣೆಯು ದಿನ ಪತ್ರಿಕೆಯಲ್ಲಿ ಪ್ರಕಟವಾದ 15 ದಿನಗಳಲ್ಲಿ ಅರ್ಜಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ಅ. ನಂ.	ನ್ಯಾಯಾಲಯದ ಹೆಸರು	ನೇಮಕ ಮಾಡಿಕೊಳ್ಳುವ ವಕೀಲರ ಸಂಖ್ಯೆ
1	ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಧಾರವಾಡ ಇಲ್ಲಿ ದಾಖಲಾಗಿರುವ ಪ್ರಕರಣಗಳ ಕುರಿತು,	02
2	ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ಕಲಬುರಗಿ ಇಲ್ಲಿ ದಾಖಲಾಗಿರುವ ಪ್ರಕರಣಗಳ ಕುರಿತು,	02
3	ಮಾನ್ಯ ಆಯುಕ್ತರು, ಪುಪು/ಭೂಸ್ವಾಧೀನ, ಕೃಮೇಯೋ, ಬಾಗಲಕೋಟೆ ಕಚೇರಿಯಲ್ಲಿ ಕಾರ್ಯನಿರ್ವಹಿಸುವದು.	02

ಇಚ್ಛೆಯುಳ್ಳವರು ನೇರವಾಗಿ ಆಯುಕ್ತರು, ಪುಪು/ಭೂಸ್ವಾಧೀನ, ಕೃ.ಮೇ.ಯೋ, ನವನಗರ, ಬಾಗಲಕೋಟೆ ಇವರ ಕಾರ್ಯಾಲಯಕ್ಕೆ/E-mail Id: commrbgk1@gamil.com ವಿಳಾಸಕ್ಕೆ ತಮ್ಮ ಸ್ವ–ವಿವರ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೋಬೈಲ ಸಂಖ್ಯೆ 8971219588, ಉಪ ಮಹಾವ್ಯವಸ್ಥಾಕರು ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಮಹಾ ವ್ಯವಸ್ಥಾಪಕರು
ಪು ಮತ್ತು ಪು/ಭೂಸ್ವಾಧೀನ,
ಕೃ.ಮೇ.ಯೋ., ಬಾಗಲಕೋಟೆ.

DIPR/BGK/RO-NO-596/KSMCA/2025-26

ಅಪಪ್ರಚಾರ: ಸ್ನೇಹಮಯಿ ಕೃಷ್ಣ ಬಿಡುಗಡೆ

ವಿಚಾರಣೆಗೆ ಕರೆಸಿದ್ದರು, ಬಂಧಿಸಿರಲಿಲ್ಲ, ಆಡಿಯೊದಲ್ಲಿರುವುದು ನಿಜ–ಕೃಷ್ಣ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ ಅಧಿಕಾರಿಯ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಸಿಸಿಬಿ ವಶದಲ್ಲಿದ್ದ ಮೈಸೂರಿನ ಸ್ನೇಹಮಯಿ ಕೃಷ್ಣ ಅವರನ್ನು ಶನಿವಾರ ಬಿಡುಗಡೆ ಮಾಡಲಾಗಿದ್ದು, ಮತ್ತೊಬ್ಬ ಆರೋಪಿ ವಿನೋದ್ ಅವರನ್ನು ಬಂಧಿಸಲಾಗಿದೆ.

ಮೈಸೂರಿನ ಬೋಗಾದಿ ನಿವಾಸಿ ವಿನೋದ್ ಬಂಧಿತರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ, ಕೆಎಎಸ್ ಅಧಿಕಾರಿ ಡಿ.ಬಿ. ನಟೇಶ್ ಅವರು ಸ್ನೇಹಮಯಿ ಕೃಷ್ಣ ವಿರುದ್ಧ ದೂರು ನೀಡಿದ್ದರು. ಫೆ.18ರಂದು ಬೆಂಗಳೂರು ನಗರ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮುಖ್ಯಾಂಶಗಳು

- ಜಾಲತಾಣದಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡ ಆರೋಪ
- ಹೇಳಿಕೆ ದಾಖಲಿಸಿ ಕೃಷ್ಣ ಬಿಡುಗಡೆ
- ಮತ್ತೊಬ್ಬ ಆರೋಪಿ ವಿನೋದ್ ಬಂಧನ

ಪ್ರಕರಣವೊಂದರ ವಿಚಾರಣೆಗೆ ಸ್ನೇಹಮಯಿ ಕೃಷ್ಣ ಅವರು ತಮ್ಮ ಪುತ್ರನ ಜತೆಗೆ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಶುಕ್ರವಾರ ಬಂದಿದ್ದಾಗ, ಅವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಸಿಸಿಬಿ ಕಚೇರಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದರು.

ಕ್ಷಮೆಯಾಚನೆ

ಸ್ನೇಹಮಯಿ ಕೃಷ್ಣ

‘ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ವಿರುದ್ಧ ನಾನು ಮಾಡಿದ್ದ ಆರೋಪ ಸುಳ್ಳು. ಅವರ ಕ್ಷಮೆ ಕೋರುತ್ತೇನೆ’ ಎಂದು ಸ್ನೇಹಮಯಿ ಕೃಷ್ಣ ಹೇಳಿದರು.

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ’ ಎಂದರು.

‘ವಿಡಿಯೊ ಹಾಗೂ ಮಾಹಿತಿ ಹಂಚಿಕೊಂಡವರ ಬಗ್ಗೆ ಸ್ನೇಹಮಯಿ ಕೃಷ್ಣ ಅವರು ವಿಚಾರಣೆ ವೇಳೆ ಮಾಹಿತಿ ನೀಡಿದ್ದಾರೆ. ಅವರ ಹೇಳಿಕೆ ದಾಖಲಿಸಿಕೊಂಡು ಬಿಡುಗಡೆ ಮಾಡಲಾಗಿದೆ. ಫೆ.24ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಮಾಹಿತಿ ನೀಡಿದ್ದ ವಿನೋದ್: ‘ವಿನೋದ್ ಹಾಗೂ ದೂರುದಾರ ಡಿ.ಬಿ. ನಟೇಶ್ ಅವರ ನಡುವೆ ವ್ಯವಹಾರಕ್ಕೆ ಸಂಬಂಧಿಸಿದಂತೆ ದ್ವೇಷ ಉಂಟಾಗಿ ಇಬ್ಬರ ನಡುವೆ ವೈಮನಸ್ಸು ಮೂಡಿತ್ತು. ನಟೇಶ್ ವಿರುದ್ಧ ದ್ವೇಷ ಸಾಧಿಸಲು ಲಾಭಕ್ಕಾಗಿ ಸ್ನೇಹಮಯಿ ಕೃಷ್ಣ ಅವರನ್ನು ವಿನೋದ್ ಸಂಪರ್ಕಿಸಿದ್ದರು. ಸುಳ್ಳು ಮಾಹಿತಿಯನ್ನು ಸ್ನೇಹಮಯಿ ಕೃಷ್ಣ ಅವರಿಗೆ ನೀಡಿದ್ದರು. ತನಗೆ ಬಂದ ಮಾಹಿತಿಯನ್ನು ಖಚಿತಪಡಿಸಿಕೊಳ್ಳದೇ ಸ್ನೇಹಮಯಿ ಕೃಷ್ಣ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಅಧಿಕಾರಿಯ ಚಾರಿತ್ರ್ಯವಧೆ ಮಾಡುವ ಉದ್ದೇಶದಿಂದ ಕೃತ್ಯ ಎಸಗಿರುವುದು ಕಂಡುಬಂದಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ನಾನು ಆಡಿಯೊ ಸೃಷ್ಟಿಸಿ ಫೇಸ್‌ಬುಕ್‌ನಲ್ಲಿ ಹಾಕಿದ್ದೇನೆ. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ವಿರುದ್ಧ ಸುಳ್ಳು ಆರೋಪ ಮಾಡಿದ್ದೇನೆ’ ಎಂದು ನನ್ನ ವಿರುದ್ಧ ನಟೇಶ್ ದೂರು ನೀಡಿದ್ದರೆಂದು ಸ್ನೇಹಮಯಿ ಕೃಷ್ಣ ಹೇಳಿದರು.

‘ದೂರು ಆಧರಿಸಿ ಪ್ರಕರಣ ದಾಖಲಾಗಿತ್ತು. ವಿಚಾರಣೆಗಾಗಿ ಕರೆತರಲಾಗಿತ್ತೇ ಹೊರತು ನನ್ನನ್ನು ಬಂಧಿಸಿರಲಿಲ್ಲ. ನಟೇಶ್ ಹಾಗೂ ವಿನೋದ್ ಮಧ್ಯೆ ಹಣಕಾಸಿನ ವ್ಯವಹಾರ ನಡೆದಿತ್ತು. ನಟೇಶ್ ದುಡ್ಡು ಕೇಳಬಾರದೆಂದು ಈ ರೀತಿ ಮಾಡಿರುವ ಸಾಧ್ಯತೆಯಿದೆ. ಆದರೆ ಆಡಿಯೊ ನಿಜ’ ಎಂದು ಕೃಷ್ಣ ಪ್ರತಿಕ್ರಿಯೆ ನೀಡಿದರು.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದ ಸಿಸಿಬಿ: ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ದಾಖಲೆ ಹಾಗೂ ಧ್ವನಿ ಕ್ಲಿಪ್ ಹಂಚಿಕೊಂಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸ್ನೇಹಮಯಿ ಕೃಷ್ಣ ಅವರನ್ನು ಬಂಧಿಸಲಾಗಿದೆ ಎಂದು ಸಿಸಿಬಿ ಪೊಲೀಸರು ಶುಕ್ರವಾರ ಸಂಜೆ ಅಧಿಕೃತ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದರು. ಆದರೆ, ಅವರನ್ನು ಪ್ರಕರಣದ ಸಂಬಂಧ ವಿಚಾರಣೆಗೆ ವಶಕ್ಕೆ ಪಡೆದುಕೊಳ್ಳಲಾಗಿತ್ತು.

ಚಿಟಿಕೆ ಸುದ್ದಿ

ಉರುಳಿಗೆ ಸಿಲುಕಿ ಚಿರತೆ ಸಾವು



ಬಸವಾಪಟ್ಟಣ (ದಾವಣಗೆರೆ): ಸಮೀಪದ ನಿಲೋಗಲ್ ಗ್ರಾಮದ ಬಳಿ ಅಡಿಕೆ ತೋಟದ ತಂತಿಬೇಲಿಗೆ ಅಳವಡಿಸಿದ್ದ ಉರುಳಿಗೆ ಸಿಲುಕಿ 1 ವರ್ಷದ ಹೆಣ್ಣು ಚಿರತೆ ಮೃತಪಟ್ಟಿದೆ.

ರೈತ ಜಿ. ರಂಗನಗೌಡ ಅವರ ತೋಟದಲ್ಲಿ ಅವಘಡ ನಡೆದಿದೆ. ಶನಿವಾರ ಬೆಳಿಗ್ಗೆ ರೈತರು ತೋಟಕ್ಕೆ ತೆರಳಿದಾಗ ಚಿರತೆ ಸಿಲುಕಿದ್ದು ಗೊತ್ತಾಗಿದೆ. ಚಿರತೆ ರಕ್ಷಿಸುವ ಅರಣ್ಯ ಇಲಾಖೆ ಸಿಬ್ಬಂದಿ ಪ್ರಯತ್ನ ಫಲಕಾರಿಯಾಗಲಿಲ್ಲ.

‘ಚಿರತೆ ಶುಕ್ರವಾರವೇ ಸಿಲುಕಿರಬಹುದು. ಉರುಳಿಗೆ ಮೂರು ಕಾಲು ಸಿಲುಕಿ ತೀವ್ರವಾಗಿ ಗಾಯಗೊಂಡಿತ್ತು’ ಎಂದು ಭದ್ರಾವತಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ರವೀಂದ್ರ ಕುಮಾರ್ ತಿಳಿಸಿದ್ದಾರೆ.

ಚಿರತೆ ಸಾವಿನ ಕುರಿತು ತನಿಖೆ ನಡೆದಿದೆ. ದುಷ್ಕರ್ಮಿಗಳು ತಂತಿಬೇಲಿಗೆ ಉರುಳು ಅಳವಡಿಸಿ ಕಾಡುಹಂದಿ ಮತ್ತಿತರ ಪ್ರಾಣಿ ಬೇಟೆಯಾಡುತ್ತಾರೆ. ಅಂತದೇ ಉರುಳಿಗೆ ಚಿರತೆ ಸಿಲುಕಿದೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಕನ್ನಡ: ವಿವಿಧೆಡೆ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಶನಿವಾರ ಸಂಜೆ ವೇಳೆ ಗುಡುಗು ಸಹಿತ ಮಳೆಯಾಗಿದೆ.

ಬೆಳ್ತಂಗಡಿ, ಸುಳ್ಯ ತಾಲ್ಲೂಕಿನ ವಿವಿಧೆಡೆ ಗುಡುಗು ಸಹಿತ ಬಿರುಸಿನ ಮಳೆಯಾಗಿದೆ. ಭಾರಿ ಗಾಳಿಗೆ ಮರ ಬಿದ್ದು ವಿದ್ಯುತ್ ತಂತಿಗಳು ತುಂಡಾಗಿವೆ. ಸುಬ್ರಹ್ಮಣ್ಯದಲ್ಲಿ ಗುಡುಗು ಮಿಂಚು ಗಾಳಿ ಸಹಿತ ಮಳೆಯಾಗಿದೆ. ಜಿಲ್ಲೆಯ ಕೆಲವೆಡೆ ಎರಡು ದಿನದಿಂದ ಮೋಡ ಕವಿದ ವಾತಾವರಣವಿತ್ತು.

ಲಂಚ: ಸರ್ವೆಯರ್‌ಗೆ 4 ವರ್ಷ ಜೈಲು

ಧಾರವಾಡ: ಲಂಚ ಪ್ರಕರಣದಲ್ಲಿ ಕುಂದಗೋಳದ ಭೂಮಾಪನ ಇಲಾಖೆ ಸರ್ವೆಯರ್ ರಾಘವೇಂದ್ರಗೆ ನಾಲ್ಕು ವರ್ಷ ಜೈಲು, ₹20 ಸಾವಿರ ದಂಡವನ್ನು 3ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ವಿಶೇಷ ಕೋರ್ಟ್ ಶನಿವಾರ ವಿಧಿಸಿದೆ. ನ್ಯಾಯಾಧೀಶರಾದ ಜರೀನಾ ಅವರು ಆದೇಶ ನೀಡಿದ್ದಾರೆ.

ಕುಂದಗೋಳ ತಾಲ್ಲೂಕು ಶಿರೂರಿನ ಮಲ್ಲಿಕಾರ್ಜುನಗೌಡ ಅವರು ಜಮೀನು ಅಳತೆ, ಪೋಡಿಗಾಗಿ ಭೂಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಕೆಲಸ ಮಾಡಿಕೊಡಲು ಸರ್ವೆಯರ್ ರಾಘವೇಂದ್ರ ಅವರು ₹15 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 2019 ಜೂನ್ 3ರಂದು ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದರು.

ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಎ.ಜಾಧವ ಅವರು ತನಿಖೆ ನಡೆಸಿ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಎಸ್.ಶಿವಳ್ಳಿ ಅವರು ವಾದ ಮಂಡಿಸಿದ್ದರು.

ಸುದ್ದಿ 2 ನಿಮಿಷ

‘ಒಳಪಂಗಡ ಬಿಟ್ಟು ಒಗ್ಗಟ್ಟಾಗಿ’

ಹುಬ್ಬಳ್ಳಿ: ‘ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ 42 ಒಳಪಂಗಡಗಳು ಒಗ್ಗಟ್ಟಾದರೆ ಮಾತ್ರ ಪ್ರಗತಿ ಸಾಧ್ಯ. ಸಮಾಜಕ್ಕೆ ನ್ಯಾಯ ಒದಗಿಸಲು ಚಿತ್ರದುರ್ಗದಲ್ಲಿ ಏಪ್ರಿಲ್‌ನಲ್ಲಿ ಸಮಾವೇಶ ಹಮ್ಮಿಕೊಳ್ಳೋಣ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಶನಿವಾರ ಇಲ್ಲಿ ಹೇಳಿದರು.

ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಹಿಂದುಳಿದ ವರ್ಗಗಳ ಪ್ರ–ವರ್ಗ 1 ಜನಾಂಗಗಳ ಒಕ್ಕೂಟ ಏರ್ಪಡಿಸಿದ್ದ ರಾಜ್ಯಮಟ್ಟದ ಅಲೆಮಾರಿ, ಅರೆ ಅಲೆಮಾರಿ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವದಲ್ಲಿ ಮಾತನಾಡಿದರು.

‘ಏ.15ರಿಂದ 30ರ ಒಳಗೆ ಸಮಾವೇಶ ನಡೆಸಲು ಸಮಾಜದ ಮುಖಂಡರು ಮುಂದಾಗಬೇಕು. ಮಠ ಸ್ಥಾಪನೆ, ಎಸ್‌ಸಿಗೆ ಸಮುದಾಯದ ಸೇರ್ಪಡೆ ಕುರಿತು ಚರ್ಚಿಸೋಣ. ಹಿಂದುಳಿದ ವರ್ಗಗಳ ಎಲ್ಲ ಮಠಾಧೀಶರನ್ನು ಸಮಾವೇಶಕ್ಕೆ ಆಹ್ವಾನಿಸೋಣ’ ಎಂದು ಸಲಹೆ ಮಾಡಿದರು.

‘ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದ ನಂತರ ಪ್ರತಿ ಜಿಲ್ಲೆಯಲ್ಲೂ ಅಲೆಮಾರಿಗಳ ಒಳಪಂಗಡಗಳನ್ನು ಗುರುತಿಸಲು ಪ್ರಯತ್ನಿಸುತ್ತಿದೆ. ಸಮಾಜದ ಸಂಘಟನೆಗಳಿಂದ, ಮುಖಂಡರಿಂದ ಸ್ಪಂದನೆ ಸಿಗುತ್ತಿಲ್ಲ’ ಎಂದು ಹೇಳಿದರು.

‘ಬಿರ್ದ್ ದ ಕಂಬಳ’ ಸಿನಿಮಾ ಹೆಗ್ಗಡೆ ದೃಶ್ಯಕ್ಕೆ ಕತ್ತರಿಗೆ ಒತ್ತಡ'

ಮಂಗಳೂರು: ಕಂಬಳ ಕುರಿತ ‘ಬಿರ್ದ್ ದ ಕಂಬಳ’ ಸಿನಿಮಾದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ದೃಶ್ಯಕ್ಕೆ ಕತ್ತರಿ ಹಾಕಲು ಒತ್ತಡ ಬಂದಿತ್ತು ಎಂದು ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಶನಿವಾರ ಇಲ್ಲಿ ಹೇಳಿದರು.

ಸಿನಿಮಾದ ಹಾಡು ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ವಿಷಯದಲ್ಲಿ ವಿವಾದ ಆಗುತ್ತಿದ್ದಾಗ, ಹೆಗ್ಗಡೆ ಅವರ ದೃಶ್ಯ ತೆಗೆದುಹಾಕಬೇಕು ಎಂದು ಕೆಲವರು ಒತ್ತಾಯಿಸಿದ್ದರು ಎಂದರು.

‘ಸಿನಿಮಾ ಬೇರೆ, ರಾಜಕೀಯ ಬೇರೆ. ಚಿತ್ರದ ದೃಶ್ಯ ತೆಗೆಯಲು ಸಾಧ್ಯವಿಲ್ಲ ಎಂದು ಹೇಳಿದ್ದೆ. ಹಾಗಾದರೆ ಬಿಡುಗಡೆ ವೇಳೆ ಈ ದೃಶ್ಯ ಇರಬಾರದು ಎಂದು ಹೇಳಿದರು. ಅದಕ್ಕೂ ಒಪ್ಪಲಿಲ್ಲ' ಎಂದು ಹೇಳಿದರು.

‘ಚಿತ್ರದ ಕೊನೆಯಲ್ಲಿ ಎರಡು ಕುಟುಂಬಗಳಿಗೆ ಬುದ್ಧಿ ಹೇಳುವಾಗಿನ ಪಾತ್ರಕ್ಕೆ ಹೆಗ್ಗಡೆ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪಾತ್ರ ನಿರ್ವಹಿಸಲು ಅವರು ಅತ್ಯಂತ ಸೂಕ್ತ ವ್ಯಕ್ತಿ. ಕೋಟಿ ಮೊತ್ತ ಕೊಟ್ಟರೂ ಈ ಪಾತ್ರಕ್ಕೆ ಇಂಥ ವ್ಯಕ್ತಿ ಸಿಗುತ್ತಿರಲಿಲ್ಲ' ಎಂದು ಅವರು ಹೇಳಿದರು.

‘ಕುದ್ರೋಳಿ ತೀರ್ಥಾಟನೆ’

ಪ್ರಜಾವಾಣಿ ಚಿತ್ರ:

ಮಂಗಳೂರಿನ ಸೆಂಟ್ರಲ್ ರೈಲು ನಿಲ್ದಾಣದಿಂದ ಬ್ರಹ್ಮಶ್ರೀ ನಾರಾಯಣಗುರುಗಳು ಶಿವಲಿಂಗ ಪ್ರತಿಷ್ಠಾಪಿಸಿದ ಸ್ಮರಣಾರ್ಥ ಶನಿವಾರ ಹಮ್ಮಿಕೊಂಡಿದ್ದ ‘ಕುದ್ರೋಳಿ ತೀರ್ಥಾಟನೆ’ಯು ಕುದ್ರೋಳಿ ಕ್ಷೇತ್ರದವರೆಗೆ ಸಾಗಿತು

ಜೈಲಿನಲ್ಲಿ ಗಾಂಜಾ; 10 ಕೈದಿಗಳ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಡಿಜಿಪಿ ಅಲೋಕ್ ಕುಮಾರ್ ಅವರು ಇಲ್ಲಿನ ಅಶೋಕ ನಗರದ ಉಪ ಕಾರಾಗೃಹದಲ್ಲಿ ಪರಿಶೀಲನೆ ನಡೆಸಿದ್ದ ಎರಡು ದಿನದಲ್ಲೇ, ಕೈದಿಗಳು ಗಾಂಜಾ ಬಳಸಿರುವ ವಿಡಿಯೊ ಜಾಲತಾಣದಲ್ಲಿ ಹಂಚಿಕೆಯಾಗಿದೆ.

ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಕಾರಾಗೃಹದ ಅಧೀಕ್ಷಕ ಶಹಾಬುದ್ದೀನ್ ಕಾಲೇಖಾನ್ ಅವರು ಗಾಂಜಾ ಬಳಸುತ್ತಿದ್ದ 10 ವಿಚಾರಣಾಧೀನ ಕೈದಿಗಳ ವಿರುದ್ಧ ದೂರು ನೀಡಿದ್ದಾರೆ. ವಿಡಿಯೊ ಆಧರಿಸಿ ಸುಮೊಟೊ ಪ್ರಕರಣವು ದಾಖಲಾಗಿದೆ.

ಬೆಳಗಾವಿ ವಿಭಾಗದ ಡಿಐಜಿ ಟಿ.ಪಿ.ಶೇಷ ಅವರು ಶನಿವಾರ ಉಪ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಧೀಕ್ಷಕರು, ಸಿಬ್ಬಂದಿಯಿಂದ ಮಾಹಿತಿ ಪಡೆದರು.

‘ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿರುವ ವಿಡಿಯೊ ವೀಕ್ಷಿಸಿದ್ದು, ಅದು 2025ರ ಡಿಸೆಂಬರ್ 9ರಂದು ನಡೆದಿದೆ’ ಎಂದು ಡಿಐಜಿ ಟಿ.ಪಿ.ಶೇಷ ಅವರು ಸುದ್ದಿಗಾರರಿಗೆ ತಿಳಿಸಿದರು.

‘ವಿಡಿಯೊ ಮಾಡಿರುವ ಮೊಬೈಲ್ ಜೈಲಿನ ಹಿಂದಿರುವ ಗೋಡೆಯಿಂದ ಒಳಗೆ ಬಂದಿರಬಹುದು. ಅಥವಾ ಪೆನ್ ಕ್ಯಾಮೆರಾ ಆಗಿರಬಹುದು. ವಿಡಿಯೊದಲ್ಲಿ ಇರುವುದು ಗಾಂಜಾ ಅನ್ನೋದು ಪಕ್ಕಾ ಆಗಿಲ್ಲ. ತನಿಖೆ ನಡೆದಿದೆ.ಕರ್ತವ್ಯಲೋಪ ಕುರಿತು ಜೈಲು ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುತ್ತೇವೆ’ ಎಂದು ಹೇಳಿದರು.

‘ಕಲ್ಲು ಎಸೆದವರು ಕಿಡಿಗೇಡಿಗಳು’

ವಿರಾಟ ಹಿಂದೂ ಸಮ್ಮೇಳನ: ಹನುಮಂತ ಮಳಲಿ ಟೀಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೃಷ್ಣನ ಕೈಯಲ್ಲಿ ಚಕ್ರ, ಶಿವನ ಕೈಯಲ್ಲಿ ತ್ರಿಶೂಲ ಇದೆ. ಈಗೊಬ್ಬರು ಬುಲ್ಡೋಜರ್ ತಂದಿದ್ದಾರೆ. ಮುಂದಿನ ದಿನಗಳಲ್ಲಿ ಬಾಗಲಕೋಟೆಗೂ ಬರಲಿದೆ’ ಎಂದು ಧರ್ಮ ಜಾಗರಣ ಸಮಿತಿ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಹನುಮಂತ ಮಳಲಿ ಹೇಳಿದರು.

ಹಿಂದೂ ಸಮ್ಮೇಳನ ಸಂಚಾಲನಾ ಸಮಿತಿ ವತಿಯಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವ ಶನಿವಾರ ನವನಗರದಲ್ಲಿ ಹಮ್ಮಿಕೊಂಡಿದ್ದ ವಿರಾಟ ಹಿಂದೂ ಸಮ್ಮೇಳನದಲ್ಲಿ ಮಾತನಾಡಿದರು.

‘ಶೋಭಾಯಾತ್ರೆ ಮೇಲೆ ಕಲ್ಲು ಎಸೆದವರು ಕಿಡಿಗೇಡಿಗಳು. ರಾಷ್ಟ್ರ ರಕ್ಷಣೆಗಾಗಿ ಹೋರಾಡಿದ ಶಿವಾಜಿ ಶೋಭಾಯಾತ್ರೆಗೆ ಮಸೀದಿ ಮೇಲಿಂದ ಹೂ ಹಾಕಬೇಕೇ ಹೊರತು ಚಪ್ಪಲಿ ಎಸೆಯಬಾರದು. ಮುಂದೆ ಗಂಭೀರ ಪರಿಸ್ಥಿತಿ ಎದುರಿಸಬೇಕಾದಿತು’ ಎಂದರು.

‘ಪಾಕಿಸ್ತಾನದಲ್ಲಿ ಏಳನೇ ತರಗತಿ ಪಠ್ಯದಲ್ಲಿ ಶಿವಾಜಿ ಮಹಾರಾಜರ ಬಗ್ಗೆ ಪಠ್ಯವಿದೆ. ಅಂತಹ ಯೋಧ ಹುಟ್ಟಲಿ ಎಂದು ಪಠ್ಯದಲ್ಲಿ ಅಳವಡಿಸಲಾಗಿದೆ. ಆದರೆ, ನಮ್ಮಲ್ಲಿ ಅವರ ಜಯಂತಿಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಅವಮಾನ ಮಾಡಿದಂತೆ’ ಎಂದರು

‘ಪ್ರಧಾನಿ ನರೇಂದ್ರ ಮೋದಿ ಒಬ್ಬರನ್ನೇ ಸ್ಯಾಂಪಲ್ ಆಗಿ ನೀಡಿದ್ದೇವೆ. ವಿಶ್ವವೇ ಕೊಂಡಾಡುತ್ತಿದೆ. ಅಂತಹ ಸಾವಿರಾರು ಮಂದಿ ನಮ್ಮಲ್ಲಿದ್ದಾರೆ. ಜನಸಂಖ್ಯಾ ನಿಯಂತ್ರಣಕ್ಕೆ ದೇಶದಲ್ಲಿ ಒಂದೇ ಕಾನೂನು ಆಗುವವರೆಗೆ ನೀವೂ ಜನಸಂಖ್ಯೆ ನಿಯಂತ್ರಣಕ್ಕೆ ಮುಂದಾಗಬೇಡಿ’ ಎಂದರು.

‘ಯಾವುದೇ ಪಕ್ಷದ ಮೇಲೆ ನಂಬಿಕೆ ಇಲ್ಲ. ಕೆಲವರು ಪಕ್ಷದಲ್ಲಿ ಮುಖವಾಡ ಹಾಕಿಕೊಂಡವರಿದ್ದಾರೆ. ಬೇರೆ ಪಕ್ಷದಲ್ಲೂ ಒಳ್ಳೆಯವರಿದ್ದಾರೆ’ ಎಂದರು.

ಇಬ್ಬರ ಬಂಧನ

ಬಾಗಲಕೋಟೆ: ನಗರದ ಮಟನ್ ಮಾರುಕಟ್ಟೆ ಸಮೀಪ ಗಲಭೆ ಮಾಡುವ ಉದ್ದೇಶ, ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ.

ಅಶೋಕ ಬಾರಕೇರ, ಸಂದೀಪ ಘೆರಡೆ ಬಂಧಿತರು. ಕಲ್ಲು ತೂರಾಟ ನಡೆದಿದ್ದ ಪಂಕಾ ಮಸೀದಿ ಸೇರಿದಂತೆ ಸುತ್ತ–ಮುತ್ತಲಿನ ಪ್ರದೇಶದಲ್ಲಿ ಬಿಗಿ ಬಂದೋಬಸ್ತ್ ಹಾಕಲಾಗಿದೆ. ಬಾಗಲಕೋಟೆ, ನವನಗರ, ವಿದ್ಯಾಗಿರಿಯಲ್ಲಿ ಶನಿವಾರ ವಹಿವಾಟು ಎಂದಿನಂತೆ ನಡೆಯಿತು.

‘26ಕ್ಕೆ ಡಿಸಿಎಂಗೆ ಬುಲಾವ್’

ರಾಮನಗರ: ‘ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿ ಫೆ. 26ರಂದು ದೆಹಲಿಗೆ ಬರುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪಕ್ಷದ ಹೈಕಮಾಂಡ್ ಸೂಚನೆ ನೀಡಿದೆ. ಅಂದು ನಮ್ಮ ನಾಯಕನಿಗೆ ಒಳ್ಳೆಯದಾಗಲಿದೆ’ ಎಂದು ಡಿಸಿಎಂ ಆಪ್ತ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದರು.

ಈ ಕುರಿತು ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಅವರು ಈಗಾಗಲೇ ಎರಡೂವರೆ ವರ್ಷ ಅಧಿಕಾರ ಪೂರ್ಣಗೊಳಿಸಿದ್ದಾರೆ. ಉಳಿದ ಅವಧಿಗೆ ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕು ಎಂಬುದು ಪಕ್ಷದ ಎಲ್ಲಾ ಸಚಿವರು ಹಾಗೂ ಶಾಸಕರ ಬಯಕೆಯಾಗಿದೆ’ ಎಂದರು.

‘ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿರುವ ಹಿರಿಯ ಸಚಿವ ಸತೀಶ ಜಾರಕಿಹೊಳಿ ಸಹ ನಾಯಕತ್ವ ಗೊಂದಲವನ್ನು ಪರಿಹರಿಸುವಂತೆ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ’ ಎಂದರು.

ಮುಖ್ಯಮಂತ್ರಿ ಅವರ ‘ಎಕ್ಸ್’ ಪೋಸ್ಟ್ ಕುರಿತು ಪ್ರತಿಕ್ರಿಯಿಸಿದ ಹುಸೇನ್, ‘ನಾನೂ ಸೇರಿದಂತೆ ಪಕ್ಷದ 140 ಶಾಸಕರೂ ನಾಯಕತ್ವ ಬದಲಾವಣೆ ಬೇಕು ಎಂದು ಕೇಳಿದ್ದೇವೆ. ಇದರಲ್ಲಿ ಪಟ್ಟಭದ್ರ ಹಿತಾಸಕ್ತಿಯಾಗಲಿ, ಗುಂಪುಗಾರಿಕೆಯಾಗಲಿ ಇಲ್ಲ’ ಎಂದು ತಿರುಗೇಟು ನೀಡಿದರು.

ನಕಲಿ ಬ್ಯಾಂಕ್ ಖಾತೆ ತೆರೆದು ಸೈಬರ್ ವಂಚಕರಿಗೆ ನೆರವು

ವಿದ್ಯಾರ್ಥಿ ಸೇರಿ ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಕಲಿ ದಾಖಲೆಗಳನ್ನು ನೀಡಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆದು ಸೈಬರ್ ವಂಚಕರಿಗೆ ಸಹಕರಿಸುತ್ತಿದ್ದ ಆರೋಪದ ಮೇರೆಗೆ ಎಂಜಿನಿಯರಿಂಗ್ ವಿದ್ಯಾರ್ಥಿ ಸೇರಿ ಇಬ್ಬರನ್ನು ಇಲ್ಲಿನ ಸೈಬರ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರದ ಪರಶುರಾಮ್ (30) ಹಾಗೂ 19 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧಿತರು. ಇಬ್ಬರಿಂದ ಲ್ಯಾಪ್‌ಟಾಪ್, ಎರಡು ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ.

ನಕಲಿ ಖಾತೆಗಳು ಕುರಿತು ತನಿಖೆ ನಡೆಸಿದ ಪೊಲೀಸರಿಗೆ ಸೈಬರ್ ವಂಚನೆ ಜಾಲ ಪತ್ತೆಯಾಗಿದೆ. ಸೈಬರ್ ವಂಚನೆಯ ಹಣವನ್ನು ವರ್ಗಾವಣೆ ಮಾಡುವ ಉದ್ದೇಶದಿಂದ ಈ ಖಾತೆಗಳನ್ನು ಬಳಸುತ್ತಿರುವುದು ಗೊತ್ತಾಗಿದೆ. ದೇಶದ ವಿವಿಧೆಡೆ ಕೋಟ್ಯಂತರ ರೂಪಾಯಿ ವಂಚನೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಖಚಿತವಾಗಿದೆ.

ಸುಳ್ಳುಮಾಹಿತಿ ನೀಡಿ ಪರಶುರಾಮ್ 6 ಕಡೆ ಬ್ಯಾಂಕ್ ಖಾತೆ ತೆರೆದಿದ್ದಾನೆ. ಈ ಮೂಲಕ ನಡೆದಿದ್ದ ವಂಚನೆಯ ವಿರುದ್ಧ ದೇಶದ ವಿವಿಧ ಠಾಣೆಗಳಲ್ಲಿ 95 ಪ್ರಕರಣ ದಾಖಲಾಗಿವೆ. 19 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ 2 ಬ್ಯಾಂಕ್ ಖಾತೆ ಹೊಂದಿದ್ದು, 8 ಪ್ರಕರಣಗಳಲ್ಲಿ ಶಾಮೀಲಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ಖಾತೆ: 35 ವಂಚನೆ ಪ್ರಕರಣ

ಬಳ್ಳಾರಿ: ದೇಶದ ವಿವಿಧೆಡೆ ದಾಖಲಾಗಿರುವ 35 ಆನ್‌ಲೈನ್ ವಂಚನೆ ಪ್ರಕರಣಗಳಲ್ಲಿ ಬಳ್ಳಾರಿ ನಗರದ ಖಾಸಗಿ ಬ್ಯಾಂಕ್‌ವೊಂದರ ಚಾಲ್ತಿ ಖಾತೆಯ ಉಲ್ಲೇಖವಿರುವುದು ಬಯಲಾಗಿದೆ.

ರಾಜ್ಯದ ಸಿಇಎನ್ (ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ) ಠಾಣೆ ಪೊಲೀಸರು ‘ಮ್ಯೂಲ್ (ಯಾರ ಪರವಾಗಿಯೋ ಅಕ್ರಮವಾಗಿ ಪಡೆದ ಹಣವನ್ನು ಇನ್ಯಾರಿಗೋ ವರ್ಗಾಯಿಸುವ)’ ಖಾತೆಗಳ ಪರಿಶೀಲನೆಯಲ್ಲಿ ತೊಡಗಿದ್ದಾಗ ಬಳ್ಳಾರಿ ಖಾತೆಯ ವಂಚನೆ ವಿವರ ಗೊತ್ತಾಗಿದೆ.

ಖಾತೆಯು ಸಂಡೂರಿನ ತಾರಾನಗರದ ಸ್ವಾಮಿ ಎಚ್.ಎಸ್ ಅವರಿಗೆ ಸೇರಿದ್ದು ಎಂಬುದು ತಿಳಿದಿದೆ. ವಿಚಾರಣೆ ವೇಳೆ ಅವರು, ‘ಆಂಧ್ರಪ್ರದೇಶದ ಹರಿಜನ ವಂಡ್ರಪ್ಪ ಎಂಬಾತ ₹1 ಕೋಟಿ ಸಬ್ಸಿಡಿ ಸಾಲ ಕೊಡಿಸುವ ಆಮಿಷವೊಡ್ಡಿ ‘ನಿಸ್ಸಿ ಎಂಟರ್‌ಪ್ರೈಸಸ್’ ಎಂಬ ಕಂಪನಿ ಹೆಸರಲ್ಲಿ 2025ರ ಮೇ 3ರಂದು ಖಾತೆ ತೆರೆಸಿದ್ದರು. ಪಾಸ್ ಬುಕ್, ಎಟಿಎಂ ಸೇರಿ ಎಲ್ಲ ದಾಖಲೆಗಳನ್ನೂ ಅವರೇ ಇಟ್ಟುಕೊಂಡಿದ್ದಾರೆ’ ಎಂದು ತಿಳಿಸಿದ್ದಾರೆ. ಸಾರ್ವಜನಿಕರಿಗೆ ವಂಚಿಸಲೆಂದೇ ಒಟ್ಟುಗೂಡಿ ಖಾತೆ ಮಾಡಿಸಿರುವ ಆರೋಪದಲ್ಲಿ ಇಬ್ಬರ ವಿರುದ್ಧ ಇಲ್ಲಿನ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಟಿಎಂಗೆ ಹಾಕದೇ ₹3.40 ಕೋಟಿ ದುರ್ಬಳಕೆ: ಪ್ರಕರಣ ದಾಖಲು

ಹಾಸನ: 15 ವಿವಿಧ ಎಟಿಎಂಗಳಿಗೆ ಹಾಕಬೇಕಿದ್ದ ₹3,40 ಕೋಟಿ ದುರ್ಬಳಕೆ ಆರೋಪದಡಿ ಸಿಎಂಎಸ್ ಕಂಪನಿಯ ಇಬ್ಬರು ಸಿಬ್ಬಂದಿ ವಿರುದ್ಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೂವನಹಳ್ಳಿಯ ನಂದೀಶ್ ಬಿ.ಎಲ್. ಹಾಗೂ ದಾಸರಕೊಪ್ಪಲಿನ ಮಧುಕುಮಾರ್ ಎಂ.ಪಿ ವಿರುದ್ಧ ಕಂಪನಿಯ ಶಾಖಾ ವ್ಯವಸ್ಥಾಪಕ ರಾಜು ದೂರು ನೀಡಿದ್ದಾರೆ.

15 ಬ್ಯಾಂಕ್‌ಗಳ 28 ಎಟಿಎಂಗಳಿಗೆ ಹಾಕಲು ಈ ಹಣ ಒದಗಿಸಲಾಗಿತ್ತು. ಫೆ.18ರಂದು ಲೆಕ್ಕ ಪರಿಶೋಧನೆ ವೇಳೆ ಅಕ್ರಮ ಬೆಳಕಿಗೆ ಬಂತು. 19ರ ರಾತ್ರಿವರೆಗೆ ಪರಿಶೋಧನೆ ನಡೆಸಿದ ಬಳಿಕ ದೂರು ನೀಡಲಾಯಿತು.

ಟ್ರ್ಯಾಕ್ಟರ್ ಟ್ರೇಲರ್ ಪಲ್ಟಿ: ನಾಲ್ವರು ಸಾವು

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಮುಧೋಳ ರಸ್ತೆಯ ಮೌಲಾನಾ ಅಬ್ದುಲ್ ಕಲಾಂ ವೃತ್ತದ ಬಳಿ ಶನಿವಾರ ಬೆಳಗಿನಜಾವ ಟ್ರ್ಯಾಕ್ಟರ್ ಟ್ರೇಲರ್ ಪಲ್ಟಿಯಾಗಿ ಮಗು ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಟ್ರ್ಯಾಕ್ಟರ್‌ನಲ್ಲಿ 21 ಜನರಿದ್ದರು. 17 ಮಂದಿ ಗಾಯಗೊಂಡಿದ್ದು, ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಾಲಕ ಪುಂಡಲೀಕ ಶಕುರಾವ ಪಾಂಡೆ, ಪತ್ನಿ ಮನುಷಾ (19), ಮಗ ಅಲ್ಕಿ (2), ಸಹೋದರಿ ಲಕ್ಷ್ಮಿ ಸಮಾಧಾನ ಚಿರಮಾಡಿ (22), ಸಂಬಂಧಿ ರೇಖಾ ಪಾಂಡುರಂಗ ಬೋಕೆ (40) ಮೃತರು.

ಮಹಾರಾಷ್ಟ್ರದ ಯವತ್ಮಾಳ ಜಿಲ್ಲೆಯ ಪುಸಾದ ತಾಲ್ಲೂಕಿನ ಗೋಪ್ವಾಡಿ ಗ್ರಾಮದ ಕಾರ್ಮಿಕರು ಕಬ್ಬು ಕಟಾವು ಮುಗಿಸಿಕೊಂಡು ಮರಳಿ ಗ್ರಾಮಕ್ಕೆ ಹೋಗುವಾಗ ಅವಘಡ ಸಂಭವಿಸಿದೆ ಎಂದು ತಿಳಿಸಿದರು.

ಸಮುದ್ರ ಸೇರಿದ ಹಸಿರು ಕಡಲಾಮೆ

ಕಾರವಾರ: ಇಲ್ಲಿನ ಕಾಳಿ ನದಿ ಅಳಿವೆಯಲ್ಲಿ ಸಿಲುಕಿಕೊಂಡು, ರಕ್ಷಿಸಲ್ಪಟ್ಟಿದ್ದ ಹಸಿರು ಕಡಲಾಮೆಯನ್ನು ಶನಿವಾರ ಬೆಳಿಗ್ಗೆ ಇಲ್ಲಿನ ಟ್ಯಾಗೋರ್ ಕಡಲತೀರದಲ್ಲಿ ಸಮುದ್ರಕ್ಕೆ ಬಿಡಲಾಯಿತು.

ದೇಗುಲದಿಂದ ದಲಿತ ದಂಪತಿ ಹೊರಕ್ಕೆ

ಒಂದನೇ ಪುಟದಿಂದ...

ದಂಪತಿ ದೇಗುಲ ಪ್ರವೇಶಿಸಿದಾಗ ಅಲ್ಲಿದ್ದ ನಾರಾಯಣಪ್ಪ ಎಂಬುವರು ಮೈಮೇಲೆ ದೇವರು ಬಂದಂತೆ ನಟಿಸಿದರು ಎಂದು ಹೇಳಲಾಗಿದೆ. ಆ ವೇಳೆ, ‘ಇವರನ್ನು (ಪರಿಶಿಷ್ಟ ಜಾತಿ ದಂಪತಿ) ಒಳಗೆ ಬಿಟ್ಟವರು ಯಾರು? ಆಚೆ ಹೋಗು, ನಡೀ ಆಚೆ’ ಎಂದು ದಂಪತಿಯನ್ನು ಗದರಿಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿಷಯ ತಿಳಿಯುತ್ತಲೇ ಗ್ರಾಮಕ್ಕೆ ದೌಡಾಯಿಸಿದ ಡಿವೈಎಸ್‌ಪಿ ಓಂಪ್ರಕಾಶ್, ತಹಶೀಲ್ದಾರ್ ಎಂ.ಎನ್. ಕುಂಞ ಅಹಮದ್ ಶುಕ್ರವಾರ ರಾತ್ರಿ ಗ್ರಾಮಸ್ಥರೊಂದಿಗೆ ಶಾಂತಿ ಸಭೆ ನಡೆಸಿದರು.‘ದೇವಾಲಯವನ್ನು ಪ್ರವೇಶಿಸಲು ಎಲ್ಲ ಜಾತಿ, ಜನಾಂಗದವರಿಗೂ ಮುಕ್ತ ಅವಕಾಶ ನೀಡಬೇಕು’ ಎಂದು ಸಭೆಯಲ್ಲಿ ತಾಕೀತು ಮಾಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಅಧೀಕ್ಷಕ ಅಭಿಯಂತರರ ಕಛೇರಿ, ವಲಯ–2, ಬೆಂಕೇನಪಾ, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಬೆಂಗಳೂರು–560002

ನಂ.: ಅಅ/ಬೆಂಕೇನಪಾ/ವ–2/ಟೆಂಡ್/04/2025–26 ದಿನಾಂಕ: 21.02.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ–ಕರೆ–3

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ

ಅಧೀಕ್ಷಕ ಅಭಿಯಂತರರು ವಲಯ–2, ಬೆಂಕೇನಪಾ, ಬೆಂಗಳೂರು ಇವರು ಈ ಕೆಳಗೆ ತಿಳಿಸಿರುವ **ಬೆಂಗಳೂರು ಕೇಂದ್ರ ನಗರ ಪಾಲಿಕೆ, ವಲಯ–2ರ ವಿವಿಧ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆಗಾಗಿ** ಬೆಂಗಳೂರು ಕೇಂದ್ರ ನಗರ ಪಾಲಿಕೆ ಅಥವಾ ತತ್ಸಮಾನ ಕಾರ್ಮಿಕ ಇಲಾಖೆಯಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿವರ
1	ಡಿಸ್ಪೆನ್ಸರಿ ರಸ್ತೆ (ಒಪಿಹೆಚ್ ರಸ್ತೆ)ಯಿಂದ ಕಾಮರಾಜ ರಸ್ತೆ ಮತ್ತು ಇಬ್ರಾಹಿಂ ಸಾಹಿಬ್ ಸ್ಟ್ರೀಟ್ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆ. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 95.22, ಇಎಂಡಿ (ರೂ.ಗಳಲ್ಲಿ): 1,90,440/–.**
2	ಮಿಲ್ಲರ್ಸ್ ರಸ್ತೆ ಜಂಕ್ಷನ್, ಪ್ಲಾನಿಟೋರಿಯಂ ರಸ್ತೆ, ಸೈಂಟ್ ಜಾನ್ಸ್ ಚರ್ಚ್ ರಸ್ತೆ ಮತ್ತು ಸೈಂಟ್ ಜಾನ್ಸ್ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆ. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 113.23, ಇಎಂಡಿ (ರೂ.ಗಳಲ್ಲಿ): 2,00,000/–.**
3	ದತ್ತಾತ್ರೇಯ ದೇವಸ್ಥಾನ ವಾರ್ಡ್‌ನ 2ನೇ ದೇವಸ್ಥಾನ ರಸ್ತೆ, ಸಂಪಿಗೆ ರಸ್ತೆ, ರೈಲ್ವೇ ಪ್ಯಾರಲಲ್ ರಸ್ತೆ ಮತ್ತು ಬಿವಿಕೆ ಅಯ್ಯಂಗಾರ್ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆ. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 96.1, ಇಎಂಡಿ (ರೂ.ಗಳಲ್ಲಿ): 1,92,200/–.**
4	ಮಾವಳ್ಳಿ ಟ್ಯಾಂಕ್ ಬಂಡ್ ರಸ್ತೆ, ಸುಂಕೇನಹಳ್ಳಿ ವಾರ್ಡ್‌ನ ಡಿವಿಜಿ ರಸ್ತೆ, ಶಂಕರ ಮಠ ರಸ್ತೆ ಮತ್ತು ಪಿಎಂಕೆ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆ. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 109.38, ಇಎಂಡಿ (ರೂ.ಗಳಲ್ಲಿ): 2,00,000/–.**
5	ವಾಣಿ ವಿಲಾಸ್ ರಸ್ತೆ, ವಾಸವಿ ದೇವಸ್ಥಾನ ರಸ್ತೆ, ಕನಕಪುರ ರಸ್ತೆ, ಡಯಾಗೊನಲ್ ರಸ್ತೆ, ಪಟಾಲಮ್ಮ ರಸ್ತೆ ಮತ್ತು ಟಿ ಮರಿಯಪ್ಪ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆ. **ಕನಿಷ್ಠ ಮೀಸಲು ವಾರ್ಷಿಕ ಪರವಾನಗಿ ಶುಲ್ಕ (ರೂ. ಲಕ್ಷಗಳಲ್ಲಿ): 122.34, ಇಎಂಡಿ (ರೂ.ಗಳಲ್ಲಿ): 2,00,000/–.**

ಟೆಂಡರ್ ಅವಧಿ: 3 ವರ್ಷಗಳು + 2 ವರ್ಷಗಳ ವಿಸ್ತರಣೆ.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ **23.02.2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪ್ರಶ್ನೆಗಳನ್ನು ದಿನಾಂಕ **03.03.2026**ರ **ಸಂಜೆ 4:00 ಗಂಟೆಯೊಳಗೆ** ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು. (3) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ **07.03.2026**ರ **ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ಟೆಂಡರ್‌ಗಳನ್ನು ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಅಧೀಕ್ಷಕ ಅಭಿಯಂತರರ ಕಛೇರಿ, ವಲಯ–2, ಬೆಂಕೇನಪಾ, ಬೆಂಗಳೂರು ಇಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **09.03.2026**ರ **ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in**ನಿಂದ ಪಡೆದುಕೊಳ್ಳಬಹುದು.

ಸಹಿ/– ಅಧೀಕ್ಷಕ ಅಭಿಯಂತರರು, ವಲಯ–2, ಬೆಂಕೇನಪಾ

ತಾಯಿ ಸಮಾಧಿ ಸಮೀಪದಲ್ಲೇ ಮೂರುವರೆ ದಶಕದ ನಂತರ ತಂದೆಯ ಸಮಾಧಿ ನಿರ್ಮಿಸಿದ ಮಕ್ಕಳು

ಸಮಾಧಿಗಳಲ್ಲಿ ಮತ್ತೆ ‘ಒಂದಾದ’ ಅಪ್ಪ–ಅಮ್ಮ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಾಲವಾದ ತಂದೆ ಮತ್ತು ತಾಯಿಯ ಸಮಾಧಿಗಳು ಹತ್ತಿರದಲ್ಲೇ ಇರಬೇಕು ಎಂಬ ಮಕ್ಕಳ ಆಸೆ ಕೊನೆಗೂ ಈಡೇರಿದೆ. ಮೂರೂವರೆ ದಶಕದ ಹಿಂದೆ ಕಾಸರಗೋಡು ಜಿಲ್ಲೆಯಲ್ಲಿ ಅಂತ್ಯಸಂಸ್ಕಾರ ಮಾಡಿದ್ದ ತಂದೆಯ ಶರೀರದ ಅವಶಿಷ್ಟಗಳನ್ನು ಕೋಟಯಂನಲ್ಲಿ ತಾಯಿ ಅಂತ್ಯಸಂಸ್ಕಾರ ಮಾಡಿದ್ದ ಜಾಗಕ್ಕೆ ತಲುಪಿಸಿದ್ದಾರೆ.

ಮಕ್ಕಳ ಬಯಕೆಯಂತೆ ಸಾವಿನ ನಂತರ ಕೋಟಯಂನ ಕೊಲ್ಲಾಡ್ ಸೇಂಟ್ ಪೋಲ್ಸ್ ಆರ್ಥೊಡಾಕ್ಸ್ ಚರ್ಚ್‌ನ ಸೆಮಿಟರಿಯಲ್ಲಿ ‘ಒಂದಾದವರು’ ರೆವರೆಂಡ್ ಅಲೆಕ್ಸಾಂಡ್ರಿಯೋಸ್ ಕೋರ್ ಎಪಿಸ್ಕೋಪ ಮತ್ತು ತಂಗಮ್ಮ.

ರೆವರೆಂಡ್ ಅಲೆಕ್ಸಾಂಡ್ರಿಯೋಸ್ ಕೋರ್ ಎಪಿಸ್ಕೋಪ ಮತ್ತು ತಂಗಮ್ಮ ಅವರ ಸಮಾಧಿ

‘ಕೋಟಯಂನಿಂದ ಕೆಲಸದ ಸಲುವಾಗಿ 1945ರಲ್ಲಿ ಕಾಸರಗೋಡಿಗೆ ಬಂದಿದ್ದ ಅಜ್ಜ ನೀಲೇಶ್ವರದ ನರುಕ್ಕಿಲಕ್ಕಾಡ್ ಎಂಬಲ್ಲಿ ವಾಸವಾಗಿದ್ದರು. ಅವರ ಮಗ ಅಲೆಕ್ಸಾಂಡ್ರಿಯೋಸ್ ಕುಟುಂಬದವರ ಕೋಟಮಲ ಎಂಜಿಎಂ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದರು. ಶಾಲೆಯನ್ನು ಆರ್ಥೊಡಾಕ್ಸ್ ಚರ್ಚ್‌ಗೆ ನೀಡಲಾಯಿತು. ಮದುವೆಯಾದ ನಂತರ ಧಾರ್ಮಿಕ ಚಟುವಟಿಕೆಯಲ್ಲೂ ತೊಡಗಿಸಿಕೊಂಡು ಸೇಂಟ್ ಮೇರೀಸ್ ಆರ್ಥೊಡಾಕ್ಸ್ ಚರ್ಚ್ ಸ್ಥಾಪಿಸಿದರು. ಅಲ್ಲೇ ಧರ್ಮಗುರು ಆದರು. 1989ರ ಫೆ.19 ರಂದು ತೀರಿಕೊಂಡರು’ ಎಂದು ಅಲೆಕ್ಸಾಂಡ್ರಿಯೋಸ್ ಅವರ ಪುತ್ರ ಶಿಬು ಕುರಿಯಾಕೋಸ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ತಂದೆಯ ಅಂತ್ಯಸಂಸ್ಕಾರ ನೀಲೇಶ್ವರದ ಸೇಂಟ್ ಮೇರೀಸ್ ಆರ್ಥೊಡಾಕ್ಸ್ ಚರ್ಚ್ ಆವರಣದಲ್ಲಿ ಮಾಡಲಾಗಿತ್ತು. 2018ರಲ್ಲಿ ನನ್ನಿಬ್ಬರ ಹೆಣ್ಣುಮಕ್ಕಳ ಶಿಕ್ಷಣದ ಅಗತ್ಯಕ್ಕಾಗಿ ಕುಟುಂಬದ ಮೂಲವಾದ ಕೋಟಯಂನ ಕೊಲ್ಲಾಡ್‌ಗೆ ತೆರಳಿದೆವು. ಅಲ್ಲಿ ಅಮ್ಮ 2021ರಲ್ಲಿ ಸಾವಿಗೀಡಾದರು. ಅಪ್ಪ ನಮ್ಮಿಂದಲೂ–ಅಮ್ಮನಿಂದಲೂ ದೂರ ಇದ್ದಾರೆ ಎಂಬ ನೋವು ಕಾಡುತ್ತಿತ್ತು. ಹಾಗೆ, ಅಪ್ಪನ ಅವಶೇಷಗಳನ್ನು ಕೋಟಯಂಗೆ ಸಾಗಿಸಲು ಕಳೆದ ವರ್ಷ ನಿರ್ಧರಿಸಲಾಯಿತು. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಅನುಮತಿ ಪಡೆಯಲು ಒಂದು ವರ್ಷ ಬೇಕಾಯಿತು. ಫೆ.14ರಂದು ತೆಗೆದುಕೊಂಡು ಹೋಗಿ 15ರಂದು ಅಮ್ಮನ ಸಮೀಪದಲ್ಲೇ ಮರು ಅಂತ್ಯಸಂಸ್ಕಾರ ಮಾಡಲಾಯಿತು’ ಎಂದು ಅವರು ವಿವರಿಸಿದರು.

ಮಂಗಳೂರಿನಲ್ಲೂ ಧಾರ್ಮಿಕ ಚಟುವಟಿಕೆ

ಶಿಬು

ರೆವರೆಂಡ್ ಅಲೆಕ್ಸಾಂಡ್ರಿಯೋಸ್ ಕೋರ್ ಎಪಿಸ್ಕೋಪ ಅವರಿಗೆ ಮಂಗಳೂರು ಜೊತೆ ನಂಟಿತ್ತು. ಮಂಗಳೂರಿನಲ್ಲಿ ಆರ್ಥೊಡಾಕ್ಸ್ ಪಂಥದ ಚಟುವಟಿಕೆ ಹರಡಲು ಅವರು ಕಾರಣರಾಗಿದ್ದರು ಎಂದು ಪುತ್ರ ಶಿಬು ತಿಳಿಸಿದರು.

‘ಮಲಂಗರ ಆರ್ಥೊಡಾಕ್ಸ್ ಮುಖ್ಯ ಕಚೇರಿ ಇರುವುದು ಕೋಟಯಂನಲ್ಲಿ. ಕಾಸರಗೋಡಿನಲ್ಲಿ ಚರ್ಚ್ ಆರಂಭಿಸಿದ ತಂದೆ ತಿಂಗಳಲ್ಲಿ ಒಂದು ದಿನ ಮಂಗಳೂರಿಗೆ ಹೋಗಿ ಬಲ್ಮಠದ ಒಂದು ಸಭಾಂಗಣದಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಮಂಗಳೂರಿಗೆ ಹೋಗಿ ಬಂದು ಮಾಡುತ್ತಿದ್ದ ಕಾರಣ ನನ್ನ ಶಿಕ್ಷಣವೂ ಅಲ್ಲೇ ಆಯಿತು. ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಪಿಯುಸಿ ಮಾಡಿದೆ. ಮಣಿಪಾಲದ ಎಂಐಟಿಯಲ್ಲಿ ಎಂಜಿನಿಯರಿಂಗ್ ಮಾಡಿದೆ’ ಎಂದು ಶಾರ್ಜಾದಲ್ಲಿ ಎಂಜಿನಿಯರ್ ಆಗಿರುವ ಶಿಬು ತಿಳಿಸಿದರು.

‘ಕೋಟಯಂನಲ್ಲಿರುವ ಸಹೋದರಿಯರೊಂದಿಗೆ ಸೇರಿಕೊಂಡು ಈ ಕಾರ್ಯವನ್ನು ನೆರವೇರಿಸಲಾಗಿದೆ. ಪೊಲೀಸರು, ವೈದ್ಯಾಧಿಕಾರಿಗಳು, ಸಬ್ ಕಲೆಕ್ಟರ್, ತಹಶೀಲ್ದಾರ್ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳ ಸಮ್ಮುಖದಲ್ಲಿ ಶವಶರೀರದ ಅವಶೇಷಗಳನ್ನು ತೆಗೆಯಲಾಗಿದೆ. ಇಬ್ಬರಿಗೂ ಸಮಾಧಿಯನ್ನು ನಿರ್ಮಿಸಲಾಗಿದೆ. ಫೆ.22ರ ಭಾನುವಾರ ಚರ್ಚ್‌ನಲ್ಲಿ ವಿಶೇಷ ಪ್ರಾರ್ಥನೆ ಇದೆ. ಚರ್ಚ್ ಮತ್ತು ಸಮಾಜ ಹೇಗೆ ಪ್ರತಿಕ್ರಿಯಿಸುತ್ತದೆ ಎಂದು ಗೊತ್ತಿರಲಿಲ್ಲ. ಅಧಿಕಾರಿಗಳಿಂದ ಅನುಮತಿ ಸಿಗುತ್ತದೆಯೋ ಇಲ್ಲವೋ ಎಂಬ ಆತಂಕವೂ ಇತ್ತು. ಕೊನೆಗೆ ಎಲ್ಲವೂ ಸುಸೂತ್ರವಾಗಿ ನಡೆಯಿತು’ ಎಂದು ಶಿಬು ಹೇಳಿದರು.

1.70 ಕೋಟಿ ಮತದಾರರಿಗೆ ಕೊಕ್

ಒಂಬತ್ತು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಮತದಾರರ ಅಂತಿಮ ಪಟ್ಟಿ ಪ್ರಕಟ

• ಶೆಮಿನ್ ಜಾಯ್

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿದ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ ಒಂಬತ್ತರಲ್ಲಿ ಅಂತಿಮ ಮತದಾರರ ಪಟ್ಟಿಯಿಂದ 1.70 ಕೋಟಿ (ಶೇ 7.93) ಮತದಾರರನ್ನು ಕೈಬಿಡಲಾಗಿದೆ.

ಇದರಲ್ಲಿ ದೊಡ್ಡ ರಾಜ್ಯಗಳ ಪೈಕಿ ಗುಜರಾತ್‌ನಲ್ಲಿ ಅತಿ ಹೆಚ್ಚು ಅಂದರೆ ಶೇ 13.4ರಷ್ಟು ಹಾಗೂ ಕೇರಳದಲ್ಲಿ ಅತಿ ಕಡಿಮೆ ಅಂದರೆ ಶೇ 3.22ರಷ್ಟು ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ.

2025ರ ಅ.27ರಂದು ಎಸ್‌ಐಆರ್ ಆರಂಭವಾದಾಗ ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಪುದುಚೇರಿ, ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಮತದಾರರ ಸಂಖ್ಯೆ 21,45,62,215 ಇರುವುದಾಗಿ ಅಂದಾಜಿಸಲಾಗಿತ್ತು. ಆದರೆ, ಈಗ ಅದು 19,75,33,701ಕ್ಕೆ ಇಳಿದಿದೆ. 1,70,28,514 ಮತದಾರರನ್ನು ಕೈಬಿಡಲಾಗಿದೆ.

ಪುದುಚೇರಿ ಮತ್ತು ಲಕ್ಷದ್ವೀಪದ ಮತದಾರರ ಪಟ್ಟಿಯನ್ನು ಫೆ. 14ರಂದು ಹಾಗೂ ಗುಜರಾತ್‌ನ ಮತದಾರರ ಪಟ್ಟಿಯನ್ನು 17ರಂದು ಬಿಡುಗಡೆ ಮಾಡಿದ್ದು, ಇತರ ಆರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮತದಾರರ ಪಟ್ಟಿಯನ್ನು ಶನಿವಾರ ಪ್ರಕಟಿಸಲಾಯಿತು.

ಕಳೆದ ವರ್ಷ ವಿಧಾನಸಭಾ ಚುನಾವಣೆಗೂ ಮುನ್ನ ಮೊದಲ ಬಾರಿಗೆ ಎಸ್‌ಐಆರ್ ನಡೆಸಲಾದ ಬಿಹಾರವನ್ನು ಗಣನೆಗೆ ತೆಗೆದುಕೊಂಡರೆ, ಪಟ್ಟಿಯಿಂದ ಕೈಬಿಟ್ಟ ಒಟ್ಟು ಮತದಾರರ ಸಂಖ್ಯೆ 2.16 ಕೋಟಿ (ಶೇ 7.37) ಆಗುತ್ತದೆ. 2024ರ ಜೂನ್‌ನಲ್ಲಿ ಮತದಾರರ ಸಂಖ್ಯೆ 7.89 ಕೋಟಿ ಇದ್ದದ್ದು, ಸೆಪ್ಟೆಂಬರ್ ವೇಳೆಗೆ 7.43 ಕೋಟಿಗೆ ಇಳಿಕೆಯಾಗಿತ್ತು.

ಎಸ್‌ಐಆರ್ ಸಮಯದಲ್ಲಿ, ಕರಡು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರಿಗೆ ಹೊಸದಾಗಿ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಹಾಗೆಯೇ ಮತದಾರರ ಹೆಸರನ್ನು ಕೈಬಿಡಲು ಅರ್ಜಿ ಸಲ್ಲಿಸಬಹುದಾಗಿತ್ತು. ಕರಡು ಪಟ್ಟಿಯಲ್ಲಿದ್ದರೂ, 2002–2003ರ ಮತದಾರರ ಪಟ್ಟಿಯೊಂದಿಗೆ ತಾಳೆಯಾಗದ, ಅಗತ್ಯ ದಾಖಲೆ ಒದಗಿಸದ ಕಾರಣಕ್ಕೆ ಕೆಲವರ ಹೆಸರು ತೆಗೆದು ಹಾಕಲಾಗಿದೆ.

ಗುಜರಾತ್ ಮತದಾರರ ಪಟ್ಟಿಯಲ್ಲಿ ಅತಿ ಹೆಚ್ಚು ಅಂದರೆ ಶೇ 13.4ರಷ್ಟು ಬದಲಾವಣೆ ಕಂಡುಬಂದಿದೆ. ಇಲ್ಲಿ ಮತದಾರರ ಸಂಖ್ಯೆಯು 5.08 ಕೋಟಿಯಿಂದ 4.40 ಕೋಟಿಗೆ ಇಳಿಕೆಯಾಗಿದ್ದು, ಒಟ್ಟು 68.12 ಲಕ್ಷದಷ್ಟು ಕುಸಿದಿದೆ.

ಮಧ್ಯಪ್ರದೇಶವು 34.35 ಲಕ್ಷದಷ್ಟು ಮತದಾರರ ಹೆಸರನ್ನು ಕೈಬಿಡುವ ಮೂಲಕ ಎರಡನೇ ಸ್ಥಾನದಲ್ಲಿದೆ. ಆದರೆ, ಮತದಾರರ ಸಂಖ್ಯೆಯು 5.74 ಕೋಟಿಯಿಂದ 5.39 ಕೋಟಿಗೆ ಇಳಿದ ಕಾರಣ, ಪಟ್ಟಿಯಿಂದ ಕೈಬಿಟ್ಟಿರುವ ಮತದಾರರ ಪ್ರಮಾಣವು ಶೇ 5.96ರಷ್ಟಾಗಿದೆ.

ರಾಜಸ್ಥಾನದಲ್ಲಿ ಮತದಾರರ ಸಂಖ್ಯೆ 5.46 ಕೋಟಿಯಿಂದ 5.15 ಕೋಟಿಗೆ ಇಳಿಕೆಯಾಗಿದೆ. ಛತ್ತೀಸಗಢದಲ್ಲಿ 2.12 ಕೋಟಿಯಿಂದ 1.87 ಕೋಟಿಗೆ ಇಳಿದಿದೆ. ಕೇರಳದಲ್ಲಿ ಮತದಾರರ ಸಂಖ್ಯೆ 2.78 ಕೋಟಿಯಿಂದ 2.69 ಕೋಟಿಗೆ ಇಳಿದಿದೆ. ಗೋವಾದಲ್ಲಿ 11.85 ಲಕ್ಷದಿಂದ 10.57 ಲಕ್ಷಕ್ಕೆ ಇಳಿಕೆಯಾಗಿದೆ.

ತಮಿಳುನಾಡು: ನಾಳೆ ಮತದಾರರ ಅಂತಿಮ ಪಟ್ಟಿ ಪ್ರಕಟ

ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದಲ್ಲೂ ಎಸ್‌ಐಆರ್ ಪ್ರಕ್ರಿಯೆ ನಡೆದಿದ್ದು, ತಮಿಳುನಾಡಿನ ಮತದಾರರ ಅಂತಿಮ ಪಟ್ಟಿಯು ಸೋಮವಾರ (ಫೆ.23) ಪ್ರಕಟವಾಗಲಿದೆ. ಪಶ್ಚಿಮ ಬಂಗಾಳದ ಪಟ್ಟಿಯ ಒಂದು ಭಾಗ ಫೆಬ್ರುವರಿ 28ರಂದು ಹಾಗೂ ಉಳಿದ ಭಾಗವು ನ್ಯಾಯಾಂಗ ಪರಿಶೀಲನೆ ನಂತರ ಬಿಡುಗಡೆಯಾಗಲಿದೆ. ಉತ್ತರ ಪ್ರದೇಶದ ಪಟ್ಟಿಯು ಏಪ್ರಿಲ್ 6ರಂದು ಪ್ರಕಟವಾಗಲಿದೆ.

‘ಶೀಘ್ರದಲ್ಲೇ ನಕ್ಸಲ್ ಮುಕ್ತ’

ಗುವಾಹಟಿ (ಪಿಟಿಐ): ದೇಶದಲ್ಲಿ ಈ ವರ್ಷದ ಮಾರ್ಚ್ 31ರ ಗಡುವಿನೊಳಗೆ ನಕ್ಸಲ್ ಚಟುವಟಿಕೆಯನ್ನು ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದರು.

ಸಿಆರ್‌ಪಿಎಫ್‌ನ 87ನೇ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಜಮ್ಮು ಮತ್ತು ಕಾಶ್ಮೀರದಲ್ಲಿ ಕಲ್ಲು ತೂರಾಟದ ಘಟನೆಗಳು ಶೂನ್ಯಕ್ಕೆ ಇಳಿದಿವೆ, ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರವನ್ನು ನಿಭಾಯಿಸಲಾಗಿದೆ, ಅಲ್ಲದೆ ಮೂರು ವರ್ಷಗಳಲ್ಲಿ ನಕ್ಸಲರ ಬೆನ್ನು ಮೂಳೆ ಮುರಿಯಲಾಗಿದೆ’ ಎಂದು ಅವರು ವಿವರಿಸಿದರು.

‘ನಾನು ಸಿಆರ್‌ಪಿಎಫ್ ಮೇಲೆ ನಂಬಿಕೆಯಿಟ್ಟಿದ್ದೇನೆ. ಹೀಗಾಗಿಯೇ 2026ರ ಮಾರ್ಚ್ 31ರೊಳಗೆ ದೇಶವನ್ನು ನಕ್ಸಲ್ ಚಟುವಟಿಕೆಯಿಂದ ಮುಕ್ತಗೊಳಿಸುತ್ತೇವೆ ಎಂಬುದಾಗಿ ವಿಶ್ವಾಸದಿಂದ ಹೇಳಬಲ್ಲೆ’ ಎಂದರು.

ಛತ್ತೀಸಗಢ– ತೆಲಂಗಾಣ ಗಡಿಯಲ್ಲಿನ ಬೆಟ್ಟಗಳಲ್ಲಿ 2025ರ ಏಪ್ರಿಲ್– ಮೇ ತಿಂಗಳಲ್ಲಿ 21 ದಿನಗಳ ಕಾಲ ನಡೆದ ‘ಆಪರೇಷನ್ ಬ್ಲಾಕ್ ಫಾರೆಸ್ಟ್’ನಲ್ಲಿ 31 ನಕ್ಸಲರು ಮೃತಪಟ್ಟಿದ್ದನ್ನು ಸ್ಮರಿಸಿದ ಗೃಹ ಸಚಿವರು, ಕಾರ್ಯಾಚರಣೆಯನ್ನು ಶ್ಲಾಘಿಸಿದರು.

ದೇಶದಲ್ಲಿ 11 ವರ್ಷಗಳ ಹಿಂದೆ ಮೂರು ದೊಡ್ಡ ತಾಣಗಳಿದ್ದವು. ಅವೆಂದರೆ– ಜಮ್ಮು ಮತ್ತು ಕಾಶ್ಮೀರವು ಭಯೋತ್ಪಾದನೆಯ, ಈಶಾನ್ಯವು ನಕ್ಸಲ್ ಮತ್ತು ದಂಗೆಯ ತಾಣಗಳಾಗಿದ್ದವು. ಆ ಪ್ರದೇಶಗಳೀಗ ಶಾಂತಿ ಮತ್ತು ಪ್ರಗತಿಯ ಕೇಂದ್ರಗಳಾಗಿ ಬದಲಾಗಿವೆ ಎಂದು ತಿಳಿಸಿದರು.

ಒಂದು ಕಾಲದಲ್ಲಿ ಬಾಂಬ್ ದಾಳಿಗಳು, ಗುಂಡುಗಳು, ವಿನಾಶದ ದೃಶ್ಯಗಳೇ ಕಾಣುತ್ತಿದ್ದ ಈ ಪ್ರದೇಶಗಳು ಇಂದು ದೇಶದ ಅಭಿವೃದ್ಧಿಯ ಭಾಗವಾಗಿವೆ. ಬೆಳವಣಿಗೆಯ ಎಂಜಿನ್ ಆಗಿ ಮುನ್ನುಗ್ಗುತ್ತಿವೆ. ಸಿಆರ್‌ಪಿಎಫ್‌ನ ಶ್ರಮ, ಕೊಡುಗೆಗಳಿಲ್ಲದೆ ಈ ಭಾಗಗಳಲ್ಲಿ ಶಾಂತಿ ನೆಲಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಅಮಿತ್ ಶಾ ಪ್ರತಿಪಾದಿಸಿದರು.

ನುಸುಳುಕೋರರು ಹೊರಕ್ಕೆ: ಅಮಿತ್ ಶಾ


ಅಮಿತ್ ಶಾ

ಮುಂದಿನ ಐದು ವರ್ಷಗಳಲ್ಲಿ ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಮಾತ್ರವಲ್ಲದೇ ದೇಶದಿಂದಲೇ ಹೊರಹಾಕುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಭಾರತವು ನಕ್ಸಲರಿಂದ ಮುಕ್ತವಾಗಲು ಸಾಧ್ಯವಾಗುವುದಾದರೆ, ನುಸುಳುಕೋರರಿಂದಲೂ ಮುಕ್ತವಾಗಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ಅಸ್ಸಾಂ ಪೊಲೀಸರ 10ನೇ ಬೆಟಾಲಿಯನ್‌ನ ಹೊಸ ಕ್ಯಾಂಪಸ್‌ಗೆ ಅಡಿಪಾಯ ಹಾಕಿದ ಬಳಿಕ ಅವರು ಮಾತನಾಡಿದರು.

ನವದೆಹಲಿಯಲ್ಲಿ ನಡೆದ ಎ.ಐ ಶೃಂಗಸಭೆಗೆ ಅಡ್ಡಿಪಡಿಸಿದ ಯುವ ಕಾಂಗ್ರೆಸ್ ವಿರುದ್ಧ ಪಟ್ನಾದಲ್ಲಿ ಶನಿವಾರ ಬಿಜೆಪಿ ಕಾರ್ಯಕರ್ತರು ರಾಹುಲ್ ಗಾಂಧಿ ಅವರ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಎ.ಐ ಶೃಂಗಸಭೆಯಲ್ಲಿ ಅಂಗಿ ತೆಗೆದು ಪ್ರತಿಭಟಿಸಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರು

‘ಕೈ’ ಕಾರ್ಯಕರ್ತರು 5 ದಿನ ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಎ.ಐ ಶೃಂಗಸಭೆಯ ‘ಎಕ್ಸ್‌ಪೋ’ ನಡೆಯುತ್ತಿದ್ದ ಸಭಾಂಗಣದಲ್ಲಿ ಶುಕ್ರವಾರ ಕೆಲಹೊತ್ತು ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಸಮಿತಿಯ ನಾಲ್ವರು ಕಾರ್ಯಕರ್ತರನ್ನು ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ವಿಚಾರಣೆ ನಡೆಸಿದ ದೆಹಲಿ ನ್ಯಾಯಾಲಯವು ಬಂಧಿತರನ್ನು ಐದು ದಿನ ಪೊಲೀಸರ ಕಸ್ಟಡಿಗೆ ಒಪ್ಪಿಸಿದೆ.

ಆರೋಪಿಗಳ ಹೆಚ್ಚಿನ ವಿಚಾರಣೆ ಅಗತ್ಯವಿದ್ದು, ಅದಕ್ಕಾಗಿ ತಮ್ಮ ವಶಕ್ಕೆ ನೀಡಬೇಕು ಎಂದು ದೆಹಲಿ ಪೊಲೀಸರು ಮನವಿ ಮಾಡಿದರು. ಈ ಮನವಿಯನ್ನು ನ್ಯಾಯಾಧೀಶ ರವಿ ಅವರು ಪುರಸ್ಕರಿಸಿದರು.

ಬಂಧಿತರನ್ನು ಯುವ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿ ಕೃಷ್ಣ ಹರಿ, ಬಿಹಾರ ರಾಜ್ಯ ಘಟಕದ ಕಾರ್ಯದರ್ಶಿ ಕುಂದನ್ ಯಾದವ್, ಉತ್ತರ ಪ್ರದೇಶ ಘಟಕದ ಅಧ್ಯಕ್ಷ ಅಜಯ್ ಕುಮಾರ್, ತೆಲಂಗಾಣ ಘಟಕದ ಅಧ್ಯಕ್ಷ ನರಸಿಂಹ ಯಾದವ್ ಎಂದು ಗುರುತಿಸಲಾಗಿದೆ.

‘ಆರೋಪಿಗಳ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಬೇಕಿದೆ. ಇದಕ್ಕಾಗಿ ಅವರನ್ನು ವಶಕ್ಕೆ ಪಡೆಯುವುದು ಅಗತ್ಯ. ಇದೊಂದು ಗಂಭೀರವಾದ ವಿಚಾರ. ಪೊಲೀಸರು ಅವರನ್ನು ತಡೆಯಲು ಹೋದ ವೇಳೆ, ಅವರ ಮೇಲೆಯೂ ಹಲ್ಲೆ ನಡೆಸಿದ್ದು, ಇದರ ಪರಿಣಾಮ ಮೂವರು ಪೊಲೀಸರು ಗಾಯಗೊಂಡಿದ್ದಾರೆ’ ಎಂದು ಪೊಲೀಸರ ಪರ ವಕೀಲರು ತಿಳಿಸಿದರು.

ಪ್ರತಿಭಟನೆ ಆಯೋಜನೆಯ ಜೊತೆಗೆ ಹೋರಾಟಕ್ಕೆ ಸಿಕ್ಕ ದೇಣಿಗೆ, ಟೀ–ಶರ್ಟ್‌ನ ಮೂಲವನ್ನು ಪತ್ತೆ ಹಚ್ಚಬೇಕಿದೆ ಎಂದು ವಕೀಲರು ನ್ಯಾಯಾಧೀಶರ ಗಮನ ಸೆಳೆದರು.

ಆರೋಪಿಗಳ ಪರ ವಾದ ಮಂಡಿಸಿದ ವಕೀಲರು, ‘ಪ್ರತಿಭಟನಕಾರರು ರಾಜಕೀಯ ಪಕ್ಷವೊಂದಕ್ಕೆ ಸೇರಿದ್ದು, ಪ್ರಜಾಪ್ರಭುತ್ವದಲ್ಲಿನ ಹಕ್ಕಿನ ಅಡಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ. ಅವರ ಬಂಧನವು ಪ್ರಜಾಪ್ರಭುತ್ವದ ಘನತೆಯನ್ನು ತಗ್ಗಿಸಿದೆ. ಪ್ರತಿಭಟನೆ ಮಾಡುವವರನ್ನು ಬಂಧಿಸುವುದಾದರೆ, ಸಂಸತ್ತಿನಲ್ಲಿ ಪ್ರತಿಭಟಿಸಿದ ಸಂಸದರನ್ನು ಕೂಡ ಬಂಧಿಸಬೇಕು’ ಎಂದರು.

ನಡೆದದ್ದೇನು?: ಶುಕ್ರವಾರ ಮಧ್ಯಾಹ್ನ 12.30ರ ಸುಮಾರಿಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ಎ.ಐ ಶೃಂಗಸಭೆ ನಡೆಯುತ್ತಿದ್ದ ‘ಭಾರತ ಮಂಟಪ’ದ ಸಭಾಂಗಣ ಸಂಖ್ಯೆ 5ರ ಒಳಗೆ ಏಕಾಏಕಿ ಪ್ರವೇಶಿಸಿ ಶರ್ಟ್ ಬಿಚ್ಚಿ ಪ್ರತಿಭಟನೆ ನಡೆಸಿದ್ದಾರೆ. ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ರಗಳಿರುವ ಟಿ-ಶರ್ಟ್‌ಗಳನ್ನು ಅವರು ಪ್ರದರ್ಶಿಸಿದರು. ಟಿ–ಶರ್ಟ್ ಮೇಲೆ ‘ಭಾರತ– ಅಮೆರಿಕ ವ್ಯಾಪಾರ ಒಪ್ಪಂದ’, ‘ಎಪ್‌ಸ್ಟೈನ್ ಫೈಲ್ಸ್’ ಮತ್ತು ‘ಪ್ರಧಾನಿ ರಾಜಿಯಾಗಿದ್ದಾರೆ’ ಎಂದು ಬರೆಯಲಾಗಿತ್ತು.

> ಎ.ಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯು ಅತ್ಯಂತ ಆಕ್ಷೇಪಾರ್ಹ ಹಾಗೂ ಖಂಡನೀಯವಾಗಿದೆ
> **ಮಾಯಾವತಿ**, ಬಿಎಸ್‌ಪಿ ಮುಖ್ಯಸ್ಥೆ

> ಬಡ ಕುಟುಂಬದ ವ್ಯಕ್ತಿಯೊಬ್ಬರು ದೇಶದ ಪ್ರಧಾನಿಯಾಗಿರುವುದನ್ನು ಸಹಿಸಲು ಸಾಧ್ಯವಾಗದೇ, ಕಾಂಗ್ರೆಸ್ ಪಕ್ಷವು ಪ್ರತಿಭಟನೆ ನಡೆಸಿದೆ
> **ಮುಕ್ತಾರ್ ಅಬ್ಬಾಸ್ ನಖ್ವಿ**, ಬಿಜೆಪಿ ನಾಯಕ

> ಒಳ್ಳೆಯ ಕಾರ್ಯಕ್ರಮವನ್ನು ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲೆಯಾಗಿ ಅಡ್ಡಿಪಡಿಸಿದರು. ನಿಜಕ್ಕೂ ದುಃಖದ ವಿಚಾರ. ಕಾಂಗ್ರೆಸ್ ಪಕ್ಷವು ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದ್ದು, ಇದನ್ನು ಬಲವಾಗಿ ಖಂಡಿಸುತ್ತೇನೆ
> **ಎನ್.ಚಂದ್ರಬಾಬು ನಾಯ್ಡು**, ಆಂಧ್ರಪ್ರದೇಶ ಮುಖ್ಯಮಂತ್ರಿ

> ಎ.ಐ ಶೃಂಗಸಭೆಗೆ ಕಾಂಗ್ರೆಸ್ ಪಕ್ಷವು ಯುವ ಕಾರ್ಯಕರ್ತರನ್ನು ಕಳುಹಿಸುವ ಮೂಲಕ ದೇಶದ ವಿರುದ್ಧ ಅತ್ಯಂತ ದೊಡ್ಡ ಪಾಪ ಎಸಗಿದೆ. ಇದಕ್ಕಿಂತ ನಾಚಿಕೆಗೇಡಿನ ವಿಚಾರ ಇನ್ನೊಂದಿಲ್ಲ
> **ಕಿರಣ್ ರಿಜಿಜು**, ಸಂಸದೀಯ ವ್ಯವಹಾರಗಳ ಸಚಿವ

ಕೋರ್ಟ್‌ಗೆ ರಾಹುಲ್ ಹಾಜರು

ಮುಂಬೈ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಮುಂಬೈನಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ಸಭೆ ನಡೆಸಿದರು. ಇತ್ತೀಚೆಗೆ ನಡೆದ ಬೃಹನ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪಕ್ಷದ ಸೋಲಿನ ಬಗ್ಗೆ ವಿವರಣೆ ಪಡೆದುಕೊಂಡರು.

ಸದ್ಯದ ರಾಜಕೀಯ ಬೆಳವಣಿಗೆ ಕಾರಣದಿಂದ ಮಹಾರಾಷ್ಟ್ರದಲ್ಲಿ ಪಕ್ಷದ ಸಂಘಟನೆ ಬಲಪಡಿಸುವ ಕುರಿತು ಅವರು ಚರ್ಚೆ ನಡೆಸಿದರು. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹರ್ಷವರ್ಧನ ಸಪ್ಕಾಲ್, ಸಂಸದೆ ವರ್ಷಾ ಗಾಯಕ್ವಾಡ್ ಸಭೆಯಲ್ಲಿ ಇದ್ದರು.

ಸಪ್ಕಾಲ್ ಹೊಸ ಖಾತರಿದಾರ: ಶನಿವಾರ ಬೆಳಿಗ್ಗೆ ರಾಹುಲ್ ಗಾಂಧಿ ಅವರು ಭಿವಂಡಿ ಕೋರ್ಟ್‌ಗೆ ಹಾಜರಾಗಿ 2024ರಲ್ಲಿ ತಮ್ಮ ವಿರುದ್ಧ ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರು ದಾಖಲಿಸಿದ್ದ ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ದಾಖಲಿಸಿದರು.

ಈ ಪ್ರಕರಣದಲ್ಲಿ ಹರ್ಷವರ್ಧನ ಸಪ್ಕಾಲ್ ಅವರು ತಮ್ಮ ನೂತನ ಖಾತರಿದಾರರಾಗಲಿದ್ದಾರೆ ಎಂದು ರಾಹುಲ್ ಅವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಖಾತರಿದಾರರಾಗಿದ್ದ ಕೇಂದ್ರದ ಮಾಜಿ ಸಚಿವ ಶಿವರಾಜ್ ಪಾಟೀಲ್ ಅವರು ಡಿಸೆಂಬರ್‌ನಲ್ಲಿ ಮೃತಪಟ್ಟಿದ್ದರು. ಹೊಸ ಶ್ಯೂರಿಟಿ ನೀಡಲು ಖುದ್ದು ಹಾಜರಾಗುವಂತೆ ರಾಹುಲ್‌ಗೆ ಕೋರ್ಟ್ ಸೂಚಿಸಿತ್ತು.

ಏನಿದು ಪ್ರಕರಣ: 2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಸೋನಾಲೆ ಗ್ರಾಮದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್, ‘ಮಹಾತ್ಮ ಗಾಂಧೀಜಿ ಅವರ ಹತ್ಯೆಯ ಹಿಂದೆ ಆರ್‌ಎಸ್‌ಎಸ್ ಕೈವಾಡ ಇದೆ’ ಎಂದು ಹೇಳಿದ್ದಾಗಿ ಆರೋಪಿಸಿ, ಆರ್‌ಎಸ್‌ಎಸ್ ಕಾರ್ಯಕರ್ತ ರಾಜೇಶ್ ಕುಂತೆ ಎಂಬುವರು ಪ್ರಕರಣ ದಾಖಲಿಸಿದ್ದಾರೆ.

ಕಪ್ಪು ಬಾವುಟ ಪ್ರದರ್ಶಿಸಿದ ಬಿಜೆಪಿ

ಭಿವಂಡಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹೋಗುತ್ತಿದ್ದ ಸಂದರ್ಭದಲ್ಲಿ ಠಾಣೆ ಜಿಲ್ಲೆಯ ಮುಲುಂದ್ ಟೋಲ್ ಬಳಿ ರಾಹುಲ್ ಅವರಿಗೆ ಬಿಜೆಪಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿದರು. ನವದೆಹಲಿಯಲ್ಲಿ ನಡೆದ ಎ.ಐ ಶೃಂಗಸಭೆಯಲ್ಲಿ ಪ್ರತಿಭಟನೆ ನಡೆಸುವ ಮೂಲಕ ಯುವ ಕಾಂಗ್ರೆಸ್ ಕಾರ್ಯಕರ್ತರು ದೇಶದ ಮಾನವನ್ನು ಹರಾಜು ಹಾಕಿದ್ದಾರೆ ಎಂದು ಆರೋಪಿಸಿ ಘೋಷಣೆಗಳನ್ನು ಕೂಗಿದರು.

ಬಿಜೆಪಿ ಶಾಸಕ ‘ಲೋಕಾ’ ಬಲೆಗೆ

ಒಂದನೇ ಪುಟದಿಂದ...

ದಾಳಿ ನಡೆಸಿದ ವೇಳೆ ಗುರು ನಾಯ್ಕ್ ಅವರು ₹50 ಸಾವಿರ ನಗದು ಇದ್ದ ಕವರ್ ಅನ್ನು ಆಸ್ಪತ್ರೆ ಹಿಂಭಾಗದ ಖಾಸಗಿ ಶಾಲೆಯೊಂದರ ಕಾಂಪೌಂಡ್ ಒಳಕ್ಕೆ ಎಸೆದ ಘಟನೆಯೂ ನಡೆಯಿತು. ಆ ಹಣ ಹಾಗೂ ಆಸ್ಪತ್ರೆಯಲ್ಲಿ ಸಿಕ್ಕಿದ ₹4.50 ಲಕ್ಷವನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಚಂದ್ರು ಲಮಾಣಿ ಅವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ಆರೋಗ್ಯ ತಪಾಸಣೆ ಮಾಡಿಸಿದ ಬಳಿಕ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು’ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ದೂರಿನ ವಿವರ: ಗದಗ ತಾಲ್ಲೂಕಿನ ಚಿಂಚಲಿ ಗ್ರಾಮದ ಪ್ರಥಮದರ್ಜೆ ಸಿವಿಲ್ ಗುತ್ತಿಗೆದಾರ ವಿಜಯ ಪೂಜಾರ ಅವರು ‘ಶಾಸಕ ಮತ್ತು ಆಪ್ತ ಸಹಾಯಕರು ಬೆದರಿಕೆ ಒಡ್ಡಿ, ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ’ ಎಂದು ಫೆ.18ರಂದು ಗದಗ ಲೋಕಾಯುಕ್ತ ಠಾಣೆಗೆ ದೂರು ಸಲ್ಲಿಸಿದ್ದರು.

ವಿಜಯ್ ಅವರು ವಿವಿಧ ಇಲಾಖೆಗಳ ಗುತ್ತಿಗೆ ಕಾಮಗಾರಿ ಮಾಡುತ್ತಿದ್ದು, 2025ರ ಜುಲೈನಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಲಕ್ಷ್ಮೇಶ್ವರ ತಾಲ್ಲೂಕಿನ ಸಂಕದಾಳ ಗ್ರಾಮದಲ್ಲಿ ಹಳ್ಳಕ್ಕೆ ತಡೆಗೋಡೆ ನಿರ್ಮಿಸುವ ಎರಡು ಕಾಮಗಾರಿಗಳನ್ನು ನಿರ್ವಹಿಸಲು ಕಾರ್ಯಾದೇಶ ಪಡೆದಿದ್ದರು.

‘ಕಾಮಗಾರಿಗೆ ಶಿರಹಟ್ಟಿ ಕ್ಷೇತ್ರದ ಶಾಸಕರು ತೊಂದರೆ ಮಾಡುತ್ತಿದ್ದು, ನಾನು ಇವರನ್ನು ಭೇಟಿಯಾದಾಗ ಶಾಸಕರ ಆಪ್ತ ಸಹಾಯಕರಾದ ಮಂಜುನಾಥ ವಾಲ್ಮೀಕಿ ಮತ್ತು ಗುರು ನಾಯ್ಕ್, ‘ನಮಗೆ ತಿಳಿಸದೇ ಕಾಮಾಗಾರಿ ಏಕೆ ಮಾಡುತ್ತಿದ್ದೀರಾ? ಟೆಂಡರ್ ಕ್ಯಾನ್ಸಲ್ ಮಾಡಿಸುವೆ’ ಎಂದು ಬೆದರಿಸಿದ್ದರು.

‘12 ಪರ್ಸೆಂಟ್ ಕಮಿಷನ್ ಕೊಟ್ಟರೆ ಮಾತ್ರ ಕೆಲಸ ಮಾಡಲು ಬಿಡುವೆ. ಇಲ್ಲದಿದ್ದರೆ ರೌಡಿಗಳನ್ನು ಕಳುಹಿಸಿ ಬುದ್ಧಿ ಕಲಿಸುವೆ’ ಎಂದು ಧಮ್ಕಿ ಹಾಕಿ, ಎರಡೂ ಕಾಮಗಾರಿಗೆ ₹11 ಲಕ್ಷ ಹಣವನ್ನು ಲಂಚವಾಗಿ ಕಮಿಷನ್ ರೂಪದಲ್ಲಿ ಕೊಡಲು ಒತ್ತಾಯ ಮಾಡಿದ್ದರು’ ಎಂದು ವಿಜಯ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಮಂಜುನಾಥ, ಗುರು ನಾಯ್ಕ್

> ಚಂದ್ರು ಲಮಾಣಿ ಅವರು ₹ 5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿರುವ ವಿಷಯದ ಬಗ್ಗೆ ನನಗಿನ್ನೂ ಮಾಹಿತಿ ಇಲ್ಲ. ಸಂಪೂರ್ಣ ಮಾಹಿತಿ ಪಡೆದು ಪ್ರತಿಕ್ರಿಯಿಸುವೆ
> **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> ಬಿಜೆಪಿಯವರು ಈ ದೇಶದಲ್ಲೇ ಅತ್ಯಂತ ಪ್ರಾಮಾಣಿಕರಲ್ಲವೇ? ಅವರು ಭ್ರಷ್ಟಾಚಾರಿಗಳು ಆಗಿರುವುದಿಲ್ಲವಲ್ಲ! ನಿಮಗೆ ಯಾರೂ ತಪ್ಪು ಮಾಹಿತಿ ನೀಡಿರಬೇಕು
> **ಡಿ.ಕೆ. ಶಿವಕುಮಾರ್**, ಉಪ ಮುಖ್ಯಮಂತ್ರಿ

ವೇಗವಾಗಿ ಬೆಳೆದು ಮುಗ್ಗರಿಸಿದರು

ಪ್ರಜಾವಾಣಿ ವಾರ್ತೆ

ಗದಗ: ಸರ್ಕಾರಿ ವೈದ್ಯರಾಗಿದ್ದ ಚಂದ್ರು ಲಮಾಣಿ ಅವರು ಯಾವುದೇ ‘ಗಾಡ್ ಫಾದರ್’ ಇಲ್ಲದೇ ಅತ್ಯಲ್ಪ ಸಮಯದಲ್ಲೇ ರಾಜಕೀಯವಾಗಿ ಉನ್ನತಿಗೆ ಏರಿದ್ದರು.

ಮುಂಡರಗಿ ತಾಲ್ಲೂಕಿನ ದಿಂಡೂರು ತಾಂಡಾದ ಚಂದ್ರು ಲಮಾಣಿ ರಾಜಕಾರಣಿ ಆಗುವುದಕ್ಕೂ ಮುನ್ನ ಶಿರಹಟ್ಟಿ ತಾಲ್ಲೂಕು ಆರೋಗ್ಯಾಧಿಕಾರಿಯಾಗಿದ್ದರು. ಆಗ ಹೊರರೋಗಿ ವಿಭಾಗದ ಚೀಟಿ ಮಾಡುವ ಹಣದಲ್ಲಿನ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಇವರ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು. ಆ ನಂತರ, ನೌಕರಿಗೆ ರಾಜೀನಾಮೆ ನೀಡಿ, ಲಕ್ಷ್ಮೇಶ್ವರ ಪಟ್ಟಣದಲ್ಲಿ ಬಾಲಾಜಿ ಆಸ್ಪತ್ರೆಯನ್ನು ಆರಂಭಿಸಿದ್ದರು.

ಮೊದಲ ಯತ್ನದಲ್ಲೇ ಗೆಲುವು: ಕೋವಿಡ್ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜನೆ, ಉಚಿತ ಆರೋಗ್ಯ ತಪಾಸಣೆ, ಆಹಾರ ಕಿಟ್ ವಿತರಣೆ ಮಾಡುವ ಮೂಲಕ ಜನರ ಮನಗೆದ್ದಿದ್ದರು. ಅದನ್ನೇ ಚಿಮ್ಮುಹಲಗೆ ಮಾಡಿಕೊಂಡು ರಾಜಕೀಯ ಕ್ಷೇತ್ರ ಪ್ರವೇಶಿಸಿದ್ದರು.

2018–23ರ ಅವಧಿಯಲ್ಲಿ ಶಿರಹಟ್ಟಿ ಮೀಸಲು ಕ್ಷೇತ್ರದ ಬಿಜೆಪಿ ಶಾಸಕರಾಗಿದ್ದ ರಾಮಣ್ಣ ಲಮಾಣಿ ಕಾರ್ಯಕರ್ತರ ಅಸಮಾಧಾನಕ್ಕೆ ಗುರಿಯಾಗಿದ್ದರು. ಆಗ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿದ್ದ ರಾಮಕೃಷ್ಣ ದೊಡ್ಡಮನಿ ಅವರಿಗೆ ಟಿಕೆಟ್ ಕೈ ತಪ್ಪಿದ್ದರಿಂದ ಪ್ರತಿಸ್ಪರ್ಧಿ ಪಕ್ಷದಲ್ಲೂ ಭಿನ್ನಮತ ಸ್ಫೋಟಗೊಂಡಿತ್ತು.

ಬಿಜೆಪಿ ಕಾರ್ಯಕರ್ತರ ಅಸಮಾಧಾನ, ಪ್ರತಿಸ್ಪರ್ಧಿ ಪಕ್ಷದ ಭಿನ್ನಮತದ ಒಡಕಿನ ಲಾಭದಲ್ಲಿ ಬಿಜೆಪಿ ಅಭ್ಯರ್ಥಿ ಚಂದ್ರು ಲಮಾಣಿ 2023ರ ಚುನಾವಣೆಯಲ್ಲಿ 74,489 ಮತಗಳನ್ನು ಪಡೆಯುವ ಮೂಲಕ 28,520 ಮತಗಳ ಅಂತರದ ಗೆಲುವು ದಾಖಲಿಸಿದ್ದರು.

ಕಾಂಗ್ರೆಸ್‌ನಿಂದ ಷಡ್ಯಂತ್ರ: ಆರೋಪ

‘ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ಬಲೆಗೆ ಬೀಳಿಸಲು ಕಾಂಗ್ರೆಸ್ ಷಡ್ಯಂತ್ರ ಮಾಡಿದೆ’ ಎಂದು ಬಿಜೆಪಿ ಕಾರ್ಯಕರ್ತರು ಆರೋಪ ಮಾಡಿದ್ದಾರೆ.

ಶನಿವಾರ ಮಧ್ಯಾಹ್ನ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ಮಾಹಿತಿ ತಿಳಿಯುತ್ತಿದ್ದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಬಾಲಾಜಿ ಆಸ್ಪತ್ರೆ ಸಮೀಪ ಜಮಾಯಿಸಿದ್ದರು. ಕಾಂಗ್ರೆಸ್ ಸ್ಥಳೀಯ ನಾಯಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಕೆಲವು ದಿನಗಳ ಹಿಂದೆ ತಾಲ್ಲೂಕಿನ ಬೆಳ್ಳಟ್ಟಿಯಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ.ಪಾಟೀಲ ಮತ್ತು ಶಾಸಕ ಡಾ.ಚಂದ್ರು ಲಮಾಣಿ ನಡುವೆ ವಾಗ್ವಾದ ನಡೆದಿತ್ತು. ಇದನ್ನು ಪ್ರಸ್ತಾಪಿಸಿ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದರು.

‘ಕಾಂಗ್ರೆಸ್ ಮುಖಂಡರ ಜತೆಗೆ ಲಂಬಾಣಿ ಸಮುದಾಯದ ಸ್ವಾಮೀಜಿಯೊಬ್ಬರೂ ಸೇರಿ ಶಾಸಕರ ವಿರುದ್ಧ ಷಡ್ಯಂತ್ರ ಹೆಣೆದಿದ್ದಾರೆ’ ಎಂದೂ ಕಿಡಿಕಾರಿದರು.

‘ವಿಮಾನಯಾನ ಸಚಿವರನ್ನು ವಜಾಗೊಳಿಸಿ’

ನವದೆಹಲಿ (ಪಿಟಿಐ): ‘ಮಹಾರಾಷ್ಟ್ರ ಉಪ ಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಅವರು ಪ್ರಯಾಣಿಸುತ್ತಿದ್ದ ವಿಮಾನ ಅಪಘಾತಕ್ಕೆ ಸಂಬಂಧಿಸಿದಂತೆ ಸ್ವತಂತ್ರ ತನಿಖೆ ನಡೆಸಬೇಕು. ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಅವರನ್ನು ವಜಾಗೊಳಿಸಬೇಕು’ ಎಂದು ಎನ್‌ಸಿಪಿ (ಶರದ್ ಪವಾರ್) ಬಣದ ಶಾಸಕ ರೋಹಿತ್ ಪವಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶನಿವಾರ ಪತ್ರ ಬರೆದು ಒತ್ತಾಯಿಸಿದ್ದಾರೆ.

‘ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ವಿಎಸ್‌ಆರ್ ವೆಂಚರ್ಸ್‌ನ ‘ಲಿಯರ್‌ಜೆಟ್–45’ ವಿಮಾನವು ಜ.28ರಂದು ಮಹಾರಾಷ್ಟ್ರದ ಬಾರಾಮತಿಯಲ್ಲಿ ಪತನಗೊಂಡಿತು. ಚಾರ್ಟರ್ ಕಂಪನಿಯ ಪಿತೂರಿಯ ಭಾಗವಾಗಿ ಈ ಅಪಘಾತ ಸಂಭವಿಸಿದೆ. ಸಂಸ್ಥೆಯ ಜೊತೆಗೆ ಸಚಿವ ರಾಮಮೋಹನ್ ನಾಯ್ಡು ಅವರಿಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಹೀಗಾಗಿ, ಗಂಭೀರವಾದ ಪ್ರಶ್ನೆಗಳು ಉದ್ಭವಿಸಿವೆ. ಪ್ರಕರಣದ ಕುರಿತು ಸ್ವತಂತ್ರ ತನಿಖೆ ನಡೆಸಬೇಕು. ಅಂತರರಾಷ್ಟ್ರೀಯ ಸಂಸ್ಥೆಗಳ ನೆರವು ಪಡೆದು ತನಿಖೆ ನಡೆಸಬೇಕು’ ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

9 ಸಿಬ್ಬಂದಿಗೆ ಗಾಯ

ಶ್ರೀನಗರ (ಪಿಟಿಐ): ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ವಾಹನವು ನದಿಗೆ ಉರುಳಿದ ಪರಿಣಾಮ ಒಂಬತ್ತು ಸಿಬ್ಬಂದಿ ಗಾಯಗೊಂಡಿದ್ದಾರೆ.

ಶ್ರೀನಗರದ ಹೊರ ವಲಯದ ಅಹ್ಮದ್ ನಗರದಲ್ಲಿ ಅಪಘಾತ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿ ವಾಹನ ನದಿಗೆ ಉರುಳಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಶ್ಚಿಮ ಬಂಗಾಳ: ಮಾ.1ರಿಂದ ಸಿಆರ್‌ಪಿಎಫ್ ನಿಯೋಜನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಸಿದ್ಧತೆ ಆರಂಭಿಸಿದ್ದು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ 480 ತುಕಡಿಗಳನ್ನು ಮಾರ್ಚ್ 1ರಿಂದಲೇ ಅಲ್ಲಿಗೆ ನಿಯೋಜಿಸಲಾಗುತ್ತಿದೆ ಎಂದು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚುನಾವಣೆಗೆ ಕೆಲವೇ ದಿನಗಳು ಬಾಕಿ ಇರುವ ಕಾರಣ, ಮಾರ್ಚ್ 1ರಿಂದ ಮೊದಲ ತಂಡದ 240 ತುಕಡಿಗಳನ್ನು ಹಾಗೂ ಮಾ. 10ರಂದು ಎರಡನೇ ಹಂತದಲ್ಲಿ ಅಷ್ಟೇ ಸಂಖ್ಯೆಯ ತುಕಡಿಗಳನ್ನು ನಿಯೋಜಿಸಲಾಗುತ್ತದೆ. ಈ ತುಕಡಿಗಳಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆ, ಗಡಿ ಭದ್ರತಾ ಪಡೆ, ಕೇಂದ್ರ ಕೈಗಾರಿಕಾ ಭದ್ರತಾ ಪಡೆ, ಇಂಡೊ-ಟಿಬೆಟಿಯನ್ ಗಡಿ ಪೊಲೀಸ್ ಮತ್ತು ಸಶಸ್ತ್ರ ಸೀಮಾ ಬಲದ ಸಿಬ್ಬಂದಿ ಇರುತ್ತಾರೆ ಎಂದು ಅಧಿಕಾರಿ ವಿವರಿಸಿದರು.

ಚುನಾವಣಾ ಪ್ರಕ್ರಿಯೆ ಕುರಿತು ವಿಶ್ವಾಸ ಮೂಡಿಸುವ ಕೆಲಸವನ್ನು ಈ ಪಡೆಗಳು ಮಾಡಲಿವೆ. ವಿದ್ಯುನ್ಮಾನ ಮತಯಂತ್ರಗಳನ್ನು ಇರಿಸುವ ಭದ್ರತಾ ಕೊಠಡಿಗಳಿಗೆ ರಕ್ಷಣೆ ಒದಗಿಸುವುದೂ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ಭದ್ರತಾ ಕಾರ್ಯಗಳಲ್ಲಿ ಸಶಸ್ತ್ರ ಪಡೆಗಳ ಸಿಬ್ಬಂದಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಹೇಳಿದರು.

ಟಿಎಂಸಿಗೆ ಸಿಪಿಎಂ ನಾಯಕ

ಕೋಲ್ಕತ್ತ (ಪಿಟಿಐ): ಪಕ್ಷಕ್ಕೆ ಈಚೆಗಷ್ಟೇ ರಾಜೀನಾಮೆ ನೀಡಿದ್ದ ಸಿಪಿಎಂ ಹಿರಿಯ ನಾಯಕ ಪ್ರತೀಕ್ ಉರ್ ರೆಹಮಾನ್ ಅವರು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಶನಿವಾರ ಸೇರ್ಪಡೆಯಾದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಸ್ಪರ್ಧಿಸಿದ್ದ ಪ್ರತೀಕ್ ಅವರು, ಅಭಿಷೇಕ್ ಸಮ್ಮುಖದಲ್ಲೇ ಟಿಎಂಸಿಗೆ ಸೇರ್ಪಡೆಗೊಂಡರು.

‘ಬಿಜೆಪಿಯ ನಿರಂಕುಶ ಆಡಳಿತದ ವಿರುದ್ಧ ಹೋರಾಟ ನಡೆಸಲು ಬಯಸುತ್ತೇನೆ. ಜನರನ್ನು ವಿಭಜಿಸಲು ಬಯಸುವ ಶಕ್ತಿಗಳ ಸವಾಲು ಎದುರಿಸುವ ಸಾಮರ್ಥ್ಯ ಟಿಎಂಸಿಗೆ ಮಾತ್ರ ಇದೆ ಎಂದು ನಂಬಿದ್ದೇನೆ’ ಎಂದು ರೆಹಮಾನ್ ಹೇಳಿದರು.

ಸೀಟು ಹಂಚಿಕೆ: ಸಮಿತಿ ರಚನೆ

ಚೆನ್ನೈ (ಪಿಟಿಐ): ಆಡಳಿತಾರೂಢ ಡಿಎಂಕೆಯು ತನ್ನ ಮಿತ್ರಪಕ್ಷಗಳೊಂದಿಗೆ ಚರ್ಚಿಸಲು ಪಕ್ಷದ ಹಿರಿಯ ನಾಯಕ ಟಿ.ಆರ್. ಬಾಲು ನೇತೃತ್ವದಲ್ಲಿ ಏಳು ಸದಸ್ಯರ ಸೀಟು ಹಂಚಿಕೆ ಸಮಿತಿಯನ್ನು ಶನಿವಾರ ರಚಿಸಿದೆ.

ಮುಂಬರುವ ವಿಧಾನಸಭಾ ಚುನಾವಣೆಯ ಸೀಟು ಹಂಚಿಕೆಯ ಮಾತುಕತೆಯನ್ನು ಮಿತ್ರಪಕ್ಷಗಳೊಂದಿಗೆ ಫೆ.22ರ ಭಾನುವಾರದಿಂದಲೇ ಆರಂಭಿಸುವ ಸಾಧ್ಯತೆಯಿದೆ ಎಂದು ಡಿಎಂಕೆಯ ಮೂಲಗಳು ತಿಳಿಸಿವೆ.

ಮೈತ್ರಿಕೂಟದಲ್ಲಿ ಡಿಎಂಡಿಕೆಯನ್ನು ಒಳಗೊಳ್ಳುವುದರ ಜೊತೆಗೆ, ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳನ್ನು ಬಿಟ್ಟುಕೊಡುವ ಸಾಧ್ಯತೆಯಿದೆ ಎನ್ನಲಾಗಿದೆ.

ವಿಜಯಕಾಂತ್ ಸ್ಥಾಪಿಸಿರುವ ಡಿಎಂಡಿಕೆಯನ್ನು ತಮ್ಮ ಒಕ್ಕೂಟಕ್ಕೆ ಸೆಳೆಯಲು ಡಿಎಂಕೆ ಹಾಗೂ ಎಐಎಡಿಎಂಕೆ ನಡುವೆ ಹಗ್ಗಜಗ್ಗಾಟ ನಡೆದಿದೆ.

ಡಿಎಂಕೆಯು ಸಮಿತಿ ರಚಿಸಿದ ಬೆನ್ನಿಗೆ ಎಂಡಿಎಂಕೆ ಪಕ್ಷವು ಸಹ ನಾಲ್ವರು ಸದಸ್ಯರ ಸಮಿತಿ ರಚಿಸಿದ್ದು, ಸೀಟು ಹಂಚಿಕೆಯ ಮಾತುಕತೆ ನಡೆಸಲಿದೆ ಎಂದು ಎಂಡಿಎಂಕೆ ಮುಖ್ಯಸ್ಥ ವೈಕೊ ತಿಳಿಸಿದ್ದಾರೆ.

ಬಿಜೆಪಿ ಸೇರಿದ ಕಾಂಗ್ರೆಸ್ ನಾಯಕಿ

ತಿರುವನಂತಪುರ (ಪಿಟಿಐ): ಕೇರಳ ಕಾಂಗ್ರೆಸ್‌ನ ನಾಯಕಿ ಆರ್. ರೇಷ್ಮಿ ಅವರು ಬಿಜೆಪಿಗೆ ಶನಿವಾರ ಸೇರ್ಪಡೆಗೊಂಡರು.

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಕೊಟ್ಟಾರಕ್ಕರ ಕ್ಷೇತ್ರದಲ್ಲಿ ಈಗಿನ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಅವರಿಗೆ ತೀವ್ರ ಪೈಪೋಟಿ ನೀಡಿದ್ದರು. ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಅವರು ಹಲವು ಬಾರಿ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾಗಿದ್ದಾರೆ.

‘ಎರಡು ದಶಕಗಳಿಂದಲೂ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಕೆಲಸ ಮಾಡಿದ್ದೇನೆ. 2021ರ ವಿಧಾನಸಭಾ ಚುನಾವಣೆ ನಂತರ ಕಹಿ ಅನುಭವಿಸಿದೆ’ ಎಂದು ರೇಷ್ಮಿ ಬಿಜೆಪಿಗೆ ಸೇರಿದ ನಂತರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಹಣಕಾಸು ಸಚಿವರ ವಿರುದ್ಧ ಅಲ್ಪ ಮತಗಳ ಅಂತರದಿಂದ ಸೋತ ನಾನು, ಚುನಾವಣೆ ಬಳಿಕ ಕ್ಷೇತ್ರದಲ್ಲಿ ಸಕ್ರಿಯವಾಗಿರಲು ಯತ್ನಿಸಿದೆ. ಆದರೆ ಸಹಕಾರ ದೊರಕಲಿಲ್ಲ’ ಎಂದರು.

‘ರೇಷ್ಮಿ ಅವರು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಹೇಳಿದರು.

ಸ್ವಾಮಿ ಅವಿಮುಕ್ತೇಶ್ವರಾನಂದ ವಿರುದ್ಧ ಎಫ್‌ಐಆರ್‌ಗೆ ಆದೇಶ

ಲಖನೌ: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಸ್ವಾಮಿ ಅವಿಮುಕ್ತೇಶ್ವರಾನಂದ ಮತ್ತು ಅವರ ಶಿಷ್ಯರೊಬ್ಬರ ವಿರುದ್ಧ ಪ್ರಕರಣ ದಾಖಲಿಸುವಂತೆ ಪ್ರಯಾಗರಾಜ್‌ನ ಪೋಕ್ಸೊ ಪ್ರಕರಣಗಳ ವಿಶೇಷ ನ್ಯಾಯಾಲಯವೊಂದು ಶನಿವಾರ ಆದೇಶಿಸಿದೆ.

ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ವಿನೋದ್ ಕುಮಾರ್ ಚೌರಾಸಿಯಾ ಅವರು ಪೊಲಿಸರಿಗೆ ನಿರ್ದೇಶನ ನೀಡಿದ್ದಾರೆ.

‘ಝೂಸಿ ಪೊಲೀಸ್ ಠಾಣೆಯಲ್ಲಿ ಸ್ವಾಮಿ ಅವಿ ಮುಕ್ತೇಶ್ವರಾನಂದ ಮತ್ತು ಅವರ ಶಿಷ್ಯರೊಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ’ ಎನ್ನಲಾಗಿದೆ.

ವಾರಾಣಸಿಯಲ್ಲಿರುವ ಆಶ್ರಮದಲ್ಲಿ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿ ಕೃಷ್ಣ ಜನ್ಮಭೂಮಿ ಮುಕ್ತಿ ನಿರ್ಮಾಣ ಟ್ರಸ್ಟ್‌ನ ಅಧ್ಯಕ್ಷ ಅಶುತೋಷ್ ಬ್ರಹ್ಮಚಾರಿ ಅರ್ಜಿ ಸಲ್ಲಿಸಿದ್ದರು..

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಮಕ್ಕಳ ಹೇಳಿಕೆ ದಾಖಲಿಸಿಕೊಂಡು, ಪೊಲೀಸರ ವರದಿಯನ್ನು ಪರಿಶೀಲಿಸಿದ್ದ ನ್ಯಾಯಾಲಯ ಆದೇಶವನ್ನು ಕಾಯ್ದಿರಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ಸಿ.ಡಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಅರ್ಜಿದಾರರು ತಿಳಿಸಿದ್ದಾರೆ.

ಎಸ್‌ಡಬ್ಲ್ಯುಎಂ ನಿಯಮಗಳ ಕಟ್ಟುನಿಟ್ಟಿನ ಜಾರಿ ಅಗತ್ಯ

ಘನ ತ್ಯಾಜ್ಯ ನಿರ್ವಹಣೆ: ‘ಸುಪ್ರೀಂ’ ಮಾರ್ಗಸೂಚಿ

ನವದೆಹಲಿ (ಪಿಟಿಐ): ದೇಶದಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು (ಎಸ್‌ಎಂಡಬ್ಲ್ಯು) ಮನಸ್ಸಿಗೆ ಬಂದಂತೆ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಈ ಕುರಿತು ದೇಶದಾದ್ಯಂತ ಏಕರೂಪ ವ್ಯವಸ್ಥೆ ಜಾರಿಗೊಳಿಸಲು ಕೆಲ ನಿರ್ದೇಶನಗಳನ್ನು ನೀಡಿದೆ.

ಸ್ವಚ್ಛ ಮತ್ತು ಆರೋಗ್ಯಕರ ಪರಿಸರ ಹೊಂದುವ ಹಕ್ಕನ್ನು ಜೀವಿಸುವ ಹಕ್ಕಿನಿಂದ ಬೇರ್ಪಡಿಸಲು ಆಗದು ಎಂದಿರುವ ಸುಪ್ರೀಂ ಕೋರ್ಟ್, ‘ಘನತ್ಯಾಜ್ಯ ವಿಲೇವಾರಿಯನ್ನು ನಿರ್ಲಕ್ಷಿಸುವುದು ಆರ್ಥಿಕತೆಗಷ್ಟೇ ಅಲ್ಲದೇ, ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ’ ಎಂದಿದೆ.

ಭೋಪಾಲ್ ಮುನ್ಸಿಪಲ್ ಕಾರ್ಪೊರೇಷನ್‌ಗೆ ಸಂಬಂಧಿಸಿದಂತೆ ಹಸಿರು ನ್ಯಾಯಪೀಠ (ಎನ್‌ಜಿಟಿ) ಹೊರಡಿಸಿದ್ದ ಎರಡು ಆದೇಶಗಳಿಗೆ ಸಂಬಂಧಿಸಿದ ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಮತ್ತು ಎಸ್.ವಿ.ಎನ್. ಭಟ್ಟಿ ಅವರ ಪೀಠ, ಈ ವರ್ಷದ ಏಪ್ರಿಲ್ 1ರಿಂದ ಜಾರಿಯಾಗಲಿರುವ ಎಸ್‌ಡಬ್ಲ್ಯುಎಂ ಹೊಸ ನಿಯಮಗಳ (2026) ಕಟ್ಟುನಿಟ್ಟಿನ ಜಾರಿಗೆ ನಿರ್ದೇಶಿಸಿದೆ. ಅಲ್ಲದೆ ಈ ನಿಟ್ಟಿನಲ್ಲಿ ಕಾರ್ಯಾಂಗದ ಕಾರ್ಯವಿಧಾನವನ್ನು ಖಚಿತಪಡಿಸಿಕೊಳ್ಳಲು ಮಾರ್ಗಸೂಚಿ ಹೊರಡಿಸಿದೆ.

ಮಾರ್ಗಸೂಚಿಯಲ್ಲಿ ಏನೇನಿದೆ?

- ತ್ಯಾಜ್ಯ ಮುಕ್ತ ಭಾರತವನ್ನು ಖಚಿತಪಡಿಸಿಕೊಳ್ಳುವುದು ಪ್ರತಿಯೊಬ್ಬ ಭಾಗಿದಾರರ ಕರ್ತವ್ಯ. ತ್ಯಾಜ್ಯ ಮೂಲದಲ್ಲಿಯೇ ಪ್ರತ್ಯೇಕವಾಗಬೇಕು
- ಪರಿಸರ ರಕ್ಷಣೆ ಮತ್ತು ಜನರ ಯೋಗಕ್ಷೇಮ ಖಚಿತಪಡಿಸಿಕೊಳ್ಳುವುದು ರಾಜ್ಯ ಸರ್ಕಾರಗಳ ಜವಾಬ್ದಾರಿ
- ತ್ಯಾಜ್ಯ ವಿಂಗಡಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೆ ಜನಪ್ರತಿನಿಧಿಗಳು, ಕೌನ್ಸಿಲರ್‌ಗಳು, ಮೇಯರ್‌ಗಳು, ಅಧ್ಯಕ್ಷರುಗಳು ಪ್ರಮುಖ ಸಹಾಯಕರಾಗಿರುತ್ತಾರೆ
- ಘನ ತ್ಯಾಜ್ಯ ನಿರ್ವಹಣೆಯ ಮೂಲಸೌಕರ್ಯದ ಶೋಧನೆ ಜಿಲ್ಲಾಧಿಕಾರಿಗಳ ಮೂಲಕ ನಡೆಯಬೇಕು. ಅಲ್ಲಿ ಗುರುತಿಸಲಾದ ಸಮಸ್ಯೆಗಳು ಮತ್ತು ತೆಗೆದುಕೊಂಡ ಕ್ರಮಗಳ ಕುರಿತು ಜಿಲ್ಲಾಧಿಕಾರಿಗಳು ಮುಖ್ಯ ಕಾರ್ಯದರ್ಶಿಗೆ ಕಾಲ ಕಾಲಕ್ಕೆ ವರದಿ ನೀಡಬೇಕು
- ನಗರ ಅಥವಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕಗಳ ಸ್ಥಾಪನೆ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆಯ ಮೇಲ್ವಿಚಾರಣೆಯ ಜವಾಬ್ದಾರಿ ಜಿಲ್ಲಾಧಿಕಾರಿಗೆ
- ಘನತ್ಯಾಜ್ಯ ವಿಂಗಡಣೆಗೆ (ಹಸಿ ಕಸ, ಒಣ ಕಸ, ಸ್ಯಾನಿಟರಿ ಕಸ) ಅಗತ್ಯವಿರುವ ಮೂಲ ಸೌಕರ್ಯವನ್ನು ಗುರುತಿಸಿ, ತ್ವರಿತವಾಗಿ ಕಾರ್ಯಾರಂಭ ಆಗುವಂತೆ ಮಾಡುವ ಜವಾಬ್ದಾರಿ ಮಾಲಿನ್ಯ ನಿಯಂತ್ರಣ ಮಂಡಳಿಯದ್ದು
- ಘನ ತ್ಯಾಜ್ಯ ನಿರ್ವಹಣಾ ಪದ್ಧತಿಗಳ ಕುರಿತು ಶಾಲಾ ಪಠ್ಯಗಳಲ್ಲಿ ವಿಷಯ ಸೇರಿಸಲಾಗಿದೆಯೇ ಎಂಬುದನ್ನು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಖಚಿತಪಡಿಸಿಕೊಳ್ಳಬೇಕು
- ಎಸ್‌ಡಬ್ಲ್ಯುಎಂನ 2026 ನಿಯಮಗಳ ಕುರಿತ ಸಾರಾಂಶವನ್ನು ಆಯಾ ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳು ಸ್ಥಳೀಯ ಭಾಷೆಗಳಿಗೆ ಅನುವಾದಿಸಬೇಕು
- ಈ ನಿಯಮಗಳನ್ನು ಪಾಲಿಸಲು ವಿಫಲವಾದರೆ ಅದು ಆಡಳಿತಾತ್ಮಕ ಲೋಪ ಆಗುತ್ತದೆ. ಅದರ ಜತೆಗೆ ಸ್ಥಳೀಯ ಅಧಿಕಾರಿಗಳ ವಿರುದ್ಧ ತಕ್ಷಣವೇ ದಂಡ ವಿಧಿಸುವುದೂ ಸೇರಿದಂತೆ ಮೂರು ಹಂತದ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿದೆ
- ನಿರಂತರ ನಿರ್ಲಕ್ಷ್ಯ ವಹಿಸಿದರೆ, ಪರಿಸರ ಕಾನೂನುಗಳ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಗೂ ಕಾರಣವಾಗುತ್ತದೆ

ಮುಂಬೈ ಧಾರಣೆ (ಶೇಂಗಾ)

21-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (-)
ಒಂದು ವಾರದ ಡೆಲಿವರಿ	1745 (-)
ಪಾಮ್ ವಾರದ ಡೆಲಿವರಿ	1288 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (-)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,56,450 (-)
ಬೆಳ್ಳಿ ಕೆ.ಜಿಗೆ	2,61,000 (-)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23000
ಎಸಿ	₹13000
ಆರ್‌ಪಿ	₹18250
ಆರ್‌ಸಿ	₹9825

ವಿರಳ ಲೋಹ: ಭಾರತ–ಬ್ರೆಜಿಲ್ ಒಪ್ಪಂದ

ನಿರ್ಣಾಯಕ ಖನಿಜಗಳ ನಿಕ್ಷೇಪ: ಉಭಯ ರಾಷ್ಟ್ರಗಳ ಸಹಿ



ನರೇಂದ್ರ ಮೋದಿ

ನವದೆಹಲಿ (ಎಎಫ್‌ಪಿ): ನಿರ್ಣಾಯಕ ಖನಿಜಗಳು ಮತ್ತು ವಿರಳ ಲೋಹದ ನಿಕ್ಷೇಪಗಳಿಗೆ ಸಂಬಂಧಿಸಿದ ಒಪ್ಪಂದಕ್ಕೆ ಭಾರತ ಮತ್ತು ಬ್ರೆಜಿಲ್ ಶನಿವಾರ ಸಹಿ ಹಾಕಿವೆ.

'ನಿರ್ಣಾಯಕ ಖನಿಜಗಳು ಮತ್ತು ವಿರಳ ಲೋಹಗಳ ಮೇಲಿನ ಈ ಒಪ್ಪಂದವು ಪೂರೈಕೆ ಸರಪಳಿಯನ್ನು ನಿರ್ಮಿಸಲು ಮಹತ್ವದ್ದಾಗಿದೆ' ಎಂದು ಬ್ರೆಜಿಲ್‌ನ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾಡ ಸಿಲ್ವಾ ಅವರ ಜೊತೆಗಿನ ಮಾತುಕತೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬ್ರೆಜಿಲ್ ವಿಶ್ವದ ಎರಡನೇ ಅತಿದೊಡ್ಡ ನಿರ್ಣಾಯಕ ಖನಿಜಗಳ ನಿಕ್ಷೇಪವನ್ನು ಹೊಂದಿದೆ. ಈ ಖನಿಜಗಳನ್ನು ವಿದ್ಯುತ್‌ಚಾಲಿತ ವಾಹನಗಳು, ಸೌರಫಲಕಗಳು, ಸ್ಮಾರ್ಟ್‌ಫೋನ್, ಜೆಟ್ ವಿಮಾನಗಳು ಸೇರಿದಂತೆ ವಿವಿಧೆಡೆ ಬಳಸಲಾಗುತ್ತದೆ.

ಚೀನಾದ ಮೇಲಿನ ಅವಲಂಬನೆಯನ್ನು ತಗ್ಗಿಸುವುದು, ದೇಶೀಯ ಉತ್ಪಾದನೆ ಹೆಚ್ಚಿಸುವ ಗುರಿಯನ್ನು ಈ ಒಪ್ಪಂದ ಹೊಂದಿದೆ. ಅಲ್ಲದೆ, ಹೊಸ ಪೂರೈಕೆದಾರರನ್ನು ಹುಡುಕುತ್ತಿದೆ.

'ನವೀಕರಿಸಬಹುದಾದ ಇಂಧನ ಮತ್ತು ನಿರ್ಣಾಯಕ ಖನಿಜಗಳ ವಿಷಯಗಳಲ್ಲಿ ಹೂಡಿಕೆ ಮತ್ತು ಸಹಕಾರವನ್ನು ಹೆಚ್ಚಿಸುವುದು ನಾವು ಇಂದು ಸಹಿ ಹಾಕಿರುವ ಒಪ್ಪಂದದ ಪ್ರಮುಖ ವಿಷಯವಾಗಿದೆ' ಎಂದು ಸಿಲ್ವಾ ತಿಳಿಸಿದ್ದಾರೆ.

ಡಿಜಿಟಲ್ ಸಹಕಾರ, ಆರೋಗ್ಯ, ಉದ್ಯಮಶೀಲತೆ ಮತ್ತು ಇತರೆ ಕ್ಷೇತ್ರಗಳನ್ನು ಒಳಗೊಂಡಂತೆ ಒಂಬತ್ತು ಇತರೆ ಒಪ್ಪಂದಗಳು ಮತ್ತು ತಿಳಿವಳಿಕೆ ಪತ್ರಗಳನ್ನು ಅಂತಿಮಗೊಳಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

20 ಬಿಲಿಯನ್ ಡಾಲರ್ ವಹಿವಾಟು ಗುರಿ

ಮುಂದಿನ ಐದು ವರ್ಷಗಳಲ್ಲಿ 20 ಬಿಲಿಯನ್ ಡಾಲರ್‌ಗಿಂತ (₹1.81 ಲಕ್ಷ ಕೋಟಿ) ಹೆಚ್ಚಿನ ದ್ವಿಪಕ್ಷೀಯ ವ್ಯಾಪಾರವನ್ನು ನಡೆಸುವ ಗುರಿಯನ್ನು ಭಾರತ ಮತ್ತು ಬ್ರೆಜಿಲ್ ನಿಗದಿಪಡಿಸಿವೆ.

'ಲ್ಯಾಟಿನ್ ಅಮೆರಿಕದಲ್ಲಿ ಬ್ರೆಜಿಲ್ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ. ನಮ್ಮ ವ್ಯಾಪಾರವು ಕೇವಲ ಒಂದು ಅಂಕಿ ಅಂಶವಲ್ಲ, ಬದಲಾಗಿ ನಂಬಿಕೆಯ ಪ್ರತಿಬಿಂಬವಾಗಿದೆ' ಎಂದು ಮೋದಿ ತಿಳಿಸಿದ್ದಾರೆ.

ಅಧ್ಯಕ್ಷ ಲುಲಾ ಅವರ ದೂರದೃಷ್ಟಿಯ ದೃಷ್ಟಿಕೋನ ಮತ್ತು ಸ್ಫೂರ್ತಿದಾಯಕ ನಾಯಕತ್ವದಿಂದ ಭಾರತ ಮತ್ತು ಬ್ರೆಜಿಲ್ ನಡುವಿನ ಸಂಬಂಧಗಳು ಬಹಳ ಹಿಂದಿನಿಂದಲೂ ಪ್ರಯೋಜನ ಪಡೆದಿವೆ ಎಂದು ಹೇಳಿದ್ದಾರೆ.

ಭಯೋತ್ಪಾದನೆ ಮತ್ತು ಅದನ್ನು ಬೆಂಬಲಿಸುವವರು ಇಡೀ ಮಾನವೀಯತೆಯ ಶತ್ರುಗಳು ಎಂಬುದನ್ನು ಎರಡೂ ದೇಶಗಳು ಒಪ್ಪುತ್ತವೆ ಎಂದು ಮೋದಿ ತಿಳಿಸಿದ್ದಾರೆ.

2025ರಲ್ಲಿ ಭಾರತ ಮತ್ತು ಬ್ರೆಜಿಲ್‌ನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೌಲ್ಯವು ₹1.36 ಲಕ್ಷ ಕೋಟಿಯಷ್ಟಾಗಿತ್ತು.

ಸುದ್ದಿ 2 ನಿಮಿಷ

ಫೋನ್‌ಪೇ: ಎ.ಐ ಚಾಲಿತ ಸೌಲಭ್ಯ ಬಿಡುಗಡೆ

ನವದೆಹಲಿ (ಪಿಟಿಐ): ಮೈಕ್ರೋಸಾಫ್ಟ್ ಫೌಂಡ್ರಿ ತಂತ್ರಜ್ಞಾನ ಬಳಸಿ ನಿರ್ಮಿಸಲಾದ ಕೃತಕ ಬುದ್ಧಿಮತ್ತೆ (ಎಐ) ಚಾಲಿತ ಸರ್ಚ್ ಸೌಲಭ್ಯವನ್ನು ಫೋನ್‌ಪೇ ಶನಿವಾರ ಬಿಡುಗಡೆ ಮಾಡಿದೆ. ಇದರ ಮೂಲಕ, ಬಳಕೆದಾರರು 'ಪ್ರಾದೇಶಿಕ ಭಾಷೆ'ಯಲ್ಲೆ ಧ್ವನಿ ಅಥವಾ ಪಠ್ಯಗಳ ಆಜ್ಞೆ ನೀಡಿ ಹಣ ಪಾವತಿಸಬಹುದು ಅಥವಾ ಹಳೆಯ ವ್ಯವಹಾರಗಳನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿದೆ.

'ಈ ಸೌಲಭ್ಯ ಆ್ಯಪ್ ಬಳಕೆಯನ್ನು ಹೆಚ್ಚು ಸರಳವಾಗಿಸುತ್ತದೆ ಮತ್ತು ಪ್ರತಿಯೊಬ್ಬ ಬಳಕೆದಾರರಿಗೂ ಅವರ ಅಗತ್ಯಕ್ಕೆ ತಕ್ಕಂತೆ ವೈಯಕ್ತಿಕ ಅನುಭವ ನೀಡುತ್ತದೆ. ಇದು ಹಿಂದಿನ ಮೆನುಗಳ ಬದಲಾಗಿ ಬಳಕೆದಾರರ ಉದ್ದೇಶಕ್ಕೆ ತಕ್ಕಂತೆ ಕೆಲಸ ಮಾಡುತ್ತದೆ. ಇದರಿಂದಾಗಿ ಆ್ಯಪ್‌ನಲ್ಲಿ ಸಂವಾದಗಳ ಮೂಲಕವೇ ಕೆಲಸಗಳನ್ನು ಮುಗಿಸಬಹುದು' ಎಂದು ಫೋನ್‌ಪೇ ತಿಳಿಸಿದೆ.

ಉದಾಹರಣೆಗೆ, 'ಹೇಮಂತ್‌ಗೆ ₹20 ಪಾವತಿಸು' ಎಂದರೆ ಹಣ ಕಳುಹಿಸುವ ಪುಟ ಸ್ವಯಂಚಾಲಿತವಾಗಿ ತೆರೆದು ಸಂಬಂಧಿತ ಸಂಪರ್ಕಗಳನ್ನು ಪ್ರದರ್ಶಿಸುತ್ತದೆ. 'ರೀಚಾರ್ಜ್ ಫಾಸ್ಟ್‌ಟ್ಯಾಗ್' ಅಥವಾ 'ಚಿನ್ನದ ಬೆಲೆ' ಎಂದರೆ ಬಳಕೆದಾರರನ್ನು ಆ್ಯಪ್ ಸೂಕ್ತವಾದ ಪುಟಕ್ಕೆ ಕೊಂಡೊಯ್ಯುತ್ತದೆ.

ಈ ಸೌಲಭ್ಯ ಕೇವಲ ಹುಡುಕಾಟಕ್ಕೆ ಮಾತ್ರವಲ್ಲದೆ, ಹಣ ಪಾವತಿ, ಖರೀದಿ ಅಥವಾ ಸಹಾಯ ಪಡೆಯುವುದು ಸೇರಿದಂತೆ ಬಳಕೆದಾರರ ಉದ್ದೇಶ ಅರ್ಥ ಮಾಡಿಕೊಂಡು ಕೆಲಸ ಮಾಡುತ್ತದೆ. ಇದು ಆ್ಯಪ್‌ನ ಒಳಗಿನ ಮತ್ತು ಕ್ಲೌಡ್ ತಂತ್ರಜ್ಞಾನ ಎರಡನ್ನೂ ಬಳಸುತ್ತದೆ. ಆದರೆ, ಮುಖ್ಯವಾಗಿ ಬಳಕೆದಾರರ ಯಾವುದೇ ವೈಯಕ್ತಿಕ ಅಥವಾ ವ್ಯವಹಾರದ ಮಾಹಿತಿ ಹೊರಗೆ ಹೋಗದಂತೆ ಸುರಕ್ಷತೆ ವಹಿಸುತ್ತದೆ ಎಂದು ಕಂಪನಿಯು ಹೇಳಿದೆ.

ಮಾ.2ರಂದು ಮುಷ್ಕರ: ಐಒಬಿಒಎ

ನವದೆಹಲಿ (ಪಿಟಿಐ): ಆಡಳಿತ ಮಂಡಳಿಯು ಕಚೇರಿಯಲ್ಲಿ ಬಲವಂತವಾಗಿ ಹೇರಿರುವ ಕ್ರಮಗಳನ್ನು ವಾಪಸ್ ಪಡೆಯುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಅಧಿಕಾರಿಗಳ ಸಂಘವು (ಐಒಬಿಒಎ) ಮಾರ್ಚ್ 2ರಂದು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

ಆಡಳಿತ ಮಂಡಳಿಯು ಕಚೇರಿಯ ಕೆಲಸದ ಸಮಯ ಮುಗಿದ ಬಳಿಕವೂ ಸಿಬ್ಬಂದಿಯಿಂದ ಕೆಲಸ ಮಾಡಿಸಿಕೊಳ್ಳುತ್ತಿರುವುದು, ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿರುವುದು ಆತಂಕಕಾರಿಯಾಗಿದೆ ಎಂದು ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ (ಎಐಬಿಒಸಿ) ಹೇಳಿದ್ದು, ಮುಷ್ಕರಕ್ಕೆ ಬೆಂಬಲ ನೀಡಿದೆ.

ಈ ಮುಷ್ಕರದ ಭಾಗವಾಗಿ ಬ್ಯಾಂಕ್‌ನ ಪ್ರಾದೇಶಿಕ ಕೇಂದ್ರಗಳ ಬಳಿ ಫೆಬ್ರುವರಿ 23ರಂದು ಪ್ರತಿಭಟನೆ ಮತ್ತು 26ರಂದು ಧರಣಿ ನಡೆಸಲಾಗುವುದು ಎಂದು ಐಒಬಿಒಎ ತಿಳಿಸಿದೆ.

ಕಚೇರಿಗಳಲ್ಲಿ ನ್ಯಾಯಬದ್ಧವಾದ ಕೆಲಸದ ಅವಧಿ ಜಾರಿಗೊಳಿಸಬೇಕು. ಪಾರದರ್ಶಕ ಆಡಳಿತವನ್ನು ಜಾರಿಗೊಳಿಸಬೇಕು, ಬ್ಯಾಂಕ್‌ನಲ್ಲಿ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದೆ.

ಶ್ರೀಲಂಕಾ: ಸಂಸದರ ಪಿಂಚಣಿ ರದ್ದು

ಕೊಲಂಬೊ (ಪಿಟಿಐ): ಸಂಸದರ ಪಿಂಚಣಿ ರದ್ದುಗೊಳಿಸಿ ಶ್ರೀಲಂಕಾ ಸರ್ಕಾರ ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಅಧ್ಯಕ್ಷ ಅನುರಾ ಕುಮಾರ ಡಿಸ್ಸನಾಯಕೆ ಅವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮತದಾರರಿಗೆ ನೀಡಿದ ಭರವಸೆಯನ್ನು ಈ ಮೂಲಕ ಈಡೇರಿಸಿದಂತಾಗಿದೆ.

ಐದು ವರ್ಷದ ಅವಧಿ ಪೂರ್ಣಗೊಳಿಸಿದ ಸಂಸದರಿಗೆ ಪಿಂಚಣಿ ಪಡೆಯುವ ಅರ್ಹತೆ ಇದೆ.

ಶ್ರೀಲಂಕಾ ಸರ್ಕಾರವು ಸಂಸದರ ಪಿಂಚಣಿ (ರದ್ದತಿ) ಕಾಯ್ದೆಯನ್ನು ಮಂಗಳವಾರ ಬಹುಮತದೊಂದಿಗೆ ಅಂಗೀಕರಿಸಿತು. 225 ಸದಸ್ಯ ಬಲದ ಸಂಸತ್‌ನಲ್ಲಿ 154 ಮತಗಳಿಂದ ಮಸೂದೆ ಅಂಗೀಕರಿಸಲಾಯಿತು. ಇಬ್ಬರು ಸಂಸದರು ವಿರೋಧವಾಗಿ ಮತ ಚಲಾಯಿಸಿದರು. ಉಳಿದವರು ಗೈರಾಗಿದ್ದರು.

ಸಂಸದರ ಪಿಂಚಣಿ (ರದ್ದತಿ) ಮಸೂದೆಯನ್ನು ಸರಳ ಬಹುಮತದೊಂದಿಗೆ ಅಂಗೀಕರಿಸಬಹುದು ಎಂದು ಫೆಬ್ರುವರಿ 6ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

'ಇವಿ ಎವರೆಡಿ– 2026' ಮೇಳ ಉದ್ಘಾಟಿಸಿದ ಎಚ್‌ಡಿಕೆ

ಕರ್ನಾಟಕ ಇ.ವಿ ಉದ್ಯಮದ ಹಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ಕರ್ನಾಟಕ ಎಲೆಕ್ಟ್ರಿಕ್ ವಾಹನ (ಇ.ವಿ) ಉದ್ಯಮದ ಹಬ್ ಆಗಿ ಅಭಿವೃದ್ಧಿ ಹೊಂದುತ್ತಿದ್ದು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈ ಉದ್ಯಮಕ್ಕೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ನೀಡುತ್ತಿದೆ' ಎಂದು ಕೇಂದ್ರದ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಅರಮನೆ ಮೈದಾನದಲ್ಲಿ 'ಇವಿ ಎವರೆಡಿ–2026' ಮೇಳವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಎಲೆಕ್ಟ್ರಿಕ್ ವಾಹನ ಉದ್ಯಮಕ್ಕೆ ವಿಪುಲ ಅವಕಾಶಗಳಿವೆ. ಅನೇಕ ದೊಡ್ಡ ಕಂಪನಿಗಳು ರಾಜ್ಯವನ್ನು ಕಾರ್ಯಕ್ಷೇತ್ರ ಮಾಡಿಕೊಂಡಿವೆ. ಎಲೆಕ್ಟ್ರಾನಿಕ್ಸ್, ಆಟೋಮೋಟಿವ್ ಎಂಜಿನಿಯರಿಂಗ್ ಮತ್ತು ಸ್ಟಾರ್ಟ್‌ಅಪ್‌ಗಳಲ್ಲಿ ಬೆಂಗಳೂರಿನ ನೆಲೆಯು, ರಾಜ್ಯವು ಇವಿ ವಾಹನಗಳ ನಾವೀನ್ಯತೆ ಮತ್ತು ಉತ್ಪಾದನೆಗೆ ಜಾಗತಿಕ ಕೇಂದ್ರವಾಗಿ ಹೊರಹೊಮ್ಮಲು ಸಹಕಾರಿ ಆಗಿದೆ' ಎಂದರು.

'ಮೋದಿ ನೇತೃತ್ವದಲ್ಲಿ ಭಾರತದ ಎಲೆಕ್ಟ್ರಿಕ್ ವಾಹನಗಳ ಚಲನಶೀಲತೆಯ ಪರಿವರ್ತನಾತ್ಮಕ ವೇಗ ಪಡೆದುಕೊಳ್ಳುತ್ತಿದ್ದು, ಜಾಗತಿಕ ಸ್ಪರ್ಧೆಗೆ ಅನುಗುಣವಾಗಿ ಗುಣಾತ್ಮಕವಾಗಿ ಬೆಳವಣಿಗೆ ಹೊಂದುತ್ತಿದೆ. ವಿದ್ಯುತ್ ಚಾಲಿತ ವಾಹನಗಳು ಕೇವಲ ಸ್ವಚ್ಛ ಸಾರಿಗೆಗೆ ಪೂರಕ ಮಾತ್ರವಲ್ಲ, ಅವು ಇಂಧನ ಸುರಕ್ಷತೆ, ತಾಂತ್ರಿಕ ನಾಯಕತ್ವ ಮತ್ತು ನಮ್ಮ ಯುವಕರಿಗೆ ಹೊಸ ಆರ್ಥಿಕ ಅವಕಾಶಗಳನ್ನು ವಿಪುಲವಾಗಿ ತೆರೆಯುತ್ತವೆ' ಎಂದೂ ಅವರು ಪ್ರತಿಪಾದಿಸಿದರು.

ಬೃಹತ್ ಕೈಗಾರಿಕಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಹನೀಫ್ ಖುರೇಷಿ, ಆಟೋಮೊಬೈಲ್ ವಲಯದಲ್ಲಿನ ಪ್ರಗತಿಯ ವೇಗದ ಕುರಿತು ಮಾಹಿತಿ ನೀಡಿದರು.

ಆಟೋ ಉದ್ಯಮದ ಕೆ.ಎನ್. ರಾಧಾಕೃಷ್ಣನ್, ಸುಮನ್ ಮಿಶ್ರಾ, ಸುಲಜಾ ಪಿರೋಡಿಯಾ ಮತ್ತಿತರರು ಪಾಲ್ಗೊಂಡಿದ್ದರು.

ಮೇಳದಲ್ಲಿ ಮಹೀಂದ್ರಾ ಇ.ವಿ ಆಟೊವನ್ನು ಎಚ್‌. ಡಿ. ಕುಮಾರಸ್ವಾಮಿ ಪರಿಶೀಲಿಸಿದರು

ಎ.ಐ ಶೃಂಗ: ನಿರ್ಣಯಕ್ಕೆ 88 ರಾಷ್ಟ್ರಗಳ ಸಹಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃತಕ ಬುದ್ಧಿ ಮತ್ತೆ-ಯ(ಎ.ಐ) ಪ್ರಯೋಜನಗಳನ್ನು ಸಮಾನವಾಗಿ ಹಂಚಿಕೆ ಮಾಡುವ ಬದ್ಧತೆಯನ್ನು ಹೊಂದುವ ನಿರ್ಣಯದೊಂದಿಗೆ 'ಎ.ಐ ಇಂಪ್ಯಾಕ್ಟ್ ಶೃಂಗಸಭೆ–2026' ಶನಿವಾರ ಮುಕ್ತಾಯಗೊಂಡಿತು.

ಅಮೆರಿಕ, ಬ್ರಿಟನ್, ಚೀನಾ, ಫ್ರಾನ್ಸ್ ರಷ್ಯಾ, ಐರೋಪ್ಯ ಒಕ್ಕೂಟ ಸೇರಿದಂತೆ 88 ದೇಶಗಳು ಮತ್ತು ಅಂತರ-ರಾಷ್ಟ್ರೀಯ ಸಂಸ್ಥೆಗಳು ಈ ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸಿವೆ.

ಫೆ.16ರಂದು ಆರಂಭಗೊಂಡಿದ್ದ ಶೃಂಗಸಭೆಯಲ್ಲಿ ಒಟ್ಟು 118 ದೇಶಗಳು ಭಾಗಿಯಾಗಿದ್ದವು. ತಂತ್ರಜ್ಞಾನ ಕ್ಷೇತ್ರದ ದಿಗ್ಗಜರು ಸೇರಿದಂತೆ ಹಲವರು ಎ.ಐ ಅವಕಾಶಗಳು, ಅಪಾಯಗಳು ಮತ್ತು ಉದ್ಯೋಗ ಸೃಷ್ಟಿಯ ಬಗ್ಗೆ ಚರ್ಚೆ ನಡೆಸಿದ್ದಾರೆ.

ಇಸ್ರೇಲ್ ದಾಳಿ: 12 ಸಾವು

ಬೈರೂತ್ (ಎಪಿ): ಲೆಬನಾನ್‌ನ ಬೇಕಾ ಕಣಿವೆಯ ಮೇಲೆ ಇಸ್ರೇಲ್ ಶುಕ್ರವಾರ ನಡೆಸಿದ ದಾಳಿಯಲ್ಲಿ ಮೂವರು ಮಕ್ಕಳು ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ. 24 ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯದ ವರದಿ ತಿಳಿಸಿದೆ.

ಇದೇ ದಿನ ಪ್ಯಾಲೆಸ್ಟೀನಿಯನ್ ನಿರಾಶ್ರಿತರ ಶಿಬಿರದ ಮೇಲೆ ನಡೆದ ಪ್ರತ್ಯೇಕ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಲೆಬನಾನ್‌ನ ಭಯೋತ್ಪಾದಕ ಗುಂಪಾದ ಹಿಜ್ಬುಲ್ಲಾ ಕಮಾಂಡ್ ಸೆಂಟರ್ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ತಿಳಿಸಿದೆ. ಹಿಜ್ಬುಲ್ಲಾ ಸಂಘಟನೆ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ಫೆಬ್ರುವರಿ 13ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದಲ್ಲಿ ₹78,596 ಕೋಟಿಯಷ್ಟು ಹೆಚ್ಚಳವಾಗಿದೆ.

ಒಟ್ಟು ಮೀಸಲು ಸಂಗ್ರಹವು ₹65.84 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹32,208 ಕೋಟಿಯಷ್ಟು ಹೆಚ್ಚಳವಾಗಿದ್ದು, ₹52 ಲಕ್ಷ ಕೋಟಿಯಾಗಿದೆ.

ಚಿನ್ನದ ಮೀಸಲು ಸಂಗ್ರಹದಲ್ಲಿ ₹45,272 ಕೋಟಿ ಏರಿಕೆ ಯಾಗಿದ್ದು, ₹11.65 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.71 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,950 ಕೋಟಿಯಾಗಿದೆ ಎಂದು ತಿಳಿಸಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1740 (-)
ಸೋಯಾ (ರಿಫೈನ್ಡ್)	₹1360 (-)
ಸೂರ್ಯಕಾಂತಿ (ರಿಫೈನ್ಡ್)	₹1590 (-)
ಪಾಮೋಲಿನ್	₹1290 (-)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹570
	12 ಕ್ಕೆ	₹85
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹560-806
ದ್ವಿತಳಿ (ಬಿ.ವಿ)	₹300-936

ಎನ್.ಆರ್. ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹193

ಭಾರತ– ಅಮೆರಿಕ ಒಪ್ಪಂದ ತಡೆಹಿಡಿಯಿರಿ: ಕಾಂಗ್ರೆಸ್

ಜೈರಾಮ್ ರಮೇಶ್

ನವದೆಹಲಿ (ಪಿಟಿಐ): 'ವಿವಿಧ ದೇಶಗಳ ಆಮದುಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಸುಂಕಗಳನ್ನು ಅಲ್ಲಿನ ಸುಪ್ರೀಂ ಕೋರ್ಟ್ ರದ್ದುಗೊಳಿಸಿರುವುದರಿಂದ, ಪ್ರಧಾನಿ ನರೇಂದ್ರ ಮೋದಿ ಅವರು ಭಾರತ– ಅಮೆರಿಕ ನಡುವಿನ ವ್ಯಾಪಾರ ಕುರಿತ ಮಧ್ಯಂತರ ಒಪ್ಪಂದವನ್ನು ತಡೆಹಿಡಿಯಬೇಕು ಮತ್ತು ಪುನಃ ಮಾತುಕತೆ ನಡೆಸಬೇಕು' ಎಂದು ಕಾಂಗ್ರೆಸ್ ಒತ್ತಾಯಿಸಿದೆ.

'ಭಾರತೀಯ ರೈತರ ಹಿತಕ್ಕೆ ಧಕ್ಕೆ ಆಗುವುದಿಲ್ಲ ಎಂಬುದರ ಕುರಿತು ಅಮೆರಿಕದಿಂದ ಸ್ಪಷ್ಟತೆ ದೊರೆಯುವವರೆಗೆ ಒಪ್ಪಂದದ ಅಡಿ ಆಮದು ಇರುವುದಿಲ್ಲ ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಶನಿವಾರ ಒತ್ತಾಯ ಮಾಡಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ನೀಡಿರುವ ಕಾರಣ, ಉಭಯ ದೇಶಗಳ ನಡುವಿನ ಒಪ್ಪಂದ ಮತ್ತು ಅದರಲ್ಲಿನ ನಿಯಮಗಳ ಕುರಿತು ಹೊಸದಾಗಿ ಮಾತುಕತೆ ನಡೆಯಬೇಕು' ಎಂದು ಆಗ್ರಹಿಸಿದರು.

ಮಧ್ಯಂತರ ಒಪ್ಪಂದದ ಕುರಿತು ಫೆಬ್ರುವರಿ 2ರಂದು ಟ್ರಂಪ್ ಘೋಷಿಸಿದ್ದರು. ಆದರೆ, ಈ ಒಪ್ಪಂದಕ್ಕೆ ಪ್ರಧಾನಿ ಮೋದಿ ಅವರು ಅಷ್ಟೊಂದು ಆತುರ ತೋರಿದ್ದು ಏಕೆ ಎಂದು ಅವರು ಪ್ರಶ್ನಿಸಿದರು.

ಕಡಿಮೆ ಬೆಲೆಯಲ್ಲಿ ಡ್ರೋನ್ ನಿರ್ಮಾಣಕ್ಕೆ ಸಜ್ಜು

ವಾರ್ಸಾ (ಎಪಿ): ಕಳೆದ ನಾಲ್ಕು ವರ್ಷಗಳಿಂದ ರಷ್ಯಾ ವಿರುದ್ಧ ಯುದ್ಧದ ಪರಿಣತಿ ಪಡೆದಿರುವ ಉಕ್ರೇನ್‌ನ ಅನುಭವ ಪಡೆದುಕೊಂಡು, ಕಡಿಮೆ ವೆಚ್ಚದ ವಾಯು ರಕ್ಷಣಾ ವ್ಯವಸ್ಥೆ ಹಾಗೂ ಸ್ವಾಯತ್ತ ಡ್ರೋನ್ ತಯಾರಿಸುವ ನಿಟ್ಟಿನಲ್ಲಿ ಹೊಸ ಯೋಜನೆಗೆ ಯುರೋಪ್‌ನ ಐದು ರಾಷ್ಟ್ರಗಳು ಒಪ್ಪಿಗೆ ಸೂಚಿಸಿವೆ.

ಫ್ರಾನ್ಸ್, ಪೋಲೆಂಡ್, ಜರ್ಮನಿ, ಬ್ರಿಟನ್ ಹಾಗೂ ಇಟಲಿ ದೇಶಗಳು ರಷ್ಯಾ ವಿರುದ್ಧ 'ಡ್ರೋನ್ ತಡೆಗೋಡೆ' ನಿರ್ಮಿಸುವ ಯೋಜನೆಗೆ ನಿರ್ಧರಿಸಿವೆ. ಯುರೋಪ್‌ನ ವಾಯುಪ್ರದೇಶ ಉಲ್ಲಂಘಿಸುವ ಡ್ರೋನ್‌ಗಳನ್ನು ಪತ್ತೆ ಹಚ್ಚಿ, ಅವುಗಳನ್ನು ನಾಶಪಡಿಸುವ ತಂತ್ರಜ್ಞಾನದಲ್ಲಿ ಉಕ್ರೇನ್ ಹೆಚ್ಚಿನ ನೈಪುಣ್ಯ ಸಾಧಿಸಿದ್ದು, ಉಳಿದ ರಾಷ್ಟ್ರಗಳು ಕೂಡ ಕೈ ಜೋಡಿಸಲು ನಿರ್ಧರಿಸಿವೆ.

ಡ್ರೋನ್ ಯುದ್ಧ ಸಾಮರ್ಥ್ಯ ದಲ್ಲಿ ರಷ್ಯಾ ಹಾಗೂ ಉಕ್ರೇನ್ ಪ್ರಬಲ ಪೈಪೋಟಿ ನಡೆಸುತ್ತಿದ್ದು, ಯುದ್ಧ ತಂತ್ರವನ್ನೇ ಮರುರೂಪಿಸುವಂತೆ ಮಾಡಿದೆ. ಪೋಲೆಂಡ್ ಈಗಾಗಲೇ ಉಕ್ರೇನ್ ಜೊತೆಗೆ ಸೇನಾ ತರಬೇತಿ ಹಾಗೂ ಡ್ರೋನ್ ಉತ್ಪಾದನಾ ಕಾರ್ಯವನ್ನು ಆರಂಭಿಸಿದೆ.

ಯುರೋಪ್‌ನ ಗಡಿ ಹಾಗೂ ವಿಮಾನ ನಿಲ್ದಾಣಗಳ ಮೇಲೆ ಹೆಚ್ಚು ಸಾಮರ್ಥ್ಯದ ಡ್ರೋನ್‌ಗಳು ಹಾರಾಟ ನಡೆಸಿದ್ದವು. ರಷ್ಯಾವೇ ಈ ಡ್ರೋನ್‌ಗಳನ್ನು ಹಾರಿಸಿತ್ತು ಎಂದು ಐರೋಪ್ಯ ರಾಷ್ಟ್ರಗಳು ದೂರಿದ್ದವು. ಇದಕ್ಕೆ ತಿರುಗೇಟು ನೀಡಿದ್ದ ರಷ್ಯಾ, ಡ್ರೋನ್‌ಗಳನ್ನು ಉದ್ದೇಶಪೂರ್ವಕವಾಗಿ ಹಾರಿಸಿರಲಿಲ್ಲ ಎಂದು ತಿಳಿಸಿತ್ತು. ಈ ಬೆಳವಣಿಗೆಗಳಿಂದ ಎಚ್ಚೆತ್ತ ಈ ರಾಷ್ಟ್ರಗಳು ಇದೀಗ ಉಕ್ರೇನ್ ಜೊತೆಗೆ ಡ್ರೋನ್ ನಿರ್ಮಾಣ ಯೋಜನೆಗೆ ಕೈ ಜೋಡಿಸಿವೆ.

ಪ್ರತಿಸುಂಕ ಶೇ 15: ಟ್ರಂಪ್ ಇಂಗಿತ

ಒಂದನೇ ಪುಟದಿಂದ...

ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಸಂದರ್ಭದಲ್ಲಿ ಟ್ರಂಪ್ ಅವರು ಪ್ರತಿ ಸುಂಕವನ್ನು ಶೇ 25ರಿಂದ ಶೇ 18ಕ್ಕೆ ಇಳಿಸಿದ್ದರು. ಇದೀಗ ಶೇ 15ರಷ್ಟಾಗಲಿದೆ.

'ಅಮೆರಿಕದ ಕಾರ್ಮಿಕರು, ರೈತರು ಮತ್ತು ತಯಾರಕರಿಗೆ ಅನುಕೂಲವಾಗುವಂತೆ ವ್ಯಾಪಾರ ಸಂಬಂಧಗಳನ್ನು ಸಮತೋಲಿತ ಹಾದಿಗೆ ತರಲು ಸರ್‌ಚಾರ್ಜ್ ವಿಧಿಸುತ್ತಿದ್ದೇವೆ' ಎಂದು ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ.

ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ಒತ್ತಡ ಹೇರಿ ಭಾರತದ ಮೇಲೆ ಅಮೆರಿಕ ಹೇರಿದ್ದ ಶೇ 25ರಷ್ಟು ದಂಡನಾತ್ಮಕ ಸುಂಕವನ್ನು ಅಮೆರಿಕದ ಇತ್ತೀಚೆಗೆ ತೆಗೆದು ಹಾಕಿತ್ತು.

ವಿವಿಧ ದೇಶಗಳ ಮೇಲೆ ಟ್ರಂಪ್ ಆಡಳಿತವು ಅಕ್ರಮವಾಗಿ ಸುಂಕ ವಿಧಿಸಿದೆ. ಹೆಚ್ಚುವರಿ ಸುಂಕ ವಿಧಿಸುವ ಅಧಿಕಾರ ಅಮೆರಿಕದ ಸಂಸತ್ತಿಗೆ ಮಾತ್ರ ಇದೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿತ್ತು.

ಪರಿಣಾಮ ಪರಿಶೀಲನೆ: ಅಮೆರಿಕದ ಸುಪ್ರೀಂಕೋರ್ಟ್‌ನ ತೀರ್ಪು ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಪರಿಶೀಲಿಸುತ್ತೇವೆ ಎಂದು ವಾಣಿಜ್ಯ ಸಚಿವಾಲಯ ಹೇಳಿದೆ.

'ಸುಪ್ರೀಂಕೋರ್ಟ್ ತೀರ್ಪಿನ ಬೆನ್ನಲ್ಲೇ, ಟ್ರಂಪ್ ಆಡಳಿತವು ಕೆಲವು ಬದಲಾವಣೆಗಳನ್ನು ಘೋಷಿಸಿದೆ. ಇದು ಭಾರತದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎನ್ನುವುದನ್ನು ಪರಿಶೀಲಿಸುತ್ತೇವೆ' ಎಂದು ಸಚಿವಾಲಯ ಹೇಳಿದೆ.

ಭಾರತದ ಮೇಲೆ ಅಮೆರಿಕ ಇದುವರೆಗಿನ ಗರಿಷ್ಠ ಮಟ್ಟವಾದ ಶೇ 50ರಷ್ಟು ಸುಂಕ ವಿಧಿಸಿತ್ತು. ವ್ಯಾಪಾರ ಒಪ್ಪಂದ ಮತ್ತು ಸುಪ್ರೀಂಕೋರ್ಟ್ ತೀರ್ಪಿನಿಂದ ಇದು ಗಣನೀಯವಾಗಿ ಇಳಿಕೆ ಕಾಣಲಿದೆ. ಆದರೆ, ಭಾರತ – ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದಂತೆ ಸುಂಕ ದರ ಮುಂದುವರಿಯಲಿದೆಯೇ ಎನ್ನುವುದರ ಬಗ್ಗೆ ಯಾವುದೇ ಖಚಿತತೆ ಇಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತೀರ್ಪಿನವರೆಗೆ ಯಾಕೆ ಕಾಯಲಿಲ್ಲ?

ನವದೆಹಲಿ (ಪಿಟಿಐ): ವಿವಿಧ ದೇಶಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇರಿದ್ದ ಅಕ್ರಮ ಸುಂಕದ ಕುರಿತು ಅಲ್ಲಿನ ಸುಪ್ರೀಂ ಕೋರ್ಟ್ ನೀಡುವ ತೀರ್ಪಿಗಾಗಿ ಭಾರತ ಯಾಕೆ ಕಾಯಲಿಲ್ಲ. ಈ ತೀರ್ಪಿಗೂ ಮುನ್ನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪಿಸುವ ಅಗತ್ಯ ಏನಿತ್ತು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

'ಅಮೆರಿಕ ಮುಂದಿಟ್ಟ ವ್ಯಾಪಾರ ಒಪ್ಪಂದದ ಮೋಸದ ಜಾಲಕ್ಕೆ ಬೀಳಲು ಮೋದಿ ಸರ್ಕಾರಕ್ಕೆ ಇಷ್ಟೊಂದು ಆತುರವೇಕೆ, ಇದು ಮೋದಿ ಸರ್ಕಾರದ ಸುಳಿವು ಇಲ್ಲದ ವಿದೇಶಾಂಗ ನೀತಿಯೋ ಅಥವಾ ಏಕಪಕ್ಷೀಯ ಶರಣಾಗತಿಯೋ' ಎಂದು ಅವರು ಪ್ರಶ್ನಿಸಿದ್ದಾರೆ.

'ಮೋದೀಜಿ, ನೀವು ಭಾರತೀಯರ ಪರವಾಗಿ ನಿಲ್ಲಿ ಮತ್ತು ಸತ್ಯವನ್ನು ಹೇಳಿ. ಭಾರತದ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಲು ನಿಮ್ಮ ಮೇಲೆ ಒತ್ತಡ ಹೇರಿದವರು ಯಾರು, ಅದು ಎಪ್‌ಸ್ಟೈನ್ ಫೈಲ್ಸ್ ಆಗಿತ್ತೇ' ಎಂದು ಅವರು ಕೇಳಿದ್ದಾರೆ.

ಟ್ರಂಪ್ ಸುಂಕ ಅಕ್ರಮದ ವಿರುದ್ಧ ವಾದಿಸಿ ಗೆದ್ದ ಭಾರತೀಯ ವಲಸಿಗನ ಮಗ ನೀಲ್ ಕಟ್ಯಾಲ್

'ಸಂವಿಧಾನವೇ ಶ್ರೇಷ್ಠವೆಂದು ಸಾರಿದ ತೀರ್ಪು'

ನ್ಯೂಯಾರ್ಕ್ (ಪಿಟಿಐ): 'ಅಮೆರಿಕದ ಅಧ್ಯಕ್ಷರು ಜಗತ್ತಿನ ಪ್ರಭಾವಿ ವ್ಯಕ್ತಿ ಇರಬಹುದು, ಆದರೆ, ಸಂವಿಧಾನ ಅವರಿಗಿಂತಲೂ ಶಕ್ತಿಶಾಲಿಯಾದದ್ದು. ಸಂವಿಧಾನ ಗೆಲ್ಲಲಿ.'

ಹೀಗೆಂದವರು ಟ್ರಂಪ್ ಸುಂಕ ಅಕ್ರಮದ ವಿರುದ್ಧ ಅಲ್ಲಿನ ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸಿ, ಐತಿಹಾಸಿಕ ತೀರ್ಪಿಗೆ ಕಾರಣರಾದ ಭಾರತೀಯ –ಅಮೆರಿಕನ್ ವಕೀಲ ನೀಲ್ ಕಟ್ಯಾಲ್.

ಭಾರತೀಯ ವಲಸಿಗ ದಂಪತಿ ಪುತ್ರನಾಗಿ 1970ರಲ್ಲಿ ಷಿಕ್ಯಾಗೊದಲ್ಲಿ ಜನಿಸಿದ ಕಟ್ಯಾಲ್, ಸದ್ಯ ಅಮೆರಿಕದ ಬಹುರಾಷ್ಟ್ರೀಯ ಕಾನೂನು ಸಂಸ್ಥೆ ಮಿಲ್‌ಬ್ಯಾಂಕ್ ಎಲ್‌ಎಲ್‌ಪಿಯ ವಾಷಿಂಗ್ಟನ್ ಡಿ.ಸಿ ಕಚೇರಿಯ ಪಾಲುದಾರರಾಗಿದ್ದಾರೆ. ಅತ್ಯಂತ ಸಂಕೀರ್ಣವಾದ ವಾಣಿಜ್ಯ ಪ್ರಕರಣಗಳನ್ನು ನಿರ್ವಹಿಸುವ ಲಿಟಿಗೇಶನ್ ಆ್ಯಂಡ್ ಆರ್ಬಿಟ್ರೇಷನ್ ಗ್ರೂಪ್‌ನ ಸದಸ್ಯರೂ ಆಗಿದ್ದಾರೆ.

ಟ್ರಂಪ್ ಸುಂಕ ನೀತಿಯ ವಿರುದ್ಧ ಲಿಬರ್ಟಿ ಜಸ್ಟೀಸ್ ಸೆಂಟರ್ ಕಾನೂನು ಹೋರಾಟ ನಡೆಸಿತ್ತು. ಇತರರು ಹಿಂಜರಿದಾಗ ಹೋರಾಟವನ್ನು ಮುನ್ನಡೆಸಿದ ಲಿಬರ್ಟಿ ಜಸ್ಟೀಸ್ ಸೆಂಟರ್‌ನ ನಾಯಕತ್ವಕ್ಕೆ ಕಟ್ಯಾಲ್ ಕೃತಜ್ಞತೆ ಸಲ್ಲಿಸಿದ್ದಾರೆ.

'ಹೆಚ್ಚುವರಿ ಸುಂಕ ವಿಧಿಸುವ ಅಧಿಕಾರ ಅಮೆರಿಕದ ಸಂಸತ್ತಿಗೆ ಇದೆಯೇ ಹೊರತು, ಅಧ್ಯಕ್ಷರಿಗೆ ಇಲ್ಲ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ, ನೀಲ್ ಕಟ್ಯಾಲ್ ಅದನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು, 'ಸಂವಿಧಾನದ 'ಗೆಲುವು' ಎಂದು ಬರೆದುಕೊಂಡಿದ್ದಾರೆ.

'ಅಮೆರಿಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ಇಂದು ಅತ್ಯಂತ ಮಹತ್ವದ ಸಂಗತಿ ನಡೆದಿದೆ. ವಲಸಿಗನ ಮಗನೊಬ್ಬ ನ್ಯಾಯಾಲಯಕ್ಕೆ ಹೋಗಿ ಅಮೆರಿಕದ ಸಣ್ಣ ವ್ಯಾಪಾರಿಗಳ ಪರವಾಗಿ, 'ಹೇ ಈ ಅಧ್ಯಕ್ಷರು ಕಾನೂನುಬಾಹಿರವಾಗಿ ವರ್ತಿಸುತ್ತಿದ್ದಾರೆ' ಎಂದು ಹೇಳಲು ಸಾಧ್ಯವಾಯಿತು' ಎಂದು ಕಟ್ಯಾಲ್ ಅಮೆರಿಕದ ಎಂಎಸ್ ನೌ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟದ್ದಾರೆ.

'ಅಮೆರಿಕದ ಇತಿಹಾಸದಲ್ಲೇ ಈ ತೀರ್ಪು ಅಪರೂಪದ್ದು. ನೀವು ವಿಶ್ವದಲ್ಲೇ ಅತ್ಯಂತ ಪ್ರಭಾವಿ ವ್ಯಕ್ತಿ ಆಗಿರಬಹುದು, ಆದರೆ, ಸಂವಿಧಾನವನ್ನು ಉಲ್ಲಂಘಿಸಲು ಸಾಧ್ಯವಿಲ್ಲ' ಎನ್ನುವುದನ್ನು ಈ ತೀರ್ಪು ಹೇಳಿದೆ' ಎನ್ನುವುದು ಕಟ್ಯಾಲ್ ಅವರ ಸ್ಪಷ್ಟ ನುಡಿ.

56 ಸಂಕೀರ್ಣ ಪ್ರಕರಣಗಳಲ್ಲಿ ಗೆಲುವು

ಯಾಲೆ ಲಾ ಸ್ಕೂಲ್‌ನಿಂದ ಕಾನೂನು ಪದವಿ ಪಡೆದಿರುವ ಕಟ್ಯಾಲ್, ಬರಾಕ್ ಒಬಾಮ ಅಮೆರಿಕದ ಅಧ್ಯಕ್ಷರಾಗಿದ್ದಾಗ ಅಲ್ಲಿನ ಹಂಗಾಮಿ ಸಾಲಿಸಿಟರ್ ಜನರಲ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಅಮೆರಿಕದ ಮುಖ್ಯ ನ್ಯಾಯಮೂರ್ತಿಯವರು ಕಟ್ಯಾಲ್ ಅವರನ್ನು 2011 ಮತ್ತು 2014ರಲ್ಲಿ ಅಲ್ಲಿನ ಫೆಡರಲ್ ಮೇಲ್ಮನವಿ ನಿಯಮಗಳ ಸಲಹಾ ಸಮಿತಿಗೆ ನೇಮಿಸಿದ್ದರು. ನ್ಯಾಯಾಂಗ ಇಲಾಖೆಯ ಅಟಾರ್ನಿ ಜನರಲ್ ಕಚೇರಿಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ. ಅಮೆರಿಕದ ಕಾನೂನು ಇಲಾಖೆ ನೀಡುವ ಅತ್ಯುನ್ನತ ನಾಗರಿಕ ಗೌರವ 'ಎಡ್ಮಂಡ್ ರಾಂಡೋಲ್ಫ್ ಪ್ರಶಸ್ತಿ'ಯೂ ಅವರಿಗೆ ಲಭಿಸಿದೆ. ಸುಪ್ರೀಂ ಕೋರ್ಟ್‌ನಲ್ಲಿ ಅತ್ಯಂತ ಸಂಕೀರ್ಣವಾದ 56 ಪ್ರಕರಣಗಳಲ್ಲಿ ವಾದಿಸಿ ಗೆಲುವು ಪಡೆದಿದ್ದಾರೆ.

ರಾಜ್ಯ ಸರ್ಕಾರ ಮತ್ತೆ ವಿದ್ಯುತ್ ದರ ಏರಿಕೆಗೆ ಮುಂದಾಗಿರುವುದು ಸರಿಯೇ?
• ಸರಿ • ತಪ್ಪು
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

General

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (NABARD)

ಗುತ್ತಿಗೆ ಆಧಾರದ ಮೇಲೆ ಬ್ಯಾಂಕಿನ ವೈದ್ಯಕೀಯ ಅಧಿಕಾರಿ (BMO) ನೇಮಕಾತಿ

ಭಾರತ ಸರ್ಕಾರದ ಸಂಪೂರ್ಣ ಸ್ವಾಮ್ಯದ ಅಖಿಲ ಭಾರತ ಉನ್ನತ ಸಂಸ್ಥೆಯಾದ ನಬಾರ್ಡ್, ಅಗತ್ಯ ಅರ್ಹತೆ ಹೊಂದಿರುವ ಭಾರತೀಯ ನಾಗರಿಕರಿಂದ ನಬಾರ್ಡ್‌ನಲ್ಲಿ ಈ ಕೆಳಗಿನ ಹುದ್ದೆಗೆ ನೇಮಕಾತಿಗಾಗಿಅರ್ಜಿಗಳನ್ನು ಆಹ್ವಾನಿಸುತ್ತದೆ:
1) ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿ, 46, ಕೆಂಪೇಗೌಡ ರಸ್ತೆ, ಬೆಂಗಳೂರು – 560009
2) ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು, ರಹೇಜಾ ಪಾರ್ಕ್ ಅಪಾರ್ಟ್‌ಮೆಂಟ್ಸ್, ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ, ವಿಜಯನಗರ ಬೆಂಗಳೂರು – 560079
3) ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು, ನಂದಿನಿ ಲೇಔಟ್, ಬೆಂಗಳೂರು – 560096

ಕ್ರ. ಸಂ.	ಹುದ್ದೆ	ಸಂಖ್ಯೆ	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ
1	ಬ್ಯಾಂಕಿನ ವೈದ್ಯಕೀಯ ಅಧಿಕಾರಿ–(ಗುತ್ತಿಗೆ ಆಧಾರದ ಮೇಲೆ), ಕೆಳಗಿನ ಸ್ಥಳದಲ್ಲಿ: ನಬಾರ್ಡ್ ಕರ್ನಾಟಕ ಪ್ರಾದೇಶಿಕ ಕಚೇರಿ, 46, ಕೆಂಪೇಗೌಡ ರಸ್ತೆ, ಬೆಂಗಳೂರು– 560009	01	15 ಮಾರ್ಚ್ 2026
2	ಬ್ಯಾಂಕಿನ ವೈದ್ಯಕೀಯ ಅಧಿಕಾರಿ – (ಗುತ್ತಿಗೆ ಆಧಾರದ ಮೇಲೆ), ಕೆಳಗಿನ ಸ್ಥಳದಲ್ಲಿ: ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು ರಹೇಜಾ ಪಾರ್ಕ್ ಅಪಾರ್ಟ್ಮೆಂಟ್ಸ್ ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ ವಿಜಯನಗರ, ಬೆಂಗಳೂರು–560079 ಮತ್ತು ನಬಾರ್ಡ್ ಅಧಿಕಾರಿಗಳ ವಸತಿಗೃಹಗಳು ನಂದಿನಿ ಲೇಔಟ್, ಬೆಂಗಳೂರು–560096	01	15 ಮಾರ್ಚ್ 2026
	ಒಟ್ಟು	02	

ಶೈಕ್ಷಣಿಕ ಅರ್ಹತೆ, ವಯಸ್ಸು, ಕನಿಷ್ಠ ಅರ್ಹತಾ ಅನುಭವ, ಆಯ್ಕೆ ವಿಧಾನ, ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳಿಗಾಗಿ ದಯವಿಟ್ಟು www.nabard.orgಗೆ ಭೇಟಿ ನೀಡಿ.
(ಡಾ. ಸುರೇಂದ್ರ ಬಾಬು)
ಮುಖ್ಯ ಮಹಾ ವ್ಯವಸ್ಥಾಪಕರು
ಕರ್ನಾಟಕ ಕ್ಷೇತ್ರೀಯ ಕಾರ್ಯಾಲಯ, ಬೆಂಗಳೂರು

ಉದ್ಯೋಗಾವಕಾಶ

Drivers

ಡ್ರೈವರ್ ಬೇಕಾಗಿದ್ದಾರೆ ಬೆಂಗಳೂರು ಎಲೆಕ್ಟ್ರಿಕ್ ಬಸ್‌ಗಳಿಗಾಗಿ
ಕನಿಷ್ಠ ತಿಂಗಳ ಗಳಿಕೆ ₹ 30,000/–
ಗರಿಷ್ಠ ತಿಂಗಳ ಗಳಿಕೆ ₹ 40,000/–
ತಿಂಗಳ ಗಳಿಕೆ ₹ 23,150/-
ಇಎಸ್‌ಐ ಮತ್ತು ಪಿಎಫ್
ಉಚಿತ ವಸತಿ, ಬಸ್ ಪಾಸ್*
ಸಬ್ಸಿಡಿ ಕ್ಯಾಂಟೀನ್* ಡೈಲಿ ಬಾಟಾ*
ಅಪಘಾತ ವಿಮೆ 5 ಲಕ್ಷ
ರಜಾ ವೇತನ
ಪ್ರೋತ್ಸಾಹಕ ಧನ, ಭತ್ಯೆ, ಬೋನಸ್ ಇತ್ಯಾದಿ..
ಭಾರೀ ವಾಹನ ಚಾಲನ ಪರವಾನಗಿ ಕಡ್ಡಾಯ
ಕನಿಷ್ಠ 3 ವರ್ಷ ಅನುಭವ ಕಡ್ಡಾಯ
ಸಂಪರ್ಕಿಸಿ : 8438889961 / 8438889963

I T

EXPERIENCED H/W OS WINDOWS SERVER BASIC LINUX NET WORKING Engineer Send Resume 9663387726

ವೈವಾಹಿಕ

Grooms Wanted

Kannada

BANGALORE-BASED DOCTOR parents (Gangatkar) are looking for a suitable groom for their daughter, 1996 born, 5'3, good-looking, MD Medicine. Caste no bar. Contact: 9844063768

ಪ್ರವಾಸ

Travel

04.04.2026 ರಿಂದ 13 ದಿನಗಳು ಮುಕ್ತಿನಾಥ್, ಕಟ್ಮಂಡು, ಜನಕಪುರ, ದೇವಘಡ, ಅಯೋಧ್ಯ, ವಾರಣಾಸಿ, ಪ್ರಯಾಗ್‌ರಾಜ್, 18.04.2026ರಿಂದ ಚಂಡಿಗಡ್, 5 ಶಕ್ತಿ ಪೀಠಗಳು ಕುಲುಮನಾಲಿ, ಶಿಮ್ಲ. ಶ್ರೀ ಗಂಗಾ ಟೂರಿಸ್ಟ್- ಸಂ.: 9480253807.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Davangere

K. BEVINAHALLI Village, Harihara Taluk, Davangere, 04-06 Acres Agricultural Land for Outright Sale. Ph-7795494932.

Residential/ Commercial

Marathahalli

KUNDALAHALLI MARATHAHALLI 30x40 Site, Building 6500sft, Getting 2.80L, SALE. 3.85cr. 1% My Commission. Call: 9980577227.

Sites

Multiple Locations

ಸೈಟ್ ಮತ್ತು ನಿವೇಶನ ಹುಡುಕುತ್ತಿದ್ದೀರಾ
ಸೈಟ್ ತೆಗೆದುಕೊಳ್ಳುವಂತವರು, ಸೈಟ್ ಮಾರಾಟಗಾರರು, ಮನೆ ತೆಗೆದುಕೊಳ್ಳುವಂತವರು, ಮನೆ ಮಾರಾಟಗಾರರು, 1 ಲಕ್ಷದಿಂದ 10 ಲಕ್ಷದವರೆಗೆ ಸಾಲ ಕೊಡಲಾಗುವುದು. ಮತ್ತು 5 ಲಕ್ಷ, 10 ಲಕ್ಷ, 25 ಲಕ್ಷ, 50 ಲಕ್ಷ, ಮತ್ತು 2.5 ಕೋಟಿ ವರೆಗೆ, ಚೀಟಿ ಹಾಕುವಂತವರು
ಸಂಪರ್ಕಿಸಿ ಬೆಂಗಳೂರು : 90369 57018

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

26ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜೆ. ಎಮ್. ಕರಿಯಣ್ಣ
24-12-1936 – 22-02-2000
ಸೈಂಟ್ ಸೋಫಿಯಾಸ್ ಕಾನ್‌ವೆಂಟ್ ಹೈಸ್ಕೂಲ್, ನಾಗರಬಾವಿ ಮತ್ತು ಎಸ್.ಎಮ್.ಕೆ ಗ್ರಾನೈಟ್ಸ್ ಇದರ ಸಂಸ್ಥಾಪಕರು
ನಿಮ್ಮ ಸಹನೆ, ಧೈರ್ಯ, ಛಲ, ವಾತ್ಸಲ್ಯ ಮತ್ತು ತ್ಯಾಗ ಭಾವನೆಗಳೇ ನಮ್ಮ ದಾರಿದೀಪಗಳಾಗಲಿ.
ಸದಾ ನಿಮ್ಮನ್ನು ಸ್ಮರಿಸುವ ಕುಟುಂಬವರ್ಗದವರು ಮತ್ತು ಸಿಬ್ಬಂಧಿ ವರ್ಗ.

Shraddhanjali



With great sadness we announce the demise of **Mr. K.N. Ramaswami,** 93 years, on Feb 21, 2026. Survived by wife, children, grandchildren, great grandchild, brother, nieces, nephews and a large extended family and friends who were all dear to him.

ಚಿರಸ್ಮರಣೆ

ಜನನ: 27.1.1982 ಮರಣ: 22.2.2010

ಕೆ. ಶೇಖರ್‌ಗೌಡ
ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಶ್ರೀ ಬಿ.ಹೆಚ್. ಕೆಂಪಣ್ಣನವರ ಪುತ್ರ
ಜಂಕೆಬಚ್ಚಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆ.ಗ್ರಾ. ಜಿಲ್ಲೆ.
ನೀನು ನಮ್ಮನ್ನಗಲಿ ಇಂದಿಗೆ 16 ವರ್ಷವಾದರೂ ನಿನ್ನ ನೆನಪು ಹಚ್ಚಹಸಿರಾಗಿ ಉಳಿದಿದೆ. ನಿನ್ನ ಆತ್ಮಕ್ಕೆ ಭಗವಂತನ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ನಿನ್ನ ತಂದೆ, ತಾಯಿ ಮತ್ತು ಕುಟುಂಬ
ಮೊ: 8722503858

ಭಾರತ ವನಿತೆಯರ ಚಾರಿತ್ರಿಕ ಸಾಧನೆ

ಟಿ20 ಸರಣಿ ಗೆದ್ದ ಹರ್ಮನ್ ಪಡೆ • ಸ್ಮೃತಿ, ಜೆಮಿಮಾ ಶತಕದ ಜತೆಯಾಟ • ಶ್ರೇಯಾಂಕಾ, ಶ್ರೀಚರಣಿ ಮಿಂಚು

ಅಡಿಲೇಡ್ (ಪಿಟಿಐ): ಸ್ಮೃತಿ ಮಂದಾನ ಹಾಗೂ ಜೆಮಿಮಾ ರಾಡ್ರಿಗಸ್ ಶತಕದ ಜೊತೆಯಾಟದ ಬಲದಿಂದ ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ನೆಲದಲ್ಲಿ ಮೊದಲ ಬಾರಿ ಟಿ20 ಕ್ರಿಕೆಟ್ ಸರಣಿ ಗೆದ್ದು ಇತಿಹಾಸ ರಚಿಸಿತು.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 17 ರನ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯನ್ನು 2–1ರಿಂದ ಜಯಿಸಿತು. ಸ್ಮೃತಿ (82; 55ಎ, 4X8, 6X3) ಮತ್ತು ಜೆಮಿಮಾ (59;46ಎ, 4X4) ಅವರ 121 ರನ್‌ಗಳ ಜೊತೆಯಾಟದ ಬಲದಿಂದ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಜೆಮಿಮಾ ಅವರು ಮಹತ್ವದ ಘಟ್ಟದಲ್ಲಿ ಪಡೆದ ಆಕರ್ಷಕ ಕ್ಯಾಚ್‌ನಿಂದಾಗಿ ಭಾರತದ ಜಯ ಸುಲಭವಾಯಿತು.

ಇದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡವು ನಿಗದಿಯ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 159 ರನ್ ಗಳಿಸಿ ಸೋತಿತು. ಕರ್ನಾಟಕದ ಶ್ರೇಯಾಂಕಾ ಪಾಟೀಲ (22ಕ್ಕೆ3) ಮತ್ತು ಸ್ಪಿನ್ನರ್ ಶ್ರೀಚರಣಿ (35ಕ್ಕೆ2) ಅವರು ಮಿಂಚಿದರು.

ಜೆಮಿಮಾ ರಾಡ್ರಿಗಸ್

ವಿಕೆಟ್ ಪಡೆದ ಶ್ರೀಚರಣಿ ಅವರನ್ನು ನಾಯಕಿ ಹರ್ಮನ್‌ಪ್ರೀತ್ ಅಭಿನಂದಿಸಿದರು

ಭಾರತದ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ಆತಿಥೇಯ ತಂಡದ ಬ್ಯಾಟರ್‌ಗಳು ಕುಸಿದರು. ಆದರೆ ಐದನೇ ಕ್ರಮಾಂಕದ ಬ್ಯಾಟರ್ ಆ್ಯಷ್ಲೆ ಗಾರ್ಡನರ್ (57; 45ಎ, 4X5, 6X1) ಅವರು ಒಂದು ಹಂತದಲ್ಲಿ ತಮ್ಮ ತಂಡಕ್ಕೆ ಗೆಲುವಿನ ಭರವಸೆ ಮೂಡಿಸಿದ್ದರು. ಅರುಂಧತಿ ರೆಡ್ಡಿ ಹಾಕಿದ 16ನೇ ಓವರ್‌ನಲ್ಲಿ ಗಾರ್ಡನರ್ ಬೌಂಡರಿಯತ್ತ ಹೊಡೆದ ಚೆಂಡನ್ನು ಡೀಪ್ ಮಿಡ್‌ವಿಕೆಟ್‌ನಲ್ಲಿದ್ದ ಜೆಮಿಮಾ ಓಡಿ ಬಂದು ಡೈವ್ ಮಾಡಿ ಪಡೆದ ಕ್ಯಾಚ್ ಪಂದ್ಯಕ್ಕೆ ತಿರುವು ನೀಡಿತು. ಆಗ ಆಸ್ಟ್ರೇಲಿಯಾದ ಮೊತ್ತ 6 ವಿಕೆಟ್‌ಗಳಿಗೆ 128 ಆಗಿತ್ತು. ನಂತರದ ಹಂತದಲ್ಲಿ ಭಾರತದ ಬೌಲರ್‌ಗಳು ಬಿಗಿಹಿಡಿತ ಸಾಧಿಸಿದರು. ಇದರಿಂದಾಗಿ ಗೆಲುವು ಸಾಧ್ಯವಾಯಿತು.

ಅರ್ಧಶತಕ ದಾಖಲಿಸಿದ ಸ್ಮೃತಿ ಮಂದಾನ ಬಿಸಿಸಿಐ ಎಕ್ಸ್ ಚಿತ್ರಗಳು

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ176 (ಸ್ಮೃತಿ ಮಂದಾನ 82, ಜೆಮಿಮಾ ರಾಡ್ರಿಗಸ್ 59, ರಿಚಾ ಘೋಷ್ 18, ಅನಾಬೆಲ್ ಸದರ್ಲೆಂಡ್ 34ಕ್ಕೆ2) ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 9ಕ್ಕೆ159 (ಫೋಬಿ ಲಿಚ್‌ಫೀಲ್ಡ್ 26, ಆ್ಯಷ್ಲೆ ಗಾರ್ಡನರ್ 57, ಜಾರ್ಜಿಯಾ ವೆರ್‌ಹಾಮ್ 12, ಅನಾಬೆಲ್ ಸದರ್ಲೆಂಡ್ 14, ಶ್ರೇಯಾಂಕಾ ಪಾಟೀಲ 22ಕ್ಕೆ3, ಅರುಂಧತಿ ರೆಡ್ಡಿ 35ಕ್ಕೆ2, ಶ್ರೀಚರಣಿ 32ಕ್ಕೆ3) ಫಲಿತಾಂಶ: ಭಾರತ ತಂಡಕ್ಕೆ 17 ರನ್ ಜಯ. ಸರಣಿಯಲ್ಲಿ 2–1 ರಿಂದ ಗೆಲುವು. ಪಂದ್ಯ ಆಟಗಾರ್ತಿ: ಸ್ಮೃತಿ ಮಂದಾನ.

ಸಂಕ್ಷಿಪ್ತ ಸುದ್ದಿ

ಹರ್ಮನ್‌ಜ್ಯೋತ್‌ಗೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ದೂರ ಅಂತರದ ಓಟಗಾರ ಹರ್ಮನ್‌ಜ್ಯೋತ್ ಸಿಂಗ್ ಅವರು ಜಪಾನ್ ದೇಶದ ಫುಕುವೋಕಾದಲ್ಲಿ ಶನಿವಾರ ನಡೆದ ಏಷ್ಯನ್ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್ ಪುರುಷರ 10 ಕಿ.ಮೀ. ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು.

30 ವರ್ಷದ ಹರ್ಮನ್‌ಜ್ಯೋತ್ ಅವರು 29 ನಿಮಿಷ 21 ಸೆಕೆಂಡುಗಳಲ್ಲಿ ಗುರಿ ತಲುಪಿ, ಕೂದಲೆಳೆಯ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಆತಿಥೇಯ ಜಪಾನಿನ ಯುಜಿ ಮಿಯುರಾ (29ನಿ.20ಸೆ.) ಪ್ರಶಸ್ತಿ ಗೆದ್ದರು.

ಹರ್ಮನ್‌ಜ್ಯೋತ್ ಈ ಸ್ಪರ್ಧೆಯಲ್ಲಿ ವೈಯಕ್ತಿಕ ಶ್ರೇಷ್ಠ ಸಮಯದೊಂದಿಗೆ ಓಟವನ್ನು ಮುಗಿಸಿದರು. 2024ರಲ್ಲಿ ಬೆಂಗಳೂರಿನಲ್ಲಿ ದಾಖಲಿಸಿದ್ದ (29:57) ವೈಯಕ್ತಿಕ ಸಾಧನೆಯನ್ನು ಸುಧಾರಿಸಿಕೊಂಡರು. ಸೀನಿಯರ್ ಮಹಿಳೆಯರ 10 ಕಿ.ಮೀ. ಓಟದಲ್ಲಿ ಭಾರತದ ಸೋನಿಯಾ 35 ನಿಮಿಷ 24 ಸೆಕೆಂಡುಗಳಲ್ಲಿ ಗುರಿ ತಲುಪಿ ಐದನೇ ಸ್ಥಾನ ಪಡೆದರು.

ಅಂಧರ ಕ್ರಿಕೆಟ್‌ಗೆ ಬಿಸಿಸಿಐ ರಚನಾತ್ಮಕ ಬೆಂಬಲ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಅಂಧರ ಕ್ರಿಕೆಟ್‌ಗೆ ರಚನಾತ್ಮಕ ಬೆಂಬಲವನ್ನು ಶನಿವಾರ ಪ್ರಕಟಿಸಿದೆ.

ಅಂತರರಾಷ್ಟ್ರೀಯ ಟೂರ್ನಿಗಳಿಗೆ, ತವರು ಸರಣಿಗಳಿಗೆ ನೆರವು ಮತ್ತು ಸ್ಥಳ ಪ್ರವೇಶ ಸೇರಿದಂತೆ ರಚನಾತ್ಮಕ ಬೆಂಬಲವನ್ನು ಭಾರತ ಅಂಧರ ಕ್ರಿಕೆಟ್ ಸಂಸ್ಥೆಗೆ (ಸಿಎಬಿಐ) ಬಿಸಿಸಿಐ ಘೋಷಣೆ ಮಾಡಿದೆ.

'ದಶಕದಲ್ಲಿ ಭಾರತದ ಅಂಧ ಕ್ರಿಕೆಟಿಗರು ಜಾಗತಿಕ ವೇದಿಕೆಯಲ್ಲಿ ಉತ್ತಮ ಸಾಧನೆ ಮೆರೆದಿದ್ದಾರೆ. ಕಳೆದ ವರ್ಷ ಮಹಿಳಾ ತಂಡವು ಚೊಚ್ಚಲ ಕ್ರಿಕೆಟ್ ವಿಶ್ವಕಪ್ ಸಾಧನೆ ಮಾಡಿದೆ. ಪುರುಷರ ತಂಡವು ಹಲವು ಬಾರಿ ವಿಶ್ವಕಪ್ ಚಾಂಪಿಯನ್ ಆಗಿದೆ. ಅಂಧ ಕ್ರಿಕೆಟಿಗರ ಸಾಧನೆ ಮತ್ತು ಅವರು ಎದುರಿಸುತ್ತಿರುವ ಸವಾಲುಗಳನ್ನು ಗುರುತಿಸಿ ಪುರುಷ ಮತ್ತು ಮಹಿಳಾ ತಂಡಗಳೆರಡಕ್ಕೂ ಬೆಂಬಲ ನೀಡಲು ಬಿಸಿಸಿಐ ಬದ್ಧವಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರು, ಕಲಬುರಗಿ ವಿಭಾಗ
PL-88 Abhirudhi Bhavan, Chimalgi Layout, High court Road, Kalaburagi-02,
E-mail : ksdb.guldiv@gmail.com

No:KSDB/EE/KLB.DVN/KPPP-Tender/2025-26 Date:21.02.2026

:: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ::

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಕಲಬುರಗಿ ವಿಭಾಗದ ರಾಯಚೂರು ಉಪ–ವಿಭಾಗ ವ್ಯಾಪ್ತಿಯ ರಾಯಚೂರು ನಗರದ ಇಂದಿರಾ ನಗರ/ಕಾಳಿದಾಸ ನಗರ ಕೊಳಚೆ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ: ಬಿ.ಡಿ.ಎ ಸೆಸ್ ಅನುದಾನದಡಿ K.W 3 ರಂತೆ ಲೋಕೋಪಯೋಗಿ ಇಲಾಖೆಯಲ್ಲಿ ಸಿವ್ಹಿಲ್ ನೋಂದಾಯಿತ ಅರ್ಹ ಗುತ್ತಿಗೆದಾರರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಮುಖಾಂತರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿರುತ್ತದೆ.

Calendar of events: 1. Last Date & Time for tender Submission: 09.03.2026 Evening 16.00 Hrs, 2. Last date & time for opening Technical Bid: 11.03.2026 Morning 11.00 Hrs, 3. Last Date & Time for opening Financial Bid: Will be intimated to the eligible bidders.
1) Indent No. : **KSDB/2025-26/OW/WORK_INDENT435,** 2) Name of Work : **Providing Basic Amenities to Indira Nagar/Kalidas Nagar at Raichur City,** 3) Amount put to Tender (in Rs.): **82,56,304.32,** 4) EMD Amount (in Rs.): **1,65,127.00,** 5) Eligible Category of Contractors: **Class-I**

ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಕಲಬುರಗಿ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1107/ಕೆ.ಎಸ್.ಎಂ.ಸಿ.&ಎ/2025–26

ಬಿಎಫ್‌ಸಿಗೆ 'ಹೈಲ್ಯಾಂಡರ್ಸ್' ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್‌ನಲ್ಲಿ ಅಮೋಘ ಆರಂಭ ಪಡೆದಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ತನ್ನ ಎರಡನೇ ಪಂದ್ಯದಲ್ಲಿ ಭಾನುವಾರ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಸ್ಪೋರ್ಟಿಂಗ್ ಡೆಲ್ಲಿ (ಎಸ್‌ಸಿ ಡೆಲ್ಲಿ) ವಿರುದ್ಧ ಆರಂಭಿಕ ಪಂದ್ಯದಲ್ಲಿ ಅಧಿಕಾರಯುತ ಜಯ ದಾಖಲಿಸಿರುವ ಸುನಿಲ್ ಚೆಟ್ರಿ ಬಳಗವು ಭರ್ತಿ ಆತ್ಮವಿಶ್ವಾಸದಲ್ಲಿದೆ. ತನ್ನ ತವರು ಕಂಠೀರವ ಕ್ರೀಡಾಂಗಣದಲ್ಲಿ ಅಜೇಯ ಓಟವನ್ನು ಮುಂದುವರಿಸುವ ಛಲದಲ್ಲಿದೆ.

ಕಳೆದ ಭಾನುವಾರ ನಡೆದ ಪಂದ್ಯದಲ್ಲಿ ಹಾಲಿ ರನ್ನರ್ಸ್ ಅಪ್ ಬಿಎಫ್‌ಸಿ ತಂಡವು 2–0 ಗೋಲುಗಳ ಅಂತರದಿಂದ ಎಸ್‌ಸಿ ಡೆಲ್ಲಿ ತಂಡವನ್ನು ಸದೆಬಡಿದಿತ್ತು. ಮುಂಚೂಣಿ ಆಟಗಾರ ಶಿವಶಕ್ತಿ ನಾರಾಯಣನ್ ಮತ್ತು ಸುನಿಲ್ ಚೆಟ್ರಿ ಗೋಲು ದಾಖಲಿಸಿ ಗೆಲುವಿನ ರೂವಾರಿಗಳಾಗಿದ್ದರು. 41 ವರ್ಷದ ಚೆಟ್ರಿ ಲೀಗ್‌ನಲ್ಲಿ ಗೋಲು ದಾಖಲಿಸಿದ ಅತಿ ಹಿರಿಯ ಆಟಗಾರ ಎಂಬ ಗೌರವಕ್ಕೂ ಪಾತ್ರರಾಗಿದ್ದರು.

ಮತ್ತೊಂದೆಡೆ 'ಹೈಲ್ಯಾಂಡರ್ಸ್' ತಂಡವು ಈಸ್ಟ್ ಬೆಂಗಾಲ್ ವಿರುದ್ಧದ ಸೋಲಿನ ಕಹಿ ನೆನಪನ್ನು ಮರೆತು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ. ಅಲ್ಲದೆ, 2018ರ ನಂತರ ಆ ತಂಡವು ಬೆಂಗಳೂರಿನಲ್ಲಿ ಬಿಎಫ್‌ಸಿ ವಿರುದ್ಧ ಗೆಲುವು ಸಾಧಿಸಿಲ್ಲ. ಆ ಇತಿಹಾಸವನ್ನು ಬದಲಿಸುವ ದೊಡ್ಡ ಸವಾಲು ತಂಡದ ಮುಂದಿದೆ.

ನಾರ್ತ್‌ಈಸ್ಟ್ ತಂಡವು ತನ್ನ ಕೊನೆಯ ಪಂದ್ಯದಲ್ಲಿ ಸೋತಿದ್ದರೂ, ಕಳೆದ ಬಾರಿ ಕಂಠೀರವದಲ್ಲಿ 2-2 ಡ್ರಾ ಸಾಧಿಸಿ ಸಮಬಲದ ಪೈಪೋಟಿ ನೀಡಿದ್ದನ್ನು ಬಿಎಫ್‌ಸಿ ತಂಡದ ಮುಖ್ಯಕೋಚ್ ರೆನೆಡಿ ಸಿಂಗ್ ನೆನಪಿಸಿಕೊಂಡಿದ್ದಾರೆ. ಹೀಗಾಗಿ, ಎದುರಾಳಿಗಳನ್ನು ಲಘುವಾಗಿ ಪರಿಗಣಿಸದಂತೆ ತಮ್ಮ ಆಟಗಾರರಿಗೆ ಎಚ್ಚರಿಕೆ ನೀಡಿದ್ದಾರೆ.

'ಈ ಋತುವಿನ ಸ್ವರೂಪಕ್ಕೆ ತಕ್ಕಂತೆ ನಾವು ಪ್ರತಿ ಪಂದ್ಯವನ್ನು ಗೆಲ್ಲುವ ಮನಸ್ಥಿತಿಯೊಂದಿಗೆ ಕಣಕ್ಕಿಳಿಯಬೇಕಿದೆ' ಎಂದು ತಂಡದ ಪ್ರಮುಖ ಡಿಫೆಂಡರ್ ಚಿಂಗ್ಲೆನ್ಸಾನಾ ಸಿಂಗ್ ಪ್ರತಿಕ್ರಿಯಿಸಿದರು.

ಬೆಂಗಳೂರು ಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಪ್ರಜಾವಾಣಿ ಚಿತ್ರ

ಇಂದಿನ ಪಂದ್ಯ

ಬಿಎಫ್‌ಸಿ	V/s	ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ
ತಾಣ: ಕಂಠೀರವ ಕ್ರೀಡಾಂಗಣ, ಸಂಜೆ 5		
ಮುಂಬೈ ಸಿಟಿ	V/s	ಕೇರಳ ಬ್ಲಾಸ್ಟರ್ಸ್
ತಾಣ: ಕೊಚ್ಚಿ, ರಾತ್ರಿ 7.30		

ಲೈವ್: ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್ ಕೋಡ್ ಆ್ಯಪ್

ಗೆಲುವಿನ ಸಂಭ್ರಮದಲ್ಲಿ ಭಾರತದ ವೈಷ್ಣವಿ ಅಡ್ಕರ್ ಚಿತ್ರ: ಪ್ರಶಾಂತ್ ಎಚ್‌.ಜಿ.

ಟೆನಿಸ್: ಫೈನಲ್‌ಗೆ ವೈಷ್ಣವಿ

ಬೆಂಗಳೂರು: ತಮಗಿಂತ ಮೇಲಿನ ಕ್ರಮಾಂಕದ ಆಟಗಾರ್ತಿಯರನ್ನು ಸೋಲಿಸುತ್ತ ಬಂದಿರುವ ವೈಷ್ಣವಿ ಅಡ್ಕರ್ ಈ ಓಟವನ್ನು ಶನಿವಾರವೂ ಮುಂದುವರಿಸಿದರು. ವೈಲ್ಡ್ ಕಾರ್ಡ್ ಮೂಲಕ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ಪುಣೆಯ ಆಟಗಾರ್ತಿ ಈ ಬಾರಿ ಥಾಯ್ಲೆಂಡ್‌ನ ಆಟಗಾರ್ತಿ, ಎರಡನೇ ಶ್ರೇಯಾಂಕದ ಲನ್ಲಾನಾ ತರಾರುದೀ ಅವರಿಗೆ ಆಘಾತ ನೀಡಿ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಡಬ್ಲ್ಯು100 ಟೂರ್ನಿಯ ಫೈನಲ್ ತಲುಪಿದರು.

ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ, ವಿಶ್ವ ಕ್ರಮಾಂಕದಲ್ಲಿ 690ನೇ ಸ್ಥಾನದಲ್ಲಿರುವ ವೈಷ್ಣವಿ 6–3, 6–3 ರಿಂದ ಲಾನ್ಲಾನಾ ಅವರನ್ನು ಕೇವಲ 66 ನಿಮಿಷಗಳಲ್ಲಿ ಸೋಲಿಸಿದರು. ಭಾರತದ ಆಟಗಾರ್ತಿಯ ಪ್ರಾಬಲ್ಯ, ವಿಶ್ವ ಕ್ರಮಾಂಕದಲ್ಲಿ 126ನೇ ಸ್ಥಾನದಲ್ಲಿರುವ ಲನ್ಲಾನಾ ಅವರನ್ನು ಅಚ್ಚರಿಗೆ ಕೆಡವಿತು. ಇದು 21 ವರ್ಷ ವಯಸ್ಸಿನ ವೈಷ್ಣವಿ ಅವರ ವೃತ್ತಿ ಬದುಕಿನ ಅತಿ ದೊಡ್ಡ ಯಶಸ್ಸು ಸಹ.

ಭಾನುವಾರ ನಡೆಯುವ ಫೈನಲ್‌ನಲ್ಲಿ ಅವರು ಮೂರನೇ ಶ್ರೇಯಾಂಕದ ಹ್ಯಾನಿ ವೆಂಡೆವಿಂಕೆಲ್ ಅವರನ್ನು ಎದುರಿಸಲಿದ್ದಾರೆ. ಬೆಲ್ಜಿಯಮ್‌ನ ಆಟಗಾರ್ತಿ ಇನ್ನೊಂದು ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಪೊಲಿನಾ ಇಯಾಟ್ಸೆಂಕೊ (ರಷ್ಯಾ) ಅವರನ್ನು 6–4, 7–6 (5) ರಿಂದ ಮಣಿಸಿದರು.

ಮೊದಲ ಸೆಟ್‌ನ ನಾಲ್ಕನೇ ಮತ್ತು ಎರಡನೇ ಸೆಟ್‌ನ ಏಳನೇ ಗೇಮ್‌ಗಳನ್ನು ಬಿಟ್ಟರೆ ವೈಷ್ಣವಿ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದರು. ಈ ಎರಡು ಗೇಮ್‌ಗಳನ್ನು ಥಾಯ್ ಆಟಗಾರ್ತಿ ಸೋತರೂ ಕೊನೆಯವರೆಗೆ ಹೋರಾಟ ನೀಡಿದ್ದರು. ಭಾರತದ ಆಟಗಾರ್ತಿ ಈ ಪಂದ್ಯದಲ್ಲಿ ಒಟ್ಟು ನಾಲ್ಕು ಬಾರಿ ಎದುರಾಳಿಯ ಸರ್ವ್ ಮುರಿದರು. ರೋಹನ್ ಬೋಪಣ್ಣ ಟೆನಿಸ್ ಅಕಾಡೆಮಿಯಲ್ಲಿ ಬಾಲಚಂದ್ರನ್ ಮಾಣಿಕ್ಕಾತ್ ಅವರಿಂದ ಈ ಆಟಗಾರ್ತಿ ತರಬೇತಿ ಪಡೆಯುತ್ತಿದ್ದಾರೆ.

ಅಂಕಿತಾ– ಪ್ರಿಸ್ಕಾಗೆ ಸೋಲು: ಡಬಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಪಡೆದಿದ್ದ ಭಾರತದ ಅಂಕಿತಾ ರೈನಾ ಮತ್ತು ಅವರ ಇಂಡೊನೇಷ್ಯಾ ಜೊತೆಗಾರ್ತಿ ಪ್ರಿಸ್ಕಾ ಮೆಡೆಲಿನ್ ನುಗ್ರಹೊ ಅವರು ಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು. ಜಪಾನ್‌ನ ಮಿಸಾಕಿ ಮಾತ್ಸುದಾ– ಎರಿ ಶಿಮಿಝು ಅವರು 6–4, 3–6, 10–5 ರಿಂದ ಅಂಕಿತಾ–ಪ್ರಿಸ್ಕಾ ಜೋಡಿಯನ್ನು ಸೋಲಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ, ಹಾಸನ.
ಕ.ರಾ.ರ.ಸಾ.ನಿ. ಪ್ರಾದೇಶಿಕ ತರಬೇತಿ ಕೇಂದ್ರ ಕಟ್ಟಡ, ಡೈರಿ ವೃತ್ತದ ಹತ್ತಿರ, ರಿಂಗ್ ರಸ್ತೆ, ಹಾಸನ – 573 201. ದೂರವಾಣಿ : 08172–295262, e-mail : eehsn@ksrtc.org

ಸಂ: ಕರಾಸಾ/ಕಾವಿಹಾ/ಕಾನಿಅ/ಕಿಅ/602/2025–26 ದಿನಾಂಕ:20.02.2026

ಟೆಂಡರ್ ಪ್ರಕಟಣೆ ಸಂ. 14/2025–26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿ)

ಇ–ಪ್ರೊಕ್ಯೂರ್‌ಮೆಮಟ್ ಪದ್ಧತಿಯಲ್ಲಿ ಕೆಪಿಡಬ್ಲ್ಯೂಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್.ನಲ್ಲಿ ನೋಂದಾಯಿತರಾಗಿರುವ ಅರ್ಹ ಕಾಮಗಾರಿ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು 'ಇ' ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಮಡರಿನಲ್ಲಿ ಭಾಗವಹಿಸಲು ಕೋರಲಾಗಿದೆ. ಟೆಂಡರ್ ಪ್ರಕಟಣೆ ಮತ್ತು ಹೆಚ್ಚಿನ ವಿವರಗಳನ್ನು ಯಾವುದೇ ವೆಚ್ಚವಿಲ್ಲದೆ http://kppp.karnataka.gov.in ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ದಿನಾಂಕ : 24.02.2026 ರ ನಂತರ ವಿವರಗಳನ್ನು ಪಡೆದುಕೊಳ್ಳಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ
1	ಸೊರಬ ತಾಲ್ಲೂಕಿನ ಆನವಟ್ಟಿ ಪಟ್ಟಣದಲ್ಲಿರುವ ನೂತನ ಬಸ್ ನಿಲ್ದಾಣದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿ.	206.00	3,09,000/-	23.03.2026

ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಕ.ರಾ.ರ.ಸಾ. ನಿಗಮ ಪ್ರಾದೇಶಿಕ ತರಬೇತಿ ಕಟ್ಟಡ, ಡೈರಿ ವೃತ್ತ ಹತ್ತಿರ, ರಿಂಗ್ ರಸ್ತೆ, ಹಾಸನ ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಹಾಸನ.

ವಾಸಾಸಂಇ/ವಾಪ್ರ/ಜಿಎ/5801/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ, ಶೇಕಡವಾರು ಕೋಟಿಂಗ್ ಅಡಿಯಲ್ಲಿ ಐಟಂವಾರು ನಿಗದಿತ ದರ ಗುತ್ತಿಗೆ ಆಧಾರದಲ್ಲಿ ಭಾಗಶಃ ಟರ್ನ್ ಕೀ (ಪ್ರಮುಖ ಸಾಮಾಗ್ರಿಗಳಾದ ಡಿಟಿಸಿಗಳನ್ನು ಬೆವಿಕಂನಿಂದ ಪೂರೈಸಲಾಗುವುದು) ಆಧಾರದ ಮೇಲೆ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ 11 ಕೆವಿ ಮಾರ್ಗಗಳನ್ನು ವಿಸ್ತರಿಸಿ 25 ಕೆವಿಎ ಸ್ಟಾರ್ 1 (4ಸ್ಟಾರ್) ದರ್ಜೆಯ ವಿತರಣಾ ಪರಿವರ್ತಕಗಳನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲ ಸೌಕರ್ಯವನ್ನು ಒದಗಿಸುವ ಕಾಮಗಾರಿ

ಟೆಂಡರ್ ಸಂಖ್ಯೆಗಳು SC category	ಟೆಂಡರ್ ಸಂಖ್ಯೆಗಳು ST category	ಟೆಂಡರ್ ಸಂಖ್ಯೆಗಳು Category-I	ಟೆಂಡರ್ ಸಂಖ್ಯೆಗಳು Category-IIA	ಟೆಂಡರ್ ಸಂಖ್ಯೆಗಳು Others
BESCOM/2025-2026/EL/WORK_INDENT 1033, 1035	BESCOM/2025-2026/EL/WORK_INDENT 1029	BESCOM/2025-2026/EL/WORK_INDENT 1027	BESCOM/2025-2026/EL/WORK_INDENT 1032, 1036,1039	BESCOM/2025-2026/EL/WORK_INDENT 1022, 1023, 1024, 1025, 1026, 1028, 1030, 1031, 1034, 1037, 1038, 957, 970, 975, 976, 977, 978, 979, 981

ಟೆಂಡರ್ ವೇಳಾಪಟ್ಟಿ (1) ಟೆಂಡರ್ ಲಭ್ಯತೆ ದಿನಾಂಕ:23–02–2026 @ 17:00 Hrs ನಂತರ. (2) ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:27–02–2026. before 17:00 Hrs. (3) ಪೂರ್ವಭಾವಿ ಸಭೆಯ ದಿನಾಂಕ:02–03–2026 @ 11:00 Hrs. (4) ಪೂರ್ವಭಾವಿ ಸಭೆ ನಡೆಯುವ ಸ್ಥಳ: ಮುಖ್ಯ ಇಂಜಿನಿಯರ್(ವಿ),ರವರ ಕಛೇರಿ ಕಾ ಮತ್ತು ಪಾ ವಲಯ, ಬೆವಿಕಂ, ತುರುವನೂರು ರಸ್ತೆ ಆರ್.ಟಿ.ಓ ಕಛೇರಿ ಎದುರು ಚಿತ್ರದುರ್ಗ. (5) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ :12–03–2026 @ 17:00 Hrs. (6) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :16–03–2026 @ 11:00 Hrs.

ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in/ ಲಿಂಕ್ ನಿಂದ ಪಡೆಯಬಹುದು. ಮುಂದುವರೆದು, ಹೆಚ್ಚಿನ ಮಾಹಿತಿಗಾಗಿ ಬೆವಿಕಂ, ಚಿತ್ರದುರ್ಗ ವಲಯ ಕಚೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಲು ಸೂಚಿಸಲಾಗಿದೆ. ಸಹಾಯಕ್ಕಾಗಿ ಈ ಕೆಳಗಿನ ಸಹಾಯವಾಣಿ ಅಥವಾ ಇ–ಮೇಲ್ ಗೆ ಸಂಪರ್ಕಿಸಬಹುದಾಗಿದೆ. Phone No: 9240214000 & 9240214001
E-mail: support@eprochelpdesk.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಇಂಜಿನಿಯರ್ (ವಿದ್ಯುತ್),
ಚಿತ್ರದುರ್ಗ ವಲಯ, ಬೆವಿಕಂ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಬಸವನ ಬಾಗೇವಾಡಿ ರವರ ಕಾರ್ಯಾಲಯ
ಫೋನ್:08358–244081 ಇ–ಮೇಲ್:www.tlhbbagewadi@gmail.com

ಸಂ:ತಾ.ಸಾ.ಆ.ಬ.ಬಾ/ಟೆಂಡರ್/ಪಥ್ಯಾಹಾರ/380/2025–26 ದಿನಾಂಕ:19.02.2026

ಇ–ಪ್ರಕ್ಯುರಮೆಂಟ ಟೆಂಡರ್ ಪ್ರಕಟಣೆ

ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ 2026–27 ನೇ ಸಾಲಿಗಾಗಿ ಉಪಹಾರ ಮತ್ತು ಸಿದ್ದಪಡಿಸಿದ ಉತ್ತಮ ದರ್ಜೆಯ ಪಥ್ಯಾಹಾರ (ಚಪಾತಿ/ರೊಟ್ಟಿ, ಅನ್ನ, ಸಾಂಬಾರು) ಹಾಗೂ ಬಾಳೆ ಹಣ್ಣು, ಬೇಯಿಸಿದ ಕೋಳಿ ಮೊಟ್ಟೆ ಹಾಗೂ ಉತ್ತಮ ದರ್ಜೆಯ ಬ್ರೇಡ್, ಕಾಫೀ/ಟೀ ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಅವಧಿಯು ಆದೇಶ ನೀಡುವ ದಿನಾಂಕದಿಂದ 31–03–2027 ರ ವರೆಗೆ ಮಾತ್ರ ಇರುತ್ತದೆ. ಟೆಂಡರಿನ ಅಂದಾಜು ಮೌಲ್ಯ ರೂ.30,00,000/– ಗಳು ಇದ್ದು, ಟೆಂಡರ್ ವಿವರ ಈ ಕೆಳಗಿನಂತಿದೆ.

ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟಿನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ ಬಾಗೇವಾಡಿ, ಇವರಿಂದ ಪಡೆಯಬಹುದು. ಮೊ:9448920612, 9740494801
ಇ–ಮೇಲ್: www.tlhbbagewadi@gmail.com

ಟೆಂಡರ ವಿವರ

ಟೆಂಡರ್ ಪ್ರಕಟಣೆ ಸಂಖ್ಯೆ: DHFWS/2025-26/SE1973
01) ಇ–ಪೋರ್ಟಲ್ ಟೆಂಡರ ಅಪ್ಲೋಡ್ ಮಾಡುವ ದಿನಾಂಕ: 19.02.2026
02) ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 21.03.2026, 17.30 ಘಂಟೆಗೆ.
03) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.03.2026 ಬೆಳಿಗ್ಗೆ 11.00 ಘಂಟೆಗೆ.
04) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.03.2026 ಬೆಳಿಗ್ಗೆ 11.00 ಘಂಟೆಗೆ.
ಸೂಚನೆ: 1) ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್ ತೆರೆಯುವ ದಿನಾಂಕದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯ ದಿನದಂದು ತೆರೆಯಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು,
ತಾಲೂಕಾ ಸಾರ್ವಜನಿಕ ಆಸ್ಪತ್ರೆ,
ಬಸವನ ಬಾಗೇವಾಡಿ

ವಾಸಾಸಂಇ/ವಿಜಯಪುರ/733/ಕೆಎಸ್‌ಎಂಸಿಎ/2025–26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಧಾರವಾಡ ವಿಭಾಗ, ಟೋಲ್‌ನಾಕಾ, ಧಾರವಾಡ ದೂರವಾಣಿ : 0836-2747842 ಇ–ಮೇಲ್ : ksdb.dhardiv@gmail.com

ಸಂ.ಕಕೊಅಮ/ಕಾಪಾಅ/ಧಾ.ವಿ/ತಾಂ.ಶಾ/ಟೆಂ.ಪ್ರ/2025–26/988 ದಿನಾಂಕ : 10.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಬರುವ ಧಾರವಾಡ/ಗದಗ ಉಪವಿಭಾಗಕ್ಕೆ ಸಂಬಂಧಿಸಿಂತೆ, ಮಂಡಳಿಯಲ್ಲಿ ಅನುಷ್ಠಾನಗೊಳಿಸುತ್ತಿರುವ 2ನೇ ಹಂತದಲ್ಲಿ ಪೂರ್ಣಗೊಂಡಿರುವ 42345 ಮನೆಗಳಲ್ಲಿ ಗುಂಪು ಮನೆಗಳು ಹಾಗೂ ಜಿ+ಬಡಾವಣೆಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಅರ್ಹ ಸಿವಿಲ್/ಎಲೆಕ್ಟ್ರೀಕಲ್ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ದರಪಟ್ಟಿಯನ್ನು ಆಧರಿಸಿ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ವಿಚಾರಣೆ ಇ–ಪ್ರೋಕ್ಯೂರ್‌ಮೆಂಟ್‌ನ https://kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ : 20.02.2026 ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : 05.03.2026 ಸಂಜೆ 5.30 ಗಂಟೆಯವರೆಗೆ ಸ್ವೀಕೃತವಾದ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 07.03.2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು.

ಕಾಮಗಾರಿಯ ಕನಿಷ್ಟ ಮೊತ್ತ ರೂ. 25.00 ಲಕ್ಷಗಳು ಹಾಗೂ ಗರಿಷ್ಟ ಮೊತ್ತ ರೂ. 320.00 ಲಕ್ಷಗಳವರೆಗೆ 09 ಕಾಮಗಾರಿಗಳಿದ್ದು, ಟೆಂಡರನ್ ಇ.ಎಮ್.ಡಿ, ಗುತ್ತಿಗೆದಾರರ ಅರ್ಹತೆ/ಟೆಂಡರನ್ ನಿಯಮ/ಟೆಂಡರ್ ಶುಲ್ಕ ತುಂಬುವ ವಿಧಾನ್ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ, ಧಾರವಾಡ

ವಾಸಾಸಂಇ/ಧಾ/ಕೆಎಸ್‌ಎಂಸಿಎ/1265/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ:ಇಇ/ಎಂಐಡಿ/ಬೀದರ/ತಾ.ಶಾ–1,2&3/ಟೆಂಡರ್/2025–26/342 ದಿನಾಂಕ: 20–2–2026

ಕೆಪಿಪಿ–ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ ಕರೆ–2

1) ಕಾಮಗಾರಿಗಳ ವಿವರ.KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ: KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ.KPP-Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ –3 ಮಾತ್ರ: **26–02–2026 ರಂದು 17.00 ಗಂಟೆವರೆಗೆ** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ –3 ಮಾತ್ರ: **02–03–2026 ರಂದು 16.00 ಗಂಟೆ ವರೆಗೆ,** 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ: **04–03–2026 ರಂದು 11.00 ಗಂಟೆಗೆ ಸಾದ್ಯವಾದಲ್ಲಿ,** 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ –3 ಮಾತ್ರ **06–03–2026 ರಂದು 11.00 ಗಂಟೆಗೆ ಸಾದ್ಯವಾದಲ್ಲಿ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ:08482 232080, 11) ಅಂತರ್ಜಾಲ ತಾಣದ ವಿಳಾಸ.KPP portal https://kppp.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/344/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ – ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–10/2025–26 ದಿನಾಂಕ: 19–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬೆಳ್ಳೂರು–ಹೋಬಳಿ, ಹಾಲಾಳು–ಇರುಬನಹಳ್ಳಿ ಗ್ರಾಮದಲ್ಲಿ ಅಭಿವೃದ್ದಿಪಡಿಸಿರುವ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗೆ ದಿನಾಂಕ:23–01–2025 ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ ಈಗಾಗಲೆ ನಿಗಧಿತ ಆರಂಭಿಕ ಠೇವಣಿ ಪಾವತಿ ಮಾಡಿ ಅರ್ಜಿ ನೊಂದಾಯಿಸಿಕೊಂಡಿರುವ ಅರ್ಜಿದಾರರಿಗೆ ಇ–ಲಾಟರಿ ಮುಖಾಂತರ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಹ ಮತ್ತು ಅನರ್ಹ ಅರ್ಜಿದಾರರ ಪಟ್ಟಿಯನ್ನು ದಿನಾಂಕ : 08–04–2025 ರಂದು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ತದನಂತರದಲ್ಲಿ ಕೆಲವು ಅರ್ಜಿದಾರರು ಅವರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದ್ದು, ತಮ್ಮ ಹೆಸರುಗಳನ್ನು ಅರ್ಹ ಅರ್ಜಿದಾರರ ಪಟ್ಟಿಯಲ್ಲಿ ಸೇರಿಸುವಂತೆ ದಾಖಲೆಗಳೊಂದಿಗೆ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಅರ್ಹ ಮತ್ತು ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸಿದ ನಂತರ ಸ್ವೀಕರಿಸಲಾದ ಮನವಿ ಪತ್ರಗಳನ್ನು ಪರಿಗಣಿಸಿ ಪರಿಷ್ಕೃತ ಅಂತಿಮ ಅರ್ಹ ಮತ್ತು ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸಲು ಹಾಗೂ ಇ–ಲಾಟರಿ ನಡೆಸಲು ಈ ಕೆಳಗಿನಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಪರಿಷ್ಕೃತ ಅಂತಿಮ ಅರ್ಹ/ ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ	ಮಂಡಳಿಯ ದರ ಪ್ರತಿ ಚ.ಅ ಗೆ
ಹಾಲಾಳು–ಇರುಬನಹಳ್ಳಿ ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ	ದಿನಾಂಕ : 03–03–2026 ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಮಂಡ್ಯ ಹಾಗೂ ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು ಹಾಗೂ ಮಂಡಳಿಯ ವೆಬ್‌ಸೈಟ್.	ದಿನಾಂಕ: 06–03–2026 ಬೆಳಗ್ಗೆ 11.00 ಗಂಟೆಗೆ ಸ್ಥಳ:ಮಂಡಳಿ ಸಭಾಂಗಣ, ಕೇಂದ್ರ ಕಛೇರಿ, ಬೆಂಗಳೂರು.	EWS ವರ್ಗಕ್ಕೆ ರೂ.625/– ಪ್ರತಿ ಚ.ಅ ಗೆ ಹಾಗೂ LIG, MIG, HIG ವರ್ಗಕ್ಕೆ ರೂ.1250/– ಪ್ರತಿ ಚ.ಅ ಗೆ

ಹೆಚ್ಚಿನ ಮಾಹಿತಿಗಾಗಿ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮಂಡ್ಯ ಇವರ ದೂರವಾಣಿ ಸಂಖ್ಯೆ:08232–220478 ಅಥವಾ ಸಹಾಯಕ ಕಂದಾಯ ಅಧಿಕಾರಿಗಳು, ಮಂಡ್ಯ ರವರ ಮೊ.6362218708 ಹಾಗೂ ಕಂದಾಯ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009, ದೂರವಾಣಿ ಸಂಖ್ಯೆ:080–22273511 extn 308/309ರಲ್ಲಿ ಮಾಹಿತಿ ಪಡೆಯಬಹುದಾಗಿದೆ ಹಾಗೂ ಮಂಡಳಿಯ ವೆಬ್ ಸೈಟ್ https://www.khb.karnataka.gov.in ಅನ್ನು ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/5811/Zen/2025-26

ಬೈತೂ ಗಂಧಕದ ಬುಗ್ಗೆ
ತೈವಾನ್ ದೇಶದ ತೈಪೆಯಲ್ಲಿರುವ ಸ್ಲಫರ್ ವ್ಯಾಲಿಯ ಬಿಸಿನೀರಿನ ಬುಗ್ಗೆಗಳು ಭೂಮಿಯೇ ಉಸಿರಾಡಿದಂತೆ ಕಂಡಾಗ...

12



ಕೆಸರಿನ ಕರೆಯ ಮೇಲೆ ನೀರು ಚಿಮ್ಮಿಸುವ ಕ್ಷಣದಲ್ಲಿ ಯುವಕರ ಕನಸುಗಳೂ ಚಿಮ್ಮುತ್ತಿವೆ. ಕೆಲವೇ ಸೆಕೆಂಡುಗಳ ಓಟ ಅವರ ಬದುಕಿನ ದಿಕ್ಕೇ ಬದಲಿಸುತ್ತಿದೆ. ಕಂಬಳ ಈಗ ಕೇವಲ ಕ್ರೀಡೆಯಲ್ಲ; ಅದು ಕರಾವಳಿಯ ಹೊಸತಲೆಮಾರಿನ ವೃತ್ತಿ, ಗೌರವ ಮತ್ತು ಆರ್ಥಿಕ ಬಲದ ಸಂಕೇತವಾಗಿದೆ.

ಶೈಕ್ಷಣಿಕ ವಿದ್ಯಾಭ್ಯಾಸದ ಜೊತೆಯೇ ಕಂಬಳದ ಅಭ್ಯಾಸದಲ್ಲಿ ಗರ್ಷಣ್

ಕಂಬಳದ ಕರೆಗೆ ಒಲಿದ ಪದವೀಧರರು!

• ವಿಕ್ರಂ ಕಾಂತಿಕೆರೆ

ಕರೆ ಮೇಲೆ ನೀರು ಚಿಮ್ಮುತ್ತದೆ. ಕಚ್ಚೆ ಕಟ್ಟಿದ ಕಟ್ಟುಮಸ್ತಾದ ಯುವಕ ಬೆತ್ತ ಹಿಡಿದು ಕೋಣಗಳ ಜೊತೆಗೆ ಗಂತಿಗೆ ಇಳಿಯುತ್ತಾನೆ. ಕ್ಷಣಕಾಲದಲ್ಲಿ ಕೆಸರಿನ ಕರೆಯ ಮೇಲೆ ಮಿಂಚಿನಂತೆ ಓಟ ಮುಗಿಯುತ್ತದೆ.

ಪುತ್ತೂರಿನಲ್ಲಿ ಜನವರಿ 24ರಂದು ನಡೆದ ಕಂಬಳದಲ್ಲಿ ನೇಗಿಲು ಹಿರಿಯ ವಿಭಾಗದಲ್ಲಿ ದಾಖಲೆ ಬರೆದ ಪೃಥ್ವಿರಾಜ್ ಪೂಜಾರಿ ಈ ಹೊಸ ತಲೆಮಾರಿನ ಪ್ರತಿನಿಧಿ. ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದ ಈ ಯುವಕ, ಉಡುಪಿ ಜಿಲ್ಲೆಯ ಪಡುಬಿದ್ರಿಯ ಪಡುಶಾಂತೂರಿನವರು. ಈಗ ಅವರ ಬದುಕಿನ ಕೇಂದ್ರಬಿಂದುವೇ ಕಂಬಳ. 'ಉದ್ಯೋಗಕ್ಕೆ ಸೇರುವ ಪ್ರಯತ್ನ ಮಾಡುತ್ತಿದ್ದೇನೆ. ಉದ್ಯೋಗ ಸಿಕ್ಕರೂ ಕಂಬಳ ಬಿಡುವುದಿಲ್ಲ' ಎಂದು ಅವರು ಖಚಿತ ಧ್ವನಿಯಲ್ಲಿ ಹೇಳುತ್ತಾರೆ.

ಕಳೆದ ಡಿಸೆಂಬರ್‌ನಲ್ಲಿ ಮಂಗಳೂರಿನಲ್ಲಿ ನಡೆದ ಕಂಬಳದಲ್ಲಿ ಕುಂದಾಪುರ ತಾಲ್ಲೂಕಿನ ಮಾಸ್ತಿಕಟ್ಟೆ ಕುಂದಬಾರಂದಾಡಿಯ ಸ್ವರೂಪ್ ಮಾಡಿದ ದಾಖಲೆಯನ್ನು ಮುರಿದವರು ಪೃಥ್ವಿರಾಜ್. ಸ್ವರೂಪ್ ಕೂಡ ಕಂಬಳಕ್ಕಾಗಿ ಉದ್ಯೋಗವನ್ನೇ ತೊರೆದವರು. ಐಟಿಐ ಮುಗಿಸಿ ಬೆಂಗಳೂರಿನ ನೇತ್ರ ಸಂರಕ್ಷಣೆ ಉಪಕರಣ ತಯಾರಿಕಾ ಕಂಪನಿಯಲ್ಲಿ ಎಂಟು ತಿಂಗಳು ಕೆಲಸ ಮಾಡಿದರೂ, ಕಂಬಳದ ಸೆಳೆತ ಅವರನ್ನು ಮತ್ತೆ ಊರಿಗೆ ಕರೆತಂದಿತು. 'ಉದ್ಯೋಗದಲ್ಲಿ ಒಂದು ವರ್ಷ ಗಳಿಸುವ ಹಣವನ್ನು ಕಂಬಳದ ಒಂದು ಋತುವಿನ ಮೂರೇ ಓಟಗಳಲ್ಲಿ ಗಳಿಸಬಹುದು. ಹಾಗಿರುವಾಗ ನಗರದ ಹಂಗ್ಯಾಕೆ?' ಎಂಬ ಅವರ ಪ್ರಶ್ನೆಯಲ್ಲೇ ಕಂಬಳದ ಆಕರ್ಷಣೆಯ ತೀವ್ರತೆ ಗೊತ್ತಾಗುತ್ತದೆ.

ಬೆಂಗಳೂರಿನಲ್ಲಿ ನಡೆದ ಕಂಬಳದಲ್ಲಿ ನೇಗಿಲು ವಿಭಾಗದ 100 ಮೀಟರ್ ಕರೆಯನ್ನು 9.09 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿದ ಕಕ್ಕೆಪದವು ಕೃತಿಕ್ ಗೌಡ ಯೆನೆಪೋಯ ವಿಶ್ವವಿದ್ಯಾಲಯದಲ್ಲಿ ಬಿಬಿಎ ಪದವಿ ಪಡೆದು ಉದ್ಯಮದಲ್ಲಿದ್ದಾರೆ. ಆದರೆ ಕಂಬಳ ಋತುವು ಬಂದರೆ, ಕೋಣಗಳ ಮಾಲೀಕರೊಂದಿಗೆ ಲಕ್ಷಾಂತರ ಮೊತ್ತದ ಒಡಂಬಡಿಕೆ ಮಾಡಿಕೊಂಡು ಕರೆಗೆ ಇಳಿಯುತ್ತಾರೆ. 'ಕಂಬಳ ಈಗ ನನ್ನ ವೃತ್ತಿಯೂ ಆಗಿದೆ. ಇದರಲ್ಲಿ ಸಿಗುವ ಸುಖವೇ ಬೇರೆ. ಒಳ್ಳೆಯ ಹೆಸರೂ ಬಂದಿದೆ. ಇನ್ನೇನು ಬೇಕು?' ಎಂದು ಅವರು ನಗೆ ಬೀರುತ್ತಾರೆ.

ಕಂಬಳ ತನ್ನ ವೃತ್ತಿಯೂ ಆಗಿದೆ ಎನ್ನುವ ಕೃತಿಕ್

ಪಿಯುಸಿ ಮುಗಿಸಿ ಉದ್ಯೋಗದಲ್ಲಿರುವ ಮೂಡುಬಿದಿರೆಯ ಮರಿಯಾಡಿಯ ಮಹಮ್ಮದ್ ಅನ್ವರ್, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಬಿಪಿಎಡ್ ಮಾಡುತ್ತಿರುವ ಬಂಟ್ವಾಳ ರಾಯಿಯ ಗರ್ಷಣ್ ಗೌಡ, ವಾಮದಪದವು ಸರ್ಕಾರಿ ಕಾಲೇಜಿನಲ್ಲಿ ಎಂಕಾಂ ಓದುತ್ತಿರುವ ಬೆಳ್ತಂಗಡಿ ತಾಲ್ಲೂಕಿನ ಕಾರ್ತೇಶ್– ಹೀಗೆ ಹಲವರು ವಿದ್ಯಾಭ್ಯಾಸದ ಜೊತೆಗೆ ಕಂಬಳದ ಕರೆಯಲ್ಲೂ ತಮ್ಮ ಹೆಸರನ್ನು ಗಟ್ಟಿಗೊಳಿಸುತ್ತಿದ್ದಾರೆ. ಕರಾವಳಿಯ ಅಸ್ಮಿತೆಯಾಗಿ ಬೆಳೆದ ಈ ಜನಪದ ಕ್ರೀಡೆ ಅವರಿಗೆ ಖ್ಯಾತಿ ಮಾತ್ರವಲ್ಲ, ಆತ್ಮಗೌರವ ಮತ್ತು ಆರ್ಥಿಕ ಬಲವನ್ನೂ ನೀಡುತ್ತಿದೆ.

ಹಿಂದಿನ ಋತುವಿನಲ್ಲಿ ತೋರಿದ ಸಾಮರ್ಥ್ಯವೇ ಮುಂದಿನ ಋತುವಿನ ಮೌಲ್ಯವನ್ನು ನಿರ್ಧರಿಸುತ್ತದೆ. ಕೋಣಗಳ ಮಾಲೀಕರು ತಮ್ಮ ಕೋಣಗಳಿಗೆ ವೇಗ ಮತ್ತು ಪದಕ ತಂದುಕೊಡಬಲ್ಲ ಓಟಗಾರರನ್ನು ಸೆಳೆಯಲು ಪೈಪೋಟಿ ನಡೆಸುತ್ತಾರೆ. ಒಂದು ಋತುವಿನ 20 ಕಂಬಳಗಳಿಗೆ ಕನಿಷ್ಠ ₹5 ಲಕ್ಷದ ಒಡಂಬಡಿಕೆ ಸಾಮಾನ್ಯ. ಪ್ರತಿ ಕಂಬಳಕ್ಕೆ ಕನಿಷ್ಠ ₹5 ಸಾವಿರ ಸಂಭಾವನೆ. ವಾರಾಂತ್ಯಗಳೆಲ್ಲವೂ ಓಟದಿಂದ ತುಂಬಿರುತ್ತದೆ. ದೈಹಿಕ ಸಾಮರ್ಥ್ಯ ಇದ್ದರೆ 20 ವಾರಗಳ ಅವಧಿಯು ಒಬ್ಬ ಯುವಕನ ಆರ್ಥಿಕ ಭವಿಷ್ಯ ಕಟ್ಟುವ ಕಾಲವಾಗುತ್ತದೆ.



ಸಿವಿಲ್ ಎಂಜಿನಿಯರ್ ಪದವೀಧರ ಪೃಥ್ವಿರಾಜ್

ಕಚ್ಚೆ, ಮುಂಡಾಸು, ಬೆತ್ತ... ಇವು ಕೇವಲ ಅಲಂಕಾರವಲ್ಲ; ಅವು ಕಂಬಳದ ಶಿಸ್ತಿನ ಸಂಕೇತಗಳು. ಕಟ್ಟುಮಸ್ತಾದ ದೇಹ, ಕಸರತ್ತು ಮಾಡಿದ ಮಾಂಸಖಂಡಗಳು, ಕರೆಯ ಮೇಲೆ ನಿಯಂತ್ರಿತ ವೇಗ– ಇವುಗಳ ಹಿಂದೆ ಕಟ್ಟುನಿಟ್ಟಾದ ಅಭ್ಯಾಸವಿದೆ. ಲಕ್ಷಾಂತರ ರೂಪಾಯಿ ವ್ಯಯಿಸಿ ಕೋಣಗಳನ್ನು ಸಾಕುವ ಮಾಲೀಕರಿಗೆ ಚಿನ್ನದ ಪದಕ ಪ್ರತಿಷ್ಠೆಯ ವಿಚಾರ. ಹೀಗಾಗಿ ಉತ್ತಮ ಓಟಗಾರರ ಮೇಲೆ ಹೂಡಿಕೆ ಮಾಡಲು ಅವರು ಹಿಂದೇಟು ಹಾಕುವುದಿಲ್ಲ. ಕೋಣ ಹಿಡಿಯುವವರು, ಕೆಲಸ ಮಾಡುವವರು, ತರಬೇತುದಾರರು ಸೇರಿ ಜೋಡಿ ಕೋಣದ ಹಿಂದೆ ಅನೇಕ ಕೈಗಳು ಕೆಲಸ ಮಾಡುತ್ತವೆ. ಆದರೆ ಆ ತಂಡದಲ್ಲಿ ಅತಿ ಹೆಚ್ಚಿನ ಸಂಭಾವನೆ ಪಡೆಯುವವರು ಓಟಗಾರರೇ.

ಅಕಾಡೆಮಿಯ ಪಾಠ...

ಈಗಿನ ಓಟಗಾರರಲ್ಲಿ ಹಲವರು ಅಕಾಡೆಮಿಗಳಲ್ಲಿ ತರಬೇತಿ ಪಡೆದವರು. ಕೇವಲ ಪರಂಪರೆಯಿಂದಲೇ ಅಲ್ಲ, ತಂತ್ರಜ್ಞಾನ ಮತ್ತು ತರಬೇತಿ ಕ್ರಮಗಳಿಂದಲೂ ಕಂಬಳದ ವೇಗ ಹೆಚ್ಚುತ್ತಿದೆ. ಆದರೂ ಕೋಣಗಳ ಚಾಕರಿ ಮಾಡುತ್ತಲೇ ಓಟ ಕಲಿತ ಬಂಗಾಡಿ ಕಿಲ್ಲೂರು ಅಶ್ರಫ್ ಅವರಂಥ 'ಏಕಲವ್ಯ'ರಿಗೂ ಈ ಕ್ಷೇತ್ರದಲ್ಲಿ ಸ್ಥಾನವಿದೆ. ಗಂತಿನಿಂದ ಮಂಜೊಟ್ಟಿವರೆಗೆ ಇರುವ 125 ಮೀಟರ್ ಕರೆಯ ಓಟ ಕೆಲವೊಮ್ಮೆ ಬದುಕಿನ ತಿರುವಾಗುತ್ತದೆ.

ಶ್ರೀನಿವಾಸ ಗೌಡ ಅವರ ಸಾಧನೆಯ ನಂತರ ಕಂಬಳ ಓಟಗಾರರ ಹೆಸರು ಬೆಳಗಲು ಆರಂಭವಾಯಿತು. ಕಾಲೇಜು ದಿನಗಳಲ್ಲಿ ಅಕಾಡೆಮಿಯಲ್ಲಿ ತರಬೇತಿ ಪಡೆದ ಕಾರ್ತೇಶ್, ಮೂರು ವರ್ಷಗಳಲ್ಲಿ 40ಕ್ಕೂ ಹೆಚ್ಚು ಕಂಬಳಗಳಲ್ಲಿ ಪಾಲ್ಗೊಂಡಿದ್ದಾರೆ. 'ಆರು ತಿಂಗಳ ಒಪ್ಪಂದ ಇರುತ್ತದೆ. ಕಂಬಳಕ್ಕೆ ಎರಡು ದಿನ ಬಾಕಿ ಇರುವಾಗ ಅಂತಿಮ ಸಿದ್ಧತೆ ಗಟ್ಟಿಯಾಗುತ್ತದೆ. ಉಳಿದ ಸಮಯದಲ್ಲಿ ಓದಿಗೆ ತೊಂದರೆ ಇಲ್ಲ. ಪದಕ ಗೆದ್ದರೆ ಕಾಲೇಜು ಕ್ಯಾಂಪಸ್ ಕೂಡ ಸಂಭ್ರಮಿಸುತ್ತದೆ' ಎನ್ನುತ್ತಾರೆ ಅವರು. ಕಂಬಳದ ಕೋಣಗಳನ್ನು ಓಡಿಸುವ ಅವಕಾಶ ಸಿಕ್ಕರೆ ಅದು ಗೌರವದ ಸಂಗತಿ ಎಂಬುದು ಅವರ ಮಾತಿನ ಅರ್ಥ.

'ಅಡಿಕೆ ಸುಲಿಯುವುದು ಸೇರಿದಂತೆ ಹಲವು ಕೆಲಸ ಮಾಡುತ್ತಿದ್ದೆ. ನಂತರ ಅಕಾಡೆಮಿಯಲ್ಲಿ ತರಬೇತಿ ಪಡೆದು ಕಂಬಳಕ್ಕೆ ಬಂದೆ. ಎಸ್‌ಎಸ್‌ಎಲ್‌ಸಿ ನಂತರದ ಕಲಿಕೆಗೆ ಕಂಬಳವೇ ನೆರವಾಯಿತು' ಎಂದು ಹೇಳುತ್ತಾರೆ ಗರ್ಷಣ್ ಗೌಡ. ನಾಲ್ಕು ವರ್ಷಗಳಲ್ಲಿ 60ಕ್ಕೂ ಹೆಚ್ಚು ಕಂಬಳಗಳಲ್ಲಿ ಕೋಣ ಓಡಿಸಿರುವ ಅವರು, ನೇಗಿಲು ಕಿರಿಯರ ವಿಭಾಗದಲ್ಲಿ ಭಾಗವಹಿಸುತ್ತಿದ್ದರು. ಈಗ ನೇಗಿಲು ಹಿರಿಯ ವಿಭಾಗದಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ.

ಬದುಕಿನ ಮಾರ್ಗವಾದ ಕಂಬಳ

'ಇಂದು ಕಂಬಳ ಹಲವರ ಬದುಕಿನ ಮಾರ್ಗವಾಗಿದೆ' ಎನ್ನುತ್ತಾರೆ ರಾಜ್ಯ ಕಂಬಳ ಸಂಸ್ಥೆಯ ಅಧ್ಯಕ್ಷ ಬೆಳಪು ದೇವಿಪ್ರಸಾದ್ ಶೆಟ್ಟಿ. 'ಉತ್ತಮ ಸಾಮರ್ಥ್ಯ ತೋರಿದ ಓಟಗಾರರಿಗೆ ₹10 ಲಕ್ಷದವರೆಗೆ ಪ್ಯಾಕೇಜ್ ಸಿಗುತ್ತದೆ. ಪ್ರತಿ ಕಂಬಳದಲ್ಲಿ ವಿವಿಧ ಕಾರ್ಯಗಳಿಗೆ ಸುಮಾರು 400 ಮಂದಿಗೆ ಉದ್ಯೋಗ ಸಿಗುತ್ತದೆ. ಕೋಣಗಳನ್ನು ಸಾಕಲು ವರ್ಷಪೂರ್ತಿ ಕೆಲಸದವರನ್ನು ಇಡಲಾಗುತ್ತದೆ. ಒಟ್ಟಾರೆ 500ಕ್ಕೂ ಹೆಚ್ಚು ಕುಟುಂಬಗಳಿಗೆ ಕಂಬಳವೇ ಆದಾಯದ ಮೂಲವಾಗಿದೆ' ಎನ್ನುತ್ತಾರೆ.

ಕನೆಹಲಗೆ ವಿಭಾಗದಲ್ಲಿ ಹೆಸರು ಮಾಡಿರುವ ಕುಂದಾಪುರದ ಉದಯ್ ಗೌಡ, ಅಡ್ಡಹಲಗೆಯಲ್ಲಿ ಮಿಂಚುವ ಭಟ್ಕಳ ಹರೀಶ್, ಎರಡೂ ವಿಭಾಗಗಳಲ್ಲಿ ಓಡುವ ರಾಪುಹಿತ್ಲು ರಾಘು, ಕನೆಹಲಗೆ ಸ್ಪೆಷಲಿಸ್ಟ್ ಭಾಸ್ಕರ ದೇವಾಡಿಗ, ರಾಘವೇಂದ್ರ ಪೂಜಾರಿ ಕಾಮನಮನೆ, ವಿಶ್ವನಾಥ ದೇವಾಡಿಗ, ಟಾಪ್ ಓಟಗಾರ ಮಂಜುನಾಥ ಗೌಡ ಇವರೆಲ್ಲರ ಬದುಕು ಕಂಬಳದ ಕರೆಯ ಜೊತೆ ಬೆಸೆದುಕೊಂಡಿದೆ.

ಜನಪದ ಕ್ರೀಡೆಗಳಿಗೆ ವಿದ್ಯಾವಂತ ಯುವಕರು ಒಲಿದಷ್ಟೂ ಆ ಕ್ರೀಡೆಗೆ ಗೌರವ ಹೆಚ್ಚುತ್ತದೆ. ಪೈಪೋಟಿ, ಪರಂಪರೆ, ಆರ್ಥಿಕ ಬಲ– ಈ ಮೂರು ಅಂಶಗಳ ಸಂಗಮವಾಗಿರುವ ಕಂಬಳ, ಕರಾವಳಿಯ ಮಣ್ಣಿನಲ್ಲಿ ಓಡುವ ಈ ಯುವಕರಿಂದ ಮುಂದಿನ ತಲೆಮಾರಿಗೆ ಸಾಗುತ್ತಿದೆ.

ಮಹಿಳೆಯರ ಪ್ರವೇಶದ ಪ್ರಶ್ನೆ

ಕೋಣಗಳನ್ನು ಸಾಕುವ ಕಾರ್ಯದಲ್ಲಿ, ಮಾಲೀಕರಾಗಿ, ಪ್ರೇಕ್ಷಕರಾಗಿ ಮಹಿಳೆಯರು ಭಾಗಿಯಾಗುತ್ತಿದ್ದರೂ, ಕರೆಗೆ ಇಳಿದು ಕೋಣ ಓಡಿಸುವ ಕಾರ್ಯಕ್ಕೆ ಇನ್ನೂ ಮುಂದಾಗಿಲ್ಲ. ಬೆಳ್ಳಂಪಳ್ಳಿ ಪರಮೇಶ್ವರ ಭಟ್ ಅವರ ಪುತ್ರಿ ಚೈತ್ರಾ ಕರೆಯ ಗಂತ್ ಮತ್ತು ಮಂಜೊಟ್ಟಿ ಪ್ರವೇಶಿಸಿ ಗಮನ ಸೆಳೆದಿದ್ದರು. ಈಗ ಕುಂದಾಪುರ ಜನತಾ ಕಾಲೇಜಿನಲ್ಲಿ ಪಿಯುಸಿ ಓದುತ್ತಿರುವ ಅವರು ಕಂಬಳದಲ್ಲಿ ಮಹಿಳೆಯರ ಹೆಜ್ಜೆಗೆ ಮುನ್ನುಡಿಯಂತಿದ್ದಾರೆ. ಮಹಿಳೆಯರು ಕರೆಗೆ ಇಳಿಯದಿರುವುದಕ್ಕೆ ಹಲವು ಕಾರಣಗಳನ್ನು ಉಲ್ಲೇಖಿಸಲಾಗುತ್ತದೆ. ದೈಹಿಕ ಮತ್ತು ಜೈವಿಕ ಅಂಶಗಳ ಬಗ್ಗೆ ಆತಂಕವಿದೆ ಎನ್ನಲಾಗುತ್ತದೆ. ಆದರೆ ಕಾಲ ಬದಲಾಗುತ್ತಿರುವಂತೆ ಈ ಪ್ರಶ್ನೆಯೂ ಚರ್ಚೆಗೆ ಬರುತ್ತಿದೆ. ಭವಿಷ್ಯದಲ್ಲಿ ಕಂಬಳದ ಕರೆಯಲ್ಲೂ ಮಹಿಳೆಯರ ಹೆಜ್ಜೆ ಗಟ್ಟಿ ಆಗುವ ದಿನ ದೂರವಿಲ್ಲ ಎನ್ನುವ ನಿರೀಕ್ಷೆಯೂ ಇದೆ.

ಅಜ್ಜಿಮನೆಯಲ್ಲಿ ಹುಟ್ಟಿದ ನಾಟಕಗಳು

ಕಥೆ ಬರವಣಿಗೆ ಕಾರ್ಯಾಗಾರದಲ್ಲಿ ಆಸಕ್ತರು ತೊಡಗಿಕೊಂಡಿದ್ದಾಗ...

• ಶ್ರದ್ಧಾ ತ್ರಿವೇಣಿ

'ನಾವು ಕಥೆಗಳನ್ನು ಹೇಳುವುದೇಕೆ?'

'ಮಕ್ಕಳಿಗೆ ನಿದ್ದೆ ಬರಿಸಲು', 'ಜನರ ಗಮನ ಹಿಡಿದಿಡಲು'.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜ್ಯೋತಿಪಾಳ್ಯದಲ್ಲಿರುವ 'ಅಜ್ಜೀಸ್ ಲರ್ನಿಂಗ್ ಸೆಂಟರ್'ನಲ್ಲಿ ನಾಟಕ ರಚನೆ ಕಾರ್ಯಾಗಾರದಲ್ಲಿ ತರಬೇತಿ ಪಡೆಯುತ್ತಿದ್ದ ಮಕ್ಕಳು ನೀಡಿದ ಉತ್ತರಗಳಿವು.

ಬೆಂಗಳೂರಿನಿಂದ ಒಂದು ಗಂಟೆ ಪ್ರಯಾಣ ದೂರ ಇರುವ ಜ್ಯೋತಿಪಾಳ್ಯ ಪುಟ್ಟ ಹಳ್ಳಿ. ಈ ಗ್ರಾಮೀಣ ಪ್ರದೇಶದಲ್ಲಿ ಕಲಿಕೆ, ಅನ್ವೇಷಣೆ ಮತ್ತು ಪರಿವರ್ತನೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಲು ಈ ಸಂಸ್ಥೆ ಪ್ರಯತ್ನಿಸುತ್ತಿದೆ.

'ನಮ್ಮ ಸುತ್ತಮುತ್ತಲ ಪರಿಸರ, ಈ ನೆಲದ ಕಥೆಗಳು, ನಮ್ಮ ಜನರ ಮತ್ತು ತಲೆಮಾರುಗಳಿಂದ ಮೌಖಿಕವಾಗಿ ಬಂದಿರುವ ಜನಪದವು ಹೊಸ ಮತ್ತು ಸಬಲೀಕರಣದ ಕಥನಗಳ ಹುಟ್ಟಿಗೆ ಕಾರಣವಾಗುತ್ತದೆ. ಇದನ್ನು ತಿಳಿಸಿಕೊಡುವುದು ನಮ್ಮ ಕಾರ್ಯಾಗಾರದ ಉದ್ದೇಶ' ಎಂದು ತರಬೇತಿ ನೀಡಿದ ರಂಗಕರ್ಮಿ ಅಕ್ಷಯ್ ಗೌತಮ್ ಹೇಳುತ್ತಾರೆ.

ಅವರು ಅಲ್ಲಿನ ವಿದ್ಯಾರ್ಥಿಗಳಿಗೆ 'ಸೃಷ್ಟಿ ಮತ್ತು ಸಮುದಾಯದ ಕಥನ' ಎನ್ನುವ ಹತ್ತು ದಿನಗಳ ಕಾರ್ಯಾಗಾರ ನಡೆಸಿದ್ದಾರೆ. ಬಾಲ್ಯವನ್ನು 'ರೀಲ್ಸ್'ನಲ್ಲಿ ಕಳೆಯುವ ಬದಲು, ಸೃಜನಾತ್ಮಕ ಸಂಗತಿಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವಂತೆ ಮಾಡುವುದು ಇದರ ಉದ್ದೇಶವಾಗಿತ್ತು.

ಸ್ಥಳೀಯ ಭಾಷೆ, ಸಂಸ್ಕೃತಿಯಿಂದ ಬಂದಿರುವ ಜನಪದ ಗೀತೆಗಳು, ಕಥೆಗಳು ಮತ್ತು ಜೀವನಾನುಭವಗಳನ್ನು ಮಕ್ಕಳಿಗೆ ದಾಟಿಸುವ ಪ್ರಯತ್ನ ಅದಾಗಿತ್ತು. ಅಕ್ಷಯ್ ಮತ್ತು ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ಸೇರಿ ಹದಿಹರೆಯದ ವಿಷಯಗಳನ್ನು ಆಧರಿಸಿದ ನಾಟಕ ರಚನೆಯನ್ನು ಪ್ರೋತ್ಸಾಹಿಸಲು ಈ ತರಬೇತಿ ಶಿಬಿರವನ್ನು ವಿನ್ಯಾಸಗೊಳಿಸಿದ್ದರು.

ಮಕ್ಕಳ ನಾಟಕಗಳನ್ನು ಬರೆಯುವ ಆಸಕ್ತಿಯುಳ್ಳವರಿಗೆ ತರಬೇತಿ ನೀಡುವುದು, ಸಮಕಾಲೀನ ರಂಗ ನಿರ್ದೇಶಕರ ಸಹಯೋಗದೊಂದಿಗೆ ಅವರ ಬರಹಗಳನ್ನು ರಂಗಪ್ರಯೋಗಕ್ಕೆ ತಕ್ಕಂತೆ ಸಿದ್ಧಪಡಿಸುವುದು ಅವರ ಗುರಿಯಾಗಿತ್ತು.

ಇದರಲ್ಲಿ ವಿವಿಧ ವಯೋಮಾನದವರು ಇದ್ದರು. ಮಕ್ಕಳಿಗೆ ಅದು ಪ್ರೀತಿಯ 'ಅಜ್ಜಿ ಮನೆ'. ದಖನ್ ಪ್ರಸ್ಥಭೂಮಿಯ ಗ್ರ್ಯಾನೈಟ್ ಬೆಟ್ಟಗಳು ಮತ್ತು ಬಂಡೆಗಳ ನಡುವೆ ಇರುವ ಈ ಸುಂದರ ತಾಣವು ಗಣಿಗಾರಿಕೆಯಿಂದ ಕಳೆಗುಂದಿದೆ. ಸ್ಥಳೀಯ ಜನಪದ ಕಥೆಗಳು, ಸುತ್ತಮುತ್ತಲಿನ ಬಂಡೆ, ಪ್ರಕೃತಿಯೇ ಕಾರ್ಯಾಗಾರದ ವಿಷಯ ವಸ್ತುಗಳಾಗಿದ್ದವು. ಆಟಗಳು ಮತ್ತು ಚಟುವಟಿಕೆಗಳ ಮೂಲಕ ವಿವಿಧ ರಂಗ ತಂತ್ರಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಇಲ್ಲಿ ತರಬೇತಿ ನೀಡಿದ್ದಾರೆ.

'ನಾವು ಶಿಬಿರದಲ್ಲಿ ಐವತ್ತೈದು ಜನಪದ ಕಥೆಗಳನ್ನು ಹಂಚಿಕೊಂಡಿದ್ದೇವೆ. ಇಲ್ಲಿದ್ದವರೆಲ್ಲ ಜನಪದ ಕಥೆಗಳನ್ನೇ ಸ್ಫೂರ್ತಿಯಾಗಿರಿಸಿಕೊಂಡು ನಾಟಕಗಳನ್ನು ಸಿದ್ಧಪಡಿಸಿದ್ದಾರೆ. ಇವುಗಳನ್ನು ಸಮಕಾಲೀನ ರಂಗ ನಿರ್ದೇಶಕರೊಂದಿಗೆ ಚರ್ಚಿಸುತ್ತೇವೆ. ಆಯ್ದ ನಾಟಕಗಳು ಏಪ್ರಿಲ್‌ನಲ್ಲಿ ಇಲ್ಲಿಯೇ ಪ್ರದರ್ಶನಗೊಳ್ಳಲಿವೆ' ಎಂದರು ಅಕ್ಷಯ್.

ನೆಲದ ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡ ವಿಷಯಗಳನ್ನೇ ತರಬೇತಿಗೆ ಬಳಸಲಾಗುತ್ತದೆ. ಶಿಬಿರಾರ್ಥಿಯೊಬ್ಬರು ಬಂಡೆಯೊಂದರ ಕಥೆಯನ್ನು ನಾಟಕ ರೂಪದಲ್ಲಿ ಬರೆದಿದ್ದಾರೆ ಎಂದೂ ಅವರು ತಿಳಿಸಿದರು. ಮಕ್ಕಳು, ಹದಿಹರೆಯವದವರು, ಶಿಕ್ಷಕಿ, ವೈದ್ಯಕೀಯ ಸಿಬ್ಬಂದಿ ಸೇರಿ ವಿವಿಧ ಹಿನ್ನೆಲೆ ಇರುವವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದು ವಿಶೇಷ.

11ನೇ ಪುಟಕ್ಕೆ...

ಅಜ್ಜಿ ಮನೆ ಕಥೆ

ಗ್ರಾಮಸ್ಥರ, ಅದರಲ್ಲೂ ಪ್ರಮುಖವಾಗಿ ಹೆಣ್ಣುಮಕ್ಕಳ ಶೈಕ್ಷಣಿಕ ಮಟ್ಟ ಸುಧಾರಿಸಲು, ಕಾರ್ಯಾಗಾರಗಳು ಮತ್ತು ವೃತ್ತಿಪರ ಕೌಶಲಗಳ ತರಬೇತಿ ನೀಡಲು ಶಿಕ್ಷಣ ತಜ್ಞೆ ಸಬಿಹಾ ಹಶ್ಮಿ 2022ರಲ್ಲಿ 'ಅಜ್ಜೀಸ್ ಲರ್ನಿಂಗ್ ಸೆಂಟರ್' ಅನ್ನು ಸ್ಥಾಪಿಸಿದರು. ಸ್ಥಳೀಯ ಮಕ್ಕಳ ಪ್ರೀತಿಯ 'ಅಜ್ಜಿ'ಯಾಗಿದ್ದ ಸಬಿಹಾ, ಈ ಕೇಂದ್ರ ಪ್ರಾರಂಭವಾದ ಒಂದು ತಿಂಗಳಲ್ಲೇ ನಿಧನರಾದರು. ಆದರೆ ಅವರ ಕನಸುಗಳಿಗೆ 'ಅಜ್ಜಿ ಮನೆ'ಯಲ್ಲಿ ಜೀವಬಂದಿದೆ. ಅವರು ಹಾಕಿಕೊಟ್ಟ ಅಡಿಪಾಯದಲ್ಲೇ ಸಂಸ್ಥೆ ಮುನ್ನಡೆಯುತ್ತಿದೆ. ಮಾಗಡಿ ತಾಲ್ಲೂಕಿನ ನಲವತ್ತಕ್ಕೂ ಹೆಚ್ಚು ಗ್ರಾಮಗಳ ಮಕ್ಕಳು, ಯುವತಿಯರು ಮತ್ತು ಮಹಿಳೆಯರು ಇಲ್ಲಿಗೆ ಬಂದು ಹೊಲಿಗೆ ತರಬೇತಿ, ಕಂಪ್ಯೂಟರ್ ಮತ್ತು ಸ್ಪೋಕನ್ ಇಂಗ್ಲಿಷ್ ತರಬೇತಿ ಪಡೆಯುತ್ತಿದ್ದಾರೆ. ಇದರ ಜೊತೆಗೆ ಈ ತಂಡವು ಹಕ್ಕಿ ವೀಕ್ಷಣೆ, ಕಲೆ ಮತ್ತು ರಂಗಭೂಮಿಯ ಕಾರ್ಯಾಗಾರಗಳನ್ನೂ ಏರ್ಪಡಿಸಿ ಜನರ ಬೌದ್ಧಿಕ ವಿಕಸನಕ್ಕೆ ಕೆಲಸ ಮಾಡುತ್ತಿದೆ.

ಈಗ ಸಂಸ್ಥೆಯನ್ನು ಸಬಿಹಾ ಅವರ ಸಹೋದರಿ, ಮಾನವ ಹಕ್ಕುಗಳ ಹೋರಾಟಗಾರ್ತಿ ಶಬನಮ್ ಹಶ್ಮಿ ಮುನ್ನಡೆಸುತ್ತಿದ್ದಾರೆ.

ಬೈಕ್ ಟ್ಯಾಕ್ಸಿ

ಮಲೆನಾಡಿನಲ್ಲಿ ಅಪರೂಪದ ಸೇವೆ

• ಗಣಪತಿ ಹೆಗಡೆ

ಸಿದ್ದಾಪುರ ತಾಲ್ಲೂಕು ತ್ಯಾರ್ಸಿ ಗ್ರಾಮದಲ್ಲಿ ದಿನೇಶ ನಾಯ್ಕ ಸಣ್ಣದೊಂದು ಕಿರಾಣಿ ಅಂಗಡಿ ನಡೆಸುತ್ತಾರೆ. ಬೇಡ್ಕಣಿಯಲ್ಲಿ ಬಸ್ ಇಳಿದು ಅಲ್ಲಿಂದ ಮೂರು ಕಿಲೋಮೀಟರ್ ದೂರದ ಹಳ್ಳಿಗೆ ಸಾಗುವ ವೃದ್ಧರನ್ನು ತಮ್ಮ ಬೈಕ್‌ನಲ್ಲಿ ಬಿಟ್ಟು ಬರುತ್ತಾರೆ.

ಶಿರಸಿ ತಾಲ್ಲೂಕಿನ ಸಾಲ್ಕಣಿಯಿಂದ ಎಂಟು ಕಿಲೋಮೀಟರ್ ದೂರದ ಕೆಳಾಸೆ ಗ್ರಾಮಕ್ಕೆ ಬಸ್ ಸಂಚಾರವಿಲ್ಲ. ಆ ಗ್ರಾಮದ ಜನರ ಪಾಲಿಗೆ ಸಾಲ್ಕಣಿಯ ಕೇಶವ ಗೌಡ ಆಪತ್ಬಾಂಧವ. ವೃತ್ತಿಯಲ್ಲಿ ಟೇಲರ್ ಆಗಿರುವ ಅವರು 'ಬೈಕ್ ಸೇವೆ' ಮೂಲಕ ಕೆಳಾಸೆ, ಕುದ್ರಗೋಡ ಭಾಗದ ಜನರಿಗೆ ಚಿರಪರಿಚಿತರು.

ಸಿದ್ದಾಪುರ ತಾಲ್ಲೂಕಿನ ತಟ್ಟಿಕೈ ಗ್ರಾಮದವರೆಗೆ ಬಸ್ ಬರುತ್ತದೆ. ಅಲ್ಲಿಂದ ಒಳಭಾಗದ ಕೆರೆಗದ್ದೆ, ಗೋಳಿಕಟ್ಟಾ, ಉಂಬಳಮನೆ, ಮಲ್ತಗಾರ, ಹೂಡ್ಲಮನೆ ಸೇರಿದಂತೆ ಹತ್ತಾರು ಗ್ರಾಮಗಳಿಗೆ ರಸ್ತೆ ಇದ್ದರೂ ಬಸ್ ಸಂಪರ್ಕವಿಲ್ಲ. ಈ ಊರಿನ ಜನರಿಗೆ ತಟ್ಟಿಕೈನಲ್ಲಿರುವ ಅಶೋಕ ಹೆಗಡೆ ಅವರ ಬಾಡಿಗೆ ಬೈಕ್ ಸೇವೆ ಅತ್ಯಗತ್ಯ.

ಯಲ್ಲಾಪುರ ತಾಲ್ಲೂಕಿನ ಕುಗ್ರಾಮಗಳಾದ ಶೇವ್ಕಾರ, ಕೈಗಡಿ, ವಜ್ರಳ್ಳಿ ಭಾಗದ ಒಳ ಹಳ್ಳಿಗಳು ಬಸ್ ಸಂಚಾರ ಕಂಡಿಲ್ಲ. ಇಲ್ಲಿನ ಜನರು ಪೇಟೆಗೆ ಸಾಗಲು ಸಮೀಪದ ಜಂಕ್ಷನ್‌ಗಳಲ್ಲಿ (ಹಳ್ಳಿಗಳಲ್ಲಿ ಒಂದೆರಡು ಅಂಗಡಿಗಳಿರುವ, ಬಸ್‌ಗಳ ಇಳಿದಾಣ ಪ್ರದೇಶ) ನಿಲ್ಲುವ ಬಾಡಿಗೆ ಬೈಕ್‌ಗಳನ್ನು ಅವಲಂಬಿಸಿಕೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ, ಅಪ್ಪಟ ಮಲೆನಾಡು ಭಾಗದ ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಬಾಡಿಗೆ ಬೈಕ್ ಸೇವೆ ಇಂದಿಗೂ ನಡೆಯುತ್ತಿದೆ. ಇದು ಗ್ರಾಮಸ್ಥರೇ ರೂಪಿಸಿಕೊಂಡಿರುವ ಅಘೋಷಿತ 'ಬೈಕ್ ಟ್ಯಾಕ್ಸಿ' ವ್ಯವಸ್ಥೆ. ಬಸ್‌ಗಳು ಸಂಚರಿಸದ, ಸ್ವಂತ ವಾಹನಗಳನ್ನು ಹೊಂದಿರದ ಬಡ ಮತ್ತು ಬಡ ಮಧ್ಯಮ ವರ್ಗದ ಕುಟುಂಬಗಳು ಹೆಚ್ಚಿರುವ ಪ್ರದೇಶಗಳಲ್ಲಿ ಈ ಸೇವೆ ನಡೆಯುತ್ತಿದೆ. ಇಲ್ಲಿ ಬಾಡಿಗೆ ಬೈಕ್ ಚಲಾಯಿಸುವವರು ಆದಾಯಕ್ಕೋಸ್ಕರವೇ ಈ ಕೆಲಸ ಮಾಡುತ್ತಿಲ್ಲ. ಬದಲಾಗಿ ತಮ್ಮೂರಿನ ಜನರ ಸೇವೆ ಎಂದು ಪರಿಗಣಿಸುತ್ತ, ಜನರಿಗೆ ಅಗತ್ಯವಿರುವ ಸಮಯದಲ್ಲಿ ನೆರವಿಗೆ ಧಾವಿಸುತ್ತಿದ್ದಾರೆ.

ಮಲೆನಾಡಿನ ಬಹುತೇಕ ಹಳ್ಳಿಗಳು ವೃದ್ಧಾಶ್ರಮವಾಗಿ ಬದಲಾಗುತ್ತಿವೆ. ಒಂದು ಕಾಲದಲ್ಲಿ ತುಂಬಿತುಳುಕುತ್ತಿದ್ದ ಊರುಗಳಲ್ಲಿ ಈಗ ಒಂದಿಷ್ಟು ಮಂದಿ ವೃದ್ಧರು ಕಾಣಸಿಗುತ್ತಾರೆ. ಹಲವು ಮನೆಗಳಲ್ಲಿ ಒಬ್ಬರೋ, ಇಬ್ಬರೋ ಹಿರಿಯರಷ್ಟೆ ಕಾಲ ಕಳೆಯುತ್ತಿದ್ದಾರೆ. ಒಬ್ಬಂಟಿ ಮನೆಗಳೂ ಹೆಚ್ಚಿವೆ. ಮನೆ ಮಕ್ಕಳೆಲ್ಲ ಮಹಾನಗರಗಳಲ್ಲಿ ಜೀವನ ಕಟ್ಟಿಕೊಂಡಿದ್ದಾರೆ. ಹಳ್ಳಿಗಳಲ್ಲಿರುವ ಹಿರಿಯರಿಗೆ ಪಡಿತರ, ಔಷಧ ತಂದುಕೊಡುವವರು ಇದೇ ಬಾಡಿಗೆ ಬೈಕ್‌ನವರು.

ಓಯ್ ಮೊದ್ಲು ಇವ್ರನ್ನ ಬಿಟ್ ಬರ್ತೆ...

'ಪ್ರತಿ ತಿಂಗಳ ಮೊದಲ ವಾರ ಮನೆಯಿಂದ ಆರು ಕಿಲೋಮೀಟರ್ ದೂರದ ಸೊಸೈಟಿಗೆ ಪಡಿತರ ಬರುತ್ತದೆ. ಹತ್ತಾರು ಕೆ.ಜಿ ಭಾರದ ಅಕ್ಕಿ ಚೀಲ, ಸೀಮೆಎಣ್ಣೆ ಕ್ಯಾನನ್ನು ಹೊತ್ತು ತರುವುದು ಕಷ್ಟ. ಇದಕ್ಕಾಗಿ ಆಟೊ ಬಾಡಿಗೆ ಪಡೆಯುವುದು ದುಬಾರಿ. ಅಂತಹ ಸಂದರ್ಭದಲ್ಲಿ ನೆರವಿಗೆ ಬರುವುದು ನಮ್ಮೂರಿನ ರಾಜು. ಅವರ ಬಳಿ ಬೈಕ್ ಇದೆ. ಪಡಿತರ ತರಲು ನನ್ನನ್ನು ಸೊಸೈಟಿಗೆ ಅವರೇ ಕರೆದೊಯ್ಯುತ್ತಾರೆ. ಹಲವು ವರ್ಷದಿಂದಲೂ ಅವರಿಂದಾಗಿಯೇ ಚಾಚೂತಪ್ಪದೆ ಸಮಯಕ್ಕೆ ಸರಿಯಾಗಿ ಪಡಿತರ ಮನೆ ಬಾಗಿಲಿಗೆ ತಲುಪಿಸಿದೆ' ಎಂದು ಶಿರಸಿ ತಾಲ್ಲೂಕು ಮುಂಡಗಾರ ಗ್ರಾಮದ ಪರಮೇಶ್ವರ ನಾಯ್ಕ ಹೇಳುತ್ತಾರೆ.

'ಯಂಗ್ಳೂರಿನ ಅಶೋಕ ಇದ್ದ ಹೇಳಾದ್ರೆ ಎಂತ ತೊಂದ್ರೆ ಇರ್ತಿಲ್ಲೆ. ಎಷ್ಟೊತ್ತಿಗೆ ಕರೆದ್ರೂ ಅಂವ ಬರ್ತ. ಪ್ಯಾಟಿಂದ ಔಷಧಿ, ತರಕಾರಿ ತಗಂಡ್ ಬಂದು ಕೊಡ್ತ. ಒಂದೊಂದ್ಸಲ ದುಡ್ಡೂ ತಗಂಡು ಹೋಗ್ತ್ನಿಲ್ಲೆ. ಯಾವಾಗಾತ ಆವಾಗ ಕೊಡಿ ಹೇಳಿ ಹೇಳ್ತ. ಅಂವ ಯಂಗಕ್ಕಿಗೆ ಮನೆ ಮನ ಮಗ ಇದ್ದಂಗೆಯಾ' ಎಂದು ಹವ್ಯಕರ ಆಡುಭಾಷೆಯಲ್ಲಿ ಸಂಪಗಾರ ಗ್ರಾಮದ ಶ್ರೀಧರ ಹೆಗಡೆ ತಮ್ಮೂರಿನ ಬಾಡಿಗೆ ಬೈಕ್‌ದಾರ ಅಶೋಕ ಭಟ್ ಕುರಿತಾಗಿ ಮೆಚ್ಚುಗೆ ಮಾತುಗಳನ್ನು ಹೀಗೆ ಆಡುತ್ತಾರೆ.

ಅಂದಹಾಗೆ, ಬಾಡಿಗೆ ಬೈಕ್‌ನವರು ತಮ್ಮ ಸೇವೆಗೆ ಇಂತಿಷ್ಟೇ ಹಣ ನಿಗದಿಪಡಿಸುತ್ತಿಲ್ಲ. ಸೇವೆ ಒದಗಿಸಿದ ತಕ್ಷಣವೇ ಹಣವನ್ನೂ ಪಡೆಯುತ್ತಿಲ್ಲ ಎಂಬುದನ್ನು ಆಯಾ ಗ್ರಾಮಗಳಲ್ಲಿ ಬಾಡಿಗೆ ಬೈಕ್ ಸೇವೆ ಪಡೆದವರು ಆಡುವ ಮಾತುಗಳು ಸಾರುತ್ತಿವೆ.

'ತಿಂಗಳ ಹಿಂದೆ ಸಂಜೆಯ ವೇಳೆಗೆ ಏಕಾಏಕಿ ಜ್ವರ ಕಾಣಿಸಿಕೊಂಡಿತು. ಮನೆಯಿಂದ ದೂರದ ದವಾಖಾನೆಗೆ ತೆರಳಲು ಬಾಡಿಗೆ ಬೈಕ್ ಓಡಿಸುವ ರಘುಪತಿ ನೆರವಿಗೆ ಬಂದರು. ಡಾಕ್ಟರ್ ಕೊಟ್ಟ ಔಷಧಿ ಪಡೆದು ಮನೆಗೆ ಮರಳಿದ ಬಳಿಕ ರಘುಪತಿಗೆ ನೀಡಲು ಹಣ ಕಡಿಮೆ ಇತ್ತು. ಹುಷಾರಾದ ಮೇಲೆ ಕೊಡಿ ಎಂದು ಹೋದ ಆತ ಇಂದಿಗೂ ಹಣ ಕೇಳಿಲ್ಲ' ಎಂದು ವಜ್ರಳ್ಳಿಯ ಶಂಕರ ಗಾಂವ್ಕರ ಹೇಳುತ್ತಾರೆ.

ಬೈಕ್ ಓಡಿಸಿದ್ದಕ್ಕೆ ಪೆಟ್ರೋಲ್ ಖರ್ಚು ಕೊಟ್ಟರೂ ಸಾಕು ಎಂದು ಕೆಲ ಬೈಕ್‌ನವರು ಹೇಳಿದರೆ, ಮತ್ತೆ ಕೆಲವರು ಕಿಲೋಮೀಟರ್‌ಗೆ ಇಂತಿಷ್ಟು ಎಂದು ನಿಗದಿಪಡಿಸಿಕೊಂಡಿರುತ್ತಾರೆ. ಆಯಾ ಗ್ರಾಮದ ಜಂಕ್ಷನ್‌ನಲ್ಲಿ ಬಾಡಿಗೆ ಬೈಕ್‌ನವರು ಯಾರು ಎಂಬುದು ಸ್ಥಳೀಯರಿಗೆ ಮಾತ್ರವೇ ಗೊತ್ತಿರುತ್ತದೆ. ಕೆಲವೊಮ್ಮೆ ಬಾಡಿಗೆ ಬೈಕ್ ಓಡಿಸುವವರು ಸಿಗದಿದ್ದರೆ ತುರ್ತು ಸಂದರ್ಭದಲ್ಲಿ ಅಲ್ಲಿನ ಅಂಗಡಿ ಮಾಲೀಕರು ಅಂಗಡಿ ಮುಚ್ಚಿ ತುರ್ತು ಇದ್ದವರನ್ನು ಊರಿಗೆ ಬಿಟ್ಟು ಬರುತ್ತಿದ್ದಾರೆ. ಹೀಗೆ, ಬಸ್ ಓಡಾಡದ ಮಲೆನಾಡಿನ ರಸ್ತೆಯಲ್ಲಿ ಬಾಡಿಗೆ ಬೈಕ್‌ಗಳು ಸಂಚರಿಸುತ್ತವೆ.

ಸರ್ಕಾರದ ಬಸ್‌ಗಳು ತಲುಪದ ಕಡೆ, ಮಲೆನಾಡಿನ ಮಾನವೀಯತೆ ಬೈಕ್‌ಗಳಲ್ಲಿ ತಲುಪುತ್ತಿದೆ.

ನಾನು ಸಂಗೀತದ ಪರಿಚಾರಕ ಹಿಮಾಂಶು



ಸಿ.ಆರ್. ಹಿಮಾಂಶು.

ಚಿತ್ರ: ಅನೂಪ್ ರಾಘ. ಟಿ.

• ಸಂದರ್ಶನ: ಕೆ.ನರಸಿಂಹಮೂರ್ತಿ

ಗಣೇಶ ಚತುರ್ಥಿ ಬಂತೆಂದರೆ ಮೈಸೂರು ನಗರದ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಹಬ್ಬದ ಸಂಭ್ರಮಕ್ಕೆ ಮತ್ತೊಂದು ರಾಗ ಸೇರುತ್ತದೆ. ಬೀದಿಯ ಮಧ್ಯೆ ಗಣಪನ ಮೂರ್ತಿ. ಅದರ ಎದುರು ತಾತ್ಕಾಲಿಕ ವೇದಿಕೆ. ಹತ್ತು ದಿನ ನಿರಂತರ ಸಂಗೀತಾರಾಧನೆ. ಇದು ಕೇವಲ ಹಬ್ಬವಲ್ಲ; ಇದು ಒಂದು ಪರಂಪರೆ. ಒಂದು ಬೀದಿಯ ಸಂಗೀತೋತ್ಸವಕ್ಕೆ ರಾಷ್ಟ್ರ ಮಟ್ಟದ ಘನತೆ ತಂದುಕೊಟ್ಟವರಲ್ಲಿ ಪ್ರಮುಖರು ಸಿ.ಆರ್. ಹಿಮಾಂಶು. ಇವರು ಸಂಗೀತ ಕಾರ್ಯಕ್ರಮಗಳ ಸಂಘಟನೆಗೇ ಬದುಕನ್ನು ಮುಡಿಪಿಟ್ಟವರು. ಚೆನ್ನೈನಲ್ಲಿರುವ 'ಸಂಗೀತ ಕಲಾನಿಧಿ', ಮೃದಂಗ ವಿದ್ವಾನ್ ತಿರುವರೂರ್ ಭಕ್ತವತ್ಸಲಂ ಅವರ 'ಲಯ ಮಧುರ ಸಂಗೀತ ಸಂಸ್ಥೆ'ಯು ಇತ್ತೀಚೆಗೆ ಅವರಿಗೆ 'ಮಧುರ ಕಲಾಸೇವಕ' ಪುರಸ್ಕಾರ ನೀಡಿ ಸನ್ಮಾನಿಸಿತು.

• ವಿವಿ ಮೊಹಲ್ಲಾದ 8ನೇ ಕ್ರಾಸ್ ಬಗ್ಗೆ ಹೇಳಿ...

ಮೈಸೂರಿನಲ್ಲಿ ಅಷ್ಟೇ ಏಕೆ, ಹಲವು ರಾಜ್ಯಗಳಲ್ಲಿ ಮೈಸೂರು ವಿವಿ ಮೊಹಲ್ಲಾ, 8ನೇ ಕ್ರಾಸ್ ಎಂದರೆ ಎಸ್‌ಪಿವಿಜಿಎಂಸಿ ಟ್ರಸ್ಟ್, ಸಂಗೀತೋತ್ಸವ ಎಂದೇ ಪ್ರಸಿದ್ಧಿ. ಇದು ಗಣೇಶನ ಹಬ್ಬ ಹಾಗೂ ಸಂಗೀತೋತ್ಸವಕ್ಕೇ ಒಂದೇ ವೇದಿಕೆ. ಇದು ನಮ್ಮ ಸಂಗೀತೋತ್ಸವ ನಡೆಯುವ ಒಂದು ಬೀದಿಯಷ್ಟೇ.

• ಗಣೇಶ ಹಬ್ಬದ ಸಂದರ್ಭದಲ್ಲಿ ಸಂಗೀತೋತ್ಸವ ಆರಂಭವಾಗಿದ್ದು ಹೇಗೆ?

1962ರಿಂದಲೇ ಚಿಕ್ಕದಾಗಿ ಉತ್ಸವ ನಡೆಯುತ್ತಿತ್ತು. ಸೌಂದರ್ಯಮ್ಮ ವೆಂಕಟೇಶನ್, ರಘೋತ್ತಮದಾಸ್, ಮಹಾಲಿಂಗು, ನಂಜಪ್ಪ, ನಾಗಣ್ಣ, ತುಳಸಿದಾಸ್ ದಾಸಪ್ಪ, ಅವರ ಪತ್ನಿ ಸರೋಜ ಎಲ್ಲರ ಆಸಕ್ತಿಯೇ ಇದಕ್ಕೆ ಕಾರಣ. ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಸಂಘದ ಹೆಸರಿನಲ್ಲಿ ಉತ್ಸವ ಶುರುವಾಯಿತು. ಮೊದಲಿಗೆ ಸ್ಥಳೀಯ ಕಲಾವಿದರನ್ನಷ್ಟೇ ಆಹ್ವಾನಿಸುತ್ತಿದ್ದೆವು. ಆಮೇಲೆ ಹೊರಗಿನಿಂದ ಒಬ್ಬಿಬ್ಬರನ್ನು ಕರೆಯಲಾರಂಭಿಸಿದೆವು.

• ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಸಂಘವು ಟ್ರಸ್ಟ್ ಆಗಿದ್ದು?

1985ರಲ್ಲಿ ಸಂಘವು ಟ್ರಸ್ಟ್ ಆಯಿತು. ಅಂದಿನಿಂದ ಸಂಘವು, ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ ಆಯಿತು. ಧಾರ್ಮಿಕ ಟ್ರಸ್ಟ್ ಎಂಬ ಕಾರಣಕ್ಕೆ (80ಜಿ) ತೆರಿಗೆ ವಿನಾಯಿತಿ ರದ್ದಾಗಿತ್ತು. ಮತ್ತೆ ಅದನ್ನು ಪಡೆಯಲು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡೆವು. ನಂತರ, ಎಸ್‌ಪಿವಿಜಿಎಂಸಿ ಟ್ರಸ್ಟ್ ಎಂದು ನೋಂದಾಯಿಸಲಾಯಿತು. ಬಳಿಕ ಉತ್ಸವದ ಸ್ಥಳದಲ್ಲಿ ಶಾಶ್ವತ ವೇದಿಕೆಯನ್ನು ನಿರ್ಮಿಸಲಾಯಿತು. ಆದರೆ ಕಟ್ಟಡವಿಲ್ಲ.

• ನಿಮ್ಮೊಳಗೆ ಸಂಗೀತದ ಅಭಿರುಚಿ ಮೂಡಿದ್ದು ಹೇಗೆ?

ನಾನು ನಾಲ್ಕೈದು ವರ್ಷದ ಬಾಲಕನಾಗಿದ್ದಾಗಿನಿಂದಲೇ ಸಂಗೀತ ಕೇಳುತ್ತಿದ್ದೆ. ನನ್ನ ತಾಯಿ ರಾಜಮ್ಮನವರು ಪಿಟೀಲು ಚೌಡಯ್ಯನವರ ತಂಗಿ ಚಂದ್ರಮುಖಿಯವರ ಮಗಳು. ಬಿಡಾರಂ ಕೃಷ್ಣಪ್ಪನವರ ಶಿಷ್ಯೆ. ಚೌಡಯ್ಯನವರೊಂದಿಗೆ ನನ್ನ ಅಜ್ಜಿ ಸಂಗೀತ ಕಛೇರಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರಿಗೆ ಹರಿಕಥೆಯೂ ಗೊತ್ತಿತ್ತು. ಮನೆಯಲ್ಲಿ ಸಂಗೀತದ ವಾತಾವರಣವಿರುತ್ತಿತ್ತು. ಕರ್ನಾಟಕ ಸಂಗೀತ ಆಧುನಿಕ ಕಛೇರಿ ಪದ್ಧತಿಯ ಪಿತಾಮಹರೆನಿಸಿದ್ದ ಅರಿಯಕುಡಿ ರಾಮಾನುಜ ಅಯ್ಯಂಗಾರ್ ಅವರ ಸಂಗೀತವನ್ನು ಬಾಲಕನಾಗಿದ್ದಾಗಲೇ ದಸರಾ ಸಂದರ್ಭದಲ್ಲಿ ಕೇಳಿದ್ದೆ. ರಾಗಗಳು ತಿಳಿದಿವೆ. ಆದರೆ ನಾನು ಗಾಯಕನಲ್ಲ, ವಾದಕನೂ ಅಲ್ಲ. ಸಂಗೀತ ಪ್ರೇಮಿ, ಸಂಗೀತದ ಸಾಮಾನ್ಯ ಪರಿಚಾರಕ.

> **• ಸುಪ್ರಸಿದ್ಧ ಸಂಗೀತ ವಿದ್ವಾಂಸರಿಗೆ ದುಬಾರಿ ಗೌರವಧನ ನೀಡುವುದು ಕಷ್ಟ ಆಗಿಲ್ಲವೇ?**
>
> ನಮ್ಮ ಉತ್ಸವಕ್ಕೆ ಬರುವ ಸಂಗೀತಗಾರರು ಗೌರವಧನದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇಲ್ಲಿಗೆ ಬಂದು ಕಾರ್ಯಕ್ರಮ ಕೊಡುವುದೇ ಭಾಗ್ಯ ಎಂಬ ಭಾವನೆ ಬಹುತೇಕರಲ್ಲಿದೆ. ಯಾರಿಗೂ ನಾವು ಮುಂಗಡ ಹಣ ಕೊಡುವುದಿಲ್ಲ. ಕೆಲವರಂತೂ ಗೌರವಧನವಿಲ್ಲದೆಯೇ ಬಂದು ಸಂಗೀತ ಕಾರ್ಯಕ್ರಮ ಕೊಡುತ್ತಾರೆ. ಸಂಗೀತಗಾರರು ಬೇರೆ ಕಡೆ ಪಡೆಯುವ ಸಂಭಾವನೆಯನ್ನು ಕೇಳಿದರೆ ನಾವು ಉತ್ಸವವನ್ನೇ ಮಾಡಲಾಗುವುದಿಲ್ಲ.

• ಆರಂಭದಿಂದಲೂ ಶಾಸ್ತ್ರೀಯ ಸಂಗೀತಕ್ಕಷ್ಟೇ ಆದ್ಯತೆ ನೀಡಲಾಗಿತ್ತೇ?

ಇಲ್ಲ. ಶಾಸ್ತ್ರೀಯ ಸಂಗೀತದ ಜೊತೆಗೆ ಹರಿಕಥೆ, ಭಾವಗೀತೆ, ಭಕ್ತಿಗೀತೆ ಗಾಯನವೂ ನಡೆಯುತ್ತಿತ್ತು. ಮೈಸೂರು ಅನಂತಸ್ವಾಮಿ, ಬಿ.ಕೆ. ಸುಮಿತ್ರಾ ಅವರೂ ಬಂದು ದೇವರನಾಮಗಳನ್ನು ಹಾಡಿದ್ದಾರೆ. ಗಾಯಕ ವಿಜಯಪ್ರಕಾಶ್ ಅವರ ತಾತ ಲಕ್ಷ್ಮಿಪತಿ ಶಾಸ್ತ್ರಿ, ಕೊಣನೂರು ಸೀತಾರಾಮಶಾಸ್ತ್ರಿ, ಭದ್ರಗಿರಿ ಅಚ್ಯುತದಾಸರು ಹರಿಕಥೆಗಳನ್ನು ಮಾಡಿದ್ದಾರೆ. ಇದೆಲ್ಲ ಕೆಲವು ವರ್ಷ ನಡೆಯಿತು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಮುನಿಕೃಷ್ಣ ಅವರು ಒಮ್ಮೆ ಉತ್ಸವದಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಮಾತ್ರ ಆದ್ಯತೆ ನೀಡೋಣ ಎಂದು ಪ್ರತಿಪಾದಿಸಿದರು. ಅಂದಿನಿಂದ ಶಾಸ್ತ್ರೀಯ ಸಂಗೀತವೇ ಪ್ರಧಾನವಾಯಿತು. ಸುಗಮ ಸಂಗೀತ ಕ್ಷೇತ್ರದವರು ಬಂದರೂ ಶಾಸ್ತ್ರೀಯ ಗಾಯನವನ್ನೇ ಪ್ರಸ್ತುತಪಡಿಸುತ್ತಾರೆ. ಅದೇ ವಿಶೇಷ. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಕ್ಷೇತ್ರದ ದಿಗ್ಗಜರೆಲ್ಲರೂ ಇಲ್ಲಿಗೆ ಬಂದಿದ್ದಾರೆ. ಬರುತ್ತಿದ್ದಾರೆ.

• ಕಲಾವಿದರ ಆಯ್ಕೆ, ಅವರನ್ನು ಆಹ್ವಾನಿಸುವ ಬಗೆ ಹೇಗಿರುತ್ತಿತ್ತು. ಹೇಗೆ ಸ್ಪಂದಿಸುತ್ತಿದ್ದರು?

ಆಗೆಲ್ಲಾ ದೊಡ್ಡ ಕಲಾವಿದರು ನಮ್ಮ ಕಾರ್ಯಕ್ರಮಕ್ಕೆ ಮೂರನೇ ದರ್ಜೆ ರೈಲಿನಲ್ಲಿ ಬಂದಿದ್ದಾರೆ. ಆಟೊರಿಕ್ಷಾ, ಲಾರಿಯಲ್ಲಿ ಬಂದು ಕಾರ್ಯಕ್ರಮ ಕೊಟ್ಟಿದ್ದಾರೆ. ಮೊದಲಿಗೆ ಪತ್ರ ವ್ಯವಹಾರ ಮಾಡುತ್ತಿದ್ದೆವು. ಪತ್ರ ಬರೆದು ಕೆಲವು ದಿನಗಳು ಕಾಯಬೇಕಾಗಿತ್ತು. ಟ್ರಂಕಾಲ್ ವ್ಯವಸ್ಥೆ ಬಂದ ಮೇಲೆ ಸ್ವಲ್ಪ ಸುಧಾರಿಸಿತು. ಈಗ ಒಂದು ಫೋನ್ ಕಾಲ್ ಸಾಕು. ಆದರೆ ಕಲಾವಿದರನ್ನು ಬರಮಾಡಿಕೊಳ್ಳುವುದು, ಅವರ ವಾಸ್ತವ್ಯವೆಲ್ಲವನ್ನೂ ನಾನೇ ಖುದ್ದಾಗಿ ನೋಡಿಕೊಳ್ಳುತ್ತೇನೆ. ಭಾಷೆ, ಜಾತಿ, ಧರ್ಮ, ದೊಡ್ಡ ಕಲಾವಿದರು, ಚಿಕ್ಕ ಕಲಾವಿದರು, ಸ್ಥಳೀಯರು, ಹೊರಗಿನವರು ಎಂಬ ತಾರತಮ್ಯವಿಲ್ಲ. ನಮಗೆ ಉತ್ತಮ ಸಂಗೀತವಷ್ಟೇ ಮುಖ್ಯ.

• ಉತ್ಸವಕ್ಕೆ ಯಾವುದಾದರೂ ದೊಡ್ಡ ಸವಾಲು ಎದುರಾಗಿತ್ತೇ?

ಟಿ. ವೆಂಕಟಸ್ವಾಮಿ ಆಯೋಗದ ವರದಿ ಹಿನ್ನೆಲೆಯಲ್ಲಿ ಪ್ರತಿಭಟನೆ, ರಸ್ತೆ, ರೈಲು ತಡೆ ನಡೆಯುತ್ತಿದ್ದಾಗಲೇ ನಮ್ಮ ಟ್ರಸ್ಟ್‌ನ ಬೆಳ್ಳಿ ಹಬ್ಬವಿತ್ತು. ಆಗ ಚೆನ್ನೈ ಮತ್ತು ಬೆಂಗಳೂರಿನ ಕಲಾವಿದರು ಸಾಹಸ ಮಾಡಿ ಮೈಸೂರಿಗೆ ಬಂದಿದ್ದರು. ವಿದುಷಿ ಟಿ.ರುಕ್ಮಿಣಿ ಲಾರಿಯಲ್ಲಿ ಬಂದಿದ್ದರು. ಖಂಜಿರ ವಾದಕ ಭೀಮಾಚಾರ್ ಬೆಂಗಳೂರಿನಿಂದ ಟಿವಿಎಸ್ ಮೊಪೆಡ್‌ನಲ್ಲೇ ಬಂದಿದ್ದರು.

• ಸಂಗೀತೋತ್ಸವಕ್ಕೆ ದೇಣಿಗೆ ಸಂಗ್ರಹ ಹೇಗಿರುತ್ತಿತ್ತು?

ಅದೊಂದು ಸಾಹಸ. ನಮ್ಮದು ನಾಲ್ಕಾಣೆ ದೇಣಿಗೆಯಿಂದ ಶುರುವಾದ ಉತ್ಸವ. ಸೈಕಲ್‌ನಲ್ಲಿ ಓಡಾಡಿ ಸಂಗ್ರಹಿಸುತ್ತಿದ್ದೆವು. ಆಗಲೇ 5 ರೂಪಾಯಿಯಿಂದ 200 ರೂಪಾಯಿವರೆಗೂ ಸಂಗ್ರಹಿಸಿದ್ದೇವೆ. ಅದು ಬಹಳ ದೊಡ್ಡ ಮೊತ್ತ. ಪ್ರತಿ ಮನೆಗೂ ಹೋಗುತ್ತಿದ್ದೆವು. ಕೆಲವರು ಕೊಡುತ್ತಿದ್ದರು. ಕೆಲವರು ನಮ್ಮನ್ನು ಭಿಕ್ಷುಕರೆಂಬಂತೆ ನೋಡಿ, ಮುಂದಕ್ಕೆ ಹೋಗಿ ಎನ್ನುತ್ತಿದ್ದರು. ನಾವು ಬೇಸರ ಮಾಡಿಕೊಳ್ಳುತ್ತಿರಲಿಲ್ಲ. ಪ್ರತಿ ಮನೆಯಲ್ಲೂ ತೆಂಗಿನಮರವಿದ್ದವರು ತಲಾ ಎರಡು ತೆಂಗಿನಗರಿಗಳನ್ನು ಕೊಡುತ್ತಿದ್ದರು. ಬೆಟ್ಟಯ್ಯ ಎಂಬುವವರು ಚಿಕ್ಕಾಸು ಮುಟ್ಟದೆ ಚಪ್ಪರ ಹಾಕುತ್ತಿದ್ದರು. ಜನರಿಗೆ ಟಾರ್ಪಲ್ ಹಾಸಿ ನೆಲದ ಮೇಲೆ ಕೂರಿಸುತ್ತಿದ್ದೆವು. ಎಷ್ಟೋ ವರ್ಷಗಳಾದ ಮೇಲೆ ಕುರ್ಚಿ ಹಾಕಲಾರಂಭಿಸಿದೆವು. ಈಗ ಒಂದೇ ಬಾರಿಗೆ ಮೂರ್ನಾಲ್ಕು ಲಕ್ಷ ರೂಪಾಯಿ ಕೊಡುವ ದೊಡ್ಡ ದಾನಿಗಳಿದ್ದಾರೆ.

• ಉತ್ಸವವನ್ನು ಬೀದಿಯಿಂದ ಬೇರೆಡೆಗೆ ಸ್ಥಳಾಂತರಿಸುವ ಆಲೋಚನೆ ಇದೆಯೇ?

ಇಲ್ಲ. 8ನೇ ಕ್ರಾಸ್ ಎಂಬುದಕ್ಕೆ ಒಂದು ಮಹತ್ವ ಸಿಕ್ಕಿದೆ. ಆ ಜಾಗದ ವಿಶೇಷ ಅದು. ಸಾಧ್ಯವಿರುವಷ್ಟೂ ದಿನ ಅಲ್ಲಿಯೇ ಉತ್ಸವ ಮಾಡುತ್ತೇವೆ. ಇದುವರೆಗೂ ಯಾರೂ ಆಕ್ಷೇಪಿಸಿಲ್ಲ. ನಗರದ ಪೊಲೀಸ್ ಕಮಿಷನರ್ ಆಗಿದ್ದ ಎಚ್.ಆರ್.ಕಸ್ತೂರಿ ರಂಗನ್ ಅವರು ಒಮ್ಮೆ ಆಕ್ಷೇಪಿಸಿದ್ದರು. ❖

ಅಜ್ಜಿಮನೆಯಲ್ಲಿ ಹುಟ್ಟಿದ ನಾಟಕಗಳು

10ನೇ ಪುಟದಿಂದ...

'ಹೀಗೊಂದು ಕಾರ್ಯಾಗಾರ ಇದೆ ಎಂದು ಪ್ರಚಾರ ಮಾಡಿದಾಗ, ಜನಪದ ಆಧಾರಿತ ನಾಟಕಗಳನ್ನು ಬರೆಯಲು ಆಸಕ್ತಿ ಇರುವ ಹದಿಹರೆಯದ ಕೆಲವರು ಬರಬಹುದು ಎಂದು ನಿರೀಕ್ಷಿಸಿದ್ದೆವು. ಆದರೆ ಮಕ್ಕಳೂ ಹೆಸರು ನೋಂದಾಯಿಸಿಕೊಂಡಿದ್ದು, ನಮಗೆ ವಿಶೇಷವೂ ಆಶ್ಚರ್ಯವೂ ಆಯಿತು. ಇದರಿಂದ ಕಾರ್ಯಾಗಾರ ಹೆಚ್ಚು ವೈವಿಧ್ಯಮಯವಾಯಿತು' ಎಂದು ಕೋಟಿಗಾನಹಳ್ಳಿ ರಾಮಯ್ಯ ಅನುಭವ ಹಂಚಿಕೊಂಡಿದ್ದಾರೆ.

ರಂಗಭೂಮಿಯ ಕಥೆಗಳನ್ನು ಬರೆಯುವ ಬಗ್ಗೆ ತರಬೇತಿ ನಡೆಸಿಕೊಟ್ಟ ಲಕ್ಷ್ಮಣ್ ಕೆ.ಪಿ ಮಾತನಾಡಿ, 'ನಾವು ಯಾವುದೇ ಶಾಸ್ತ್ರೀಯ ಕೃತಿಗಳನ್ನಾಗಲಿ, ನಾಟಕಗಳನ್ನು ಇಲ್ಲಿ ಹೇಳಿಕೊಡಲಿಲ್ಲ. ತರಕಾರಿ ವ್ಯಾಪಾರಿಯೊಂದಿಗೆ ಚೌಕಾಶಿ ಮಾಡುವಂಥ ದೈನಂದಿನ ಬದುಕಿನ ಸನ್ನಿವೇಶಗಳ ಬಗ್ಗೆಯೇ ಶಿಬಿರಾರ್ಥಿಗಳೊಂದಿಗೆ ಮಾತನಾಡಿದೆವು. ಬದುಕಿನ ಅನುಭವಗಳಿಂದ ಕಥೆಗಳನ್ನು ಹೆಣೆಯುವುದು ಎಂದರೆ ಪ್ರದರ್ಶನಕಾರ ಮತ್ತು ಪ್ರೇಕ್ಷಕರಿಬ್ಬರ ಅನುಭವಗಳನ್ನು ಗುರುತಿಸುವುದು ಎಂದರ್ಥ. ಹಾಗಾದ ಮಾತ್ರವೇ ಕಥೆ ನಮ್ಮದಾಗುತ್ತದೆ' ಎಂದರು.

ಎಂಬತ್ತಾರು ವರ್ಷದ ಜನಪದ ಗಾಯಕಿ ಗಂಗಮ್ಮ, ಲೇಖಕ ದಯಾನಂದ, ರಂಗಕರ್ಮಿ ಸತೀಶ್ ತಿಪಟೂರು, ನಾಟಕಕಾರ ಟಿ.ಎಚ್. ಲವಕುಮಾರ, ಸೋಬಾನೆ ರಾಮಯ್ಯ, ರಂಗಕರ್ಮಿ ಚಂದ್ರಶೇಖರ್ ನಿನಾಸಂ ಸೇರಿ ಹಲವರು ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿ ನೀಡಿದ್ದಾರೆ.

ಕಥೆಯಿಂದ ರಂಗಕ್ಕೆ

'ಈಚಿನ ದಿನಗಳಲ್ಲಿ ಹದಿಹರೆಯದವರಲ್ಲಿ ಅಪರಾಧ ಪ್ರವೃತ್ತಿ ಹೆಚ್ಚುತ್ತಿದೆ. ಹಿಂದೆ ಹದಿಹರೆಯದ ಕೊನೆಯ ಹಂತದಲ್ಲಿ ಕಂಡುಬರುತ್ತಿದ್ದ ಮಾನಸಿಕ ಸಮಸ್ಯೆಗಳು ಈಗ ಒಂಬತ್ತು ವರ್ಷಕ್ಕಿಂತ ಕೆಳಗಿನ ಮಕ್ಕಳಲ್ಲೇ ಕಾಣಿಸಿಕೊಳ್ಳುತ್ತಿವೆ. ಮುಂದಿನ ಪೀಳಿಗೆಗೆ ಜಾನಪದ ಪ್ರಜ್ಞೆಯನ್ನು ವರ್ಗಾಯಿಸುವುದೇ ಇದಕ್ಕಿರುವ ಪರಿಹಾರ. ಇದು ಇಂದಿನ ತುರ್ತು ಹೌದು' ಎನ್ನುವುದು ಎರಡು ದಶಕಗಳಿಗೂ ಹೆಚ್ಚು ಕಾಲ ಮಕ್ಕಳೊಂದಿಗೆ ಕೆಲಸ ಮಾಡಿರುವ ಕೋಟಿಗಾನಹಳ್ಳಿ ರಾಮಯ್ಯ ಅವರ ಮಾತು.

ಕಾರ್ಯಾಗಾರದ ನೋಟ

'ಸಾಮಾಜಿಕ ಜಾಲತಾಣಗಳು ಯುವಜನತೆಯನ್ನು ಅವರ ಬೇರುಗಳಿಂದ ದೂರ ತಳ್ಳುತ್ತಿವೆ. 'ರೀಲ್'ಗಳು ಯುವಜನರನ್ನು ಆಳುತ್ತಿವೆ' ಎಂದು ಆತಂಕ ವ್ಯಕ್ತಪಡಿಸುವ ಅವರು, ಮಕ್ಕಳನ್ನು ಅವರ ವಾಸ್ತವ ಬದುಕಿಗೆ ಹತ್ತಿರ ತರುವುದು ಮಾತ್ರವೇ ಅವರನ್ನು ಅನಿಶ್ಚಿತ ಭವಿಷ್ಯದಿಂದ ರಕ್ಷಿಸಲು ಮತ್ತು ಅವರ ಬದುಕಿಗೆ ಒಂದು ಭದ್ರ ಬುನಾದಿ ನೀಡಲು ಇರುವ ಏಕೈಕ ಮಾರ್ಗ ಎನ್ನುವುದು ಅವರ ನಂಬಿಕೆ.

'ಅಜ್ಜಿ ಮನೆ'ಯಲ್ಲಿ ಬೆಳಗುತ್ತಿರುವ ಈ ಕಥೆಯ ದೀಪ, ಇನ್ನಷ್ಟು ಹಳ್ಳಿಗಳ ಮನಗಳಲ್ಲಿ ಬೆಳಕು ಚೆಲ್ಲಲಿ ಎನ್ನುವುದು ಅಲ್ಲಿನ ಪ್ರತಿಯೊಬ್ಬರ ಆಶಯವಾಗಿದೆ.

ಅನುವಾದ: ಅಬ್ದುಲ್ ರಹಿಮಾನ್

ಕಥೆ
ಯೇಜಸ್ ಪಾಷ ಅಜ್ಜಪನ ಹಳ್ಳಿ ಅವರ ನಿಮ್ಮದು ಇಂಟರ್ ರಿಲೀಜಿಯನ್ ಮ್ಯಾರೇಜ್ ಅಲ್ವಾ?
prajavani.net/short-story

ಕವನ
ಶ್ರೀನಿಧಿ ಎಚ್ ವಿ ಅವರ ರಾತ್ರಿ ರೈಲುಗಳು
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in



ಹೊನ್ನ ಕಣಜ
ಸಂಪುಟ 3
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಮಾರುಕಟ್ಟೆಯಲ್ಲಿ ಲಭ್ಯ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಮೊದಲ ಓದು

ಸಾವಧಾನದ ಪ್ರಯೋಗಗಳು

ಸಾಹಿತ್ಯದ ಬ್ಯಾಟನ್‌ಗಳನ್ನು ಕೊಡುತ್ತಾ ಬರುವ ರಿಲೇಗೆ ಕೊನೆಯೇ ಇರುವುದಿಲ್ಲ. ನಾಲ್ಕು ದಶಗಳಿಗೂ ಮೊದಲು ಲ್ಯಾಟಿನ್ ಅಮೆರಿಕನ್ ಸಾಹಿತ್ಯದ ರುಚಿ ಕಂಡಿದ್ದ ಹಿರಿಯ ಕಥೆಗಾರರಾದ ಎಸ್.ದಿವಾಕರ್ ಅವರು ತಮ್ಮ ಅಕ್ಷರ ಜಿಹ್ವಾನಂದವನ್ನು ಎಂ.ಎಸ್. ಶ್ರೀರಾಮ್ ಅವರಿಗೂ ದಾಟಿಸಿದರು. ಅದರ ಫಲವೇ 'ನದಿಯ ಮೂರನೆಯ ದಂಡೆ' ಅನುವಾದಿತ ಕೃತಿ. ಇದರಲ್ಲಿ ಲ್ಯಾಟಿನ್ ಅಮೆರಿಕದ ಮಹತ್ವದ ಸಾಹಿತಿಗಳ 21 ಅನುವಾದಿತ ಕತೆಗಳಿವೆ. ದಿವಾಕರ ಸದಾ ನೆನಪಿಸಿಕೊಳ್ಳುವ ಹೋರ್ಹೆ ಲೂಯಿಸ್ ಬೋರ್ಹೆಸ್ ಕತೆಯ ಅನುವಾದ 'ಇನ್ನೂ ಬೇರೆ ವಿಷಯಗಳಿವೆ' ಆಗಲೀ, ವಿರ್ಜಿಲಿಯೊ ಪಿನ್ಯೆರ ಬರೆದ ಕತೆಯ ಅನುವಾದ 'ಮಾಂಸ' ಆಗಲೀ ಈ ಸಂಕಲನದ ಎರಡು ಅಗುಳುಗಳು. ಇದು ಎಂತಹ ಅನ್ನದ ಬಟ್ಟಲು ಎನ್ನುವುದಕ್ಕೆ ಈ ಎರಡು ಅಗುಳುಗಳ ರುಚಿಯೇ ಸಾಕು. ಎಸ್ಟೆಬಾನ್ ಎಚೆವೆರಿಯಾ, ಸೀಜಾ ವಲೆಹೊ, ಎನ್ರಿಕೆ ಅಮ್ರಿಮ್ ಮೊದಲಾದವರ ಆಸಕ್ತಿಕರ ಕಥಾಜಗತ್ತು ಈ ಸಂಕಲನದಲ್ಲಿ ಇದೆ.

ಹುಟ್ಟೂರಿನಿಂದ ಬೇರೆ ದೇಶಕ್ಕೆ ತೆರಳಿದ ಲೇಖಕರು ತಮ್ಮ ಒಟ್ಟೂ ಪರಿಸರದ ಸಾಮಾಜಿಕ ನಿಷ್ಕರ್ಷೆ ಮಾಡುವ ಕ್ರಮವೇ ಆಸಕ್ತಿಕರ. ಲ್ಯಾಟಿನ್ ಅಮೆರಿಕ ಆ ಕಾಲಘಟ್ಟದಲ್ಲಿ ಆಧುನಿಕತೆಯನ್ನು ಇದಿರುಗೊಳ್ಳುವ ಸವಾಲನ್ನು ಎದುರಿಸಿತ್ತು. ಆ ಸಂದರ್ಭದ ಬೇಗುದಿ, ತವಕಗಳನ್ನು ಕಥಾ ಕೌಶಲದ ಮೂಲಕ ಸಾಹಿತಿಗಳು ಕಾಣಿಸಿರುವುದರಲ್ಲೇ ಹಲವು ಪ್ರಯೋಗಗಳಿವೆ.

ಎಂ.ಎಸ್. ಶ್ರೀರಾಮ್ ಬರೆದುಕೊಂಡಿರುವಂತೆ, ಕತೆಗಳ ಹೆಸರು ಸರಿಯಾದ ಉಚ್ಚಾರ ತಿದ್ದಲೆಂದೇ ಅವರು ದೀರ್ಘ ಸಮಯ ತೆಗೆದುಕೊಂಡಿದ್ದಾರೆ. ಕತೆಗಾರನ ಸಾವಧಾನಕ್ಕೆ ಇದೊಂದು ಉದಾರಹರಣೆಯಷ್ಟೆ. ಶ್ರೀರಾಮ್ ಅವರ ಅನುವಾದದ ಶೈಲಿ ಚೆನ್ನಾಗಿದೆ. ಕೆಲವು ಕತೆಗಳು ಒಳಗೆ ಇಳಿಯಬೇಕೆಂದರೆ ಮರುಓದು ಅತ್ಯಗತ್ಯ. 'ಮಾಂಸ' ಕತೆಯನ್ನೇ ಗಮನಿಸೋಣ. ಮನುಷ್ಯ ತನ್ನ ಅಂಗಗಳನ್ನೇ ತುಂಡಾಗಿಸಿ, ಖಾದ್ಯ ಮಾಡಿಕೊಂಡು ತಿನ್ನುವ ಎದೆ ಝಲ್ಲೆನ್ನಿಸುವ ರೂಪಕಗಳು ಅದರಲ್ಲಿ ಇಡುಕಿರಿದಿವೆ. ಅಲ್ಲದೇ ಈ ಕಥಾಜಗತ್ತು ಈ ಹೊತ್ತಿಗೂ ಯಾಕೆ ಮುಖ್ಯವೆಂದು ತಿಳಿಯುತ್ತದೆ.

ನದಿಯ ಮೂರನೆಯ ದಂಡೆ
ಲೇ: ಎಂ.ಎಸ್. ಶ್ರೀರಾಮ್
ಪ್ರ: ವೀರಲೋಕ
ಸಂ: 7022122121

ಪುಟ: 232 ₹295

ಜಾತಿ ದೌರ್ಜನ್ಯ ಮೀರಲು ಮಾರ್ಗ

'ಒಗ್ಗಟ್ಟಿನಲ್ಲಿ ಬಲವಿದೆ' ಎನ್ನುವ ಜನನುಡಿಯನ್ನು ತುಮಕೂರಿನ 'ನರಸಿಂಹರಾಜ ಕಾಲೋನಿ'ಯ ನಿವಾಸಿಗಳು ಸಾಧಿಸಿ ತೋರಿಸಿದ್ದಾರೆ. ಬಹುತೇಕ ಮಾದಿಗ ಸಮುದಾಯದವರೇ ಇರುವ ಈ ಕೇರಿ 'ದೊಡ್ಡ ಹಟ್ಟಿ' ಎಂದೇ ಜನಜನಿತ. ಸಾಮಾನ್ಯವಾಗಿ ಆತ್ಮಕಥನದಲ್ಲಿ ಇರುವ ವ್ಯಕ್ತಿ ಕೇಂದ್ರಿತ ವೈಭವ ಇಲ್ಲಿಲ್ಲ. ಸುಮಾರು 400ಕ್ಕೂ ಅಧಿಕ ಪಾತ್ರಗಳು ಹಟ್ಟಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಅನನ್ಯತೆಯನ್ನು ಕಾಪಾಡಲು ಶ್ರಮಿಸಿದ ಹೋರಾಟದ ಕಥೆಯನ್ನು ಲೇಖಕ ಜಿ.ವಿ. ಆನಂದಮೂರ್ತಿ ಸೊಗಸಾಗಿ ನಿರೂಪಿಸಿದ್ದಾರೆ.

ಜಾತಿ ದೌರ್ಜನ್ಯವನ್ನು ಮೀರಲು ಹಟ್ಟಿ ಸ್ವಾಭಿಮಾನದ ಮಾರ್ಗ ಕಂಡುಕೊಂಡಿತ್ತು. ಅನೇಕ ಕುಶಲಕರ್ಮಿಗಳಿಗೆ ಇದು ಜೀವನ ನೀಡಿತ್ತು. ಕ್ಷೌರ ಮಾಡುವುದನ್ನೂ ಹಟ್ಟಿಯ ಯುವಕರಿಬ್ಬರು ಕಲಿತಿದ್ದರು. ಗಾಂಧೀಜಿ ಹಟ್ಟಿ ಪ್ರವೇಶ ಮಾಡಿದ್ದು ಕೂಡ ಪರಿವರ್ತನೆಗೆ ಪಲ್ಲವಿ ಹಾಡಿತ್ತು. ಇದಕ್ಕೆಲ್ಲ 'ದಲಿತ ಯುವಕ ಸಂಘ'ದ ಕಾರ್ಯಯೋಜನೆಗಳೂ ಸಕಾರಣವಾದವು. ಸಮಾಜದ ಹಿತಕ್ಕೆ ದಲಿತ ಮಹಿಳೆಯರ ತ್ಯಾಗ ಮತ್ತು ಹೋರಾಟದ ದಾಖಲೆಯನ್ನು ದೊರೈರಾಜ್ ಅವರು ಇಲ್ಲಿ ಸ್ಮರಣೀಯ ಮಾಡಿದ್ದಾರೆ. ಇಲ್ಲಿನ ಮಸಿಯಮ್ಮ, ಆಂಜಿನಮ್ಮ, ಕೆಂಪಮ್ಮ, ಗಂಗಮ್ಮ ಅವರ ಬಿಡಿ ಬಿಡಿ ಅಭಿಪ್ರಾಯಗಳು ಕೃತಿಯ ಒಟ್ಟು ಆಶಯವನ್ನು ಪೂರ್ಣಗೊಳಿಸಿದಂತೆ ಭಾಸವಾಗುತ್ತದೆ.

ಸಮಾನತೆ ಕನಸಿನ ಹೋರಾಟಗಳ ಶಕ್ತಿಕೇಂದ್ರವಾಗಿದ್ದ ದೊಡ್ಡ ಹಟ್ಟಿ ಮಂಡಿ ಪೇಟೆಯ ಹಮಾಲಿಗಳ ಸಂಘಕ್ಕೂ ನಾಂದಿ ಹಾಡಿತ್ತು. ದಲಿತ ಸಂಘರ್ಷ ಸಮಿತಿಯ ಅನೇಕ ರಚನಾತ್ಮಕ ಕಾರ್ಯ ಸ್ವರೂಪಕ್ಕೆ ಚಪ್ಪಲಿ ಅಂಗಡಿಯೇ ಕಾರ್ಯಾಲಯವಾಗಿತ್ತು. ಅಂತೆಯೇ ಅಮಾನಕೆರೆಯ ಇಟ್ಟಿಗೆಗೂಡು ಅನೇಕರ ಬದುಕಿಗೆ ಆಶ್ರಯವಾಗಿತ್ತು. ಇಡೀ ಊರಿಗೆ ಆ ಇಟ್ಟಿಗೆ ಪ್ರಸಿದ್ಧವಾಗಿತ್ತು. ಒಂದು ರೀತಿಯಲ್ಲಿ ಹಟ್ಟಿ ಸ್ವರಾಜ್ಯವನ್ನು ಕಂಡುಕೊಂಡಿತ್ತು. 'ಆತ್ಮಕಥಾನಕ'ದ ನಾಯಕ ಕೆ. ದೊರೈರಾಜ್ 'ಇದು ಹೋರಾಟದ ಕಡಲಿನಿಂದ ಒಂದು ಬೊಗಸೆ ನೀರನ್ನು ಮಾತ್ರ ಮೊಗೆದು ಕೊಟ್ಟಂತೆ' ಎನ್ನುತ್ತಾರೆ. ಸಂಘಟನೆಯಲ್ಲಿ ತೊಡಗಿದ ವ್ಯಕ್ತಿತ್ವಗಳನ್ನು ನೋಡಿದರೆ 'ನಮ್ಮ ಹಟ್ಟಿ' ಸಂಕ್ಷಿಪ್ತ ದಾಖಲೆ ಎಂದೇ ಅನ್ನಿಸುತ್ತದೆ.



ಕೆ. ದೊರೈರಾಜ್ ನಮ್ಮ ಹಟ್ಟಿ
ನಿ: ಜಿ.ವಿ. ಆನಂದಮೂರ್ತಿ
ಪ್ರ: ಪ್ರತಿಪದ
ಸಂ: 94482 28624

ಪುಟ: 212 ₹235

ಮುನ್ನೋಟ 22-02-2026 ರಿಂದ 28-02-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕೆಲವೊಂದು ಕೆಲಸಗಳು ಆಗಿ ಮನಸ್ಸು ಸಂತೋಷವಾಗಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಹಿರಿಯರ ಮಾರ್ಗದರ್ಶನ ನಿಮಗೆ ಒಳಿತನ್ನು ಮಾಡುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಆತುರಬೇಡ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲವಿರುತ್ತದೆ. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಾರದ ಆರಂಭದಲ್ಲಿ ಬಹಳ ಆನಂದವಿರುತ್ತದೆ. ಆದಾಯ ಉತ್ತಮವಾಗಿರುತ್ತದೆ. ಗುರುಹಿರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಸಹಕಾರ ದೊರೆಯುತ್ತದೆ. ಕೆಲವು ಬಂಧುಗಳಿಂದ ನಿಮಗೆ ಸಹಕಾರ ಸಿಗುವುದಿಲ್ಲ. ಆಸ್ತಿ ಮಾರಾಟ ಮಾಡುವವರಿಗೆ ನಿರೀಕ್ಷಿತ ಲಾಭವಿರುವುದಿಲ್ಲ. ವೃತ್ತಿಯಲ್ಲಿ ಪರೀಕ್ಷೆಗಳನ್ನು ತೆಗೆದುಕೊಂಡು ಮೇಲ್ದರ್ಜೆಗೆ ಏರುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಸಿಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಹಳ ಗಂಭೀರ ನಡವಳಿಕೆಯನ್ನು ಪ್ರದರ್ಶನ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಒಳಿತಿನ ಕೆಲಸಗಳಿಗೆ ಮಾತ್ರ ಹಿರಿಯರು ಸಹಕಾರ ನೀಡುವರು. ಸ್ಥಿರಾಸ್ತಿಯನ್ನು ಮಾಡುವ ವಿಚಾರದಲ್ಲಿ ಮುಂದುವರಿಯಬಹುದು. ತಾಯಿಯ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು. ಈಗ ಕೃಷಿಯಿಂದ ನಿರೀಕ್ಷಿತ ಲಾಭವನ್ನು ಕಾಣಬಹುದು. ಹಿರಿಯರ ವ್ಯವಹಾರಗಳಲ್ಲಿ ಪಾಲು ದಾರಿಕೆ ಸಿಗುವ ಸಂದರ್ಭ ಇದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲಿ ಮಂದತನ ಇರುತ್ತದೆ. ಆದಾಯವು ಕಡಿಮೆ ಇದ್ದು, ಅದರಲ್ಲೇ ನಿಭಾಯಿಸಬೇಕಾದ ಪರಿಸ್ಥಿತಿ ಇರುತ್ತದೆ. ಧಾರ್ಮಿಕ ಪ್ರವಚನಕಾರರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಒಡಹುಟ್ಟಿದವರು ಮತ್ತು ಬಂಧುಗಳು ಅವರ ಅವಶ್ಯಕತೆಗಾಗಿ ಮಾತ್ರ ನಿಮ್ಮಲ್ಲಿಗೆ ಬರುವರು. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಕೃಷಿಯಿಂದ ಆದಾಯ ಹೆಚ್ಚಿಗೆ ಬರುತ್ತದೆ. ಸಂಗಾತಿಗೆ ಈಗ ಆಸ್ತಿ ದೊರೆಯುವ ಸಂದರ್ಭವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಒಂದು ರೀತಿ ವೈರಾಗ್ಯ ನಿಮ್ಮನ್ನು ಆವರಿಸಬಹುದು. ಆದಾಯ ತಕ್ಕಮಟ್ಟಿಗೆ ಇದ್ದು ಸಂಗಾತಿಯ ಸಹಕಾರದಿಂದ ಅದನ್ನು ಹೆಚ್ಚು ಮಾಡಿಕೊಳ್ಳಬಹುದು. ಸಂಗಾತಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಸಹಕಾರ ಸಿಗುತ್ತದೆ. ಬಂಧುಗಳ ಜೊತೆ ವ್ಯವಹಾರಗಳು ಬೇಡ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಚುರುಕುತನ ಇದ್ದರೂ ಕೂಡ ಕೃತಿಯಲ್ಲಿ ಇರುವುದಿಲ್ಲ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಂಭವವಿದೆ. ಆಸ್ತಿ ಕೊಳ್ಳಲು ಇದು ಸಕಾಲ, ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಈಗ ಮಾಡಿಕೊಳ್ಳಿರಿ. ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಸೌಲಭ್ಯಗಳು ದೊರೆಯುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭದಲ್ಲಿ ಸಂಗಾತಿ ಕಡೆಯಿಂದ ಒಳ್ಳೆಯ ಸಮಾಚಾರ ಕೇಳಿಬರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿ ಭೂಮಿಯನ್ನು ವ್ಯಾಪಾರ ಮಾಡುವವರಿಗೆ ನಿರೀಕ್ಷೆಗಿಂತ ಹೆಚ್ಚು ಲಾಭವಿರುತ್ತದೆ. ಸಂಸಾರದಲ್ಲಿ ಸಂತಸ ಮತ್ತು ಕೋಪ ಎರಡು ಕೂಡ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುವ ಸಂದರ್ಭವಿದೆ. ವಾಯುಯಾನ ಕ್ಷೇತ್ರದಲ್ಲಿ ಓದುತ್ತಿರುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಹಳ ಚುರುಕುತನದಿಂದ ಕೆಲಸ ಮಾಡುವಿರಿ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ನಿಮಗೆ ದೊರೆಯುತ್ತದೆ. ಸ್ಥಿರಾಸ್ತಿಯ ವ್ಯವಹಾರವನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸಂಘಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಇರುವುದಿಲ್ಲ. ಶೀತಬಾಧೆ ಕೆಲವರನ್ನು ಕಾಡಬಹುದು. ನಿಮ್ಮ ಆರ್ಥಿಕ ಬೆಳವಣಿಗೆಗೆ ಸಂಗಾತಿ ಸಹಕಾರ ನೀಡುತ್ತಾರೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಕೃಷಿಯಿಂದ ಅತಿಹೆಚ್ಚು ಆದಾಯ ಪಡೆಯುವಿರಿ. ಬಂಧು–ಬಾಂಧವರ ನಡುವಿನ ವಿರೋಧಾಭಾಸಗಳನ್ನು ಕಡಿಮೆ ಮಾಡಲು ಪ್ರಯತ್ನಪಡುವಿರಿ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ. ಹೈನುಗಾರಿಕೆ ಅಭ್ಯಾಸ ಮಾಡುತ್ತಿರುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸಂಗಾತಿಯಿಂದ ಹೆಚ್ಚು ಆರ್ಥಿಕ ಸಹಕಾರ ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಈ ವಾರ ನಿಮ್ಮಲ್ಲಿ ಪರಾಕ್ರಮ ಹೆಚ್ಚಾಗಿ ಇರುತ್ತದೆ. ಹೈನುಗಾರಿಕೆ ಮಾಡುವವರಿಗೆ ಅತಿ ಹೆಚ್ಚು ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಸಂಸಾರದಲ್ಲಿ ಸಂತೋಷವನ್ನು ಕಾಣಬಹುದು. ವಾರದ ಅಂತ್ಯಕ್ಕೆ ದೈವ ದರ್ಶನಕ್ಕೆ ಹೋಗಿಬರುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ನಿಮ್ಮ ವ್ಯಕ್ತಿತ್ವದಲ್ಲಿ ಛಾಪನ್ನು ಕಾಣಬಹುದು. ಆದಾಯವು ಕಡಿಮೆ ಇರುತ್ತದೆ. ಖರ್ಚನ್ನು ಹಿಡಿತದಲ್ಲಿ ಇಟ್ಟುಕೊಳ್ಳಿ. ಮಹಿಳೆಯರಿಂದ ಕೆಲಸ ಕಾರ್ಯಗಳಿಗೆ ಸ್ವಲ್ಪ ಸಹಕಾರ ದೊರೆಯಬಹುದು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸನ್ನು ಪಡೆಯುವ ಯೋಗವಿದೆ. ಹೊರಗಿನ ಆಹಾರಸೇವನೆಯಿಂದ ಆರೋಗ್ಯ ವ್ಯತ್ಯಾಸವಾಗಬಹುದು. ಸಂಗಾತಿಯು ಅಧ್ಯಾತ್ಮದ ಕಡೆಗೆ ಹೊರಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ಮಾತಿನಿಂದ ನೀವು ಬಂಧುಗಳನ್ನು ಕಳೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕಫಲ ಮಾತ್ರ ಇರುತ್ತದೆ. ಉದರ ಸಂಬಂಧಿ ದೋಷಗಳು ಕಾಣಿಸಬಹುದು. ಸಂಗಾತಿಯು ನಿಮ್ಮ ಸಲಹೆಗಳನ್ನು ಪರಿಗಣಿಸುವುದಿಲ್ಲ. ವೃತ್ತಿಯಲ್ಲಿರುವವರಿಗೆ ಅನುಕೂಲಗಳು ಹೆಚ್ಚುತ್ತವೆ.

ಪದಬಂಧ 2932



ಮೇಲಿಂದ ಕೆಳಕ್ಕೆ
1. ಕೋಮಲವಾದ ಕೈಯಲ್ಲಿ ಅರಳಿದ ತಾವರೆ 5
2. ಸಮುದಾಯಕ್ಕೆ ಕೆಲಸ ಮಾಡಿಕೊಡುವ ವೃತ್ತಿ 5
3. ಹೂವಿನಂತಹ ಮನಸ್ಸುಳ್ಳವಳು 3
4. ಕುಬೇರನ ಮಗಳಾಗಿ ಗುಂಗುರು ಕೂದಲಿನ ಸುಂದರ ಹುಡುಗಿ ಗಂಗೆಯಾಗಿ ಹರಿದಿದ್ದಾಳೆ 5
5. ವಿಶ್ವಕ್ಕೇ ಜನ್ಮಕೊಟ್ಟು ಪ್ರಪಂಚದ ತಾಯಿಯಾದವಳು 5
11. ಸೌಂದರ್ಯ, ಉತ್ಸಾಹದ ವೀರಗಾಥೆಯ ಜನಪದ ಹಾಡು 3
12. ಆತನಿಗೆ ಅಂಕ ಹೊರಲು ಆಗಿರುವ ಅಡ್ಡಿ 3
14. ಆಕೃತಿ ಗುಣಗಳ ಹೋಲಿಕೆಗಳ ಎತ್ತರದ ಗಿರಿ 5
15. ವಿಷ್ಣುವಿನಿಂದ ಹರಿದು ಬರುವ ಸುಗಂಧ 5
17. ಲಕ್ಷ್ಮೀ ನಾಣ್ಯಗಳ ಮಾಲ 5
18. ಅತಿಯಾದ ಪರಿಶುದ್ಧತೆಯ ಆಚಾರ, ಇದು ಸಾಹಿತ್ಯದಲ್ಲಿ ಸಲ್ಲದು ಎಂಬುದು ಹಲವರ ವಾದ 5
21. ಸುದ್ದಿ ಪ್ರಚಾರದ ಪೇಪರ್ 3

ಎಡದಿಂದ ಬಲಕ್ಕೆ
1. ಗುಡಿಗೋಪುರದ ಮೇಲೆ ರಾರಾಜಿಸುವ ಪಾತ್ರೆ 3
4. ಅನುಕರಣೀಯ ಸೋದರ 3
6. ಸಮಯವನ್ನು ಹಿಡಿದಿರುವ ಉಜ್ಜೈನಿಯ ಮಹಾದೇವ 4
7. ಆಚರಣೆಗೆ ಬರುವ ಹುಟ್ಟಿದ ದಿವಸ 4
8. ನಿಮ್ಮ ಆಂತರ್ಯವನ್ನು ಹೀಗೆ ಸಂಬೋಧಿಸಬಹುದು 3
9. ಕೃಷ್ಣನ ಸಾಕುತಂದೆಯ ಮಕ್ಕಳ ಉದ್ಯಾನ, ಆಕಾಶವಾಣಿಯ ಚಿತ್ರಗೀತೆ ಕಾರ್ಯಕ್ರಮ 3
10. ಬಿಳಿಹೂವಿನ ಪರಾಗ ಪ್ರಚಲಿತ ಐಸ್‌ಕ್ರೀಮ್ ಕಂಪು 3
12. ಆ ಮಗುವಿನಿಂದ ಸಿಗಬಹುದಾದ ಸಂತಸ 3
13. ಚೈತ್ರ ವೈಶಾಖದ ಋತು ಶೂನ್ಯದಲ್ಲಿ ಕೊನೆಯಾಗಿದೆ 3
15. ಹರಿಯ ಪಟ್ಟದ ರಾಣಿ 3
16. ಪರಮೇಶ್ವರಿಯ ಕೌಮಾರ್ಯದ ಅವತರಣ 3
19. ಕಲ್ಲನ್ನು ರೂಪಿಸುವ ಮಹಾಶಿಲ್ಪಿ 3
21. ತಪ್ಪಿಸಿಕೊಂಡು ಓಡಿಹೋಗುವ ಸೂತ್ರ 4
22. ಹೊಟ್ಟೆಯಲ್ಲಿ ಹುಟ್ಟದಿದ್ದರೂ ಇವಳು ಮುದ್ದಿನ ಮಗಳು 4
23. ತಲೆಯನ್ನು ಲೀನಗೊಳಿಸಿ ಮಗ್ನವಾಗುವಿಕೆ 3
24. ಸೂರ್ಯನಂತೆ ಹೊಳೆಯುವ ಕುಪ್ಪಸ 3

ಪದಬಂಧ ಉತ್ತರ -2931

ಮೇಲಿಂದ ಕೆಳಕ್ಕೆ
1.ವಂಚನೆ 2.ರಂಜಿತ 3.ಗುಂಗುರು 4.ಕೆಲಿಕ 7.ಡಿಮಾಂಡು 9.ಭಿಕ್ಷುಕ 11.ರದನ 12.ತಿರುಕ 13.ಜನನಿ 14.ರಾಹುಲ 17.ನಾಸಿಕ 19.ಕಡತ 20.ನಾಡಿಗ 21.ಗಹನ 22.ಭಾವುಕ 23.ತಾಮರ

ಎಡದಿಂದ ಬಲಕ್ಕೆ
1.ವಂದೇಮಾತರಂ 3.ಗುಂಪುಗಾರಿಕೆ 5.ಜಿನುಗು 6.ನೆಗಡಿಶೀತ 8.ರುದ್ರಾಭಿಷೇಕ 10.ಕರಡುಪ್ರತಿ 13.ಜನಕರಾಜ 15.ರುಜಿನ 16.ಜನನಾಯಕ 18.ನಿತ್ಯಕಲಹ 20.ನಾಟಕರಂಗ 22.ಭಾರತಮಾತಾ 24.ಹಲವು 25.ಗಗನಯಾನ 26.ಕರುಣಾಕರ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಕಲ್ಲಂಗಡಿ ತಿಂದ ಬೆದರುಗೊಂಬೆ

ರೈತನೊಬ್ಬ ಗದ್ದೆಯ ತುಂಬೆಲ್ಲಾ ಕಲ್ಲಂಗಡಿ ಹಣ್ಣು ಬೆಳೆದಿದ್ದ. ಅದನ್ನು ಪ್ರಾಣಿಗಳು ತಿನ್ನಬಾರದು ಎಂದು ಬೆದರುಗೊಂಬೆ ಇರಿಸಿದ್ದ. ಬಿಸಿಲು ಜೋರಾಗಿ ಇತ್ತು. ಹಣ್ಣುಗಳೂ ಚೆನ್ನಾಗಿ ಬೆಳೆದಿದ್ದವು. ಬಿಸಿಲಿನಲ್ಲಿ ನಿಂತು ನಿಂತು ಸುಸ್ತಾಗಿದ್ದ ಬೆದರುಗೊಂಬೆಯು ಮೆಲ್ಲನೆ ಹಣ್ಣುಗಳನ್ನು ತಾನೆ ತಿಂದಿತು. ಸಂಜೆಯಾಗುವಷ್ಟರಲ್ಲಿ ಹಣ್ಣುಗಳೆಲ್ಲ ಖಾಲಿಯಾಗಿ ಬೆದರುಗೊಂಬೆಯ ಹೊಟ್ಟೆ ಡೊಳ್ಳಿನಂತಾಗಿತ್ತು!



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರವಿ	+	ನದಿ	+	ಸಾ	=	
2	ಕಾಗೆ	+	ಗುಡಿ	+	ಹೋ	=	
3	ಮರು	+	ಸರ	+	ಸಾ	=	
4	ಮನ	+	ವಕ್ರ	+	ಜೀ	=	
5	ವಡೆ	+	ಕಾಲು	+	ಪ	=	

ಶಬ್ದಾಟ

ಇಲ್ಲಿರುವ ಪದಗುಚ್ಛಕ್ಕೆ ಯಾವ ಒತ್ತಕ್ಷರ ಸೇರಿಸಿದರೆ ಮೂಲಅರ್ಥ ಕಳೆದುಕೊಂಡು ಹೊಸ ಪದ ಆಗುತ್ತದೆ?

ಸರ್ವಜನಹಿತ =

ವರ್ಡ್‌ಗೇಮ್

ಇಲ್ಲಿರುವ ಮೂರು ಪದಗಳನ್ನು ಮರುಜೋಡಿಸಿ ಓರ್ವ ಬಾಲಕಿಯ ಹೆಸರನ್ನು ರಚಿಸಿ.

WIN + ASH + I = ________

ಬ್ರೇನ್‌ವ್ಹೀಟಾ ಆಟ

ಇಲ್ಲಿರುವ ಬೆಸಸಂಖ್ಯಾ ಸರಣಿಯಲ್ಲಿ ಕ್ರಮವಾಗಿ ಎಲ್ಲಿಂದ ಎಲ್ಲಿಯವರೆಗೆ ಸಂಖ್ಯೆಗಳನ್ನು ಕೂಡಿಸಿದರೆ 100 ಆಗುತ್ತದೆ?

1,3,5,7,9,11,13,15,17,19,21,23,25

ಜಾಣಪದ ಆಟ

1. ಇಲ್ಲಿ ಕೊಟ್ಟಿರುವ 'ಕರ' ಪದದ ಹಿಂದೆ ಅಕ್ಷರ ಪಟ್ಟಿಯಿಂದ ಎರಡು ಅಕ್ಷರ ಆಯ್ದು ತುಂಬಿ ನಾಲ್ಕಕ್ಷರದ ಪದ ಮಾಡಿ.

1			ಕ	ರ
2			ಕ	ರ
3			ಕ	ರ
4			ಕ	ರ
5			ಕ	ರ
6			ಕ	ರ
7			ಕ	ರ
8			ಕ	ರ
9			ಕ	ರ
10			ಕ	ರ

ಅಕ್ಷರ ಪಟ್ಟಿ

ಪ	ಕ	ಕ	ಭ	ಸು
ಸು	ಲಾ	ಹಾ	ದುಃ	ಶು
ರಿ	ನಿ	ಷ್ವ	ಯಂ	ಧಾ
ಖ	ಭ	ನಿ	ಖ	ಭ

ಮೋಜಿನ ಇಂಗ್ಲಿಷ್

ಸ್ವರಲೋಪ ಸರಿಪಡಿಸಿ

ಇಲ್ಲಿ ಕೊಟ್ಟಿರುವ ಅಕ್ಷರಗಳಿಗೆ ಸೂಕ್ತವಾದ ಸ್ವರಾಕ್ಷರ (Vowels) ಸೇರಿಸಿ ಪದ ಪೂರ್ಣಗೊಳಿಸಿ

1	F		C		S
2	V		R		S
3	M		D		L
4	M		D		L
5	B		G		N
6	D		V		L
7	C		M		L
8	L		V		L
9	F		N		L
10	S		L		R

ಗಾದೆ ಗುರುತಿಸು

ಇಲ್ಲಿರುವ ಅಕ್ಷರಗಳನ್ನು ಕ್ರಮಬದ್ಧವಾಗಿ ಜೋಡಿಸಿ ಒಂದು ಗಾದೆ ಮಾಡು

ಕೈ	ರ	ಬಂ	ತ್ತಾ	ಬಾ	ಗಾ	ಳೆ	ಹಿ	ಯಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಗುದಮುರಿಗೆ 2.ಬಾರದಮಳೆ 3.ಗುರಿಸಾಧಿಸು 4.ಹುರುಳಿಕಾಳು 5.ಕೋಳಿಜಗಳ

ಶಬ್ದಾಟ: ಹೆಡಮುರಿಗೆ

ಒಗಟು ಪದಬಂಧ

ಎಡದಿಂದ ಬಲಕ್ಕೆ: 2.ಬದನೆಕಾಯಿ 4.ಹಲ್ಲುಗಳು

ಮೇಲಿನಿಂದ ಕೆಳಕ್ಕೆ: 1.ಬಾಯಿ 3.ನೆರಳು 4.ಹತ್ತಿ

ಪದಶೋಧ: ನೋಡಿಸ್ವಾಮಿ ನಾವಿರೋದೆ ಹೀಗೆ

ಮೋಜಿನ ಇಂಗ್ಲಿಷ್: 1.BELONG 2.BESIDE 3.BECOME 4.BECAUSE 5.BELOW

ಪದಬದಲಾಟ: 1.POST 2.TEAR 3.DEAR 4.BALE 5.STAR

ಜಾಣಪದ ಆಟ: 1.ದಕ್ಷತೆ 2.ಅಕ್ಷರ 3.ತಕ್ಷಣ 4.ಲಕ್ಷಣ 5.ಅಕ್ಷತೆ 6.ನಕ್ಷತ್ರ 7.ಭಕ್ಷಕ 8.ರಕ್ಷಣೆ 9.ಶಿಕ್ಷಣ 10.ಅಕ್ಷಮ್ಯ

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಅಭಿಷೇಕ್ ಎಂ.
ಪುತ್ತೂರು

ಸ್ವಸ್ತಿ ಶಾಂತಿನಾಥ ಶಿರಹಟ್ಟಿ
ಬಾಗಲಕೋಟೆ

ಸನ್ಮಿತ ಎಸ್.
ಮಂಡ್ಯ

ಅಕ್ಷರ ಎಂ.ಎಸ್.
ಮೈಸೂರು

ಸಮರ್ಥ ಶೆಟ್ಟಪ್ಪನವರು
ಕೊಪ್ಪಳ

ಪ್ರತೀಕ್ಷಾ ಜೋಯ್ಸ್
ಆನಂದಪುರ

ಹೊನ್ನಾರು ಆರು ತಂಡಗಳ ಸುವರ್ಣ ಸಂಭ್ರಮ

ರಾಜ್ಯದಲ್ಲಿ ಐವತ್ತು ವರ್ಷಗಳಿಂದಲೂ ಸಕ್ರಿಯವಾಗಿರುವ ಆರು ರಂಗತಂಡಗಳು ಒಟ್ಟಾಗಿ 'ಹೊನ್ನಾರು ರಂಗೋತ್ಸವ' ಹಮ್ಮಿಕೊಂಡಿವೆ. ಈ ಉತ್ಸವ ಫೆಬ್ರುವರಿ 21ರಿಂದ 25ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಪ್ರತಿ ದಿನ ಸಂಜೆ 6.30ಕ್ಕೆ ನಾಟಕ ಪ್ರದರ್ಶನ ಇರುತ್ತದೆ.

• ಎಚ್.ರಾಜ

ಸಾರ್ವಜನಿಕ ಬದುಕಿನಲ್ಲಿ ಅದು ಸೊಂಪಾದ ಕಾಲ; ಕಳೆದ ಶತಮಾನದ ಎಪ್ಪತ್ತನೆಯ ದಶಕದ ಪೂರ್ವಾಪರದ ಸಂದರ್ಭದಲ್ಲಿ ಸೃಷ್ಟಿಯಾದ ಈ ಕಾಲಕ್ಕೆ ಹಿನ್ನೆಲೆಯೂ ಇತ್ತು - ಹಾಗೆಯೇ ಮುನ್ನೆಲೆಯೂ ಇತ್ತು. ನಿರ್ದಾಕ್ಷಿಣ್ಯವಾಗಿ ಹೇಳಬೇಕೆಂದರೆ, ಈಗಲೂ ಕೂಡ ಅದೇ ಮುನ್ನೆಲೆಯ ನೆರಳು ಸಾರ್ವಜನಿಕ ಬದುಕಿಗೆ ಒಂದು ರಕ್ಷೆ. ಸಾಹಿತ್ಯ, ರಂಗಭೂಮಿ ಸೇರಿದಂತೆ ಸಾಂಸ್ಕೃತಿಕ ವಲಯದಲ್ಲಿ ಲವಲವಿಕೆಯ ವಾತಾವರಣ ಕಂಡುಬರಲು ಸ್ವಾತಂತ್ರ್ಯದ ಹೊಂಗನಸಿನಿಂದ ಹತಾಶೆಯ ಲೋಕಕ್ಕೆ ಪ್ರವೇಶಿಸಿದ್ದು ಒಂದು ಅಸಲೀ ಕಾರಣ. ರಾಜಕಾರಣದಲ್ಲಿಯೂ ಕೂಡ ಇಂತಹ ವಿಪ್ಲವದ ಸ್ಥಿತಿ. ಮಾರ್ದನಿಗೊಂಡಾಗ ರಂಗಭೂಮಿಯಲ್ಲಿ ಹೊಸ ಲವಲವಿಕೆ ಸೃಷ್ಟಿಯಾಗಿ ಕೇವಲ ಚಟುವಟಿಕೆಗೆ ಸೀಮಿತವಾಗಿದ್ದ ರಂಗಭೂಮಿ ಚಳವಳಿಯ ಕಡೆ ಹೆಜ್ಜೆ ಹಾಕಿದ್ದನ್ನು ಇಡೀ ದೇಶವೇ ಗುರುತಿಸಿ ಗೌರವಿಸಿದ್ದನ್ನು ಮರೆಯುವಂತಿಲ್ಲ.

ಐವತ್ತು ವರ್ಷಗಳ ಈ ಭವ್ಯ ಇತಿಹಾಸದ ನೆನಪುಗಳನ್ನು ಕೆದಕಿ ಹೊಸ ಚಳವಳಿಯನ್ನು ರೂಪಿಸುವ ನಿಟ್ಟಿನಲ್ಲಿ ಹಲವು ಯತ್ನಗಳು ಜರುಗಿ ತಕ್ಕಮಟ್ಟಿಗೆ ಯಶಸ್ಸು ಪಡೆದಿರುವುದು ನಿಜವೇ. ಆದರೆ ಚಳವಳಿಗೆ ಬೇಕಾದದ್ದು ನಿರಂತರತೆ. ಇಂತಹ ನಿರಂತರೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಐವತ್ತು ವರ್ಷಗಳಿಂದಲೂ ಸಕ್ರಿಯವಾಗಿರುವ ಆರು ರಂಗತಂಡಗಳು ಸಂಘಟಿತವಾಗಿ 'ಹೊನ್ನಾರು' ಹೆಸರಿನಲ್ಲಿ ಉತ್ಸವವನ್ನು ಹಮ್ಮಿಕೊಂಡಿರುವುದು ಮಹತ್ವದ ಹೆಜ್ಜೆ.

ಚಟುವಟಿಕೆಯಿಂದ ಚಳವಳಿಯ ಅಂಕಣ ಪ್ರವೇಶಿಸಲು ಬೇಕಾದದ್ದು ಕೇವಲ ಉತ್ಸಾಹ ಅಷ್ಟೇ ಅಲ್ಲ, ಶ್ರದ್ಧೆಯಷ್ಟೇ ಸಾಲದೂ ಕೂಡ. ಇದರ ಜೊತೆಗೆ ಭದ್ರನೆಲೆಗಟ್ಟಿನ ಆಶಯ ಹಾಗೂ ಪರಂಪರೆಯನ್ನು ಕಾಪಿಟ್ಟುಕೊಂಡು ವರ್ತಮಾನದ ವರಾತವನ್ನು ಸಾಕ್ಷಾತ್ಕಾರಗೊಳಿಸುವ ಒಂದು ಸೂತ್ರ. ಹೌದು, ಇಂತಹ ಸೂತ್ರ ಕೇವಲ ಒಬ್ಬರಿಂದ ಸೃಷ್ಟಿಯಾಗುವಂತದ್ದಲ್ಲ, ಇದೊಂದು ಸಾಮೂಹಿಕ ಜವಾಬ್ದಾರಿಯ ಸೃಷ್ಟಿ. ಹೊನ್ನಾರು ನಾಟಕೋತ್ಸವದ ಆಶಯವೇ ಇದು.

ಕನ್ನಡ ರಂಗಭೂಮಿಯಲ್ಲಿ ಖಚಿತ ಹೆಜ್ಜೆಗಳನ್ನಿಟ್ಟು ಐವತ್ತು ವರ್ಷಗಳ ಸಾತತ್ಯವನ್ನು ಹೊಂದಿರುವ 'ರಂಗಸಂಪದ', 'ಸಮುದಾಯ', 'ನಟರಂಗ', 'ಕಲಾಗಂಗೋತ್ರಿ', 'ಸ್ಪಂದನ' ಹಾಗೂ 'ಬೆನಕ' ತಂಡಗಳು ಈ ಹೊನ್ನಾರು ನಾಟಕೋತ್ಸವದಲ್ಲಿ ಸಾಂಸ್ಕೃತಿಕ ಲೋಕದಲ್ಲಿ ಹೊನ್ನುಡಿ ಬರೆಯುತ್ತಿರುವುದು ಹೊಸ ತಲೆಮಾರಿಗೆ ಒಂದು ರೀತಿಯಲ್ಲಿ ಸುಸಜ್ಜಿತ ರಂಗಮಂಟಪ.

ಈ ಉತ್ಸವದಲ್ಲಿ ರಂಗಸಂಪದ ತಂಡದ ಉಮಾಶ್ರೀ ಅಭಿನಯಿಸುವ ಶರ್ಮಿಷ್ಠೆ, ಸಮುದಾಯ ತಂಡದ ಸ್ಯಾಮ್ ಕುಟ್ಟಿ ಪಟ್ಟಂಕರಿ ನಿರ್ದೇಶನದ ಭಗವಂತನ ಮರಣ, ನಟರಂಗ ತಂಡದ ಬಿ. ಸುರೇಶ್ ನಿರ್ದೇಶನದ ನೀರಗನ್ನಡಿ, ಕಲಾಗಂಗೋತ್ರಿ ತಂಡದ ಬಿ.ವಿ. ರಾಜಾರಾಮ್ ನಿರ್ದೇಶನದ Moneye ದೇವರು, ಸ್ಪಂದನ ತಂಡದ ಬಿ.ಜಯಶ್ರೀ ನಿರ್ದೇಶನದ ಹಗಲು ಗನಸು ಹಾಗೂ ಬೆನಕ ತಂಡದ ಬಿ.ವಿ. ಕಾರಂತ ನಿರ್ದೇಶನದ (ಮರುನಿರ್ದೇಶನ ಟಿ.ಎಸ್. ನಾಗಾಭರಣ) ಜೋಕುಮಾರಸ್ವಾಮಿ ನಾಟಕಗಳು ಪ್ರಯೋಗಗೊಳ್ಳಲಿವೆ.

ಹಾಗೆ ನೋಡಿದರೆ ಕನ್ನಡ ರಂಗಭೂಮಿಯಲ್ಲಿ ಹೊಸತನಕ್ಕೆ ಹಾದಿ ನಿರ್ಮಿಸಿಕೊಟ್ಟವರ ಪೈಕಿ ಟಿ.ಪಿ. ಕೈಲಾಸಂ, ಪರ್ವತವಾಣಿ ಮೊದಲಿಗರು. ನಂತರ ಶ್ರೀರಂಗರ ಸಾರಥ್ಯದಲ್ಲಿ ಗರಿಗಟ್ಟಿದ ಈ ರಂಗಯಾತ್ರೆಯಲ್ಲಿ ಬಿ.ವಿ. ಕಾರಂತ, ಎಂ.ಎಸ್ ಸತ್ಯು, ಚಂದ್ರಶೇಖರ ಕಂಬಾರ, ಸಿ.ಆರ್. ಸಿಂಹ, ಪ್ರೊ.ಬಿ.ಚಂದ್ರಶೇಖರ್, ವಿ.ರಾಮಮೂರ್ತಿ, ಪ್ರಸನ್ನ ಮೊದಲಾದ ಧೀಮಂತರು ಪಾಲ್ಗೊಂಡು ಅದರ ವಿನ್ಯಾಸವನ್ನು ವಿಸ್ತರಿಸಿ ರಾಷ್ಟ್ರದ ಕಣ್ಣು ಕರ್ನಾಟಕದ ಕಡೆ ತಿರುಗುವಂತೆ ಮಾಡಿದ್ದು ದೊಡ್ಡ ಇತಿಹಾಸ.

ತುಘಲಕ್ ನಾಟಕ ಪ್ರಯೋಗಕ್ಕೆ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಸ್ಥಾನವಿದೆ. ಪ್ರೊ. ಬಿ. ಚಂದ್ರಶೇಖರ್ ನಿರ್ದೇಶನದಲ್ಲಿ 1969ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ಹದಿಮೂರು ರಂಗತಂಡಗಳು ಒಂದಾಗಿ ತುಘಲಕ್ ನಾಟಕವನ್ನು ಯಶಸ್ಸುಗೊಳಿಸಿದ್ದು ಇನ್ನೂ ರಂಗಾಸಕ್ತರಲ್ಲಿ ಹಚ್ಚ ಹಸಿರಾಗಿದೆ. ಕನ್ನಡ ಸಾಹಿತ್ಯ ಕಲಾ ಸಂಘದ ಆರ್. ನಾಗೇಶ್ ಸಾರಥ್ಯದಲ್ಲಿ ಈ ನಾಟಕ ಪ್ರದರ್ಶನಗೊಂಡು ಗಿರೀಶ ಕರ್ನಾಡ ಒಬ್ಬ ನಾಟಕಕಾರರಾಗಿ ಮೂಡಿಬರಲು ಕಾರಣವಾದ ವಿದ್ಯಮಾನವಿದು. ಅಭಿಜಾತ ನಟರಾದ ಸಿ.ಆರ್. ಸಿಂಹ ಹಾಗೂ ಲೋಕೇಶ್ ಅವರೂ ಕೂಡ ಕನ್ನಡ ರಂಗಭೂಮಿಗೆ ದಕ್ಕಿದ್ದು ಇದೇ ಸಂದರ್ಭದಲ್ಲಿ. ಬಿ.ವಿ. ಕಾರಂತರು 1970ರಲ್ಲಿ ನಿರ್ದೇಶಿಸಿದ ಶ್ರೀರಂಗರ ಸ್ವರ್ಗಕ್ಕೆ ಮೂರೇ ಬಾಗಿಲು ಎಂಬ ನಾಟಕ ಪ್ರಯೋಗ ವಿನೂತನ ಕ್ರಮಗಳ ಅಳವಡಿಕೆಯಿಂದ ಗಮನ ಸೆಳೆಯಿತು. ಇದಾದ ನಂತರ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಸುವರ್ಣಯುಗ ಎಂದು ಗುರುತಿಸಬಹುದಾದ 1971ರ ಬಯಲು ರಂಗೋತ್ಸವದಲ್ಲಿ ಬಿ.ವಿ. ಕಾರಂತರ ನಿರ್ದೇಶನದ ಜೋಕುಮಾರಸ್ವಾಮಿ, ಈಡಿಪಸ್ ಹಾಗೂ ಸಂಕ್ರಾಂತಿ ನಾಟಕಗಳು ಹೊಸ ಅಲೆಯನ್ನು ಸೃಷ್ಟಿಸಿ ಚೇತನದ ಅಧ್ಯಾಯವನ್ನು ಸೃಷ್ಟಿಸಿದರು.

ಇದಕ್ಕೆ ಪೂರಕವಾಗಿ ಮಾರನೇ ವರ್ಷ ಜರುಗಿದ ರಾಷ್ಟ್ರೀಯ ನಾಟಕೋತ್ಸವದ ಪರಿಣಾಮವಾಗಿ ರಂಗಸಂಪದ, ಬೆನಕ, ಸ್ಪಂದನ, ನಟರಂಗ, ಕಲಾಗಂಗೋತ್ರಿ ಮತ್ತು ಸಮುದಾಯ ತಂಡಗಳು ಹುಟ್ಟಿಕೊಂಡವು. ಆರ್. ನಾಗೇಶ್, ಪ್ರಸನ್ನ, ಬಿ. ಜಯಶ್ರೀ, ಎಸ್. ಮಾಲತಿ, ಸಿ.ಆರ್. ಸಿಂಹ, ಸಿ.ಜಿ.ಕೆ. ಟಿ.ಎನ್. ನರಸಿಂಹನ್, ಶಂಕರ್‌ನಾಗ್, ಎಚ್.ವಿ.ವೆಂಕಟಸುಬ್ಬಯ್ಯ, ಟಿ.ಎಸ್. ನಾಗಾಭರಣ ಹಾಗೂ ಸಂಘಟಕರಾಗಿ ಶ್ರೀನಿವಾಸ್ ಕಪ್ಪಣ್ಣ, ಜಿ.ಲೋಕೇಶ್ ಮೊದಲಾದ ನಿರ್ದೇಶಕರು ಕನ್ನಡ ರಂಗಭೂಮಿಗೆ ಹೊಸ ಆಯಾಮ ನೀಡಿದರು. ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ, ಪಿ. ಲಂಕೇಶ್, ಹೆಚ್. ಎಸ್. ಶಿವಪ್ರಕಾಶ್, ಟಿ.ಎನ್. ಸೀತಾರಾಂ ಮೊದಲಾದ ನಾಟಕಕಾರರು ತಮ್ಮ ಕೃತಿಗಳ ಮೂಲಕ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು.

ಇಂತಹ ಅಪೂರ್ವ ಪರಂಪರೆಯ ದೀವಿಗೆಯ ಬೆಳಕಿನಲ್ಲಿ ವರ್ತಮಾನದಲ್ಲಿ ರಂಗ ಚಟುವಟಿಕೆಗೆ ಹೊಸ ಕಳೆ ತಂದುಕೊಡಲೆಂದು ಏರ್ಪಡಿಸಿರುವ ಹೊನ್ನಾರು ರಂಗೋತ್ಸವ ಹಲವು ಕಾರಣಗಳಿಂದ ನಿರ್ಣಾಯಕ ಎಂಬುದು ಸಾಂಸ್ಕೃತಿಕ ಲೋಕದ ನಂಬುಗೆ. ಹಲವು ತಂಡಗಳು ಸೇರಿ ನಾಟಕೋತ್ಸವವನ್ನು ಏರ್ಪಡಿಸಿರುವುದು ಇದೇ ಮೊದಲಲ್ಲದಿರಬಹುದು, ಈ ಹಿಂದೆ 80ರ ದಶಕದಲ್ಲಿ ಬೆನಕ, ರಂಗಸಂಪದ, ಸೂತ್ರಧಾರ ತಂಡಗಳು ಬೆರಸು ಹೆಸರಿನಲ್ಲಿ ದೆಹಲಿಯಲ್ಲಿ ನಾಟಕೋತ್ಸವವನ್ನು ಏರ್ಪಡಿಸಿ ಯಶಸ್ಸು ಕಂಡಿದ್ದವು. ಆರ್. ನಾಗೇಶ್ ಅವರ ಸೂತ್ರಧಾರತ್ವದಲ್ಲಿ ಈ ಉತ್ಸವ ನಡೆದಿತ್ತು. ಈಗ ಹೊಸ ತಲೆಮಾರಿಗೆ ರಂಗತೇರನ್ನು ಎಳೆಯುವ ಅವಕಾಶ ದೊರಕುವಂತಾಗಲು ಹೊನ್ನಾರು ನಾಟಕೋತ್ಸವ ಏರ್ಪಡಿಸಿರುವುದು ನಿಜಕ್ಕೂ ಸಾರ್ಥಕ.

> ಆರು ತಂಡಗಳು ಐವತ್ತು ವರ್ಷಗಳ ಸಾರ್ಥಕ ರಂಗಬದುಕನ್ನು ಮತ್ತಷ್ಟು ಗಟ್ಟಿಗೊಳಿಸಲು ಹಾಗೂ ಹೊಸ ಕಲಾವಿದರಿಗೆ ಅವಕಾಶ ಸೃಷ್ಟಿಸಲು ಹೊನ್ನಾರು ರಂಗೋತ್ಸವ ಏರ್ಪಡಿಸಿದೆ. ಇಂತಹ ಮಹತ್ವದ ಆಶಯದ ಉತ್ಸವ ಯಶಸ್ಸು ಕಂಡರೆ ಅದು ಕನ್ನಡ ರಂಗಭೂಮಿಗೆ ಹೊಸ ದಿಕ್ಕುದೆಸೆಯನ್ನು ತೋರಿಸುವ ಬೆಳ್ಳಿಗೆರೆ.
>
> **ಶ್ರೀನಿವಾಸ್ ಜಿ. ಕಪ್ಪಣ್ಣ,** ಹೊನ್ನಾರು ರಂಗೋತ್ಸವದ ಸಂಚಾಲಕ

ಬೈತೂ ಗಂಧಕದ ಬುಗ್ಗೆ ಭೂಮಿಯ ನಿಟ್ಟುಸಿರ ನೆಲೆ

ತೈಪೆಯ ಉತ್ತರ ಭಾಗದ ಹಸಿರು ಗುಡ್ಡಗಳ ನಡುವೆ ನೆಲೆಗೊಂಡಿರುವ ಸಲ್ಫರ್ ವ್ಯಾಲಿ ಕೇವಲ ಬಿಸಿನೀರಿನ ಬುಗ್ಗೆಗಳ ತಾಣವಲ್ಲ. ಅದು ಭೂಮಿಯ ಅಂತರಾಳದಲ್ಲಿ ಕುದಿಯುತ್ತಿರುವ ಜ್ವಾಲಾಮುಖಿಯ ಸದ್ದು ಮತ್ತು ಸಂರಕ್ಷಿತ ನೈಸರ್ಗಿಕ ವೈಭವ. ಅಚಾನಕ್ ನಿರ್ಧಾರದಿಂದ ಆರಂಭವಾದ ಬೆಳಗಿನ ನಡಿಗೆ, ಭೂಮಿಯೇ ಉಸಿರಾಡುತ್ತಿರುವಂತೆ ಭಾಸವಾದ ಅದ್ಭುತ ಅನುಭವವಾಗಿ ರೂಪುಗೊಂಡಿತು.

• ಸತ್ಯನಾರಾಯಣ ಎಂ.ಎಸ್.

ತೈವಾನ್ ದೇಶದ ತೈಪೆ ಎಂಬ ಮರುಳು ನಗರಿಯ ಮಡಿಲಿನಲ್ಲಿ ನಾವು ಇಳಿದಾಗ ಸಂಜೆಯ ಹೊತ್ತು ಆಗಲೇ ಕತ್ತಲಿಗೆ ಒಪ್ಪಿಸಿಕೊಂಡಿತ್ತು. ಕಸ್ಟಮ್ಸ್ ಪ್ರಕ್ರಿಯೆಗಳ ಗೋಜಿನಲ್ಲಿ ಸಮಯ ಸರಿದದ್ದೇ ಗೊತ್ತಾಗಲಿಲ್ಲ; ಹೊರಗೆ ಬಂದಾಗ ನಗರವೇ ರಾತ್ರಿಯ ಹೊದಿಕೆಯನ್ನು ಹೊದ್ದುಕೊಂಡಿತ್ತು. ಭೂಮಿಯ ಪೂರ್ವಾರ್ಧ ಗೋಳದ ಈ ದ್ವೀಪದ ಸ್ವಭಾವವೇ ಹಾಗೆ. ಸಂಜೆ ನಾಲ್ಕೂವರೆ ಹೊತ್ತಿಗೇ ಕತ್ತಲೆ ನಿಧಾನವಾಗಿ ನೆಲೆಯಾಗುತ್ತದೆ. ಆ ಬೆಳಕು-ಕತ್ತಲೆಗಳ ಸಂಧಿಸಿದ ಕ್ಷಣದಲ್ಲಿ ನಾವು ಐವರು, ಎರಡು ಮೈಲು ದೂರ ನಡೆಯುತ್ತಾ ಬೈತೂ ಪಟ್ಟಣದ ಇಳಿಸಂಜೆಯ ನಿಶ್ಶಬ್ದ ಸೌಂದರ್ಯವನ್ನು ಸವಿದೆವು.

ಮರುದಿನ ಮುಂಜಾನೆ, ಗೆಳೆಯನ ಕೈಯಲ್ಲಿ ಗೂಗಲ್ ಮ್ಯಾಪ್. 'ಇಲ್ಲೇ ಹತ್ತಿರ ಯಾವುದೋ ಹಾಟ್ ಸ್ಪ್ರಿಂಗ್ ಇದೆ. ಸ್ವಲ್ಪ ದೂರ ನಡೆದು ಹೋಗೋಣವೇ?' ಎಂಬ ಪ್ರಶ್ನೆ ಗಾಳಿಯಲ್ಲಿ ತೇಲಿತು. ಯೋಜನೆಗಳಿಲ್ಲದ ಪ್ರವಾಸಕ್ಕೆ ಇಂತಹ ತುರ್ತು ನಿರ್ಧಾರಗಳೇ ಖುಷಿಕೊಡುವುದು. 'ನಡೀರಿ' ಎಂದು ಹೆಜ್ಜೆ ಮುಂದಿಟ್ಟೆ. ಸಣ್ಣ ಮಳೆಯಿಂದ ತೇವಗೊಂಡಿದ್ದ ರಸ್ತೆಯು ಗಾಢ ಹಸಿರು ಮರಗಳ ನಡುವೆ ಮೌನವಾಗಿ ವಾಲಿಕೊಂಡಿತ್ತು. ಗುಡ್ಡದ ಮೇಲೆ ಮೂರು ಮೈಲು ಏರು ದಾರಿ. ಒಂದೂ ಕಾಲು ಗಂಟೆ ಹಿಡಿದರೂ ದೇಹಕ್ಕಿಂತ ಮನಸ್ಸೇ ಚುರುಕಾಗಿತ್ತು; ಗಾಳಿಯಲ್ಲಿ ಆರ್ದ್ರತೆ ಕಡಿಮೆ, ದಣಿವು ದೂರವಾಗಿತ್ತು.

ಉಪೋಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು ನಮ್ಮನ್ನು ಅಪ್ಪಿಕೊಂಡವು. ಕರ್ಪೂರದ ಮರಗಳ ಸುಗಂಧ, ಅಕೇಶಿಯ ಎಲೆಗಳ ಸಿರಿವೆರಳು, ನೆಲದ ಮೇಲೆ ಹಾಸಿಕೊಂಡ ಮನಿ ಪ್ಲಾಂಟ್, ನೆರಳಲ್ಲಿ ಬೆಳೆದ ಫರ್ನ್‌ಗಳ ಕಂಪನ–ಎಲ್ಲವೂ ಒಂದೇ ಸಮಯದಲ್ಲಿ ಕಣ್ಣಿಗೂ ಉಸಿರಿಗೂ ಹಬ್ಬವಾಗಿದ್ದವು. ಏರು ದಾರಿಯ ಕೊನೆಯ ತಿರುವಿನತ್ತ ಸಾಗುತ್ತಿದ್ದಂತೆ, ಅಲ್ಲಿ ನಮ್ಮನ್ನು ಎದುರು ನೋಡುತ್ತಿದ್ದ ಯಾವುದೋ ಅಜ್ಞಾತ ಅನುಭವದ ಸುಳಿವು ಗಾಳಿಯಲ್ಲಿ ಮಬ್ಬಾಗಿ ಹರಡತೊಡಗಿತು...

ಏರು ದಾರಿಯ ಕೊನೆಯ ಭಾಗ ತಲುಪುತ್ತಿದ್ದಂತೆಯೇ ಒಂದು ಫಲಕ ಕಣ್ಣಿಗೆ ಬಿತ್ತು. ಅದರ ಮೇಲೆ 'ಲಿ ಹುವಾಂಗೂ ಜಿಯೋಥರ್ಮಲ್ ಸೀನಿಕ್ ಏರಿಯಾ' (Liuhuanngu Geothermal Scenic Area) ಎಂದು ಬರೆಯಲಾಗಿತ್ತು. ಆ ಹೆಸರನ್ನು ಓದುವಷ್ಟರಲ್ಲಿ ಮೂಗಿಗೆ ಗಂಧಕದ ಘಾಟು ತಟ್ಟಿತು. ಆ ವಾಸನೆಗೆ ಒಂದು ವಿಚಿತ್ರ ಆಕರ್ಷಣೆ ಇತ್ತು. ಸ್ವಲ್ಪ ಅಸಹಜ, ಆದರೆ ಕುತೂಹಲ ಕೆರಳಿಸುವಂತಿತ್ತು. ದಿಢೀರ್ ನಿರ್ಧಾರಿಸಿ ಈ ನಡೆ ಆರಂಭಿಸಿದ್ದ ನಾನು, ಇದನ್ನು ಸಾಮಾನ್ಯ ಬಿಸಿನೀರಿನ ಬುಗ್ಗೆಯೆಂದು ಭಾವಿಸಿದ್ದೆ. ಆದರೆ ಮುಂದಿನ ಫಲಕ ಮತ್ತೊಂದು ಕಥೆ ಹೇಳಿತು.



ಪ್ರವಾಸ

ಸಲ್ಫರ್ ವ್ಯಾಲಿ ರಿಕ್ರಿಯೇಷನ್ ಏರಿಯಾ (Sulfur Valley Recreation Area) ಇದು ತೈಪೆಯ ಪ್ರಮುಖ ಭೂತಾಪಮಾನದ ತಾಣಗಳಲ್ಲಿ ಒಂದೆಂಬ ಅರಿವು ಮೂಡುತ್ತಿದ್ದಂತೆ, ನಮ್ಮ ನಡೆ ಅನ್ವೇಷಣೆಯಾಗಿ ಮಾರ್ಪಟ್ಟಿತು.

ಮುಂಭಾಗದ ಗೇಟನ್ನು ದಾಟಿ ಒಳಗೆ ಹೆಜ್ಜೆ ಇಟ್ಟಾಗ, ಬಿಳಿ ಹೊಗೆಯ ಸಣ್ಣ ಹಾರದಂತೆ ಮೇಲೇಳುತ್ತಿದ್ದ ಆವಿಯ ರಂಧ್ರಗಳು ದೂರದಿಂದಲೇ ಕಾಣುತ್ತಿದ್ದವು. ನೆಲದ ಒಳಗೆ ಮೌನವಾಗಿ ಯಾವುದೋ ಚಟುವಟಿಕೆ ನಡೆಯುತ್ತಿರುವಂತೆ ಭಾಸವಾಗುತ್ತಿತ್ತು. ಉತ್ತರ ತೈಪೆಯ ಸೊಂಪಾದ ಯಾಂಗ್‌ಮಿಂಗ್‌ಶಾನ್ (Yangmingshan) ಬೆಟ್ಟದ ದಕ್ಷಿಣ ತುದಿಯಲ್ಲಿ ನೆಲೆಗೊಂಡಿರುವ ಈ ಗಂಧಕ ಕಣಿವೆ, ಭೂವಿಜ್ಞಾನ, ಪರಿಸರ ಮತ್ತು ಇತಿಹಾಸಗಳ ಸಂಗಮದಂತೆ ತೋರುತ್ತದೆ.

ಈ ಕಣಿವೆಯ ಅಸ್ತಿತ್ವಕ್ಕೆ ಕಾರಣ ಅದರ ಕೆಳಭಾಗದಲ್ಲಿ ಸಕ್ರಿಯವಾಗಿರುವ ಡಾಟುನ್ ಜ್ವಾಲಾಮುಖಿ ವ್ಯವಸ್ಥೆ. ಭೂಗರ್ಭದ ಆಳದಲ್ಲಿ ಉರಿಯುತ್ತಿರುವ ಮ್ಯಾಗ್ಮಾ, ಮೇಲಿನ ತಳಪದರಗಳಲ್ಲಿರುವ ಅಂತರ್ಜಲವನ್ನು ತೀವ್ರವಾಗಿ ಬಿಸಿ ಮಾಡುತ್ತದೆ. ಆ ಬಿಸಿ ನೀರು, ಭೂಮಿಯ ಸೀಳುಗಳ ಮೂಲಕ ಹೊರಬರಲು ಹವಣಿಸುತ್ತದೆ. ಮೇಲೇಳುವ ಈ ನೀರು ಸುತ್ತಲಿನ ಕಲ್ಲುಗಳಲ್ಲಿ ಅಡಗಿರುವ ಗಂಧಕ, ಸಿಲಿಕಾ ಮತ್ತು ಅನೇಕ ಖನಿಜಗಳನ್ನು ತನ್ನೊಳಗೆ ಕರಗಿಸಿಕೊಳ್ಳುತ್ತದೆ. ಪರಿಣಾಮವಾಗಿ, ಭೂಮಿಯ ಮೇಲ್ಮೈಗೆ ತಲುಪುವಾಗ ಅದು ಕೇವಲ ನೀರಲ್ಲ, ಖನಿಜ ಸಮೃದ್ಧ ಉಷ್ಣದ ಹರಿವು.

ಈ ಉಕ್ಕುವ ಕೊಳಗಳು, ಆವಿ ರಂಧ್ರಗಳು ಮತ್ತು ಹಳದಿ ಬಣ್ಣದ ಗಂಧಕದ ಪದರಗಳು, ಭೂಮಿಯ ಅಂತರಾಳದ ಮೌನ ನಾಟಕವನ್ನು ಹೊರಗೆ ತರುತ್ತವೆ. ಕೆಲವೆಡೆ ತಾಪಮಾನ 90 ಡಿಗ್ರಿ ಸೆಲ್ಸಿಯಸ್‌ಗೂ ಮೀರಿದೆ. ನೀರಿನ pH ಮೌಲ್ಯ 3–4ರ ನಡುವೆ ಇರುವುದರಿಂದ ಸ್ವಲ್ಪ ಆಮ್ಲೀಯ ಗುಣ ಹೊಂದಿದೆ. ಹೊಗೆಯ ಬಣ್ಣ, ಗಾಳಿಯಲ್ಲಿನ ವಾಸನೆ–ಇವೆಲ್ಲವೂ ಈ ರಾಸಾಯನಿಕ ಕ್ರಿಯೆಗಳ ಸಾಕ್ಷಿಗಳು. ಪ್ರಕೃತಿಯ ಈ ಸೂಕ್ಷ್ಮ ಸಮತೋಲನವೇ ಸಲ್ಫರ್ ಕಣಿವೆಯನ್ನು ಅತ್ಯಂತ ಸಂರಕ್ಷಿತ ಭೂತಾಪಮಾನದ ವ್ಯವಸ್ಥೆಗಳಲ್ಲೊಂದಾಗಿ ಉಳಿಸಿದೆ.

ಬಿಸಿನೀರಿನ ಬುಗ್ಗೆ

ಗಣಿಗಾರಿಕೆಯಿಂದ ಉದ್ಯಾನವನದವರೆಗೆ

ಈ ಕಣಿವೆ ಕೇವಲ ಪ್ರಕೃತಿಯ ಅದ್ಭುತವಷ್ಟೇ ಅಲ್ಲ; ಇತಿಹಾಸದ ಸಾಕ್ಷಿಯೂ ಹೌದು. ತೈವಾನ್ ಪ್ರದೇಶವನ್ನು ಆಳುತ್ತಿದ್ದ ಕ್ವಿಂಗ್ ರಾಜವಂಶದ ಕೊನೆಯ ದಶಕಗಳಲ್ಲಿ, ಸ್ಥಳೀಯರು ಇಲ್ಲಿ ಗಂಧಕದ ಸಮೃದ್ಧ ನಿಕ್ಷೇಪಗಳನ್ನು ಪತ್ತೆಹಚ್ಚಿದರು. ಆ ಕಾಲದಲ್ಲಿ ಗಂಧಕ ಬೆಂಕಿಕಡ್ಡಿ, ಗನ್‌ಪೌಡರ್ ಹಾಗೂ ಸಾಂಪ್ರದಾಯಿಕ ಔಷಧಗಳ ತಯಾರಿಕೆಯಲ್ಲಿ ಪ್ರಮುಖ ಖನಿಜವಾಗಿತ್ತು.

1895ರಿಂದ ಆರಂಭವಾದ ಜಪಾನಿನ ವಸಾಹತುಶಾಹಿ ಅವಧಿಯಲ್ಲಿ, ಇಲ್ಲಿನ ಭೂತಾಪಮಾನ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲಾಯಿತು. ಸಲ್ಫರ್ ಸಂಸ್ಕರಣಾ ಘಟಕಗಳು ಸ್ಥಾಪಿತವಾಗಿದವು; ಜೊತೆಗೆ ಬಿಸಿನೀರಿನ ಬುಗ್ಗೆಗಳ ಸಂಸ್ಕೃತಿಯೂ ಪರಿಚಯವಾಯಿತು. ಎರಡನೇ ಮಹಾಯುದ್ಧದ ನಂತರ ಗಣಿಗಾರಿಕೆ ನಿಧಾನವಾಗಿ ಕ್ಷೀಣಿಸಿತು. ಕಾಲಕ್ರಮೇಣ ಈ ಪ್ರದೇಶ ತನ್ನ ಪರಿಸರ ವೈಶಿಷ್ಟ್ಯ ಮತ್ತು ಭೌಗೋಳಿಕ ಪ್ರಾಮುಖ್ಯತೆಯ ಕಾರಣದಿಂದ ಹೊಸ ಗುರುತನ್ನು ಪಡೆದುಕೊಂಡಿತು.

ಇಂದು, ಈ ತಾಣವು ರಾಷ್ಟ್ರೀಯ ಉದ್ಯಾನವನ ಪ್ರಾಧಿಕಾರ ಮತ್ತು ತೈಪೆ ನಗರ ಆಡಳಿತದ ಮೇಲ್ವಿಚಾರಣೆಯಲ್ಲಿ ಸಂರಕ್ಷಿತ ಭೂತಾಪೀಯ ಉದ್ಯಾನವನ (Geothermal Park)ವಾಗಿ ರೂಪುಗೊಂಡಿದೆ. ಒಂದು ಕಾಲದಲ್ಲಿ ಗಣಿಗಾರಿಕೆಯ ಗದ್ದಲ ಕೇಳುತ್ತಿದ್ದ ಜಾಗದಲ್ಲಿ ಈಗ ಪ್ರವಾಸಿಗರ ಕುತೂಹಲದ ನಿಶ್ಶಬ್ದ ಹೆಜ್ಜೆಗಳು ಮಾತ್ರ.

ನೈಸರ್ಗಿಕ ಪರಂಪರೆ ಜೀವಂತ

ಸಲ್ಫರ್ ವ್ಯಾಲಿ ಇಂದು ಪ್ರಕೃತಿ, ವಿಜ್ಞಾನ ಮತ್ತು ಇತಿಹಾಸಗಳ ಒಟ್ಟುಗೂಡಿದ ಅನುಭವವಾಗಿದೆ. ಬಿಳಿ ಆವಿ ಹೊಗೆಯ ನಡುವೆ ನಿಂತಾಗ, ಭೂಮಿಯ ಅಂತರಾಳದಲ್ಲಿ ನಡೆಯುತ್ತಿರುವ ಪ್ರಕ್ರಿಯೆಗಳನ್ನು ಕಣ್ಣಾರೆ ನೋಡುವ ಅವಕಾಶ ಸಿಗುತ್ತದೆ. ಜ್ವಾಲಾಮುಖಿ, ಖನಿಜ, ಕಾಡು ಮತ್ತು ಮಾನವ ಇತಿಹಾಸ ಇವೆಲ್ಲವೂ ಇಲ್ಲಿ ಒಂದಕ್ಕೊಂದು ಹೆಣೆದುಕೊಂಡಿವೆ.

ನಗರದ ಗದ್ದಲದಿಂದ ಸ್ವಲ್ಪ ದೂರ ಸರಿದು, ಭೂಮಿಯೇ ಉಸಿರಾಡುತ್ತಿರುವ ತಾಣದಲ್ಲಿ ನಿಂತಂತೆ ಅನುಭವಿಸಲು ಬಯಸಿದರೆ, ಈ ಕಣಿವೆ ಅದಕ್ಕೆ ಸೂಕ್ತ ಜಾಗ. ಅದು ಕೇವಲ ಪ್ರವಾಸ ತಾಣವಲ್ಲ; ಪ್ರಕೃತಿಯ ನಾಡಿ ತಟ್ಟುವ ಅನುಭವ.

ಸಲ್ಫರ್ ವ್ಯಾಲಿಯ ಹೊರನೋಟ

ಸ್ವಿಟ್ಜರ್‌ಲೆಂಡ್

ಪ್ರಪಂಚದ ಕನಸು, ಭಾರತೀಯರಿಗೆ ಅಚ್ಚುಮೆಚ್ಚು, ವೀಣಾ ವರ್ಲ್ಡ್‌ನ ಆಶ್ವಾಸನೆ

ಬದುಕು ಸಾವಧಾನವಾಗಿ ಸಾಗುವ ನಾಡು ಸ್ವಿಟ್ಜರ್‌ಲೆಂಡ್. ಆದರೆ, ಇಲ್ಲಿ ಎಲ್ಲವೂ ನಿಖರವಾಗಿ ನಡೆಯುತ್ತದೆ. ರೈಲುಗಳು ಸಮಯಕ್ಕೆ ಸರಿಯಾಗಿ ಸಂಚರಿಸುತ್ತವೆ, ನಗರಗಳಲ್ಲಿ ಶಿಸ್ತು ಹಾಗೂ ಶಾಂತಿ ಎದ್ದುಕಾಣುತ್ತದೆ, ಪ್ರಕೃತಿ ಹಾಗೂ ಪ್ರತಿದಿನದ ಬದುಕು ಬೇರೆ ಬೇರೆಯಲ್ಲ ಎಂಬಂತೆ ಪರಸ್ಪರ ಹೆಣೆದುಕೊಂಡಿವೆ. ನಿಸರ್ಗದ ರಮಣೀಯತೆಯನ್ನು ಚಿತ್ರಪಟಗಳಂತೆ ಬಿಚ್ಚಿಡುತ್ತಾ ಸಾಗುವ ಗ್ಲೇಶಿಯರ್ ಎಕ್ಸ್‌ಪ್ರೆಸ್‌ನ ಪ್ರಯಾಣದಿಂದ ಹಿಡಿದು ಜಿನೀವಾ ಸರೋವರದ ಪ್ರಶಾಂತ ಜಲರಾಶಿಯವರೆಗೆ ಇಲ್ಲಿ ಎಲ್ಲವೂ ಪ್ರವಾಸಿಗರನ್ನು ಪ್ರತಿಯೊಂದು ಕ್ಷಣವನ್ನೂ ಸಾವಧಾನದಿಂದ ಅನುಭವಿಸಲು ಆಪ್ತತೆಯಿಂದ ಬರ ಮಾಡಿಕೊಳ್ಳುತ್ತವೆ. ವೀಣಾ ವರ್ಲ್ಡ್‌ನ ಅತ್ಯಂತ ಯೋಜನಾಬದ್ಧವಾದ ಸ್ವಿಟ್ಜರ್‌ಲೆಂಡ್ ಪ್ರವಾಸಗಳು ಪ್ರೇಕ್ಷಣೀಯ ತಾಣಗಳ ನೋಡುವಿಕೆಗೆ ಸೀಮಿತವಾದವುಗಳಲ್ಲ. ಇದು ಮಂಜು ಮುಸುಕಿದ ಗಿರಿಶೃಂಗಗಳಿಂದ ಹಿಡಿದು ಮೌನವೇ ಮೈವೆತ್ತಂತಹ ತಾಣಗಳವರೆಗೆ ಆರಾಮದಾಯಕ ಹಾಗೂ ಸುರಕ್ಷತೆಯ ಭಾವದೊಂದಿಗೆ ಸಾಗಿ ಅಚ್ಚಳಿಯದ ನೆನಪುಗಳ ಮುದ್ರೆಯೊತ್ತುತ್ತದೆ.

ಒಂದೇ ಸೂರಿನಡಿ ಸ್ವಿಟ್ಜರ್‌ಲೆಂಡ್

ಸ್ವಿಟ್ಜರ್‌ಲೆಂಡ್ ಮೂಡಿಸುವ ಹಲವು ಭಾವಗಳನ್ನು ವೀಣಾ ವರ್ಲ್ಡ್ ಒಂದೇ ಸೂರಿನಡಿ ಸರಳ ಹಾಗೂ ಸರಾಗಗೊಳಿಸುತ್ತದೆ.

ಆಲ್–ಇನ್‌ಕ್ಲೂಸಿವ್ ಗ್ರೂಪ್ ಟೂರುಗಳು : ಮುಂಚಿತವಾಗಿಯೇ ನಿಗದಿಗೊಳಿಸಿದ ದಿನಾಂಕಗಳು, ಸೂಕ್ತವಾಗಿ ಯೋಜಿಸಲಾದ ವೇಳಾಪಟ್ಟಿಗಳು ಹಾಗೂ ವೀಣಾ ವರ್ಲ್ಡ್‌ನ ಅನುಭವಿ ಟೂರ್ ಮ್ಯಾನೇಜರುಗಳು ಈ ಜನಪ್ರಿಯ ಪ್ರವಾಸಗಳನ್ನು ನಿರ್ವಹಿಸುತ್ತಾರೆ. ಹೋಟೆಲ್‌ಗಳು, ಭೋಜನಗಳು, ಪ್ರೇಕ್ಷಣೀಯ ಸ್ಥಳಗಳು ಹಾಗೂ ವಾಹನ ವ್ಯವಸ್ಥೆ ಹೀಗೆ ಒಟ್ಟಾರೆ ಆರಂಭದಿಂದ ಕೊನೆಯವರಿಗೆ ಪ್ರತಿಯೊಂದನ್ನೂ ಯೋಜಿಸಲಾಗಿರುತ್ತದೆ. ಹೀಗಾಗಿ, ಮೊದಲ ಬಾರಿಗೆ ಯೂರೋಪ್ ಪಯಣ ಮಾಡುವವರಿಗೆ ಮತ್ತು ಸುರಕ್ಷಿತ, ಅನುಕೂಲಕರ ಹಾಗೂ ಒತ್ತಡ ರಹಿತ ಅನುಭವ ಬಯಸುವ ಕುಟುಂಬಗಳಿಗೆ ಇವು ಹೇಳಿ ಮಾಡಿಸಿದಂತಿರುತ್ತವೆ.

ಕಾರ್ಪೊರೇಟ್ ಟೂರುಗಳು (MICE) : ಸಮಾವೇಶಗಳು ಮತ್ತು ಶೈಕ್ಷಣಿಕ ಪ್ರವಾಸಗಳಿಂದ ಹಿಡಿದು ಡೀಲರ್ ಇನ್ಸೆಂಟಿವ್ ಪ್ರವಾಸದವರೆಗೆ, ಒಟ್ಟಾರೆ ಆರಂಭದಿಂದ ಅಂತ್ಯದವರೆಗೆ ಕಾರ್ಪೊರೇಟ್ ಪ್ರವಾಸಗಳನ್ನು ವೀಣಾ ವರ್ಲ್ಡ್ ನಿರ್ವಹಿಸುತ್ತದೆ. 30 ಸದಸ್ಯರ ವಿಶೇಷ ತಂಡವು ಈವರೆಗೆ 100ಕ್ಕೂ ಹೆಚ್ಚಿನ ಪ್ರವಾಸಗಳಲ್ಲಿ 40,000ಕ್ಕೂ ಹೆಚ್ಚು ಅತಿಥಿಗಳಿಗೆ ಈ ಸೇವೆಯನ್ನು ಲಭ್ಯವಾಗಿಸಿದೆ. ಕೊರಿಯಾದಿಂದ ಕೇರಳದವರೆಗೆ ಹಾಗೂ ಅಂಡಮಾನ್‌ನಿಂದ ಆಸ್ಟ್ರೇಲಿಯಾದವರೆಗೆ ವಿವಿಧ ಸ್ಥಳಗಳಲ್ಲಿ ವಿಮಾನಗಳು, ಹೋಟೆಲ್‌ಗಳು, ವೀಸಾಗಳು, ಸಂಚಾರ, ಬ್ರ್ಯಾಂಡಿಂಗ್ ಹಾಗೂ ಕಾರ್ಯಕ್ರಮಗಳು ಪ್ರತಿಯೊಂದನ್ನೂ ನಿರ್ವಹಿಸುತ್ತದೆ.

ಕಸ್ಟಮೈಸ್ಡ್ ಸ್ವಿಟ್ಜರ್‌ಲೆಂಡ್ : ತಮ್ಮ ಮನಃಸ್ಥಿತಿಗೆ ತಕ್ಕಂತೆ ಮುಕ್ತವಾಗಿರಲು ಬಯಸುವ ಪ್ರವಾಸಿಗರ ವ್ಯಕ್ತಿನಿರ್ದಿಷ್ಟ ಅಭಿರುಚಿಗೆ ಅನುಗುಣವಾಗಿ ಬಜೆಟ್ ಹಾಗೂ ಆಸಕ್ತಿ ತಕ್ಕಂತೆ 'ಪರ್ಸನಲೈಸ್ಡ್ ಸ್ವಿಟ್ಜರ್‌ಲೆಂಡ್ ಹಾಲಿಡೇಸ್' ಕಾರ್ಯಕ್ರಮವನ್ನು ವೀಣಾ ವರ್ಲ್ಡ್ ರೂಪಿಸುತ್ತದೆ. ಅತಿಥಿಗಳಿಗೆ ಯಾವುದೇ ಹಂತದಲ್ಲಿ ಉದ್ವೇಗವಾಗಲೀ, ಧಾವಂತವಾಗಲೀ ಎದುರಾಗದಂತೆ 24/7 ಡಿಜಿಟಲ್ ವೇದಿಕೆಗಳ ಮೂಲಕ ವರ್ಚುಯಲ್ ಬೆಂಬಲ ನೀಡಲಾಗುತ್ತದೆ.

ಆಫ್‌ಬೀಟ್ ಸ್ವಿಟ್ಜರ್‌ಲೆಂಡ್ : ಪದೇಪದೇ ಭೇಟಿ ನೀಡುವ ಪ್ರವಾಸಿಗರು ಹಾಗೂ ಅನ್ವೇಷಕರಿಗಾಗಿ ಯೋಲೋ ಔಟ್‌ಡೋರ್ ಸಾಹಸ ಚಟುವಟಿಕೆಗಳು ಸೇರಿದಂತೆ ವಿಶಿಷ್ಟ ಅನುಭವಗಳನ್ನು ವೀಣಾ ವರ್ಲ್ಡ್ ಲಭ್ಯವಾಗಿಸುತ್ತದೆ. ಸ್ವಿಸ್ ಬೈ ರೈಲ್, ಮರ್ಸಿಡೀಜ್ ವ್ಯಾನ್‌ಗಳಲ್ಲಿ ಪಂಚತಾರಾ ಐಷಾರಾಮಿ ಪ್ರವಾಸಗಳು, ಸ್ವಿಸ್ ಸೆಲ್ಫ್–ಡ್ರೈವ್ ಜೀಪ್ ಟೂರುಗಳು ಮತ್ತು ಹದಿಹರೆಯದವರು, ಗೆಳೆಯರು ಹಾಗೂ ಪ್ರೋಷಕರಿಗಾಗಿ ವಿಶೇಷ ಪ್ರವಾಸಗಳನ್ನು ಇದು ಒಳಗೊಂಡಿರುತದ್ತೆ.

ವಿಶಿಷ್ಟ, ಅನನ್ಯ

ಸ್ವಿಟ್ಜರ್‌ಲೆಂಡ್ ಪ್ರವಾಸೋದ್ಯಮ ಮಂಡಳಿಯ ಪ್ರತಿನಿಧಿಗಳೊಂದಿಗೆ ಡಿಸೆಂಬರ್‌ನಲ್ಲಿ ನಾವು ಆ ನಾಡನ್ನು ಪುನಃ ಹೊಸ ಬಗೆಯಲ್ಲಿ ಅನುಭವಿಸಿದೆವು. ಬರೋಬ್ಬರಿ ಸಮಯಪಾಲನೆಯ ರೈಲುಗಳು, ಪ್ರಶಾಂತ ಸರೋವರಗಳು ಹಾಗೂ ರಮಣೀಯ ಸೊಬಗಿನ ಹಳ್ಳಿಗಳು ಭಾರತೀಯ ಪ್ರವಾಸಿಗರಿಗೆ ಸ್ವಿಟ್ಜರ್‌ಲೆಂಡ್ ಎಂದೆಂದಿಗೂ ಏಕೆ ಪ್ರಿಯ ಎಂಬುದನ್ನು ನೆನಪಿಸಿದವು. ಸ್ವಿಟ್ಜರ್‌ಲೆಂಡ್ ಪ್ರತಿ ಋತುವಿನಲ್ಲೂ ವಿಶಿಷ್ಟ ಚೆಲುವಿನೊಂದಿಗೆ ಹೊಸ ರೂಪ ತಾಳುತದ್ತೆ. ಅಲ್ಲಿ ವಸಂತ ಋತುವಿನಲ್ಲಿ ನಿಸರ್ಗವು ಬಣ್ಣದೋಕುಳಿ ಎರಚಿದಂತಿರುತದ್ತೆ, ಬೇಸಿಗೆಯು ಸಮಾಧಾನವನ್ನು ಮೂಡಿಸುತದ್ತೆ, ಶರತ್ಕಾಲವು ಹೊಂಬಣ್ಣದೊಂದಿಗೆ ಕಂಗೊಳಿಸುತ್ತದೆ ಹಾಗೂ ಚಳಿಗಾಲವು ಇಡೀ ದೇಶವನ್ನು ಮಂಜಿನಿಂದ ಮುಸುಕುತದ್ತೆ. ಹೆಸರಾಂತ ಪ್ರೇಕ್ಷಣೀಯ ಸ್ಥಳಗಳ ಜೊತೆಗೆ ನಾವು ಅಷ್ಟಾಗಿ ಪ್ರಚಲಿತದಲ್ಲಿರದ (ಆಫ್‌ಬೀಟ್) ತಾಣಗಳ ಅನ್ವೇಷಣೆಯನ್ನೂ ಮಾಡಿದೆವು. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಅಲ್ಲಿನ ಪ್ರಕೃತಿಯಲ್ಲಾಗುವ ಬಣ್ಣಗಳ ಬದಲಾವಣೆಗೆ ಸಾಕ್ಷಿಯಾದೆವು. ಸ್ವಿಟ್ಜರ್‌ಲೆಂಡ್ ಪರ್ಯಟನೆಯ ಅನುಭವವನ್ನು ಸಮೃದ್ಧಗೊಳಿಸುವ ಒಳನೋಟಗಳನ್ನು ದಕ್ಕಿಸಿಕೊಂಡೆವು. ಜೊತೆಗೆ, ವೀಣಾ ವರ್ಲ್ಡ್‌ನ ರೀಲ್ಸ್ ಹಾಗೂ ಟ್ರಾವೆಲ್ ಎಪಿಸೋಡುಗಳ ಮೂಲಕ ಈಗ ಶೇರ್ ಮಾಡಲಾಗುತ್ತಿರುವ ಕ್ಷಣ ಗಳನ್ನು ಸೆರೆ ಹಿಡಿದೆವು.



sunila@veenaworld.com
Sunila Patil
Founder & CPO

Neil Patil
Founder, CTO & COO
neil@veenaworld.com

ಸ್ವಿಟ್ಜರ್‌ಲೆಂಡ್ ಬಗ್ಗೆ ಅಷ್ಟಾಗಿ ಗೊತ್ತಿರದ ಸಂಗತಿಗಳು

1. ಇಲ್ಲಿನ ಬಹುತೇಕ ಸಾರ್ವಜನಿಕ ಸ್ಥಳಗಳಲ್ಲಿ ಫೌಂಟೇನ್‌ಗಳಲ್ಲಿ ನೀರನ್ನು ನೇರವಾಗಿ ಕುಡಿಯಬಹುದು– ಸ್ವಿಟ್ಜರ್‌ಲೆಂಡ್‌ನಲ್ಲಿ ನಲ್ಲಿಗಳ ಮೂಲಕ ಪೂರೈಕೆಯಾಗುವ ನೀರು ಕೂಡ ಉತ್ಕೃಷ್ಟ ಗುಣಮಟ್ಟಕ್ಕೆ ಹೆಸರುವಾಸಿ.
2. ಸ್ವಿಟ್ಜರ್‌ಲೆಂಡ್‌ಗೆ ಅಧಿಕೃತ ರಾಜಧಾನಿ ನಗರ ಎಂಬುದಿಲ್ಲ. ಬರ್ನ್ ಅಲ್ಲಿನ ಆಡಳಿತಾತ್ಮಕ ರಾಜಧಾನಿ (ಫೆಡರಲ್ ಸೀಟ್) ಆದರೂ ಸಂವಿಧಾನದಲ್ಲಿ ಇದು ರಾಜಧಾನಿಯೆಂದು ಘೋಷಿತವಾಗಿಲ್ಲ.
3. ಪ್ರತಿ ಪ್ರಜೆಗೂ ಸುರಕ್ಷೆ– ಪರಮಾಣು ವಿಪತ್ತೇನಾದರೂ ಸಂಭವಿಸಿದರೆ ದೇಶದ ಸಮಸ್ತ ಪ್ರಜೆಗಳಿಗೆ ಆಶ್ರಯ ನೀಡಲು ಸಾಧ್ಯವಾಗುವಂತಹ ಸುರಕ್ಷಿತ ವಸತಿ ವ್ಯವಸ್ಥೆಯನ್ನು ಸ್ವಿಟ್ಜರ್‌ಲೆಂಡ್ ನಿರ್ಮಿಸಿದೆ. ಇದು ಅಲ್ಲಿನ ರಾಷ್ಟ್ರೀಯ ನಾಗರಿಕ ರಕ್ಷಣಾ ಕಾರ್ಯತಂತ್ರದ ಭಾಗವಾಗಿದೆ.
4. ಪ್ರಪಂಚದ ಎರಡು ರಾಷ್ಟ್ರಗಳ ಧ್ವಜಗಳು ಮಾತ್ರ ಚೌಕಾಕಾರದಲ್ಲಿದ್ದು, ಅದರಲ್ಲಿ ಒಂದು ಸ್ವಿಟ್ಜರ್‌ಲೆಂಡ್‌ನದ್ದಾಗಿದೆ (ಮತ್ತೊಂದು ವ್ಯಾಟಿಕನ್ ಸಿಟಿಯದ್ದು).
5. ಇಲ್ಲಿನ ಗೊತ್ತಾರ್ಡ್ ಬೇಸ್ ಟನಲ್ ಪ್ರಪಂಚದ ಅತ್ಯಂತ ಉದ್ದನೆಯ ಸುರಂಗ ರೈಲು ಮಾರ್ಗವಾಗಿದೆ (ಇದು ನಿಬ್ಬೆರಗಾಗಿಸುವ ಎಂಜಿನಿಯರಿಂಗ್ ಅದ್ಭುತವೂ ಹೌದು).
6. ಗ್ಲೇಶಿಯರ್ ಎಕ್ಸ್‌ಪ್ರೆಸ್: ಇದು ಅತ್ಯಂತ ನಿಧಾನವಾದ ಎಕ್ಸ್‌ಪ್ರೆಸ್. ನಿಸರ್ಗದ ಚೆಲುವನ್ನು ಅನಾವರಣಗೊಳಿಸುವ ಪ್ರಯಾಣಕ್ಕ ಹೆಸರುವಾಸಿ (ಇಲ್ಲಿ ತಲುಪಬೇಕಾದ ಸ್ಥಳ ಮುಖ್ಯವಲ್ಲ, ಪ್ರಯಾಣವೇ ಮುಖ್ಯ)
7. ವರ್ಲ್ಡ್ ವೈಡ್ ವೆಬ್ ಶುರುವಾಗಿದ್ದು ಇಲ್ಲಿ. ಜಿನೀವಾ ಬಳಿಯ ಸೆರ್ನ್‌ನಲ್ಲಿ ಬರ್ನರ್ಸ್–ಲೀ 1989ರಲ್ಲಿ ಇದರ ಪ್ರಸ್ತಾಪ ಮುಂದಿಟ್ಟರು.
8. ಜರ್ಮನ್, ಫ್ರೆಂಚ್, ಇಟಾಲಿಯನ್ ಹಾಗೂ ರೋಮ್ಯಾಂಚ್ ಈ ನಾಲ್ಕನ್ನು ಅಧಿಕೃತ ಭಾಷೆಗಳಾಗಿ ಹೊಂದಿರುವ ದೇಶ ಇದು.
9. ಇಲ್ಲಿ ಗಿನಿ ಪಿಗ್‌ಗಳು ಒಂಟಿಯಲ್ಲ– ಸ್ವಿಟ್ಜರ್‌ಲೆಂಡ್ ದೇಶವು ಇವುಗಳನ್ನು ಸಂಘಜೀವನ ಬಯಸುವ ಪ್ರಾಣಿಗಳೆಂದು ಪರಿಗಣಿಸುತ್ತದೆ ಹಾಗೂ ಅವುಗಳನ್ನು ಜೋಡಿಯಾಗಿಯೇ ಇರಿಸಬೇಕು ಎಂಬ ನಿಯಮ ಜಾರಿಗೊಳಿಸಿದೆ.
10. ಎಟಿಎಂನಲ್ಲಿ ಗೋಲ್ಡ್– ಹೌದು. ಇಲ್ಲಿನ ಕೆಲವು ಸ್ಥಳಗಳಲ್ಲಿ ಚಿನ್ನವನ್ನು ವೆಂಡಿಂಗ್/ಎಟಿಎಂನಂತಿರುವ ಯಂತ್ರಗಳಿಂದ ಅಕ್ಷರಶಃ ಖರೀದಿಸಬಹುದು.

ನನ್ನ ಸ್ವಿಸ್ ಕನಸುಗಳು

ಸ್ವಿಟ್ಜರ್‌ಲೆಂಡ್ ಪ್ರವಾಸದ ವೇಳೆ ನೀವು ಏನು ಮಾಡಬಯಸುತ್ತೀರಿ ಎಂಬುದನ್ನು ಗುರುತಿಸಿ.

ನಾನು ಇದನ್ನು ನೋಡಲು ಬಯಸುತ್ತೇನೆ: ☐ ಮಂಜು ☐ ಸರೋವರಗಳು ☐ ಪರ್ವತಗಳು ☐ ಜಲಪಾತಗಳು

ನಾನು ಇದನ್ನು ಅನುಭವಿಸಲು ಬಯಸುತ್ತೇನೆ: ☐ ಸ್ವಿಸ್ ರೈಲುಗಳು ☐ ಕೇಬಲ್ ಕಾರುಗಳು ☐ ಕ್ರೂಸ್‌ಗಳು

ನನ್ನ ಇನ್‌ಸ್ಟಾ ಕ್ಷಣಗಳು: ☐ ಪರ್ವತಗಳ ತುತ್ತತುದಿಗಳು ☐ ಸರೋವರದ ದಂಡೆಗಳು ☐ ಸ್ವಿಸ್‌ನ ಹಳ್ಳಿಗಳು

ನಾನು ಇದನ್ನು ತಿನ್ನಲು ಇಷ್ಟಪಡುತ್ತೇನೆ: ☐ ಸ್ವಿಸ್ ಚಾಕಲೇಟ್ ☐ ಚೀಸ್ ಫಾಂಡೂ ☐ ಸ್ವಿಸ್ ರೋಸ್ಟಿ

ನಾನು ಇಲ್ಲಿ ತಂಗಲು ಬಯಸುತ್ತೇನೆ: ☐ ವಿಲಾಸಿ ಹೋಟೆಲ್‌ಗಳು ☐ ಮೌಂಟೇನ್ ಲಾಜ್‌ಗಳು ☐ ಲೇಕ್ ವ್ಯೂ ಹೋಟೆಲ್‌ಗಳು

ನಾನು ಈ ರೀತಿ ಪ್ರವಾಸ ಮಾಡಲು ಇಚ್ಛಿಸುತ್ತೇನೆ: ☐ ಏಕಾಂಗಿಯಾಗಿ ☐ ಗೆಳೆಯರೊಟ್ಟಿಗೆ ☐ ಕುಟುಂಬದವರೊಟ್ಟಿಗೆ

ನಾನು ಕಲಿಯ ಬಯಸುತ್ತೇನೆ: ☐ ಸಾವಧಾನದಿಂದ ಇರುವುದನ್ನು ☐ ವರ್ತಮಾನದಲ್ಲಿ ಬದುಕುವುದನ್ನು ☐ ಸ್ವತಃ ನನಗೆ ಸಮಯ ನೀಡುವುದನ್ನು ☐ ಪ್ರತಿಯೊಂದು ಸಣ್ಣ ಸಂಗತಿಯ ಬಗ್ಗೆಯೂ ಖುಷಿಪಡುವುದನ್ನು

ನನ್ನ ಸ್ವಿಟ್ಜರ್‌ಲೆಂಡ್ ವರ್ಷ: ☐2026 ☐2027 ☐2028

ಸ್ವಿಸ್‌ನ ಹೆಗ್ಗುರುತುಗಳನ್ನು ಪತ್ತೆಹಚ್ಚಿ

1. ಮ್ಯಾಟರ್‌ಹೋನ್ ಸಿಲ್ಹೌಟ್
2. ಗ್ಲೇಶಿಯರ್ ಎಕ್ಸ್‌ಪ್ರೆಸ್
3. ಸ್ವಿಸ್ ಫ್ಲ್ಯಾಗ್ ಕ್ರಾಸ್
4. ಯುಂಗ್‌ಫ್ರೌಯೋಕ್ ಆಬ್ಸರ್ವೇಟರಿ
5. ಕಾವ್‌ಬೆಲ್
6. ಫಾಂಡೂ ಪಾಟ್
7. ಸ್ವಿಸ್ ಆರ್ಮಿ ನೈಫ್ ಶೇಪ್
8. ಲೇಕ್ ಲೂಸೇ ಬೋಟ್
9. ಕ್ಲಾಕ್ ಫೇಸ್ (ಸ್ವಿಸ್ ವಾಚ್)
10. ಎಡೆಲ್‌ವೈಸ್ಸ್ ಫ್ಲವರ್

Veena World Travel Crossword

Find 10 Cities of Switzerland

P	S	L	D	G	I	X	N
E	T	B	E	R	N	M	O
A	G	C	A	O	T	O	S
R	A	L	C	T	E	N	Z
Z	L	U	G	H	R	T	D
U	L	G	T	B	L	R	Y
R	E	A	R	I	A	E	V
I	N	N	Y	U	K	U	L
C	E	O	A	K	E	X	V
H	S	S	Y	P	N	W	X
E	R	H	B	A	S	E	L
L	U	C	E	R	N	E	P
L	A	U	S	A	N	N	E
G	E	N	E	V	A	S	E

ಸ್ವಿಟ್ಜರ್‌ಲೆಂಡ್ ಪ್ರತಿಯೊಂದು ಯೂರೋಪ್ ಪ್ರವಾಸದ ನಾಡಿಮಿಡಿತ

ಭಾರತದ ಪ್ರವಾಸಿಗರ ಪಾಲಿಗೆ ಸ್ವಿಟ್ಜರ್‌ಲೆಂಡ್‌ನ ಪ್ರವಾಸ ಮಾಡಿದರಷ್ಟೇ ತಮ್ಮ ಯೂರೋಪ್ ಪ್ರವಾಸ ಪರಿಪೂರ್ಣವಾದಂತೆ. ವೀಣಾ ವರ್ಲ್ಡ್‌ನಲ್ಲಿ ಸ್ವಿಟ್ಜರ್‌ಲೆಂಡ್ ಅನ್ವೇಷಣೆಯು ಯೂರೋಪ್ ಪ್ರವಾಸದ ಮುಖ್ಯ ಭಾಗವಾಗಿರುತ್ತದೆ. ಸ್ವಿಟ್ಜರ್‌ಲೆಂಡ್ ಪರ್ಯಟನೆಯನ್ನು ಒಳಗೊಂಡ ಹಲವಾರು ಆಯ್ಕೆಗಳು ನಮ್ಮಲ್ಲಿ ಲಭ್ಯ ಇವೆ. 2 ರಾತ್ರಿಗಳಿಂದ ಶುರುವಾಗಿ 5 ರಾತ್ರಿಗಳವರೆಗೆ ವಿಸ್ತರಿಸಬಹುದಾದ ಇಂಟ್ರಡಕ್ಟರಿ ಸ್ಟೇ ಸೌಲಭ್ಯವಿದೆ. ಇನ್ನು, ಸ್ವಿಟ್ಜರ್‌ಲೆಂಡನ್ನು ವಿಸ್ತೃತವಾಗಿ ನೋಡಬಯಸುವವರಿಗಾಗಿ 7 ದಿನಗಳ ಮತ್ತು 10 ದಿನಗಳ ವಿಶೇಷ ಸ್ವಿಟ್ಜರ್‌ಲೆಂಡ್–ಓನ್ಲಿ ಪ್ರವಾಸಗಳನ್ನು ರೂಪಿಸಿದ್ದೇವೆ. ಸ್ವಿಟ್ಜರ್‌ಲೆಂಡ್‌ನ ಪ್ರತಿಯೊಂದು ಪ್ರೇಕ್ಷಣೀಯ ಸ್ಥಳದಲ್ಲೂ ನೀವು ವೀಣಾ ವರ್ಲ್ಡ್ ಅತಿಥಿಗಳನ್ನು ಕಾಣಬಹುದು. ಇದು ಭಾರತದ ಪ್ರವಾಸಿಗರು ನಮ್ಮ ಮೇಲೆ ಇರಿಸಿರುವ ವಿಶ್ವಾಸದ ಸೂಚಕ. ಬನ್ನಿ, ಸ್ವಿಟ್ಜರ್‌ಲೆಂಡ್ ಅನ್ನು ವೀಣಾ ವರ್ಲ್ಡ್‌ನೊಂದಿಗೆ ನಿಶ್ಚಿಂತೆಯಿಂದ ನಿರಾಳವಾಗಿ ಅನುಭವಿಸಿ.

37 ದೇಶಗಳಿಗೆ ಪರ್ಯಟನೆ. ಮತ್ತಷ್ಟು ಸುತ್ತಾಡುವ ಕನಸು. ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಧೀರಜ್ ಚೌಧರಿ ಅವರು ಯುಂಗ್‌ಫ್ರೌಯೋಕ್‌ನಲ್ಲಿ ಕೆಲವು ಪ್ರವಾಸಗಳು ಗಡಿಗಳ ಎಲ್ಲೆ ಮೀರಿದ ಸಂಗತಿಗಳು ಎಂಬುದನ್ನು ಸಾರಿದ್ದಾರೆ.

Email: travel@veenaworld.com | veenaworld.com | Toll-Free: 1800 313 5555 | Veena World Bengaluru: Jayanagar 887 997 2217 | Indiranagar 887 997 9500

‘ಕಠಿಣ ಪರೀಕ್ಷೆ’ ಹಾದಿಯಲ್ಲಿ ಸೂರ್ಯ ಪಡೆ

ಸೂಪರ್ 8: ಭಾರತ–ದಕ್ಷಿಣ ಆಫ್ರಿಕಾ ಹಣಾಹಣಿ ಇಂದು

ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾಗೆ ಲಯಕ್ಕೆ ಮರಳುವ ಒತ್ತಡ

ಸೂರ್ಯಕುಮಾರ್ ಯಾದವ್

ಅಹಮದಾಬಾದ್(ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡಕ್ಕೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಈಗ ನಿಜವಾದ ‘ಪರೀಕ್ಷೆ’ ಆರಂಭವಾಗಲಿದೆ.

ಆತಿಥೇಯ ಭಾರತ ತಂಡವು ಸೂಪರ್ 8ರ ಹಂತದಲ್ಲಿ ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ತನ್ನ ಅಭಿಯಾನ ಆರಂಭಿಸಲಿದೆ. ಭಾರತವು ತನ್ನ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ತಂಡಗಳ ಪೈಪೋಟಿ ಎದುರಿಸಬೇಕಿದೆ. ಎಲ್ಲ ತಂಡಗಳೂ ಕಠಿಣ ಪೈಪೋಟಿ ಯೊಡ್ಡುವ ಸಾಮರ್ಥ್ಯ ಹೊಂದಿವೆ. ಕನಿಷ್ಠ ಎರಡು ಜಯ ಸಾಧಿಸಿದರೆ ಸೆಮಿಫೈನಲ್ ಪ್ರವೇಶದ ಹಾದಿ ಸುಗಮವಾಗಲಿದೆ.

ಎರಡು ವರ್ಷಗಳ ಹಿಂದೆ ನಡೆದಿದ್ದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆ ಸೋಲಿನ ಸೇಡು ತೀರಿಸಿಕೊಳ್ಳುವ ಛಲದಲ್ಲಿರುವ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲು ಭಾರತ ತಂಡವು ಕೆಲವು ಸುಧಾರಣೆಗಳೊಂದಿಗೆ ಕಣಕ್ಕಿಳಿಯಬೇಕಿದೆ.

ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಬ್ಯಾಟರ್ ತಿಲಕ್ ವರ್ಮಾ ಅವರು ಅನಗತ್ಯವಾದ ಹೊಡೆತಗಳ ಮೂಲಕ ಔಟಾಗುವುದನ್ನು ತಪ್ಪಿಸಿಕೊಳ್ಳಬೇಕಿದೆ. ದೊಡ್ಡ ಇನಿಂಗ್ಸ್‌ಗೆ ‘ಲಂಗರು’ ಹಾಕುವ ಹೊಣೆಯನ್ನು ನಿಭಾಯಿಸಬೇಕಿದೆ. ಏಕೆಂದರೆ; ಎದುರಾಳಿ ತಂಡದಲ್ಲಿರುವ ಬೌಲಿಂಗ್ ಪಡೆಯು ಬಲಾಢ್ಯವಾಗಿದೆ. ವೇಗಿಗಳಾದ ಕಗಿಸೊ ರಬಾಡಾ, ಲುಂಗಿ ಎನ್‌ಗಿಡಿ, ಮಾರ್ಕೊ ಯಾನ್ಸೆನ್, ಕೇಶವ್ ಮಹಾರಾಜ್ ಮತ್ತು ಏಡನ್ ಮರ್ಕರಂ ಅವರು ಅಮೋಘ ಲಯದಲ್ಲಿ ಇದ್ದಾರೆ.

ಗುಂಪು ಹಂತದಲ್ಲಿ ಭಾರತದ ಬ್ಯಾಟಿಂಗ್ ಪಡೆಯ ಪ್ರದರ್ಶನ ಅಸ್ಥಿರವಾಗಿತ್ತು. ಇಶಾನ್ ಕಿಶನ್ (ಎರಡು ಅರ್ಧಶತಕ) 202ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. ಆದರೆ ಅಗ್ರಕ್ರಮಾಂಕದ ಇನ್ನೂ ಮೂವರು ಬ್ಯಾಟರ್‌ಗಳು ನಿರೀಕ್ಷೆಗೆ ತಕ್ಕ ಆಟವಾಡಿಲ್ಲ. ಅದರಲ್ಲೂ ಅಭಿಷೇಕ್ ಶರ್ಮಾ ಆಡಿದ ಮೂರು ಪಂದ್ಯಗಳಲ್ಲಿಯೂ ಸೊನ್ನೆ ಸುತ್ತಿದ್ದಾರೆ. ಇದು ನಂತರ ಬರುವ ತಿಲಕ್ ಮತ್ತು ಸೂರ್ಯ ಅವರ ಮೇಲೆ ಹೆಚ್ಚಿನ ಒತ್ತಡ ಬೀಳಲು ಕಾರಣವಾಗಿದೆ. ಅವರು ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಹೊಣೆ ನಿಭಾಯಿಸಬೇಕಿದೆ. ಮಧ್ಯಮ ಕ್ರಮಾಂಕದಲ್ಲಿ ಹಾರ್ದಿಕ್ ಪಾಂಡ್ಯ ಮತ್ತು ಶಿವಂ ದುಬೆ ಅವರು ಕಳೆದ ಪಂದ್ಯಗಳಲ್ಲಿ ಬೀಸಾಟವಾಡಿದ್ದರಿಂದ ತಂಡವು ಸೋಲಿನಿಂದ ಪಾರಾಗಲು ಸಾಧ್ಯವಾಯಿತು.

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ವರುಣ್ ಚಕ್ರವರ್ತಿ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್. ಅರ್ಷದೀಪ್ ಸಿಂಗ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ರಿಯಾನ್ ರಿಕೆಲ್ಟನ್, ಡೆವಾಲ್ಡ್ ಬ್ರೆವಿಸ್, ಟ್ರಿಸ್ಟನ್ ಸ್ಟಬ್ಸ್, ಡೇವಿಡ್ ಮಿಲ್ಲರ್, ಮಾರ್ಕೊ ಯಾನ್ಸೆನ್, ಕಗಿಸೊ ರಬಾಡ, ಲುಂಗಿ ಎನ್‌ಗಿಡಿ, ಕೇಶವ್ ಮಹಾರಾಜ್, ಕಾರ್ಬಿನ್ ಬಾಷ್, ಎನ್ರಿಚ್ ನಾಕಿಯಾ, ಕೆವೆನಾ ಮಫಾಕಾ, ಜಾರ್ಜ್ ಲಿಂಡೆ, ಜೇಸನ್ ಸ್ಮಿತ್.

ದಕ್ಷಿಣ ಆಫ್ರಿಕಾ ತಂಡದ ಡಿವಾಲ್ಡ್ ಬ್ರೆವಿಸ್ ಅವರು ಬ್ಯಾಟಿಂಗ್ ಅಭ್ಯಾಸ ನಡೆಸಿದರು

ಇಂದಿನ ಪಂದ್ಯ

ಶ್ರೀಲಂಕಾ V/s ಇಂಗ್ಲೆಂಡ್
ತಾಣ: ಪಲೆಕೆಲೆ, ಮಧ್ಯಾಹ್ನ 3

ಭಾರತ V/s ದಕ್ಷಿಣ ಆಫ್ರಿಕಾ
ತಾಣ: ಅಹಮದಾಬಾದ್, ರಾತ್ರಿ 7

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಜಿಯೊ ಹಾಟ್‌ಸ್ಟಾರ್

ಅಭಿಷೇಕ್ ಅವರು ಆಫ್‌ಸ್ಪಿನ್ನರ್‌ಗಳ ಮುಂದೆ ಎರಡು ಪಂದ್ಯಗಳಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ದಕ್ಷಿಣ ಆಫ್ರಿಕಾದ ನಾಯಕ ಏಡನ್ ಮರ್ಕರಂ ಅವರು ಇನಿಂಗ್ಸ್ ಆರಂಭದಲ್ಲಿಯೇ ಸ್ಪಿನ್ ಬೌಲರ್ ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ. ಅಭಿಷೇಕ್ ವಿಫಲವಾದಾಗ ತಿಲಕ್ ಅವರು ದೊಡ್ಡ ಇನಿಂಗ್ಸ್ ಆಡಿಲ್ಲ. ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಅವರು 24 ಎಸೆತಗಳಲ್ಲಿ 25 ರನ್ ಗಳಿಸಿದ್ದರು. ನೆದರ್ಲೆಂಡ್ಸ್ ವಿರುದ್ಧ 27 ಎಸೆತಗಳಲ್ಲಿ 31 ರನ್ ಹೊಡೆದಿದ್ದರು. ಅವರ ಸ್ಟ್ರೈಕ್‌ರೇಟ್ ಕೇವಲ 120 ಇದೆ.

ಅಮೆರಿಕ ಎದುರಿನ ಪಂದ್ಯದಲ್ಲಿ ಸೂರ್ಯ ಅಜೇಯ 84 (49ಎಸೆತ) ರನ್ ಗಳಿಸಿ ತಂಡದ ಜಯಕ್ಕೆ ಕಾರಣರಾಗಿದ್ದರು. ಆದರೆ ಪಾಕಿಸ್ತಾನ ಮತ್ತು ನೆದರ್ಲೆಂಡ್ಸ್ ಎದುರಿನ ಪಂದ್ಯಗಳಲ್ಲಿ ಸೂರ್ಯ ಆಟ ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಅವರ ಸ್ಟ್ರೈಕ್‌ರೇಟ್ ಕೂಡ 136ರಷ್ಟು (ವೈಯಕ್ತಿಕ ಶ್ರೇಷ್ಠ 163 ಇದೆ) ಸಾಧಾರಣ ಮಟ್ಟದಲ್ಲಿದೆ.

ಆದರೆ ಭಾರತದ ಬೌಲಿಂಗ್ ಪಡೆ ಉತ್ತಮ ಲಯದಲ್ಲಿದೆ. ಜಸ್‌ಪ್ರೀತ್ ಬೂಮ್ರಾ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಪ್ರಮುಖ ಜೊತೆಯಾಟಗಳಿಗೆ ತಡೆಯೊಡ್ಡಬಲ್ಲರು. ಹಾರ್ದಿಕ್ ಮತ್ತು ಶಿವಂ ಅವರು ಪ್ರಮುಖ ಘಟ್ಟಗಳಲ್ಲಿ ತಮ್ಮ ಬೌಲಿಂಗ್ ಮೂಲಕ ನೆರವಾಗುವ ಸಮರ್ಥರು. ದಕ್ಷಿಣ ಆಫ್ರಿಕಾದ ಬೀಸಾಟವೀರರಾದ ಕ್ವಿಂಟನ್ ಡಿ ಕಾಕ್, ಮರ್ಕರಂ, ರಿಯಾನ್ ರಿಕೆಲ್ಟನ್, ಟ್ರಿಸ್ಟನ್ ಸ್ಟಬ್ಸ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್ ಹಾಗೂ ಮಾರ್ಕೊ ಯಾನ್ಸೆನ್ ಅವರನ್ನು ಕಟ್ಟಿಹಾಕಲು ಬೌಲರ್‌ಗಳು ಶಿಸ್ತುಬದ್ಧ ತಂತ್ರಗಾರಿಕೆಯೊಂದಿಗೆ ಆಡುವುದು ಅಗತ್ಯವಾಗಿದೆ. ಅಲ್ಲದೇ ಬೌಲರ್‌ಗಳು ಸಫಲರಾಗಬೇಕಾದರೆ ಫೀಲ್ಡಿಂಗ್ ಲೋಪಗಳು ಕಡಿಮೆಯಾಗಬೇಕು. ಕ್ಯಾಚ್‌ಗಳು ಮಣ್ಣುಪಾಲಾಗದಂತೆ ನೋಡಿಕೊಳ್ಳಬೇಕು.

ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರುವ ಈ ಕ್ರೀಡಾಂಗಣದ ಪಿಚ್ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಮರ್ಥ್ಯ ಹೊಂದಿದೆ. ಆದರೆ ರಾತ್ರಿಯ ಇಬ್ಬನಿಯಲ್ಲಿ ಬೌಲಿಂಗ್ ಮಾಡುವುದು ಸವಾಲಾಗಬಹುದು. ಆದ್ದರಿಂದ ಟಾಸ್ ಗೆದ್ದವರು ಫೀಲ್ಡಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚು.

ಭಾರತ ತಂಡದ ಆಟಗಾರರಾದ ಶಿವಂ ದುಬೆ, ಸಂಜು ಸ್ಯಾಮ್ಸನ್ ಮತ್ತು ಅಕ್ಷರ್ ಪಟೇಲ್ —ಪಿಟಿಐ ಚಿತ್ರಗಳು

ನ್ಯೂಜಿಲೆಂಡ್–ಪಾಕ್‌ಗೆ ತಲಾ 1 ಅಂಕ

ಮಳೆಗೆ ಮುಳುಗಿದ ಪಂದ್ಯ

ಪಲೆಕೆಲೆ, ಶ್ರೀಲಂಕಾ (ಪಿಟಿಐ): ಶನಿವಾರ ಇಲ್ಲಿ ಸುರಿದ ಮಳೆಯು ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳಿಗೆ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಹಾದಿಯನ್ನು ಜಟಿಲಗೊಳಿಸಿತು.

ಇಲ್ಲಿ ನಡೆಯಬೇಕಿದ್ದ ಸೂಪರ್ 8 ಹಂತದ ಎರಡನೇ ಗುಂಪಿನ ಮೊದಲ ಪಂದ್ಯವು ಮಳೆಯಲ್ಲಿ ಕೊಚ್ಚಿಹೋಯಿತು. ಇದರಿಂದಾಗಿ ಉಭಯ ತಂಡಗಳೂ ತಲಾ ಒಂದು ಅಂಕ ಹಂಚಿಕೊಂಡಿವೆ. 7 ಗಂಟೆಯ ಸುಮಾರು ಮಳೆ ಕಡಿಮೆಯಾಗಿದ್ದ ಕಾರಣ ಟಾಸ್ ಮಾಡಲಾಯಿತು. ಅದರಲ್ಲಿ ಗೆದ್ದ ಪಾಕಿಸ್ತಾನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹನ್ನೊಂದರ ಬಳಗವನ್ನು ಪ್ರಕಟಿಸಿತ್ತು.

